

ಮನುಷ್ಯ ಜಾತಿ
ತಾನೊಂದೆ ವಲಂ

## ಮಹಿಳಾ ಸಾಹಿತ್ಯ ಸಂಪುಟ

ಮಹಿಳಾ ಸಾಹಿತ್ಯ ಸಂಪುಟ ಕಾವ್ಯ
JNANA001608

# ವ್ಯ

ಪ್ರಧಾನ ಸಂಪಾದಕರು
**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು
**ಡಾ. ಪಿ. ಚಂದ್ರಿಕಾ**

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮

# ಮಹಿಳಾ ಸಾಹಿತ್ಯ ಸಂಪುಟ

# ಕಾವ್ಯ

ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಮಾಲಿಕೆಯ ಸಂಪಾದಕರು

**ಡಾ. ಮಲ್ಲಿಕಾ ಘಂಟಿ**

ಸಂಪಾದಕರು

**ಡಾ. ಪಿ. ಚಂದ್ರಿಕಾ**

**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು – ೫೬೦ ೦೧೮.

*MAHILA SAHITYA SAMPUTA - KAVYA* - *Chief Editor :* **Nadoja Dr. Manu Baligar,** *Editor :* **Dr. P. Chandrika** *Published by:* **Kannada Sahitya Parishattu**, Pampa Mahakavi Road, Chamarajapete, Bengaluru - 560018 Pages: 1 + 228 Price : Rs. 280/-: **2020**

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಎರಡು ನೂರ ಎಂಬತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು – ಡಾ. ಎಚ್.ಎಸ್. ವೆಂಕಟೇಶಮೂರ್ತಿ
೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ – ಡಾ. ಪದ್ಮರಾಜ ದಂಡಾವತಿ

**ಸದಸ್ಯರು**

ಶ್ರೀ ಜರಗನಹಳ್ಳಿ ಶಿವಶಂಕರ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಪ್ರೊ. ಧರಣೇಂದ್ರ ಕುರಕುರಿ
ಶ್ರೀ ರಂಜಾನ್ ದರ್ಗಾ
ಡಾ. ಬಿ.ಕೆ. ರವಿ
ಡಾ. ತಮಿಳ್ ಸೆಲ್ವಿ
ಡಾ. ದೊಡ್ಡಮಲ್ಲಯ್ಯ
ಡಾ. ಎಚ್.ಎಲ್. ಪುಷ್ಪ
ಶ್ರೀ ಎ.ಆರ್. ಉಜ್ಜನಪ್ಪ
ಶ್ರೀ ಸಂಜಯ ಅಡಿಗ
ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

**ನಿರ್ದೇಶಕರು**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಗೌರವ ಕಾರ್ಯದರ್ಶಿಗಳು**

ಡಾ. ರಾಜಶೇಖರ ಹತಗುಂದಿ
ಶ್ರೀ ಕೆ. ರಾಜಕುಮಾರ್

**ಗೌರವ ಕೋಶಾಧ್ಯಕ್ಷರು**

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ೧೦೫ ವರ್ಷಗಳನ್ನು ಪೂರೈಸಿ ೧೦೬ನೇ ವರ್ಷದಲ್ಲಿ ಕಾಲಿರಿಸಿದೆ. ನಾಡು, ನುಡಿ, ನೆಲ, ಜಲ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತು ಏನೇ ವಿಚಾರ ಇದ್ದರೂ ಪರಿಷತ್ತು ತನ್ನ ಧ್ವನಿ ಎತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನ ಆದಿಯಲ್ಲಿ ಕನ್ನಡ ಇರುವುದು ಅರ್ಥಪೂರ್ಣವೂ, ಸಾರ್ಥಕವೂ ಆಗಿದೆ. ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂತು. ಆಗ ಅದಕ್ಕೆ ಇದ್ದ ಹೆಸರು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು. ನಂತರ ಅದು ಕನ್ನಡ ಸಾಹಿತ್ಯ ಪರಿಷತ್ತು ಎಂದು ಈಗಿನ ಹೆಸರು ಪಡೆಯಿತು. ಪರಿಷತ್ತಿನ ಹುಟ್ಟಿಗೆ ಆಗಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರೂ ಕಾರಣಕರ್ತರಾಗಿದ್ದರು ಎಂಬುದನ್ನೂ ಇಲ್ಲಿ ಉಲ್ಲೇಖಿಸ ಬೇಕು. ಪರಿಷತ್ತು ಇದುವರೆಗೆ ೮೫ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದೆ ಮತ್ತು ಪರಿಷತ್ತಿಗೆ ನಾನು ೨೫ನೇ ಅಧ್ಯಕ್ಷನಾಗಿ ಚುನಾಯಿತನಾಗಿದ್ದೇನೆ. ಪರಿಷತ್ತು ಇದುವರೆಗೆ ೧,೬೨೫ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ ಕೆಲವು ಕೃತಿಗಳು ಹಲವು ಮುದ್ರಣಗಳನ್ನು ಕಂಡಿವೆ. ಶಬ್ದಕೋಶಗಳ ರಚನೆಯಲ್ಲಿ, ಹಳಗನ್ನಡ ಕಾವ್ಯಗಳ ಗದ್ಯಾನುವಾದ ಪ್ರಕಟಣೆಯಲ್ಲಿ ಪರಿಷತ್ತಿನದು ಮುಂಚೂಣಿ ಕೆಲಸ.

ಕನ್ನಡದ ಆದಿ ಕವಿ ಪಂಪನ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಮಾತನ್ನು ತನ್ನ ಘೋಷ ವಾಕ್ಯವಾಗಿ ಒಪ್ಪಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೂ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದೆ.

ನಾನು ಕನ್ನಡಿಗರ ಅಗಾಧ ಪ್ರೀತಿ ಮತ್ತು ಅವಿಚ್ಛಿನ್ನ ವಿಶ್ವಾಸದ ಫಲವಾಗಿ ದಾಖಲೆ ಗೆಲುವಿನೊಡನೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತ ದಿನದಿಂದ ಇದುವರೆಗೆ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ ಮತ್ತು ಗುಣಗ್ರಾಹಿತ್ವಗಳನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುವ ಕೆಲಸ ಮಾಡಿದ್ದೇನೆ. ದುರ್ಬಲ ವರ್ಗಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಂಡಿದ್ದೇನೆ. ಪರಿಷತ್ತಿನ ಹಳೆಯ ನಿಯಮಾವಳಿಗೆ ತಿದ್ದುಪಡಿ ತಂದ ನಂತರ ಪರಿಷತ್ತಿನ ತಾಲ್ಲೂಕು, ಜಿಲ್ಲೆ ಮತ್ತು ಕೇಂದ್ರ ಘಟಕಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರಿಗೆ ಸಿಕ್ಕ ಹೆಚ್ಚಿನ ಪ್ರಾತಿನಿಧ್ಯ ಐತಿಹಾಸಿಕವಾದುದು. ಏಕೆಂದರೆ ಅಷ್ಟು ಜನರಿಗೆ ಹಿಂದೆ ಎಂದೂ ಈ ಪ್ರಮಾಣದಲ್ಲಿ

ಪ್ರಾತಿನಿಧ್ಯ ಸಿಕ್ಕಿರಲಿಲ್ಲ. ಇದುವರೆಗೆ ಪರಿಷತ್ತಿನ ಪದಾಧಿಕಾರಿ ವರ್ಗದಲ್ಲಿ, ಕಾರ್ಯಕಾರಿಣಿಯಲ್ಲಿ ಅಲಕ್ಷಿತವಾಗಿದ್ದ ಸಮುದಾಯಕ್ಕೆ ಸೂಕ್ತ ಸ್ಥಾನಮಾನವನ್ನು ಈ ಅವಧಿಯಲ್ಲಿಯೇ ದೊರಕಿಸಿದ್ದು ನನಗೆ ಅಪಾರ ಸಂತೋಷವನ್ನೂ ಸಮಾಧಾನವನ್ನೂ ತಂದು ಕೊಟ್ಟಿದೆ.

ಪ್ರಸ್ತುತ ಕಾರ್ಯಕಾರಿ ಸಮಿತಿ ಅವಧಿಯಲ್ಲಿ ಇದುವರೆಗೆ ನಾಲ್ಕು ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಅದರಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರತಿಭಾ ಪಕ್ಷಪಾತಗಳೆರಡನ್ನೂ ಕಾಯ್ದುಕೊಳ್ಳಲಾಗಿದೆ ಎಂಬುದನ್ನು ಕನ್ನಡದ ಪ್ರಾಜ್ಞ ಜನರು ಗಮನಿಸಿದ್ದಾರೆ. ಅದೇ ರೀತಿ ಪರಿಷತ್ತಿನ ಆಶ್ರಯದಲ್ಲಿ ನೀಡಲಾಗುವ, ನಾಡಿನ ಅತ್ಯಂತ ಪ್ರತಿಷ್ಠಿತವಾದ ನೃಪತುಂಗ ಪ್ರಶಸ್ತಿ ಕೊಡುವ ವಿಚಾರದಲ್ಲಿಯೂ ಇದೇ ಮಾನದಂಡವನ್ನು ಅನುಸರಿಸಲಾಗಿದೆ. ಈ ಅವಧಿಯಲ್ಲಿಯೇ ಮತ್ತು ಇದೇ ಮೊದಲ ಸಲ ಪರಿಶಿಷ್ಟ ಜಾತಿಯ ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಈ ಪ್ರಶಸ್ತಿ ಸಂದುದನ್ನು ಇಲ್ಲಿ ಸ್ಮರಿಸಲು ಬಯಸುವೆ. ಇದನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣ ಇದೆ. ಏಕೆಂದರೆ, ಇದೆಲ್ಲ ಕೇವಲ ಸಾಂಕೇತಿಕವಲ್ಲ. ಇದಕ್ಕೆ ಪೂರಕವಾಗಿಯೇ ಈ ಅವಧಿಯಲ್ಲಿಯೇ ದಲಿತ ಸಾಹಿತ್ಯ ಸಂಪುಟಗಳ ಸರಣಿಯಲ್ಲಿ ಪ್ರಥಮ ಬಾರಿಗೆ ಈಗಾಗಲೇ ಆರು ಸಂಪುಟಗಳು ಪ್ರಕಟವಾಗಿವೆ. ಏಳನೆಯ ಸಂಪುಟ ಅಚ್ಚಿನಲ್ಲಿ ಇದೆ. ಈ ಸಂಪುಟದ ಸಂಚಾಲಕರಾಗಿ ಕನ್ನಡದ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಕಾರ್ಯ ನಿರ್ವಹಿಸಿದ್ದಾರೆ. ಈ ಸಂಪುಟಗಳ ಸಂಪಾದಕರಾಗಿ ಕನ್ನಡದ ಹೆಸರಾಂತ ದಲಿತ ಲೇಖಕರು ಕಾರ್ಯ ನಿರ್ವಹಿಸಿದರು. ಇನ್ನೂ ಮೂರು ಸಂಪುಟಗಳನ್ನು ತರಲು ಪರಿಷತ್ತು ಒಪ್ಪಿಕೊಂಡು ಅದಕ್ಕೆ ಸಂಪಾದಕರನ್ನೂ ನೇಮಿಸಲಾಗಿತ್ತು. ಆದರೆ, ಅವರ ಅನಾಸಕ್ತಿಯ ಕಾರಣವಾಗಿ ಆ ಕೆಲಸ ಮುಂದುವರಿಯಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಲು ಬಯಸುವೆ.

ದಲಿತ ಸಂಪುಟಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಬದ್ಧತೆ ನಿಲ್ಲಲಿಲ್ಲ. ಕಳೆದ ವರ್ಷ ಅಂದರೆ, ೨೦೧೯ ರ ಆಗಸ್ಟ್‌ನಲ್ಲಿ ಕೋಲಾರದಲ್ಲಿ ಅಖಿಲ ಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನವನ್ನೂ ಪ್ರಸಿದ್ಧ ದಲಿತ ಲೇಖಕ ಡಾ.ಎಲ್.ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿತ್ತು. ಎರಡು ದಿನಗಳ ಆ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಆ ಮಟ್ಟದ ಮತ್ತು ಆ ಬಗೆಯ ಸಾಹಿತ್ಯ ಸಮ್ಮೇಳನವೊಂದನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಅದೇ ಮೊದಲು ಏರ್ಪಡಿಸಲಾಗಿತ್ತು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವೆ. ಈ ಸಮ್ಮೇಳನದಲ್ಲಿ ಎಲ್ಲ ಗೋಷ್ಠಿಗಳಲ್ಲಿ ದಲಿತರು ಮಾತ್ರ ಇರುವಂತೆ ನಿಗಾ ವಹಿಸಲಾಗಿತ್ತು. ಅವರು ಏನು ಹೇಳುತ್ತಾರೆ ಎಂಬುದನ್ನು ಉಳಿದ ಎಲ್ಲ ಸಮುದಾಯಗಳ ಜನರು ಕೆಳಗೆ ಕುಳಿತು ಕೇಳಿಸಿಕೊಂಡುದು ಅರ್ಥಪೂರ್ಣವಾಗಿತ್ತು. ಇದು ಕೂಡ ಸಾಂಕೇತಿಕವಾದುದು ಆಗಿರಲಿಲ್ಲ. ಇದನ್ನು ಕೂಡ ಬುದ್ಧಿಪೂರ್ವಕವಾಗಿಯೇ ಮಾಡಲಾಗಿತ್ತು. ಈ ಎರಡೂ ಪ್ರಯತ್ನಗಳನ್ನು, ಅಂಚಿನಲ್ಲಿ ಇರುವ ಒಂದು ಸಮುದಾಯವನ್ನು ಕೇಂದ್ರಕ್ಕೆ ತರುವ ದಿಸೆಯಲ್ಲಿನ ದಿಟ್ಟ ಹೆಜ್ಜೆಗಳು ಎಂದು ಯಾರಾದರೂ ಗುರುತಿಸುತ್ತಾರೆ ಎಂದು ಭಾವಿಸಿದ್ದೇನೆ.

ದಲಿತ ಸಾಹಿತ್ಯ ಸಂಪುಟಗಳಂತೂ ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವ ಸಂಪುಟಗಳು ಆಗಿದ್ದು ಇದನ್ನು ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸ ಎಂದು ಅನೇಕ ವಿದ್ವಾಂಸರು ನನ್ನ ಮುಂದೆ ಹೇಳಿದರು. ಇದು ನಾವು ಮಾಡಿದ ಕೆಲಸದ ಉಪಯುಕ್ತತೆಯನ್ನೂ ಸಾರ್ಥಕತೆಯನ್ನೂ ಸಾಬೀತು ಮಾಡುತ್ತದೆ. ಇಂಥದು ಮಾತ್ರ ಇತಿಹಾಸದಲ್ಲಿ ಉಳಿಯುತ್ತದೆ.

ಇದೀಗ ಮಹಿಳಾ ಸಂಪುಟಗಳ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಕನ್ನಡದಲ್ಲಿ ಲೇಖಕಿಯರ ಸಾಧನೆ ಸಣ್ಣದೇನೂ ಇಲ್ಲ. ಆದರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನ, ಆಕ್ರೋಶ ಅವರಲ್ಲಿ ಇದೆ. ಕನ್ನಡದ ವಿಮರ್ಶೆಯೂ ತಮಗೆ ನ್ಯಾಯ ಕೊಟ್ಟಿಲ್ಲ ಎಂಬ ದೂರು ಅವರದು. ಇದು, ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಇರುವ ಸಮಸ್ಯೆ ಎಂದು ಯಾರಿಗಾದರೂ ಅರ್ಥವಾಗುತ್ತದೆ. ಅದು ಸಾಹಿತ್ಯ ಮುಂತಾದ ಕ್ಷೇತ್ರಗಳಿಗೂ ವಿಸ್ತರಿಸಿದೆ.

ದೇಶದ ಮತ್ತು ನಾಡಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳಾ ಸಮುದಾಯ ಕೂಡ ಅಂಚಿನಿಂದ ಕೇಂದ್ರದ ಕಡೆ ಚಲಿಸುವ ಹೋರಾಟವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಅದು ರಾಜಕೀಯ ಕ್ಷೇತ್ರವೇ ಇರಲಿ, ಸಾಮಾಜಿಕ ಕ್ಷೇತ್ರವೇ ಇರಲಿ ಅಥವಾ ಸಾಹಿತ್ಯ ಕ್ಷೇತ್ರವೇ ಇರಲಿ ಅಲ್ಲಿ ಸಮಾನತೆಗಾಗಿ ಮಹಿಳೆಯ ಹೋರಾಟ ನಿರಂತರವಾಗಿ ನಡೆದುಕೊಂಡು ಬಂದಿದೆ. ನಾನು ಅಧ್ಯಕ್ಷನಾಗಿ ಚುನಾಯಿತನಾದ ನಂತರ ಈ ಸಮುದಾಯಕ್ಕೂ ಅವರಿಗೆ ನ್ಯಾಯವಾಗಿ ಸಿಗಬೇಕಾದ ಸ್ಥಾನ ದೊರಕಿಸಲು ನಿರಂತರವಾಗಿ ಪ್ರಯತ್ನ ಮಾಡಿದ್ದೇನೆ. ಇದು ಕೂಡ ಸಾಂಕೇತಿಕವಾದುದು ಅಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಲು ಬಯಸುವೆ.

ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಹೇಗೆ ದಲಿತರಿಗಾಗಿ ಒಂದು ಸಮ್ಮೇಳನ ನಡೆದಿರಲಿಲ್ಲವೋ ಹಾಗೆಯೇ ಮಹಿಳೆಯರಿಗಾಗಿ ಒಂದು ಸಮ್ಮೇಳನವೂ ನಡೆದಿರಲಿಲ್ಲ. ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಮಹಿಳಾ ಸಮಾವೇಶ ನಡೆದಿತ್ತು. ಸಮಾವೇಶಕ್ಕೂ ಸಮ್ಮೇಳನಕ್ಕೂ ವ್ಯತ್ಯಾಸ ಇದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಹಾಗೆಯೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಹೆಸರಾಂತ ಲೇಖಕಿ ಡಾ.ಸುಧಾ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನವು ದಲಿತ ಸಮ್ಮೇಳನಕ್ಕಿಂತ ಮುಂಚೆಯೇ ೨೦೧೯ರ ಮಾರ್ಚ್‌ನಲ್ಲಿ ನಡೆಯಿತು. ಅದು ಕೂಡ ಅತ್ಯಂತ ಯಶಸ್ವಿ ಸಮ್ಮೇಳನ ಎಂದು ಹೆಸರು ಮಾಡಿತು.

ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳನ್ನು ಕೊಡುವ ಪರಿಷತ್ತಿನ ಮತ್ತು ನನ್ನ ಬದ್ಧತೆಯ ಮುಂದುವರಿಕೆಯಾಗಿ ಇದೀಗ ಮಹಿಳಾ ಸಾಹಿತ್ಯ ಸಂಪುಟಗಳು ನಿಮ್ಮ ಕೈಯಲ್ಲಿ ಇವೆ. ಕನ್ನಡದ ಪ್ರಸಿದ್ಧ ಚಿಂತಕಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಯಾದ ಸೋದರಿ ಡಾ.ಮಲ್ಲಿಕಾ ಘಂಟಿಯವರು ಮಹಿಳಾ ಸಾಹಿತ್ಯ ಸಂಪುಟಗಳ ಹೊಳಹನ್ನು ನನ್ನ ಮುಂದೆ ಇಡುತ್ತಿದ್ದಂತೇ ಒಂದು ಕ್ಷಣವೂ ತಡಮಾಡದೇ ಆಗಬಹುದು ಎಂದು ನಿರ್ಣಯಿಸಿ ಕಥೆ, ವಿಮರ್ಶೆ, ಸ್ತ್ರೀವಾದಿ ಚಿಂತನೆ, ಕಾವ್ಯ,

ಅಂಕಣ, ಲಲಿತ ಪ್ರಬಂಧ, ಜಾನಪದ ಮತ್ತು ಸಂಕೀರ್ಣ ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಿದೆವು. ನಾನು ಎಲ್ಲ ಸಂಪುಟಗಳ ಪ್ರಧಾನ ಸಂಪಾದಕನಾಗಿ ಇರುವುದು, ಡಾ.ಮಲ್ಲಿಕಾ ಅವರು ಮಾಲಿಕೆ ಸಂಪಾದಕರಾಗಿ ಇರುವುದು ಮತ್ತು ಪ್ರತಿ ಸಂಪುಟಕ್ಕೂ ಒಬ್ಬೊಬ್ಬರು ಸಂಪಾದಕರನ್ನು ನೇಮಿಸುವುದು ಎಂದು ತೀರ್ಮಾನಿಸಿದೆವು. ಅದೇ ರೀತಿ ಸಂಪುಟಗಳ ಸಂಪಾದಕರಾಗಿ ಡಾ. ಪದ್ಮಿನಿ ನಾಗರಾಜು, ಡಾ. ಎಂ. ಎಸ್. ಆಶಾದೇವಿ, ಡಾ. ಮಲ್ಲಿಕಾ ಘಂಟಿ, ಡಾ. ಪಿ. ಚಂದ್ರಿಕಾ, ಪ್ರತಿಭಾ ನಂದಕುಮಾರ್, ಡಾ. ತಮಿಳ್ ಸೆಲ್ವಿ ಮತ್ತು ಬಾ. ಹ. ರಮಾಕುಮಾರಿ ಹಾಗೂ ಡಾ. ಎನ್. ಲಕ್ಷ್ಮಿ ಅವರು ಕ್ರಮವಾಗಿ ಆಯಾ ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಒಪ್ಪಿಕೊಂಡರು.

ಈ ಎಲ್ಲ ಸಂಪಾದಕರು ಪುರುಷರನ್ನು ಮೀರಿಸುವ ಹಾಗೆ ಅತ್ಯಂತ ಕಡಿಮೆ ಕಾಲದಲ್ಲಿ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿ ಅಧ್ಯಯನ ಪೂರ್ಣವಾದ ಪ್ರಸ್ತಾವನೆಗಳನ್ನೂ ಬರೆದು ಕೊಟ್ಟಿದ್ದಾರೆ. ಈ ಕೆಲಸ ಇಲ್ಲಿಗೇ ಮುಗಿಯಿತು ಎಂದು ನಾನು ಭಾವಿಸಿಲ್ಲ. ಇವೆಲ್ಲ ಒಳ್ಳೆಯ ಆರಂಭಗಳು ಎಂಬ ಭಾವನೆ ನನ್ನದು. ಕೆಲಸ ಮಾಡುವ ಕರ್ತೃತ್ವ ಶಕ್ತಿ ಇರುವವರಿಗೆ ಆಕಾಶವೇ ಮಿತಿಯಾಗಿರುತ್ತದೆ. ಮತ್ತು ಇಂಥ ಕೆಲಸಗಳು ಮುಂದುವರಿಯುತ್ತಲೇ ಇರಬೇಕು ಎಂಬುದರ ಒಂದು ಸೂಚನೆಯಾಗಿ ಹಾಗೂ ಇಂಥ ಕೆಲಸಗಳಿಗೆ ಒಂದು ಒಳ್ಳೆಯ ಆರಂಭವನ್ನು ಒದಗಿಸಬೇಕು ಎಂದು ಈ ಸಂಪುಟಗಳನ್ನು ರೂಪಿಸಲಾಗಿದೆ. ಇಲ್ಲಿ ನಾವು ಸಂಪಾದಿಸಿರುವ ಒಂದೊಂದು ಸಂಪುಟವನ್ನೇ ಹಲವು ಸಂಪುಟಗಳಾಗಿ ರೂಪಿಸಲು ಅವಕಾಶ ಇದೆ ಎಂಬುದೂ ನಮ್ಮ ಗಮನದಲ್ಲಿ ಇದೆ.

ಗಾರ್ಗಿ ಅತ್ಯಂತ ಪ್ರಖರ ವಿಚಾರವಾದಿ. ಪ್ರಶ್ನೆ ಕೇಳುವ ತನ್ನ ಹಕ್ಕನ್ನು ಪ್ರಾಣವನ್ನು ಪಣಕ್ಕೆ ಇಟ್ಟು ಉಳಿಸಿಕೊಂಡವಳು. ಗಾರ್ಗಿ ಮತ್ತು ಯಾಜ್ಞವಲ್ಕ್ಯರ ಸಂವಾದಕ್ಕೆ ಮತ್ತು ಚರ್ಚೆಗೆ ನಮ್ಮ ಉಪನಿಷತ್ತುಗಳಲ್ಲಿ ಅನೇಕ ಸಾಕ್ಷಿಗಳು ಇವೆ. ನಮ್ಮದು ಒಂದು ಕಾಲದಲ್ಲಿ ಮಾತೃಪ್ರಧಾನ ಸಂಸ್ಕೃತಿ. ಇದು ಪಿತೃಪ್ರಧಾನ ಸಂಸ್ಕೃತಿಯಾಗಿ ಪರಿವರ್ತನೆಯಾಗುವುದರ ಜೊತೆಗೆ ಸ್ತ್ರೀ ಕುಲ ಅಂಚಿಗೆ ಸರಿಯಿತು. ಈ ಹಿನ್ನಡೆ ಅವರಿಗೆ ಎಲ್ಲ ಕ್ಷೇತ್ರದಲ್ಲಿಯೂ ಆಯಿತು. ಇದನ್ನು ಒಂದು ಹಿನ್ನಡೆ ಎಂದು ಅವರು ಭಾವಿಸದೇ ಒಂದು ಸವಾಲು ಎಂದು ಸ್ವೀಕರಿಸಿ, ಒಂದು ಪಂಥಾಹ್ವಾನ ಎಂದು ಸ್ವೀಕರಿಸಿ ತಮಗೆ ಸಲ್ಲಬೇಕಾದ ಸ್ಥಾನಕ್ಕಾಗಿ ಮಹಿಳೆಯು ಬರೀ ಭಾರತದಲ್ಲಿ ಮಾತ್ರವಲ್ಲ ಜಾಗತಿಕವಾಗಿಯೂ ತನ್ನ ಪ್ರಯತ್ನ ನಡೆಸಿದ್ದಾಳೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೯ನೇ ಶತಮಾನದ ಆದಿಯಲ್ಲಿಯೇ "ಅರ್ಧ ಜನಸಂಖ್ಯೆಗೆ ಸಿಗಬೇಕಾದ ನ್ಯಾಯಕ್ಕಾಗಿ" ಧ್ವನಿ ಎತ್ತಿದ ಅನೇಕ ನಿದರ್ಶನಗಳು ನಮಗೆ ಸಿಗುತ್ತವೆ. ಆದಾಗ್ಯೂ, ಮಹಿಳಾ ಸಾಹಿತ್ಯ ಎನ್ನುವುದು ಅಡುಗೆ ಮನೆಯ ಸಾಹಿತ್ಯ ಎಂಬ ಮೂದಲಿಕೆಗೆ ಒಳಗಾಯಿತು. ವಾಸ್ತವದಲ್ಲಿ ಮಹಿಳೆಯರ ಸಾಹಿತ್ಯ ಅಡುಗೆ ಮನೆ ಸಾಹಿತ್ಯವಾಗಿರದೇ ಅದು ಪುರುಷ ಸಾಹಿತ್ಯಕ್ಕೆ ಎಲ್ಲ ರೀತಿಯಲ್ಲಿಯೂ ಸಮಾನವಾಗಿರುವುದನ್ನು ಯಾವ ಪಕ್ಷಪಾತವಿಲ್ಲದೇ ನೋಡುವ ಕಣ್ಣಿಗೆ ಕಾಣಿಸುತ್ತದೆ.


ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಮಹಿಳೆಯರು ಪಾಲುಗೊಂಡುದು ಮತ್ತು ಆಯಾ ಪ್ರಕಾರಗಳಲ್ಲಿ ಸಮರ್ಥವಾಗಿ ಅವರು ಅಭಿವ್ಯಕ್ತಿಸಿದ್ದುದು ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಾಣಿಸುತ್ತದೆ. ಅಲ್ಲಿ ಹಲವು ಮೇರು ಪ್ರತಿಭೆಗಳು ಮೂಡಿ ಬಂದಿರುವುದೂ ಗಮನಾರ್ಹ. ಈ ಸಾಧನೆಯನ್ನು ಅವರು ಮಾಡಿದ್ದು ಅನೇಕ ಅಡ್ಡಿ ಆತಂಕಗಳ ನಡುವೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲೇಬೇಕು.

ಮೊದಲೇ ಇಲ್ಲಿ ಪ್ರಸ್ತಾಪಿಸಿದ ಹಾಗೆ ೧೯ನೇ ಶತಮಾನದ ಆದಿಯಲ್ಲಿಯೇ ಲೇಖಕಿಯರ ಧ್ವನಿ ಕೇಳಿ ಬಂದರೂ ಅವರ ಸಾಹಿತ್ಯಕ್ಕೆ ೧೯೮೦ರ ದಶಕದ ವರೆಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ. ಬಹುಶಃ ಅದೇ ಕಾರಣಕ್ಕಾಗಿ "ಸ್ತ್ರೀವಾದಿ ಚಿಂತನೆ" ಎಂಬ ಹೊಸ ಆಲೋಚನಾ ಕ್ರಮ ಹುಟ್ಟಿಕೊಂಡಿತು. ಮಹಿಳಾ ಸಾಹಿತ್ಯವನ್ನು ಅದರ ನಿಜಾರ್ಥದಲ್ಲಿ ಗುರುತಿಸುವ ಹಾಗೂ ಅವರ ಸಾಹಿತ್ಯಕ್ಕೆ ಒಂದು ಸ್ಥಾನ ನಿರ್ದೇಶನ ಮಾಡುವ ಕೆಲಸವನ್ನು ಈ ಸ್ತ್ರೀವಾದಿ ಚಿಂತನೆ ಮೊದಲ ಬಾರಿಗೆ ರೂಪಿಸಿತು. ಈ ಚಿಂತನೆಯ ಮುಖ್ಯ ಉದ್ದೇಶವೇ ಮಹಿಳಾ ಸಾಹಿತ್ಯ ಕುರಿತ ಹಳೆಯ ವಿನ್ಯಾಸವನ್ನು ಬದಲಿಸುವುದು ಹಾಗೂ ಹೊಸ ಮೀಮಾಂಸೆಯನ್ನು ನಿರ್ಮಿಸುವುದು ಆಗಿತ್ತು. ಇದು ಒಂದು ರೀತಿಯಲ್ಲಿ ಮಹಿಳಾ ಸಾಹಿತ್ಯದ ಅವಲೋಕನಕ್ಕೆ ಹೊಸ ಪರಿಭಾಷೆಯನ್ನು ನಿರ್ಮಿಸಿತು. ಹೆಚ್ಚೂ ಕಡಿಮೆ ಅದೇ ಸಮಯದಲ್ಲಿ ಕನ್ನಡದಲ್ಲಿ ಬಂಡಾಯ ಸಾಹಿತ್ಯ ಚಳವಳಿಯೂ ಆರಂಭವಾಯಿತು. ೧೯೭೯ ರಲ್ಲಿ ಬೆಂಗಳೂರಿನಲ್ಲಿ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅಲ್ಲಿ ಮತ್ತು ತದನಂತರ ಬಂಡಾಯ ಸಾಹಿತ್ಯ ಕೂಡ ಕನ್ನಡ ವಿಮರ್ಶೆಗೆ ಹೊಸ ಪರಿಭಾಷೆಯ ಅಗತ್ಯವಿದೆ ಎಂದು ಪ್ರತಿಪಾದಿಸಿತು, ಆಗ್ರಹಿಸಿತು. "ನಮ್ಮ ಸಾಹಿತ್ಯವನ್ನು ನಿಕಷಕ್ಕೆ ಒಡ್ಡಲು ನಿಮಗೆ ಬೇರೆ ದೃಷ್ಟಿಕೋನ ಬೇಕು" ಎಂದು ಬಂಡಾಯ ಮತ್ತು ದಲಿತ ಲೇಖಕರು ಆಗ್ರಹಿಸಿದರು. ಮಹಿಳಾ ಲೇಖಕಿಯರು ಕೂಡ ಇದನ್ನೇ ಪ್ರತಿಪಾದಿಸಿದರು. ಮತ್ತು ಅವರು ಈ ಕೆಲಸವನ್ನು ಪುರುಷರು ಮಾಡಿಯಾರು ಎಂದು ಕಾಯುತ್ತ ಕುಳಿತುಕೊಳ್ಳದೇ ತಾವೇ ಮೇಲ್ಪಂಕ್ತಿ ಹಾಕಿದರು. ದಲಿತ ಮತ್ತು ಬಂಡಾಯ ಲೇಖಕರ ಹಾಗೆಯೇ, "ನಮ್ಮ ಬರವಣಿಗೆಯನ್ನು ನೋಡಬೇಕಾದ ಕ್ರಮ ಇದು" ಎಂದು ಅವರು ಹೇಳಿಕೊಡಲು ಯತ್ನಿಸಿದರು. ಅದರಲ್ಲಿ ಅವರು ಸಫಲರೂ ಆದರು. ಆ ನೂತನ ಚಿಂತನ ಕ್ರಮ, ದೃಢತೆ, ತಮ್ಮನ್ನು ತಾವು ಮುಖ್ಯ ವೇದಿಕೆಯ ಮೇಲೆ ತಂದುಕೊಳ್ಳಲು ಅವರು ಹೇಗೆ ಹೆಣಗಿದರು ಎಂಬುದಕ್ಕೆ ಈ ಎಲ್ಲ ಸಂಪುಟಗಳು ಕನ್ನಡಿ ಹಿಡಿಯುವಂತೆ ಇವೆ. ಅದನ್ನೆಲ್ಲ ಒಂದು ಬೃಹತ್ ವೇದಿಕೆ ಮೇಲೆ ಬಿಂಬಿಸುವ ಕೆಲಸವನ್ನು ಪರಿಷತ್ತು ಈಗ ಮಾಡಿದೆ. ಆಧುನಿಕ ಕನ್ನಡದ ಮಹಿಳೆಯ ಎಲ್ಲ ಪ್ರಮುಖ ಪ್ರಕಾರಗಳ ಪ್ರಾತಿನಿಧಿಕ ಬರವಣಿಗೆಯನ್ನು ಇಲ್ಲಿ ಸಂಕಲಿಸಿ ಕೊಡಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದು ಒಂದು ಅನನ್ಯ ಪ್ರಯತ್ನ, ಏಕೆಂದರೆ ಇದನ್ನು ಬೇರೆಲ್ಲೂ ಇದುವರೆಗೆ ಮಾಡಲಿಲ್ಲ. ಮಾಡಬೇಕು ಎಂದು ಯಾರಿಗೂ ಅನಿಸಲಿಲ್ಲ.

ನಮ್ಮ ಕನ್ನಡದ ಲೇಖಕಿಯರು ಹೇಗೆ ಯೋಚಿಸಿದರು, ಅವರ ಅನುಭವ ಲೋಕ ಹೇಗೆ ಇತ್ತು, ಅದು ಏನನ್ನು ಪರಿಶೋಧಿಸಲು ಪ್ರಯತ್ನ ಮಾಡಿತು, ಅಲ್ಲಿ

ಹೆಣ್ಣಿನ ಆಳದ ತಲ್ಲಣಗಳು, ಸಂತೋಷಗಳು, ದುಃಖಗಳು, ಸುಖಗಳು ಹೇಗೆ ಮೊಗ ಪಡೆದುವು ಎಂಬುದನ್ನು ಈ ಸಂಪುಟಗಳು ಕನ್ನಡಿಗರ ಮುಂದೆ ತೆರೆದು ಇಡುತ್ತವೆ. ಹೆಣ್ಣು ಮತ್ತು ಗಂಡಿನ ಸಂವೇದನೆಯ ನಡುವೆ ಇರುವ ಭಿನ್ನತೆಗಳನ್ನು ಹಿಡಿದು ಇಡಲು ಈ ಸಂಪುಟಗಳು ಯಶಸ್ವಿಯಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಕನ್ನಡದ ಓದುಗರು ಈ ಸಂಪುಟಗಳನ್ನು ಪ್ರೀತಿಯಿಂದ ಎದೆಗೆ ಅವಚಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಮತ್ತು ಸ್ತ್ರೀ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳು ಆಗುತ್ತವೆ ಎಂದೂ ನಾನು ಪ್ರಬಲವಾಗಿ ನಂಬಿದ್ದೇನೆ. ಇಂಥ ಕೆಲಸವನ್ನು ನಮ್ಮ ಅವಧಿಯಲ್ಲಿ ಮಾಡಿ ಪೂರೈಸುತ್ತಿರುವುದಕ್ಕೆ ನನ್ನ ಮನಸ್ಸಿನಲ್ಲಿ ಸಾರ್ಥಕ ಭಾವನೆ ಮೂಡಿದೆ.

ಈ ಎಲ್ಲ ಸಂಪುಟಗಳ ಎಲ್ಲ ಸಂಪಾದಕಿಯರಿಗೆ ಮತ್ತು ಮಾಲಿಕೆಯ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳನ್ನು ಅಂದವಾಗಿ ಹೊರಗೆ ತರಲು ಮತ್ತು ಸಂಪಾದಕರ ಜೊತೆಗೆ ಸಂಯೋಜಕನ ಕೆಲಸ ಮಾಡಲು ಪರಿಷತ್ತಿನ ಪ್ರಕಟಣೆಯ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿಯರು ಬಹುವಾಗಿ ಶ್ರಮಿಸಿದ್ದಾರೆ. ಅವರ ಜೊತೆಗೆ ಪ್ರಕಟಣಾ ವಿಭಾಗದ ಬಿ.ಎಂ.ನಾಗರತ್ನ ಅವರೂ ಕೈ ಜೋಡಿಸಿದ್ದಾರೆ. ಪರಿಷತ್ತಿನ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿ ಎಂದಿನಂತೆ ಹಗಲೂ ರಾತ್ರಿ ದುಡಿದು ಈ ಸಂಪುಟಗಳನ್ನು ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಈ ಸಂತೋಷದ ಗಳಿಗೆಯಲ್ಲಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.



**ನಾಡೋಜ ಡಾ.ಮನು ಬಳಿಗಾರ್**

ಅಧ್ಯಕ್ಷರು

# ಮಾಲಿಕೆಯ ಸಂಪಾದಕರ ನುಡಿ

"ಕಲ್ಲಕಾಲಲಿ ತುಳಿದು ಕೋಮಲಾಂಗಿಯ ಮಾಡಿದರು...." ಎಂಬ ಈ ಸಾಲು ಮಹಿಳಾ ಬದುಕಿಗೆ ಅನ್ವಯಿಸಿಕೊಂಡು ಹೇಳುವುದರ ಹಿಂದೆ ಮನುಕುಲ ಚರಿತೆಯ ಏಳು ಬೀಳಿನ ಅಗಣಿತ ಹಾದಿಗಳ ಪಯಣವಿದೆ. ಈ ಹಾದಿಗಳ ಅನ್ವೇಷಣೆಯೆಂದರೆ ಗಂಡು ರಾಜಕಾರಣದ ಮೋಸದ ಕಣ್ಣುಕಟ್ಟಿನ ಆಟದ ತಂತ್ರಗಳನ್ನು ಬಯಲುಗೊಳಿಸುವುದೇ ಆಗಿದೆ. ಮಾನವ ಚರಿತ್ರೆಯನ್ನು ಅರಿಯುವುದೆಂದರೆ ಸಮಾಜವನ್ನು ಅರ್ಥೈಸಿಕೊಳ್ಳುವಿಕೆಯೆಂದೆ ಭಾವಿಸಲಾಗಿದೆ. ಈ ಅರ್ಥೈಸಿಕೊಳ್ಳುವಿಕೆಯು ಪುರುಷಸ್ಥಾಪಿತ, ದ್ವೇಷಪೂರಿತ ವ್ಯಾಖ್ಯಾನಗಳ ಹಿಂದೆ ಬಹುದೊಡ್ಡ ಶಕ್ತಿಯಾಗಿ ವರ್ಣಾಧಾರಿತವಾದ ರಾಜಕಾರಣವಿದೆ. ವೇದ, ಉಪನಿಷತ್ತು, ಸ್ಮೃತಿ, ಅರ್ಥಶಾಸ್ತ್ರ, ಪುರಾಣಾದಿಯಾಗಿ ಶಾಸ್ತ್ರ, ಧರ್ಮಕಾವ್ಯ ಕಾರಣಗಳು ವರ್ಣಾಧಾರಿತ ಪುರುಷಹಿತಾಸಕ್ತಿ ರಾಜಕಾರಣವನ್ನು ಸಕ್ರಿಯಗೊಳಿಸುವಾಗ ಸ್ತ್ರೀಯನ್ನು ಗುರಿಯಾಗಿಸಿಕೊಂಡದ್ದರ ಹಿಂದೆ ಏನಿತ್ತು ಎಂಬುದೆ ನಮ್ಮೆದುರಿನ ಬಹುದೊಡ್ಡ ಪ್ರಶ್ನೆ. ಈ ಪ್ರಶ್ನೆಗಳನ್ನು ಅಂದಂದಿನ ಕಾಲದ ಸಮಾಜದೊಳಗಿದ್ದ ಅನೇಕ ಮಹಾತ್ಮರು ಹಾಕಿಕೊಂಡಿರುವರು. ಆದರೆ ಯಾವ ಕಾಲದಲ್ಲಿಯೂ ನ್ಯಾಯಸಮ್ಮತವಾದ ಉತ್ತರಗಳನ್ನು ಕಂಡುಕೊಳ್ಳಲು ಆಗಿಲ್ಲ ಎಂಬುದನ್ನು ಚರಿತ್ರೆಯ ಓದು ನಮ್ಮರಿವಿಗೆ ತಂದಿದೆ. ಹೀಗಾಗಿಯೆ ನಾವು ಮತ್ತೇ ಇಂದು ವರ್ತಮಾನದಲ್ಲಿ ನಿಂತು ಹಿಂಚಲನೆಯಿಂದ ಬೆನ್ನ ಹಿಂದಿನ ಕತ್ತಲಿನಲ್ಲಿ ಹುಗಿದು ಹೋಗಿರುವ ಅವಳ ಹೆಜ್ಜೆಗಳ ಆಕಾರಗಳನ್ನು ಹುಡುಕುವ ಮತ್ತೆ ಭವಿಷತ್ತಿನ ಹೆಜ್ಜೆಗಳಿಗೆ ಸುಗಮ ಹಾದಿ ನಿರ್ಮಿಸುವ ಇರಾದೆ ಈ ಶತಮಾನದ ಮಹಿಳೆಯರ ಜಾಗೃತ ಪ್ರಜ್ಞೆಯ ಭಾಗವೆಂದೆ ಭಾವಿಸಿರುವೆ.

**ಕಿಂಡಿಯಲ್ಲಿ ಕಂಡ ಜಗತ್ತು :** ವೇದ, ಉಪನಿಷತ್ತುಕಾಲೀನ ಸಮಾಜದಲ್ಲಿ ಮಹಿಳೆಯರಿಗೆ ಗೌರವದ ಸ್ಥಾನವಿತ್ತೆಂದು ಸನಾತನಿಗಳು ಅರ್ಧಸತ್ಯಗಳನ್ನು ಪೂರ್ಣಸತ್ಯಗಳಾಗಿ ಸುವುದಕ್ಕಾಗಿ ಎಷ್ಟೊಂದು ಹೆಣಗಾಡಿದರು ಎಂಬುದಕ್ಕೆ ಸಾಕ್ಷಿ ಪುರಾವೆಗಳ ಮೊರೆ ಹೋಗುವ ಅಗತ್ಯವಿಲ್ಲ. ಹೊರ ಆಕ್ರಮಣಿಗರು ಮತ್ತು ಒಳ ಮೂಲವಾಸಿಗಳ ಸಂಘರ್ಷ, ಸೌಹಾರ್ದ, ಸಮನ್ವಯತೆಗಳಿಂದ ರೂಪುಗೊಂಡ ಸಮಾಜದಲ್ಲಿ ಹೆಣ್ಣಿನ ಹುಟ್ಟಿನ ಬಗ್ಗೆ ಏಕಾಭಿಪ್ರಾಯಗಳಿಲ್ಲವೆಂಬುದನ್ನು ವೇದಗಳಲ್ಲಿರುವ ಕೆಲವು ಋಕ್ಕಗಳಲ್ಲಿ ಕಾಣಬಹುದು. ಋಗ್ವೇದ ಮತ್ತು ಅಥರ್ವಣ ವೇದಗಳಲ್ಲಿ ಹೆಣ್ಣಿನ ಸಾಮಾಜಿಕ ಸ್ಥಾನಮಾನಗಳ ಕುರಿತಂತೆ ಪ್ರಸ್ತಾಪಿಸಲಾಗಿದೆ. ಋಗ್ವೇದದಲ್ಲಿ ಗಂಡು ಮಗುವಿನ ಬಗ್ಗೆ ಸಮಾಜದಲ್ಲಿ ಬೇಡಿಕೆಯಿತ್ತು ಎಂದು ಹೇಳಿದರೆ ಅಥರ್ವಣ ವೇದದ ಋಕ್ಕೊಂದರಲ್ಲಿ ಮಗ ಹುಟ್ಟಲೆಂದು ಪ್ರಾರ್ಥನೆಗೈಯುತ್ತಿದ್ದರು ಎಂಬುದರ ಉಲ್ಲೇಖವಿದೆ.

"ಗಂಡು ಮಗುವನ್ನು ಪಡೆಯುವುದಕ್ಕಾಗಿ ವೇದಗಳು ಒಂದು ವಿಶೇಷ ಆಚರಣೆಯನ್ನು ಗೊತ್ತುಪಡಿಸಿವೆ. ಅದನ್ನು 'ಪುಂಸವನ' ಸಂಸ್ಕಾರ ಎಂದು ಕರೆಯುತ್ತಾರೆ. ಇದು

ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರ". "ಪ್ರಜಾಪತಿಯೆ, ನೀನು ಈ ಗರ್ಭವನ್ನು ಸೃಷ್ಟಿಸಿದ್ದೀಯೆ. ಈ ಗರ್ಭದಿಂದ ಗಂಡು ಸಂತಾನ ಜನಿಸಲಿ. ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ". "ಪ್ರಜಾಪತಿಯೆ ಹುಟ್ಟುವ ಗಂಡು ಮಗುವನ್ನು ಕಾಪಾಡು. ಅವನನ್ನು ಮಹಿಳೆಯನ್ನಾಗಿ ಮಾಡಬೇಡ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂಬುದರಲ್ಲಿ ಗಂಡಿನ ಪ್ರಧಾನತೆಯನ್ನು ಸಮಾಜ ಎತ್ತಿಹಿಡಿದು ಹೆಣ್ಣಿನ ಕುರಿತಂತೆ ಸಮಾಜದಲ್ಲಿ ನಕಾರಾತ್ಮಕ ಧೋರಣೆಯಿತ್ತು ಎಂಬುದು ತಿಳಿಯುತ್ತದೆ. ಈ ಶಾಸ್ತ್ರೋಕ್ತ, ವೇದೋಕ್ತ ಸಂಗತಿಗಳು ಕಾಲಾನಂತರದಲ್ಲಿ ಎಲ್ಲ ವರ್ಣಗಳಲ್ಲಿಯು ಈ ನಂಬಿಕೆಗಳು ಆಚರಣೆಗೆ ಬರುವುದಕ್ಕೆ ಉದಾರವಾಗಿ ಶ್ರಮಿಸಿವೆ. ಇಂದಿಗೂ ಚೊಚ್ಚಲು ಗರ್ಭಿಣಿಯರಿಗೆ ಹಳ್ಳಿಗಳಲ್ಲಿ ಅಂಬಲಿಗಡಿಗೆ ಪೂಜೆಮಾಡಿಸುವುದರ ಮೂಲಕ ಸ್ತ್ರೀವಿರೋಧಿ ಧೋರಣೆ ಚಾಲ್ತಿಯಲ್ಲಿರಿಸಿರುವುದನ್ನು ಗಮನಿಸಬಹುದು. ಇದೇ ಆಶಯವನ್ನು ನಮ್ಮ ಜನಪದ ಮಹಿಳೆಯರು ಹಂಬಲಿಸಿರುವುದನ್ನು ಗಮನಿಸುವಾಗ ಲಿಂಗರಾಜಕಾರಣ ವರ್ಣಜಿಗಿತವನ್ನು ಕಾಲದೊಂದಿಗೆ ಹೊಸೆದಿತ್ತು. ಶೂದ್ರ ಮಹಿಳೆಯರು ತಮ್ಮನ್ನು ಬೇಟೆಯಾಡಲು ಬಳಸಿದ್ದ ಹತ್ಯಾರಗಳನ್ನೇ ತಮ್ಮೊಡಲಿನಲ್ಲಿ ಮತ್ತು ಮಡಿಲಿನಲ್ಲಿಟ್ಟುಕೊಳ್ಳುವುದರ ಹಿಂದೆ ವೈದಿಕ ಹಿತಗಳ ಸಾಮಾಜಿಕ ಒತ್ತಡಗಳಿವೆ.

ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯೆಡೆಗಿನ ಸಾಗುದಾರಿಯಲ್ಲಿ ಸ್ತ್ರೀ ತನ್ನ ಚರಿತ್ರೆಯ ಕೊಂಡಿಯನ್ನು ಕಳಚಿಕೊಂಡದ್ದಕ್ಕೆ ಕಾರಣಗಳು ಸಿಗುತ್ತವೆ. ನೇಗಿಲಿನ ಆವಿಷ್ಕಾರ, ಬೆಂಕಿಯ ಬಳಕೆ ಹೆಣ್ಣಿನ ಕೈಯಲ್ಲಿಯ ಕಟ್ಟುವಿಕೆಯ ಆಯುಧಗಳನ್ನು ಗಂಡಸು ವಶಪಡಿಸಿಕೊಂಡದ್ದರ ಹಿಂದೆ ಬಹುದೊಡ್ಡ ಚರಿತ್ರೆಯಿದೆ. ಇದನ್ನು ಕುಟುಂಬ, ಖಾಸಗಿ, ಆಸ್ತಿಯ ಉಗಮದೊಂದಿಗೆ ಕಾಣಬಹುದು. ಅಲೆಮಾರಿ ಸಮುದಾಯಗಳು ಕಾದಾಟದಲ್ಲಿಯೆ ಬದುಕುತ್ತಿದ್ದ ಕಾರಣ ಕಾದಾಟಕ್ಕೆ ಗಂಡಿನ ಅಗತ್ಯತೆ ಕಾಣಿಸಿಕೊಂಡಿರಬಹುದು ಎಂದು ಸುಲಭವಾಗಿ ಚರಿತ್ರೆಕಾರರು ಹೇಳಿದ್ದನ್ನು ಗಂಡು ಬೇಡಿಕೆಯನ್ನು ಸಮರ್ಥಿಸುವುದಕ್ಕೆ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಭಾವಿಸುವುದರ ಮೂಲಕ ಹೆಣ್ಣಿನ ದೈಹಿಕ ಶಕ್ತಿಯನ್ನು ನಿರಾಕರಿಸಲಾಗಿದೆ. ಆಕೆಯ ಶಕ್ತಿಯನ್ನು ಕರ್ತವ್ಯದ ಕಕ್ಷೆಯಲ್ಲಿ ಕಟ್ಟಿಹಾಕಿ ಹಲವು ಪಾತ್ರಗಳ ನಿರ್ವಹಣೆಯನ್ನು ಹೊರಿಸಲಾಗಿದೆ. ಈ ಪಾತ್ರಗಳ ಕುರಿತಂತೆ ಋಗ್ವೇದದಲ್ಲಿ ಮಾಹಿತಿಗಳು ದೊರೆಯುತ್ತವೆ. ಗಂಡಸಿನ ಅಧೀನದಲ್ಲಿರುವ ಹೆಣ್ಣೊಬ್ಬಳು ನಿಷ್ಠೆಯಿಂದ ಮೂರು ಪಾತ್ರಗಳನ್ನು ಆದ್ಯಕರ್ತವ್ಯಗಳೆಂದೂ ಕಡ್ಡಾಯವಾಗಿ ಮಾಡಬೇಕು ಎಂಬುದರ ಹಿಂದೆ ಕುಟುಂಬದ ಪರಿಕಲ್ಪನೆ ಗಟ್ಟಿಗೊಂಡಿರುವುದು ಕಾಣಿಸುತ್ತದೆ. "ಗಂಡನನ್ನು ಪ್ರೀತಿಸುವವಳನ್ನು ಜಯಳೆಂದು ಅಧೀನಕ್ಕೊಳಪಡಿಸಿಕೊಂಡ ಗಂಡನ ಮಕ್ಕಳ ತಾಯಿಯನ್ನು 'ಜಾನಿ'ಯಂದು, ಗಂಡನ ಆಚರಣೆಗಳಲ್ಲಿ ಅವನ ಆಜ್ಞೆಯಂತೆ ಭಾಗಿಯಾದವಳನ್ನು 'ಪತ್ನಿ' ಎಂದು ಕರೆಯುವುದರ ಮೂಲಕ ಪುರುಷಾಧಿಪತ್ಯ ಮುನ್ನೆಲೆಗೆ ಬರತೊಡಗಿದೆ. ರಾಜರು ಮತ್ತು ಬಲಿಷ್ಠ (ಧಾರ್ಮಿಕವಾಗಿ, ಆರ್ಥಿಕವಾಗಿ) ಗಂಡಸರು ಬಹುಪತ್ನಿತ್ವ ಪದ್ಧತಿಯನ್ನು ರೂಢಿಯಲ್ಲಿ ತಂದಿದ್ದರು. ಇದಕ್ಕೆ ವಿರುದ್ಧವಾಗಿ ಕೌತುಕಮಯ ಸಂಗತಿಗಳು ಋಗ್ವೇದದಲ್ಲಿ ಉಲ್ಲೇಖಿತವಾಗಿವೆ. ಈ ಸಂಗತಿಗಳು ಸ್ತ್ರೀಪ್ರಧಾನತೆಯನ್ನು ಎತ್ತಿ ಹಿಡಿಯುವುದಕ್ಕೆ

ಬಳಕೆಗೊಳ್ಳುವುದಕ್ಕೆ ಉಲ್ಲೇಖಿತವಾದವುಗಳಲ್ಲ. ಇಷ್ಟೊತ್ತಿಗಾಗಲೇ ವರ್ಣವ್ಯವಸ್ಥೆ ಹೆಣ್ಣನ್ನು ಲೈಂಗಿಕ ಶುದ್ಧಾಶುದ್ಧಿಯ ಪ್ರಮೇಯದಲ್ಲಿ ದಾಖಲಿಸಿತ್ತು. ಬಹುಪತಿತ್ವದ ಬಗ್ಗೆ ಕೂಡ ಋಗ್ವೇದದಲ್ಲಿ ಉಲ್ಲೇಖವಿದೆ." ಒಬ್ಬ ಹೆಂಗಸು ಮೊದಲು ಹತ್ತು ಮಂದಿ ಬ್ರಾಹ್ಮಣರಲ್ಲದ ಗಂಡಂದಿರನ್ನು ಹೊಂದಿರಲಿ, ಒಬ್ಬ ಪುರೋಹಿತ ಅವಳ ಕೈ ಹಿಡಿದರೆ ಅವನೊಬ್ಬನೇ ಅವಳ ಗಂಡನಾಗುತ್ತಾನೆ. ಬ್ರಾಹ್ಮಣರು ಮಾತ್ರ ಅವಳ ಗಂಡ ರಾಜನೂ ಅಲ್ಲ, ವೈಶ್ಯನೂ ಅಲ್ಲ ಎಂದು ಒಂದು ಋಕ್ಕು ಹೇಳುತ್ತದೆ. [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ] ಇದು ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಹಿಡಿತ ಗಟ್ಟಿಗೊಳ್ಳುತ್ತಿರುವುದನ್ನು ಅದೇ ಸಂದರ್ಭದಲ್ಲಿ ಹೆಣ್ಣಿಗೆ ಲೈಂಗಿಕ ಸ್ವಾತಂತ್ರದ (ಬಹುಪತಿತ್ವದ) ಅವಕಾಶವನ್ನು ಕಿತ್ತುಕೊಂಡದ್ದನ್ನು ಬಿಂಬಿಸುತ್ತದೆ. ಋಗ್ವೇದದ ಕಾಲಕ್ಕಾಗಲೇ ಸ್ತ್ರೀ ಬದುಕಿನ ಅಧಃಪತನ ಪ್ರಾರಂಭವಾಗಿತ್ತು. ಹೆಣ್ಣಿನ ವಿಷಯದಲ್ಲಿ ವೇದಕಾಲೀನ ಸಮಾಜ ಉದಾರವಾಗಿರಲಿಲ್ಲ ವೆಂಬುದನ್ನು ಹಲವಾರು ಋಕ್ಕುಗಳಲ್ಲಿ ಸ್ತ್ರೀ ಸಂಬಂಧಿ ಹೇಳಿಕೆಗಳಿರುವುದರ ಮೂಲಕ ನೋಡಬಹುದು. 'ಹೆಣ್ಣಿನ ಬುದ್ಧಿಯನ್ನು ಅಳೆಯಲು ಸಾಧ್ಯವಿಲ್ಲ... ಹೆಣ್ಣಿನ ಪ್ರೇಮ ಯಾವಾಗಲೂ ಚಂಚಲ' "ಹೆಣ್ಣಿನ ಹೃದಯ ಕಿರುಬನ ಹೃದಯದಂತಿಹದು" ಎಂಬ ಹೇಳಿಕೆಗಳಿಂದ ಸ್ತ್ರೀಯನ್ನು ಅಪಮಾನಿಸಲಾಗಿದೆ.

ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ವೇದಕಾಲೀನ ಸಮಾಜ ಮಹಿಳೆಯರಿಗೆ ವಿಧಿಸಿತ್ತು. ಕೆಲವು ಪ್ರಸಂಗಗಳಲ್ಲಿ ಧಾರಾಳವಾಗಿ ನಡೆದುಕೊಂಡದ್ದರ ಕುರಿತು ಉಲ್ಲೇಖಗಳಿವೆ. ಹೆಣ್ಣಿಗೆ ವಿದ್ಯೆ ನೀಡುವ ವಿಚಾರದಲ್ಲಿ ಒಂದಿಷ್ಟು ಧಾರಾಳತೆಯನ್ನು ಪ್ರದರ್ಶಿಸಿದೆ. ಅದು ವರ್ಣವ್ಯವಸ್ಥೆಯನ್ನು ಮುಂದಿಟ್ಟುಕೊಂಡೆ ಎನ್ನುವುದನ್ನು ಗಮನಿಸಬೇಕು. ವೇದಗಳ ಕಾಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಮಧ್ಯೆ ವಿವಾಹಗಳು ನಡೆದಿರುವ ಉಲ್ಲೇಖಗಳಿವೆ. ಹೀಗಾಗಿ ಈ ಎರಡೂ ವರ್ಣಗಳಿಗೆ ವಿದ್ಯೆಯೆ ಪ್ರಧಾನವಾದ ಸಂಪತ್ತಾದ ಕಾರಣ ಅದನ್ನು ಕುಟುಂಬ ಮೂಲದ ಹೆಣ್ಣು ಮಕ್ಕಳಿಗೂ ಹಂಚಿದ್ದರ ಹಿಂದೆ ಸಾರ್ವತ್ರಿಕ ಹಿತವಿರಲಿಲ್ಲ. ಪುತ್ರನಿಲ್ಲದ ಮನೆಯಲ್ಲಿ ಪುತ್ರಿಯರು 'ಪುತ್ರಿಕ'ಳಾಗಿ ಮಗನ ಕರ್ತವ್ಯಗಳನ್ನು ನಿರ್ವಹಿಸಿರುವರು. ಕ್ಷತ್ರಿಯಳಾದ ಘೋಷಾ ಋಗ್ವೇದದ ಅನೇಕ ಋಕ್ಕೂಗಳನ್ನು ರಚಿಸಿದಳೆಂಬ ಖ್ಯಾತಿಯಿದೆ. "ಲೋಪಾ ಮುದ್ರಾ, ಮಮತಾ, ಉಪಾಲಾ, ಸೂರ್ಯ, ಇಂದ್ರಾಣಿ, ಶಚೀ, ಸರ್ಸರಾಜ್ಞೆ ಮತ್ತು ವಿಶ್ವಾವರ" [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ] ಇವರೆಲ್ಲರೂ ಋಕ್ಕುಗಳ ಕರ್ತೃಗಳೆಂದು ಹೇಳಲಾಗಿದೆ. ವಿಶ್ವಾವರಳಂತೂ ಅಗ್ನಿಯನ್ನು ಕುರಿತು ಋಕ್ಕುಗಳನ್ನು ರಚಿಸಿದ್ದಲ್ಲದೆ ಯಜ್ಞದಲ್ಲಿ ಋತ್ವಿಕನ ಕಾರ್ಯವನ್ನು ನೆರವೇರಿಸಿದಳೆಂದು ಹೇಳಲಾಗಿದೆ.

ವೇದಗಳ ಕಾಲದಲ್ಲಿಯೇ ಕುಟುಂಬ, ಖಾಸಗಿ ಆಸ್ತಿಯ ಪರಿಕಲ್ಪನೆಗಳು ಗಟ್ಟಿಗೊಂಡು ಸ್ತ್ರೀಮೂಲೀಯತೆಯನ್ನು ನಿರ್ನಾಮ ಮಾಡುವ ಎಲ್ಲ ಯೋಜನೆಗಳು ಸಿದ್ಧಗೊಂಡಂತಿದೆ. ಗಂಡು ಮಗುವನ್ನು ಪಡೆಯುವುದಕ್ಕಾಗಿಯೇ ಹಲವಾರು ಆಚರಣೆಗಳು ಕಾಣಿಸಿಕೊಂಡಿವೆ. ಹುಣ್ಣಿಮೆ ಅಮಾವಾಸ್ಯೆಯ ದಿನ ಯಜ್ಞಯಾಗಾದಿಗಳನ್ನು ವಿಶೇಷವಾದ ರೀತಿಯಲ್ಲಿ ಆಚರಿಸುತ್ತ ದೇವರಿಗೆ ಗಂಡುಮಗುವನ್ನು ನೀಡು ಎಂದು ಬೇಡಿಕೊಳ್ಳುವ ಆಚರಣೆಗಳು ಸಿಗುತ್ತವೆ. ಐತರೇಯ ಬ್ರಾಹ್ಮಣದಲ್ಲಿ ರಾಜ ಹರಿಶ್ಚಂದ್ರನ ಕಥೆ ಬರುತ್ತದೆ. ಅವನಿಗೆ ನೂರು ಜನ ಹೆಂಡತಿಯರಿದ್ದರೂ ಒಂದೂ ಗಂಡು ಮಗುವಿರಲಿಲ್ಲ. ಅವನ ಆಸ್ಥಾನದ

ಬ್ರಾಹ್ಮಣ ವಿದ್ವಾಂಸರು ಪುತ್ರನ ಪ್ರಾಮುಖ್ಯತೆಯನ್ನು ಅವರಿಗೆ ಹೀಗೆ ವಿವರಿಸಿ ಹೇಳುತ್ತಾರೆ. "ತಂದೆಯ ಋಣ ಮಗನ ಮೇಲಿರುತ್ತದೆ. ತಂದೆಯೂ ಮಗನ ಮುಖ ನೋಡಿದ ಕೂಡಲೇ ಅಮರತ್ವವನ್ನು ಪಡೆದು ಋಣಮುಕ್ತನಾಗುತ್ತಾನೆ.... ಮಗನು ಮುಕ್ತಿಯ ನಾವೆ, ಅತ್ಯುನ್ನತ ಸ್ವರ್ಗದ ಬೆಳಕು. ಹೆಂಡತಿಯು ಜೊತೆಗಾತಿ. ಆದರೆ ಮಗಳು ನೋವಿನ ಶೂಲೆ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂದು ಉಪದೇಶಿಸುವುದರ ಮೂಲಕ ಹೆಣ್ಣಿನ ಹುಟ್ಟಿನ ಬಗ್ಗೆ ಭಯವನ್ನು ಬಿತ್ತಲಾಯಿತು. ರಾಜನನ್ನು ನಿಯಂತ್ರಿಸುತ್ತಿರುವ ಈ ಪುರೋಹಿತಶಾಹಿ ವರ್ಗದಿಂದಲೇ ಮಹಿಳಾ ಸ್ವಾತಂತ್ರ್ಯದ ಹರಣ ಮತ್ತು ಅವಳ ಅಸ್ತಿತ್ವದ ನಿರಾಕರಣೆಯಾದಂತಿದೆ. ಯಾಕೆ ಈ ಪುರೋಹಿತ ವರ್ಗವು ಹೆಣ್ಣಿಗೆ ಇಂತಹ ಶಿಕ್ಷೆಗಳನ್ನು ನೀಡಿರಬೇಕು ಎಂಬುದನ್ನು ನೋಡುವುದಾದರೆ ಮಾತೃಮೂಲ ಸಂಸ್ಕೃತಿಯ ಸ್ತ್ರೀನಾಯಕತ್ವದಲ್ಲಿದ್ದ ನಿಸರ್ಗಜ್ಞಾನ, ಅವರ ದೈಹಿಕ ಸಾಮರ್ಥ್ಯವನ್ನು ಎದುರಿಸುವ ಶಕ್ತಿ ಸಾಲದ ಪುರೋಹಿತಶಾಹಿ ವರ್ಗವು ಕಾಲಕ್ರಮೇಣ ತಂತ್ರ ಪ್ರಧಾನವಾದ ಪುರುಷಯುಕ್ತಿಯನ್ನು ಬಲಗೊಳಿಸುತ್ತಾ ಸ್ತ್ರೀಮೂಲಿಯ ಬಲಿಷ್ಠ ಗಂಡಸರನ್ನು ನಾಯಕರನ್ನಾಗಿಸಿ ಅವರನ್ನು ವಿಶೇಷವಾಗಿ ನಿಯಂತ್ರಿಸುತ್ತ ಮಾತೃ ಮೂಲ ಸಮುದಾಯಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹೂಡಿದ ಬಹುದೊಡ್ಡ ಸಂಚು ಮಾನವ ಚರಿತ್ರೆಯಲ್ಲಡಗಿದೆ. ಈ ಸಂಚಿನ ಮೊದಲ ಬಲಿಪಶು ಹೆಣ್ಣು ಎಂಬುದನ್ನು ಕಾಲ ಅರಗಿಸಿಕೊಂಡ ಬಹುದೊಡ್ಡ ಪ್ರಮಾದವಿದು.

ಈ ವೇದಕಾಲೀನ ಸಮಾಜ ಹೆಣ್ಣನ್ನು ಅತ್ಯಂತ ಹೀನಾಯವಾಗಿ ಕಂಡಿದೆ. ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರು ಸೇರುತ್ತಾರೆ ಎಂದು ಹೇಳುವುದರ ಮೂಲಕ ಸ್ತ್ರೀ ಸಮುದಾಯವನ್ನು ಮನುಷ್ಯ ಸಮಾಜದಿಂದ ಹೊರಗಿಟ್ಟಿದೆ. ಬಹುಪತ್ನಿತ್ವವನ್ನು ಮತ್ತು ಪ್ರಭುತ್ವವನ್ನು ಒಪ್ಪಿಕೊಂಡಿರುವ ಈ ಯುಗದಲ್ಲಿ ಮಹಿಳೆಯರನ್ನು ಪ್ರಾಣಿಗಳೊಂದಿಗೆ ಅದರಲ್ಲೂ ಕುದುರೆಗಳೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸಿರುವ ಉಲ್ಲೇಖಗಳಿವೆ. ಕುದುರೆಯನ್ನು ಯಾಕೆ ಆಯ್ಕೆ ಮಾಡಿಕೊಂಡರೆಂದರೆ ಅದರ ಶಕ್ತಿ, ಗಮ್ಯತೆಯ ಕಾರಣದಿಂದ. ರಾಜರಿಗೆ ಬಲಿಷ್ಠ ಗಂಡು ಸಂತಾನದ ಅಗತ್ಯವಿತ್ತು. ಈ ಕಾರಣಕ್ಕಾಗಿ ರಾಣಿಯರನ್ನು ಕುದುರೆಯೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದಷ್ಟೆ ಅಲ್ಲ ಸ್ವತಃ ಹಿರಿಯ ರಾಣಿಯರು ಕುದುರೆಯ ಮಗ್ಗುಲಲ್ಲಿ ಮಲಗಿ ಬಲಿಷ್ಠಗಂಡು ಮಗುವನ್ನು ನೀಡು ಎಂದು ಪ್ರಾರ್ಥಿಸುತ್ತಿದ್ದರು ಎಂಬ ಪ್ರಸಂಗಗಳನ್ನು ವೇದಕಾಲದಲ್ಲಿ ಗಮನಿಸಬಹುದಾಗಿದೆ. ಹೆಂಡತಿ ತನ್ನ ಸೇವೆ ಮಾಡಲು ಮತ್ತು ತನ್ನ ವಾರಸುದಾರನನ್ನು ಹೆತ್ತುಕೊಡಲು ದೇವರು ಕೊಟ್ಟಿರುವ ಹೆಣ್ಣು. ಅವಳು ತನ್ನ 'ಪೋಷ್ಯ'ಳು ಅಂದರೆ ಆಶ್ರಿತಳು ಎಂದು ಹೇಳಲಾಗಿದೆ. ಬಹುಪತ್ನಿತ್ವವನ್ನು ಒಪ್ಪಿದ ವೇದಕಾಲೀನ ಸಮಾಜದಲ್ಲಿ ಪಟ್ಟದ ರಾಣಿಗಿದ್ದ ಸ್ಥಾನಮಾನಗಳು ಉಳಿದ ಸ್ತ್ರೀಯರಿಗೆ ಇರಲಿಲ್ಲವೆಂಬುದನ್ನು ಗಮನಿಸಬೇಕು. ಪಟ್ಟದ ರಾಣಿಗೆ ಉಳಿದೆಲ್ಲ ರಾಣಿಯರು ಅಧೀನರಾಗಿಯೆ ಇರಬೇಕಾಗಿತ್ತು. ಪಟ್ಟದರಸಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಮಾತ್ರ ರಾಜ್ಯಪಟ್ಟ ದೊರೆಯುತ್ತಿತ್ತು. ಹೀಗಾಗಿಯೇ ಪಟ್ಟದರಸಿಯರು ಪುತ್ರ ಸಂತಾನಕ್ಕಾಗಿ ಕುದುರೆಯೊಂದಿಗೆ ಮಲಗಲು ಮುಂದಾಗುತ್ತಿದ್ದರು. ಇದನ್ನು ಒಂದಿಷ್ಟು ಸೂಕ್ಷ್ಮವಾಗಿ ಗಮನಿಸಿದರೆ

ವರ್ಣವ್ಯವಸ್ಥೆಯ ಶ್ರೇಣೀಕೃತತೆ ಹೇಗೆ ಕೆಲಸ ಮಾಡಿದೆ ಎಂಬುದು ಅರ್ಥವಾಗುತ್ತದೆ. ಯುದ್ಧವೆಂಬುದು ಸಮುದಾಯ-ಸಮುದಾಯಗಳ ಮಧ್ಯೆ ನಡೆಯುತ್ತಿರುವ ಹೊತ್ತಿನಲ್ಲಿ ಸೋತ ಸಮುದಾಯದ ರಾಜರು, ರಾಣಿಯರು, ಗುಲಾಮರು ಸೇವಕರಾದಿಯಾಗಿ ಸಮಸ್ತವು ಗೆದ್ದವರಿಗೆ ದಕ್ಕುತ್ತಿತ್ತು. ಗೆದ್ದ ರಾಜನ ಪಟ್ಟದರಸಿಯರ ಜೊತೆಗೆ ಸೋತ ರಾಜನ ರಾಣಿಯರು ಸೇವಕರಾಗಿ ಅರಸಿಯರಾಗಿ ಅರಮನೆಯಲ್ಲಿರುತ್ತಿದ್ದರು. ಇಂತಹ ಸಂದರ್ಭದಲ್ಲಿ ಪಟ್ಟದರಸಿಯರಿಗೆ ಗಂಡು ಸಂತಾನವಿಲ್ಲದಿದ್ದರೆ ಅದು ರಾಜನ ದೋಷವಾಗಿ ಕಾಣಿಸದೆ ಅದನ್ನು ಮರೆಮಾಚುವ ಸಲುವಾಗಿ ಕುದುರೆ, ನಿಯೋಗದಂತಹ ಪದ್ಧತಿಗಳು ಆಪತ್‌ಧರ್ಮವಾಗಿ ಕಾಣಿಸಿಕೊಂಡಿವೆ. ಈ ನಿಯೋಗಕ್ಕೆ ಸಿದ್ಧಗೊಂಡ ಗಂಡಸರೆಲ್ಲರು ಬ್ರಾಹ್ಮಣ ಪಂಡಿತರೆ ಆಗಿರುತ್ತಿದ್ದರು. ಮಹಾಭಾರತವನ್ನು ನೆನಪಿಸಿಕೊಂಡರೆ ಇದು ಅರ್ಥವಾಗುತ್ತದೆ. ಬೀಜ ಮತ್ತು ಕ್ಷೇತ್ರದ ಪರಿಕಲ್ಪನೆಯ ಮೂಲಕ ಸ್ತ್ರೀ ಸಮುದಾಯವನ್ನು ಶ್ರೇಣೀಕರಣದಲ್ಲಿ ಹಂಚಲಾಯಿತು. ಈ ಹಂಚಿಕೆಯನ್ನು ಸಮರ್ಥಿಸಿಕೊಳ್ಳಲು ಹೆಣ್ಣಿಗೆ ಹೆಣ್ಣನ್ನೆ ಶತ್ರುವಾಗಿಸಿದರು.

ಸ್ಮೃತಿಗಳನ್ನು ಧರ್ಮಶಾಸ್ತ್ರಗಳೆಂದು ಕರೆಯಲಾಗಿದೆ. ಈ ಶಾಸ್ತ್ರಗಳು ಸಮಾಜವನ್ನು ನಿಯಂತ್ರಿಸುವ ಅಂಕುಶಗಳಂತೆ ಕಾರ್ಯಮಾಡಿವೆ. ವೇದಗಳ ಕಾಲದಲ್ಲಿ ಪುರುಷನ ಖಾಸಗಿ ಆಸ್ತಿಯಾಗಿ ಕುಟುಂಬ ಸೇರಿದ್ದ ಹೆಣ್ಣು ಚರಾಸ್ತಿಯಂತೆ ಬಳಕೆಗೊಂಡಿರುವುದನ್ನು ಕಾಣಬಹುದು. ಬಹುಪತಿತ್ವ ಮತ್ತು ಬಹುಪತ್ನಿತ್ವ ಈ ಎರಡರಲ್ಲಿಯೂ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಲಾಗಿದೆ. ಈ ಹಂತದಲ್ಲಿ ಮಹಿಳೆಯರನ್ನು ಚರಾಸ್ತಿಯನ್ನಾಗಿಸಲಾಗಿದೆ. ಇವುಗಳ ಮಧ್ಯ ಇರುವ ವ್ಯತ್ಯಾಸವೆಂದರೆ ಅನೇಕ ಪುರುಷರು ಒಂದು ಹೆಣ್ಣನ್ನು ಹೊಂದಿದ್ದರೆ ಇನ್ನೊಂದರಲ್ಲಿ ಒಬ್ಬ ಪುರುಷ ಅನೇಕ ಹೆಣ್ಣುಗಳ ಒಡೆಯನಾಗುವ ಸವಲತ್ತನ್ನು ಪಡೆದಿದ್ದ. ಸಂಪತ್ತು, ಪುಸ್ತಕ ಮತ್ತು ಸ್ತ್ರೀಯರನ್ನು ನೋಡಿಕೊಳ್ಳಲು ಬೇರೊಬ್ಬರನ್ನು ಬಿಡಬಾರದು, ಬೇರೆಯವರ ಕೈಗೆಕೊಡಬಾರದೆಂದು ಹೇಳಲಾಗಿದೆ. ಅದನ್ನು ಇಂದು ಪಠ್ಯದಲ್ಲಿ ಶಾಸ್ತ್ರೋಕ್ತವಾಗಿ ಉಳಿಸಿ ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಗ್ರಂಥಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಹೇಳುವಾಗ "ಪುಸ್ತಕಂ ವನಿತಂ, ವಿತ್ತಂ ಪರಹಸ್ತಂ ಗತಂ ಗತಾಃ...." ಗ್ರಂಥವನ್ನು ಅನ್ಯರ ಕೈಗಿತ್ತರೆ ಅದು ಮರಳುವಾಗ ಹರಿಯುವ ಭಯಕಾಡಿದೆ. ಹಾಗೆನೇ ಹಣವನ್ನು ಬೇರೆಯವರಿಗೆ ನೀಡಿದರೆ ಅದು ಇದ್ದರೂಪದಲ್ಲಿ ಮರಳಲಾರದು. ಹಾಗೆನೇ ಹೆಣ್ಣನ್ನು ಇನ್ನೊಬ್ಬರಿಗೆ ನೀಡಿದರೆ ಅವಳು ಭ್ರಷ್ಟಳಾಗಿ ಬರುತ್ತಾಳೆ ಎನ್ನುವುದರ ಹಿಂದೆ ಯಜಮಾನನಿಗೆ ಹೆಣ್ಣಿನ ದೇಹದ ಮೇಲಿನ ಹಕ್ಕು ಕಳೆದುಕೊಳ್ಳುವ ಲೈಂಗಿಕ ಭಯದಿಂದ ಹೆಣ್ಣನ್ನು ಕಾಯುವಂತೆ ಮಾಡಿದ ಗಂಡಸಿನ ಮನಸ್ಥಿತಿಗೆ ಶಾಸ್ತ್ರಗ್ರಂಥಗಳೇ ಕಾರಣ. ಹೆಣ್ಣಿನ ಬಗ್ಗೆ ಎಷ್ಟೊಂದು ನಕಾರಾತ್ಮಕ ಧೋರಣೆಯಿತ್ತು ಎನ್ನುವುದನ್ನು ಸ್ಮೃತಿಗಳ ಕಾಲದಲ್ಲಿ ಕಾಣಬಹುದು.

ಸ್ಮೃತಿಗಳು ಹೆಣ್ಣು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆನ್ನುತ್ತವೆ. ಆಕೆಯನ್ನು ಅನ್ಯಾಶ್ರಯದಲ್ಲಿರಿಸುವಾಗ ಮನು ಹೇಳಿದ ಮಾತುಗಳಿಗೆ ಇಂದಿಗೂ ಮರಣವಿಲ್ಲ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯವನ್ನು ಹೆಣ್ಣಿಗೆ ಸೂಚಿಸುವುದರ ಹಿಂದೆ ಹೆಣ್ಣನ್ನು ಪುರುಷ ಪ್ರಧಾನ ಚೌಕಟ್ಟಿನಲ್ಲಿ ತುರುಕುವುದೇ ಆಗಿತ್ತು. ಮುಂದುವರಿದು ಆಕೆಯನ್ನು ನಿಯಂತ್ರಿಸುವುದಕ್ಕಾಗಿಯೆ ಕೌಟುಂಬಿಕ

ಜವಾಬ್ದಾರಿಯನ್ನು ವಿವಾಹದ ಮೂಲಕ ಹೇರುವ ಹೊತ್ತಿನಲ್ಲಿ ಮನು ಮದುವೆಯ ವಯಸ್ಸನ್ನು ಸ್ತ್ರೀಪುರುಷರಿಗೆ ನಿಗದಿಗೊಳಿಸುತ್ತಾನೆ. ತಂದೆಯಾದವನು ತನ್ನ ಎಂಟು ವರ್ಷದ 'ಗೌರಿ'ಯನ್ನು ಮದುವೆ ಮಾಡಿಕೊಟ್ಟರೆ ಸ್ವರ್ಗ, ಒಂಬತ್ತು ವರ್ಷದ 'ರೋಹಿಣಿ'ಯನ್ನು ಕೊಟ್ಟರೆ ವೈಕುಂಠ, ಹತ್ತು ವರ್ಷದ 'ಕನ್ಯೆ'ಕಳನ್ನು ಕೊಟ್ಟರೆ ಬ್ರಹ್ಮಲೋಕ, ಹನ್ನೆರಡು ವರ್ಷದ 'ವೃಷಾಲಿ'ಯನ್ನು ಕೊಟ್ಟರೆ ಗೌರವ ಎಂದು ಹೇಳಲಾಗಿದೆ. ಇದೆ ಹೊತ್ತಿನಲ್ಲಿ ವಸಿಷ್ಠ "ಹೆಣ್ಣು ಮಗುವಿಗೆ ಅದು ಬೆತ್ತಲೆಯಾಗಿ ಓಡಾಡುತ್ತಿರುವಾಗಲೇ ಮದುವೆ ಮಾಡಬೇಕೆಂದು ಹೇಳುತ್ತಾನೆ."[ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ- ವೇದಗಳಲ್ಲಿಯ ಮಹಿಳೆಯರು] ಈ ವಿಷಯದಲ್ಲಿ ಎಲ್ಲ ಧರ್ಮಶಾಸ್ತ್ರಗಳು ಸಮ್ಮತಿಸಿವೆ. ಹೆಣ್ಣನ್ನು ಬಾಲ್ಯದಿಂದಲೇ ನಿಯಂತ್ರಿಸುವ ಗಂಡಸಿನ ಉದ್ದೇಶದ ಹಿಂದೆ ಹೆಣ್ಣಿನ ದೈಹಿಕ ಮತ್ತು ಬೌದ್ಧಿಕ ಶಕ್ತಿಯ ಭಯಕಾಡಿದೆ. ಊಳಿಗಮಾನ್ಯ ಪದ್ಧತಿಯು 'ಮನುಸಂಹಿತೆಯನ್ನು' ಸಾಮಾಜಿಕ ಶಾಸನೋಪಾದಿಯಲ್ಲಿ ಗಟ್ಟಿಗೊಳಿಸಿದ ಕಾಲ ಮಹಿಳೆಯರಿಗೆ ಅತ್ಯಂತ ಗ್ರಹಣಕಾಲವಾಗಿದೆ. ಮನುವಿನ ಪ್ರಕಾರ "ಬಾಲಯಾವಾಯುವತ್ಯಾವಾ ವೃದ್ಧಯಾ ವ್ಯಾಪಿ ಯೋಷಿತಾ! ನಸ್ವಾತಂತ್ರೇಣ ಕರ್ತವ್ಯಂಕಿಂಬೆತ್ಕಾರ್ಯ ಗೃಷ್ಟಪಿ॥" ಅಂದರೆ ಹುಡುಗಿ, ಯುವತಿ, ಮುದುಕಿ ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೆ ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡಕೂಡದು. ಈ ಮಾತು ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯವಾಗಿಯೆ ಅಂಗೀಕರಿಸಲ್ಪಟ್ಟಿತು. ಮುಂದುವರೆದು ಬಾಲ್ಯವಿವಾಹಕ್ಕೆ ಒಳಗಾಗುವ ಹುಡುಗಿಯರು ಗಂಡನ ಮರಣಾನಂತರ ಹೇಗೆ ಬದುಕಬೇಕು ಎಂಬುದನ್ನು ಕಠಿಣ ನಿಯಮಗಳ ಮೂಲಕ ಆಚರಣೆಯಲ್ಲಿಟ್ಟಿದ್ದರು. ಸತಿ ಪದ್ಧತಿಯ ಬಗ್ಗೆ ಇಲ್ಲಿಯವರೆಗೂ ನಮಗಿದ್ದ ತಿಳುವಳಿಕೆಯನ್ನು ಬದಲಿಸಿ ಕೊಳ್ಳುವಂತಹ ಹಲವಾರು ಸಂಗತಿಗಳು ಸ್ಮೃತಿಗಳಲ್ಲಿ ಕಾಣಿಸುತ್ತವೆ. ವರ್ಣಾಶ್ರಮ ಧರ್ಮಕ್ಕೆ ಒಳಪಟ್ಟಿದ್ದ ವೇದ ಮತ್ತು ಸ್ಮೃತಿಗಳ ಕಾಲದಲ್ಲಿ ಎಲ್ಲ ಮಹಿಳೆ ಮತ್ತು ಎಲ್ಲ ಪುರುಷರಿಗೆ ಏಕರೂಪಿ ಕಾನೂನು ಕಟ್ಟಳೆಗಳಿರಲಿಲ್ಲ. ಕ್ಷತ್ರಿಯ ಮತ್ತು ಬ್ರಾಹ್ಮಣ ಕುಲಗಳ ಶುದ್ಧಿಗಾಗಿ ಹುಟ್ಟಿಕೊಂಡ ಕಾನೂನುಗಳು ಶೂದ್ರ ಪುರುಷನನ್ನು ಮತ್ತು ಬ್ರಾಹ್ಮಣ ಕ್ಷತ್ರಿಯ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದನ್ನು ಅಂಗೀರಸನ ಹೇಳಿಕೆಯಲ್ಲಿ ಗೋಚರಿಸುತ್ತದೆ. "ಬ್ರಹ್ಮನ ಆಜ್ಞೆಯಂತೆ ಬ್ರಾಹ್ಮಣ ಹೆಂಗಸು ಸತ್ತ ಗಂಡನನ್ನು ಹಿಂಬಾಲಿಸಬಾರದು. ಬ್ರಾಹ್ಮಣ ಜಾತಿಯ ಹೆಣ್ಣು ಸತ್ತ ಗಂಡನೊಡನೆ (ಸತಿ) ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಅವಳಾಗಲಿ ಅವಳ ಗಂಡನಾಗಲೀ ಸ್ವರ್ಗಕ್ಕೆ ಹೋಗುವುದಿಲ್ಲ" [ಡಾ. ಸಿ. ವೀರಣ್ಣ : ಕನ್ನಡ ಕಾವ್ಯ ಕಂಡ ಹೆಣ್ಣು] ಎಂದು ಅಂಗೀರಸ ಹೇಳುವುದರ ಹಿಂದೆ ಬ್ರಾಹ್ಮಣ ಮಹಿಳೆಯರ ಬಗ್ಗೆ ಮೃದು ಧೋರಣೆಯನ್ನು ಸ್ಮೃತಿಗಳು ಹೊಂದಿದ್ದವು ಎಂಬುದನ್ನು ಗಮನಿಸಬಹುದು. ಮುಂದುವರಿದು ಇವೆ ಸ್ಮೃತಿಗಳು ಬೇರೆ ಬೇರೆ ಕ್ಷತ್ರಿಯ, ವೈಶ್ಯ ವರ್ಣದ ಹೆಣ್ಣು ಮಕ್ಕಳು ಸತಿ ಹೋಗುವುದನ್ನು ಕಡ್ಡಾಯಗೊಳಿಸಿವೆ. ಈ ವರ್ಣದ ಹೆಣ್ಣುಗಳು ಸತಿಹೋಗುವುದರ ಮೂಲಕ ಪತಿಗೆ ಸ್ವರ್ಗದ ಬಾಗಿಲನ್ನು ತೆರೆಯಲಾಗುತ್ತದೆ ಎಂದು ನಂಬಿಸಲಾಗಿದೆ.

ವಿವಾಹದ ಮೂಲಕ ಕುಟುಂಬದ ಚೌಕಟ್ಟು ಭದ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ವರ್ಣಗಳಿಗೆ ಸೇರಿದ ಹೆಣ್ಣು ಮಕ್ಕಳು ಅನುಸರಿಸಬೇಕಾದ ನಿಯಮಗಳನ್ನು

ಮನು ಸ್ಪಷ್ಟವಾಗಿ ಹೇಳಿರುವನು. "ಒಂದೇ ವರ್ಣದವರನ್ನು ವಿವಾಹವಾಗುವಾಗ ಪರಸ್ಪರ ಕೈಗಳನ್ನು ಸೇರಿಸಬೇಕು. ಕ್ಷತ್ರಿಯ ಕನ್ಯೆ ಬ್ರಾಹ್ಮಣನನ್ನು ವರಿಸುವಾಗ ಬಾಣ ಹಿಡಿಯಬೇಕು. ಉತ್ತಮ ಕುಲದವನನ್ನು ವರಿಸುವ ವೈಶ್ಯ ಕನ್ಯೆ ಕೈಯಲ್ಲಿ ಚಾಟಿ ಹಿಡಿಯಬೇಕು. ಶೂದ್ರ ಕನ್ಯೆ ಗಂಡಿನ ವಸ್ತ್ರದ ತುದಿ ಹಿಡಿಯಬೇಕು" ಇದು ವರ್ಣ ವ್ಯವಸ್ಥೆಯನ್ನು ಸ್ತ್ರೀಯರ ಮೂಲಕ ಸ್ಥಿರೀಕರಿಸುವ ಕೆಲಸವನ್ನು ಮಾಡಿದೆ. ಶೂದ್ರ ಪುರುಷ ಉಳಿದ ವರ್ಣಗಳ ಸ್ತ್ರೀಯರನ್ನು ನೋಡುವಂತೆಯೆ ಇರಲಿಲ್ಲ. ನೋಡಿದವರನ್ನು, ಚಾಪೆಯಲ್ಲಿ ಸುತ್ತಿ ಸುಡಬೇಕು ಎಂಬ ಭೀಕರ ನಿಯಮಗಳು ಸಮಾಜದಲ್ಲಿ ರೂಢಿಯಲ್ಲಿದ್ದವು. ಬ್ರಾಹ್ಮಣ ಪುರುಷ ಶೂದ್ರ ಹೆಣ್ಣನ್ನು ಮದುವೆಯಾದರೆ ಸತ್ತ ನಂತರ ನರಕಕ್ಕೆ ಹೋಗುತ್ತಾನೆ ಎನ್ನುವುದರ ಮೂಲಕ ವರ್ಣಸಂಕರಕ್ಕೆ ಸಂಬಂಧಿಸಿ ಶಾಸ್ತ್ರಾಧಿಗಳ ಸಮ್ಮತಿಯಿರಲಿಲ್ಲವೆನ್ನುವುದನ್ನು ಒತ್ತಿ ಹೇಳಲಾಗಿದೆ. ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೇಲ್ಮುಖ ಚಲನೆಗೆ ಅವಕಾಶವಿರಲಿಲ್ಲ, ಹೆಣ್ಣಿನ ನಡೆನುಡಿಗಳನ್ನು ಸ್ಮೃತಿಗಳು ಹೀಗೆ ಸೂತ್ರಿಕರಿಸುತ್ತವೆ. 'ಎಳೆಯ ವಯಸ್ಸಿನಲ್ಲಿ ಹೆಣ್ಣು ಪರದೆಯ ಹಿಂದೆ ಇರಬೇಕು. ಗಂಡನ ಅಪ್ಪಣೆಯಿಲ್ಲದೆ ಅವಳು ಹೊರಗೆ ಹೋಗಬಾರದು. ಹೊರಗೆ ಹೋಗಲೇಬೇಕಾದಾಗ ಅವಳು ಸರಿಯಾಗಿ ಬಟ್ಟೆಗಳನ್ನು ಧರಿಸಬೇಕು, ಬಟ್ಟೆ ಹೇಗೆ ಧರಿಸಬೇಕೆಂದರೆ ದೇಹದ ಯಾವ ಭಾಗವೂ ಕಾಣದಂತೆ ಎಚ್ಚರಿಕೆಯಿಂದ ಮುಚ್ಚಿಕೊಂಡಿರಬೇಕು. ಜೋರಾಗಿ ನಡೆಯಬಾರದು, ವ್ಯಾಪಾರಿ ಮತ್ತು ವೃದ್ಧ ವೈದ್ಯ ಇವರನ್ನು ಬಿಟ್ಟು ಬೇರೆಯವರೊಂದಿಗೆ ಮಾತನಾಡಬಾರದು. ನಡೆಯುವಾಗ ಹಾದಿಯಲ್ಲಿ ನಗಬಾರದು ಮತ್ತು ಅನ್ಯರೊಂದಿಗೆ ಮಾತನಾಡಬಾರದು' ಎಂದು ಹೇಳಿದ್ದು, ಕುಲೀನ ಸ್ತ್ರೀಯರಿಗೆ ಮಾತ್ರವೆಂಬುದನ್ನು ಗಮನಿಸಬೇಕು. ಯಾಕೆ ಕುಲೀನ ಸ್ತ್ರೀಯರಿಗೆ ಈ ನಿಯಮಗಳನ್ನು ಮಾಡಿರಬೇಕು? ವ್ಯಾಪಾರಿ ಮತ್ತು ವೃದ್ಧವೈದ್ಯರನ್ನು ಹೊರತುಪಡಿಸಿ. ಬೇರೆ ಗಂಡಸರೊಂದಿಗೆ ಮಾತನಾಡಬಾರದು ಎಂಬುದರ ಹಿಂದೆ ವರ್ಣಸಂಕಟದ ಭಯ ಮತ್ತು ಹೆಣ್ಣಿನ ದೇಹದ ಮೇಲಿನ ಸ್ವಾಧೀನತೆ ಕುಲಶುದ್ಧಿಯನ್ನು ಗಟ್ಟಿಗೊಳಿಸುವುದಕ್ಕಾಗಿ ಇಂತಹ ಕಟ್ಟಳೆಗಳನ್ನು ಹಾಕಿದಂತಿದೆ. ಗಂಡಿನ ದಾಸ್ಯತ್ವಕ್ಕೆ ಹೆಣ್ಣನ್ನು ನೂಕುವಾಗ ಧರ್ಮಶಾಸ್ತ್ರಗಳು ಶ್ರಮವಹಿಸಿರುವುದರ ಹಿಂದೆ ಏನಿತ್ತು ಎಂಬುದೇ ನಮ್ಮ ಹುಡುಕಾಟದ ಬಹುಮುಖ್ಯ ಸಂಗತಿ. ದೇವದಾಸಿಯರು ದೇವರು ಧರ್ಮದ ಹೆಸರಿನಲ್ಲಿ ರಾಜಪ್ರಭುತ್ವ, ಧರ್ಮಪ್ರಭುತ್ವದ ಉಪಭೋಗಕ್ಕಾಗಿ, ಕವಲೊಡೆದ ಸ್ತ್ರೀ ಸಮುದಾಯಕ್ಕೆ ಈ ಶೃಂಗಾರ ಪ್ರಧಾನವಾದ ವಿದ್ಯೆಗಳನ್ನು ಕಲಿಯುವ ಅವಕಾಶವನ್ನು ನೀಡಿತ್ತು. ಕುಟುಂಬ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟ ಮಹಿಳೆಯರು ತಮ್ಮ ಲೈಂಗಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಸಮಾಜವೇ ಇನ್ನೊಂದು ಸಮುದಾಯಗಳ ಸ್ತ್ರೀಯರಿಗೆ ಕುಟುಂಬವನ್ನು ನಿರಾಕರಿಸಿ ಲೈಂಗಿಕ ಸ್ವಾತಂತ್ರ್ಯ ನೀಡಿತ್ತು. ಸಾಮಾಜಿಕ ಗೌರವದಿಂದ ವಂಚಿತರನ್ನಾಗಿಸಿದ ಈ ಸಮುದಾಯದ ಸ್ತ್ರೀಯರು ಹೀನಕುಲವೆಂದು ಕರೆಯಲ್ಪಟ್ಟ ಕುಲದಿಂದ ಬಂದವರಾಗಿದ್ದರು. ಈ ಕುಲಗಳಲ್ಲಿ ಹೆಣ್ಣು ಸಂತತಿಗೆ ಬೇಡಿಕೆಯಿತ್ತು. ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುವ ವಾರಸುದಾರಿಕೆ ಹೆಣ್ಣುಮಗುವಿಗಿತ್ತು.

ಧರ್ಮಶಾಸ್ತ್ರಗಳ ರಕ್ಷಣೆಗಾಗಿ ಹುಟ್ಟಿದಂತಿರುವ ಕೌಟಿಲ್ಯನ ಅರ್ಥಶಾಸ್ತ್ರ ರಾಜಕೀಯ ಕಾರಣಗಳಿಂದ ಇನ್ನಷ್ಟು ಸ್ತ್ರೀ ಶೋಷಣೆಗೆ ಹೊಸ ಬಗೆಯ ಹಾದಿಗಳನ್ನು ತೆರೆಯಿತು.

ಗೃಹಿಣಿ–ಗಣಿಕೆಯರೆಂದು ಸ್ತ್ರೀ ಸಮುದಾಯದ ಮಧ್ಯದಲ್ಲಿ ಗೋಡೆ ಕಟ್ಟುವುದರ ಮೂಲಕ ಸ್ತ್ರೀ ಸಮುದಾಯವನ್ನು ಒಡೆದು ನಿರಂತರವಾಗಿ ಪರಸ್ಪರ ಸಾಂಸ್ಕೃತಿಕವಾಗಿ ಕದನಕ್ಕಿಳಸುವಂತೆ ಮಾಡಿದೆ. ಧರ್ಮಶಾಸ್ತ್ರಗಳು ವಾಸ್ತವವಾಗಿ ಹೆಣ್ಣಿಗೆ ಮಾಡಬಾರದೆಂದು ನಿಷೇಧಿಸಿದ ವಿಷಯಗಳನ್ನು ಅರ್ಥಶಾಸ್ತ್ರ ಮಾಡಲು ಪ್ರಚೋದಿಸಿತು. ಕೇವಲ ನಿಯಮಗಳ ರೂಪದಲ್ಲಿದ್ದ ವೇದ, ಸ್ಮೃತಿಕಾರರ ಮಾತುಗಳಿಗೆ ಕಾನೂನು, ದಂಡ, ಶಿಕ್ಷೆಯೆಂಬವುಗಳನ್ನು ಆಡಳಿತದ ಭಾಗವಾಗಿಸಿದ ಅರ್ಥಶಾಸ್ತ್ರ ಹೆಣ್ಣಿಗೆ ಸಂಪೂರ್ಣ ದಿಗ್ಬಂಧನವನ್ನು ಹಾಕಿತು. ಹೆಣ್ಣಿನ ಸ್ತ್ರೀಧನ, ಆಸ್ತಿ ಹಕ್ಕುಗಳ ಮೇಲೆ ರಾಜಾಧಿಕಾರವನ್ನು ಹೇರಿತು. ಗಣಿಕಾ ಸ್ತ್ರೀಯರು ರಾಜಾದಾಯ ಕೊಡಬೇಕು ಎನ್ನುವುದರ ಮೂಲಕ ವೇಶ್ಯಾವೃತ್ತಿಯನ್ನು ಸೇವಾ ತೆರಿಗೆಯ ವಲಯಕ್ಕೆ ತರುವುದರ ಮೂಲಕ ರಾಜನ ಸ್ವತ್ತಾಗಿಯೆ ಈ ವೇಶ್ಯೆಯರು ಇರಬೇಕು. ರಾಜ ಹೇಳಿದವನಿಗೆ ವೇಶ್ಯೆ ತನ್ನ ದೇಹವನ್ನು ಒಪ್ಪಿಸದಿದ್ದರೆ ಅವಳು ಸಾರ್ವಜನಿಕವಾಗಿ ಶೂದ್ರನ ಕೈಯಿಂದ ಚಡಿ ಏಟು ತಿನ್ನುವುದನ್ನು ಕಾನೂನಾಗಿಸಿದ. ಪ್ರತಿ ತಿಂಗಳು ಪ್ರತಿಯೊಬ್ಬ ವೇಶ್ಯೆ ತನ್ನ ಎರಡು ದಿನದ ಸಂಪಾದನೆಯನ್ನು ರಾಜನಿಗೆ ಕೊಡಬೇಕು ಎಂದು ಕಾನೂನು ಜಾರಿಗೊಳಿಸುವಾಗ ಕೌಟಿಲ್ಯನಿಗೆ ವೇಶ್ಯಾವೃತ್ತಿ ನೈತಿಕ ಪ್ರಶ್ನೆಯಾಗಿ ಕಾಡಿದಂತಿಲ್ಲ. ಹೆಣ್ಣಿನ ಎಲ್ಲ ರೀತಿಯ ಒಡೆತನವನ್ನು ಗಂಡಸಿಗೆ ವಹಿಸುವುದರ ಮೂಲಕ ಹೆಣ್ಣನ್ನು ಅಬಲಾಸ್ಥಾನಕ್ಕೆ ನೂಕಿದ. ದೇವರ ಸೇವೆಗೆಂದೆ ಮಹಿಳಾ ಸಮುದಾಯವೊಂದನ್ನು ಹುಟ್ಟುಹಾಕುವುದರ ಮೂಲಕ ಪುರುಷ ಕೌಟುಂಬಿಕ ಚೌಕಟ್ಟಿನಾಚೆಗೂ ಲೈಂಗಿಕ ಉಪಭೋಗದ ಉಪಕರಣವೊಂದನ್ನು ಎಗ್ಗಿಲ್ಲದೆ ನಿರ್ಮಿಸಿದ್ದ.

ಧರ್ಮ ಶಾಸ್ತ್ರಗಳಿಂದ ವೈದಿಕ ಯುಗದಲ್ಲಿ ಬಂಧಿಸಲ್ಪಟ್ಟ ಮಹಿಳೆಯ ಬದುಕಿಗೆ ಸಂಬಂಧಿಸಿ ನಂತರ ಬಂದ ಧರ್ಮಗಳು ಉದಾರವಾಗಿ ನಡೆದುಕೊಂಡಂತೆ ಹೊರಮೈಯಲ್ಲಿ ಕಾಣಿಸಿದರೂ ಒಳಮೈಯಲ್ಲಿಯ ಗಾಯದ ಉರಿ ಹಾಗೆಯೆ ಉಳಿದಿತ್ತು. ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಸಾರುತ್ತ ಬಂದಿದ್ದ ಹಿಂದೂ ಧರ್ಮಕ್ಕೆ ಪ್ರತಿರೋಧ ಒಡ್ಡುತ್ತ ಬಂದ ಯಾವ ಧರ್ಮಗಳು ಮಹಿಳೆಯರನ್ನು ಬಂಧನದಿಂದ ಸಂಪೂರ್ಣವಾಗಿ ಮುಕ್ತಗೊಳಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಹಿಂದೂ ಧರ್ಮದ ತಾತ್ವಿಕತೆಯನ್ನು ಪ್ರಬಲವಾಗಿ ವಿರೋಧಿಸುತ್ತ ಹೊಸ ಸಮಾಜದ ಸಾಧ್ಯತೆಗಳನ್ನು ತೋರಿಸಿದ ಬೌದ್ಧಧರ್ಮ ಹೆಣ್ಣಿನ ವಿಷಯದಲ್ಲಿ ಅಷ್ಟೊಂದು ಮುಕ್ತತೆಯನ್ನು, ಉದಾರತೆಯನ್ನು ತೋರಿಸಲಿಲ್ಲ. ಧರ್ಮ ಪ್ರಸಾರಕ್ಕೆ ಹುಟ್ಟಿಕೊಂಡ ಸಂಘದಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಬುದ್ಧ ಪೂರ್ಣ ಮನಸ್ಸಿನಿಂದ ಒಪ್ಪಿಗೆ ನೀಡಿದಂತಿಲ್ಲ. 'ಸುಲ್ಲವಗ್ಗ'ದಲ್ಲಿ ಬುದ್ಧ ಆನಂದನಿಗೆ ಹೇಳಿರುವ ಈ ಮಾತುಗಳಲ್ಲಿ 'ಕುಟುಂಬ' ಬಹುವಾಗಿ ಕಾಡಿದಂತಿದೆ. ಆನಂದ "ಸ್ತ್ರೀ ಗೃಹಕೃತ್ಯಜೀವನದಿಂದ ಮುಕ್ತಳಾಗದೆ ಇದ್ದಿದ್ದರೆ, ನನ್ನ ಧರ್ಮದಡಿಯಲ್ಲಿ ಗೃಹವಿಲ್ಲದವಳಾಗದೆ ಇದ್ದಿದ್ದರೆ, ಧರ್ಮ ಬಹಳ ಕಾಲ ಬದುಕುತ್ತಿತ್ತು. ಕೊನೆಯ ಪಕ್ಷ ಸಾವಿರ ವರ್ಷಗಳಷ್ಟು ಇರುತ್ತಿತ್ತು. ಆದರೆ ಹೆಣ್ಣು ಗೃಹಕೃತ್ಯಗಳನ್ನು ತೊರೆದಿರುವುದರಿಂದ ಅದು ಹೆಚ್ಚೆಂದರೆ ಐನೂರು ವರ್ಷ ಬಾಳೀತು". ಹೆಣ್ಣು ಧರ್ಮ ಸ್ವೀಕಾರ ಮಾಡಿದ್ದರಿಂದ ಧರ್ಮದ ಆಯುಷ್ಯ ಕಡಿಮೆಯಾಗುತ್ತದೆಂಬ ಅಳುಕು ಬುದ್ಧನಿಗಿತ್ತು. ಈ ಅಳುಕಿಗೆ ಕುಟುಂಬದ ಜವಾಬ್ದಾರಿ ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಕಾರಣವಾಗಿರಬೇಕೆಂದು ಭಾವಿಸಬಹುದು. ಕುಟುಂಬದ ಸಂಪೂರ್ಣ ಹೊಣೆಗಾರಿಕೆಯನ್ನು ಹೆಣ್ಣಿಗೆ

ಹೊರಿಸಲಾಗಿತ್ತು. ಇದರಿಂದ ಮಹಿಳೆ ಬಿಡುಗಡೆಗೊಳ್ಳುವುದೆಂದರೆ ಕುಟುಂಬದ ಚೌಕಟ್ಟು ಮುರಿದಂತೆ ಎಂಬುದು ಬುದ್ಧನಿಗೆ ಅರ್ಥವಾಗಿತ್ತು. ಸಂಸಾರವನ್ನು ಬಂಧನವೆಂದು ಗಂಡಿಗೆ ಹೇಳಿದಂತೆ ಹೆಣ್ಣಿಗೆ ಹೇಳಿಲ್ಲ. ಸಂಸಾರ ಗಂಡಿಗೆ ಬಂಧನವಾದರೆ ಹೆಣ್ಣಿಗೆ ಕರ್ತವ್ಯ ಮತ್ತು ಕಡ್ಡಾಯವಾಗಿ ಪಾಲಿಸಬೇಕಾದ ಮೌಲ್ಯವೆಂದು ಒಪ್ಪಿಸಲಾಗಿದೆ. ಹೀಗಾಗಿಯೆ ಬುದ್ಧನಂತವರಿಗೂ ಸ್ತ್ರೀಯರನ್ನು ಹೊರತುಪಡಿಸಿ ಕುಟುಂಬವನ್ನು ಸರಿಭಾವಿಸಲು ಸಾಧ್ಯವಾದಂತಿಲ್ಲ.

ಧರ್ಮಮಾರ್ಗದಲ್ಲಿ ನಡೆಯಲು ಬಯಸುವ ಗಂಡಸಿಗೆ ಸ್ತ್ರೀ ಬಹುದೊಡ್ಡ ಬಂಡೆಯಾಗಿ ಎಲ್ಲ ಧರ್ಮಗಳಿಗೂ ಕಾಣಿಸಿರುವಳು. ಸ್ತೀ ಕುರಿತಹಾಗೆ ಬುದ್ಧನಂತಹವರಿಗೂ ಭಯ ಕಾಡಿದೆ. ಶಿಷ್ಯನಾದ ಆನಂದ ಹೆಣ್ಣಿನೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂದು ಕೇಳಿದ್ದಕ್ಕೆ ಬುದ್ಧ "ಸ್ತ್ರೀಯರನ್ನು ನೋಡಲೇಬಾರದು, ನೋಡಲೇಬೇಕಾಗಿ ಬಂದರೆ ಅವರೊಂದಿಗೆ ಮಾತನಾಡಬಾರದು, ಅದೂ ಅನಿವಾರ್ಯವಾದರೆ ತುಂಬಾ ಎಚ್ಚರದಿಂದಿರಬೇಕು" ಎಂದು ಹೇಳುವಲ್ಲಿ ಬುದ್ಧಗುರುದೇವನಿಗಿದ್ದ ಒತ್ತಡಗಳೇನು ಎಂಬುದು ಕಾಲವೇ ಹುಡುಕಬೇಕಾದ ಸಂಗತಿ. ಹೆಣ್ಣಿನ ಬಗ್ಗೆ ಇದ್ದ ದೇಹ ಮೂಲದ ಭಯ ಬುದ್ಧನಂತವರಿಗೂ ಕಾಡಿರಬಹುದೆ? ಪುರುಷನ ಮನಸಿನ ಚಂಚಲತೆಯನ್ನು ಒಪ್ಪಿಕೊಳ್ಳದ ಸಮಾಜ ಸ್ತ್ರೀಯರನ್ನು ದೂಷಿಸುತ್ತಿರುವುದನ್ನು ಗಮನಿಸಬಹುದು. ಸ್ತೀಯಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದೆ ಅಸಾಧ್ಯದ ಸಂಗತಿಯಾಗಿ ಎಲ್ಲ ಕಾಲದ ಸಮಾಜ ಧರ್ಮಗಳಿಗೆ ಕಾಡಿರುವುದರಿಂದ ಹೆಣ್ಣನ್ನು ಕುಟುಂಬಕ್ಕೆ ಸೀಮಿತಗೊಳಿಸುತ್ತಲೆ ಗಂಡಿಗೆ ಕುಟುಂಬದೊಂದಿಗೆ ಅದರ ಜವಾಬ್ದಾರಿ ಇಲ್ಲದೆಯೂ ಬದುಕುವ ಮಾರ್ಗಗಳನ್ನು ಸಮಾಜ ಧರ್ಮಗಳು ಮುಕ್ತವಾಗಿಯೆ ತೆರೆದಿವೆ. ಹೆಣ್ಣಿಗೆ ಮಾತ್ರ ಯಾವುದೆ ಆಯ್ಕೆಗಳನ್ನು ನಿರಾಕರಿಸಿ "ಗೃಹಿಣಿ ಗೃಹಮುಚ್ಚತೆ ಸ್ವರ್ಗದಪಿಗರಿಯಸಿ" ಎನ್ನಲಾಗಿದೆ. ಈ ಸೂತ್ರದಿಂದಲೇ ಹೆಣ್ಣಿನ ಚರಿತ್ರೆಗೆ ಉರುಳು ಬಿಗಿಯಲಾಗಿದೆ.

ಕುಟುಂಬ ಧರ್ಮವನ್ನು ಬುದ್ಧ ಮಹಿಳೆಯರು ಮಾತ್ರ ಪಾಲಿಸಲು ಸಾಧ್ಯವೆಂದು ಭಾವಿಸಿದ ಕಾರಣ ಲಗ್ನವಾಗಲಿರುವ ಮಹಿಳೆಯರಿಗೆ ಉಪದೇಶ ನೀಡುತ್ತಾನೆ. "ನಾರಿಯರೆ ನೀವು ಗಂಡನ ಮನೆಯಲ್ಲಿ ಬೇಗನೆ ಏಳಿರಿ, ಎಲ್ಲರೂ ಮಲಗಿದ ನಂತರ ಮಲಗಿರಿ. ಸಂತೋಷದಿಂದ ಮನೆಗೆಲಸ ಮಾಡಿರಿ. ಮನೆಯನ್ನು ಓರಣವಾಗಿರಿಸಿರಿ, ಮೃಧುಭಾಷಿಣಿಯರಾಗಿರಿ. ಈ ನಡವಳಿಕೆಯನ್ನು ಮದುವೆಯಾಗುವ ಪೂರ್ವದಲ್ಲಿ ನೀವು ಗಳಿಸಿಕೊಳ್ಳಿರಿ. ನೀವು ಗಂಡನ ಮನೆಯಲ್ಲಿ ಎಲ್ಲರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಿರಿ, ಅವರವರಿಗೆ ಅನುಕೂಲವಾದ ಊಟವನ್ನು ಬಡಿಸಿರಿ. ನೀವು ಗಂಡನ ಸಂಪತ್ತನ್ನು ಸರಿಯಾಗಿ ಕಾಯ್ದುಕೊಳ್ಳಿರಿ. ನೀವು ಹಾಗೆ ಮಾಡಿದರೆ ಸತ್ತನಂತರ ಅಪ್ಸರೆಯಾಗುತ್ತಿರಿ"[ಪುನರುದ್ಧರಣೆ: ಹೊನ್ನಮ್ಮನ ಹದಿಬದೆಯ ಧರ್ಮ, ಡಾ. ಮಧುವೆಂಕಾರೆಡ್ಡಿ, ಪು–೩೫]. ಈ ಮಾತುಗಳನ್ನು ನೋಡಿದರೆ ವೈದಿಕ ನೆಲೆಯ ಹೆಣ್ಣಿನ ಸ್ಥಾನವನ್ನು ಬುದ್ಧ ಒಪ್ಪಿಕೊಂಡ ಹಾಗೆ ತೋರುತ್ತದೆ. ಹೀಗಿರುವ ಬುದ್ಧ ಆಮ್ರಪಾಲಿಯಂಥವಳೊಂದಿಗೆ ನಡೆದುಕೊಂಡದನ್ನು ಸ್ತ್ರೀ ಭಿಕ್ಕುಗಳ ಒಂದು ಪ್ರತ್ಯೇಕ ಗುಂಪೇ ಬೌದ್ಧಧರ್ಮದಲ್ಲಿತ್ತು ಎಂಬುದು ಕೂಡಾ ಹೇಗೆ ಪರಿಭಾವಿಸಬೇಕು ಎಂಬುದು

ಪ್ರಶ್ನೆಯಾಗಿ ಕಾಡುತ್ತಿದೆ. ಸ್ತ್ರೀ ಭಿಕ್ಕುಗಳಿಗೆ ಕೆಲವು ಕಠಿಣ ನಿಯಮಗಳ ಪಾಲನೆಯನ್ನು ಬೋಧಿಸಲಾಗಿತ್ತು. 'ಒಬ್ಬ ಭಿಕ್ಕುನಿ ನೂರು ವರ್ಷ ಮುಕ್ತಿಗಾಗಿ ಬೇಡಿ ಕಾಲಕಳೆದಿದ್ದರೂ ಆಗ ತಾನೇ ಸನ್ಯಾಸ ಸ್ವೀಕರಿಸುವ ಭಿಕ್ಕುವಿಗೆ ಅವಳು ಎದ್ದು ನಿಂತು ನಮಸ್ಕರಿಸಿ ಎಲ್ಲ ಗೌರವಗಳನ್ನು ತೋರಬೇಕು. ಭಿಕ್ಕು ಆದವಳು ಯಾವುದೇ ಕಾರಣಕ್ಕೆ ಭಿಕ್ಕುವನ್ನು ಅವಮಾನಿಸಬಾರದು ಅಥವಾ ನಿಂದಿಸಬಾರದು. ಅವಳು ಅಧಿಕಾರಯುತವಾಗಿ ಭಿಕ್ಕುಣಿಯರಿಗೆ ವಂದಿಸುವುದನ್ನು ನಿಲ್ಲಿಸಬೇಕು. ಆದರೆ ಭಿಕ್ಕುಣಿಯರು ಭಿಕ್ಕುಗಳಿಗೆ ವಂದಿಸುವುದನ್ನು ಮರೆಯಬಾರದು' ಎಂದು ಹೇಳುವಲ್ಲಿ ಹೆಣ್ಣಿನ ಆತ್ಮಗೌರವವನ್ನು ನಿರಾಕರಿಸಲಾಗಿದೆ. ಪುರುಷಲಿಂಗಿಯಾಗಿ ಹುಟ್ಟುವುದೇ ಶ್ರೇಷ್ಠವೆಂಬ ವೈದಿಕ ಹಿತಾಸಕ್ತಿಯನ್ನು ಬುದ್ಧನಂತವರು ಬೆಂಬಲಿಸಿದ ಹಾಗಿದೆ. ಹೆಣ್ಣಿನ ಅನುಭವ, ವಯಸ್ಸು, ಜ್ಞಾನ, ಶಕ್ತಿ ಯಾವುದು ಪರಿಗಣಿಸಲ್ಪಡುವ ಸಂಗತಿಗಳೇ ಅಲ್ಲವೆನ್ನುವ ಧೋರಣೆ ಎಲ್ಲ ಕಾಲದಲ್ಲಿಯೂ ಸಾಮಾಜೀಕರಣಗೊಂಡಂತಿದೆ.

ಎಂತಹ ಮಹಿಳೆಯರು ಬುದ್ಧನ ಕಾಲದಲ್ಲಿ ಸಂಘಕ್ಕೆ ಸೇರಿದ್ದು ಎನ್ನುವುದನ್ನು ಗಮನಿಸುವುದಾದರೆ, ಕೌಟುಂಬಿಕ ಸುಭದ್ರ ಚೌಕಟ್ಟಿನಲ್ಲಿ ಬಂದಿಸಲ್ಪಟ್ಟವರಲ್ಲದವರು. ಬಡತನದ ಬೇಗೆಯಲ್ಲಿ ಬೆಂದು ಬದುಕು ಬರ್ಬರವೆಂದು ಭಾವಿಸಿದ ಮಹಿಳೆಯರು, ಒಂಟಿತನದ ಭಯವನ್ನು ನೀಗಿಕೊಳ್ಳುವ ಹಂಬಲದ ಮಹಿಳೆಯರು, ಕೌಟುಂಬಿಕ ಹಿಂಸೆ, ರೋಗರುಜಿನಗಳಿಂದ ಬಳಲುತ್ತಿದ್ದ ಮಹಿಳೆಯರು ಬೌದ್ಧ ಭಿಕ್ಕುಣಿಯರಾಗಿ ನೆಮ್ಮದಿ ಕಾಣುವ ಕಾರಣದಿಂದ ಸಂಘ ಸೇರಿರುವರು. ಗಂಡನನ್ನು ಕಳೆದುಕೊಂಡು ವಿಧವೆಯರಾಗಿ ಸಾಮಾಜಿಕ ಅಪಮಾನಗಳಿಂದ ಬಿಡುಗಡೆ ಹೊಂದಲು ಮತ್ತು ರಕ್ಷಣೆ ಪಡೆಯಲು, ಮಕ್ಕಳಿಲ್ಲದೆ ಕುಟುಂಬದ ಆಶ್ರಯತಪ್ಪಿ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದ ಮಹಿಳೆಯರಿಗೆ ಸಂಘ ಪರ್ಯಾಯ ಬದುಕನ್ನು ಕಲ್ಪಿಸಬಹುದು ಎಂಬ ನಿರೀಕ್ಷೆಯಿಂದ ಬಂದ ಮಹಿಳೆಯರ ಬಹುದೊಡ್ಡ ಗುಂಪೇ ಬುದ್ಧನ ಸಂಘದಲ್ಲಿ ಭಿಕ್ಕುಣಿಯರಾಗಿ ಧರ್ಮಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿರುವರು. ಇಂತಹ ನೆಲೆಯಿಂದ ಬಂದ ಮಹಿಳೆಯರು ಎಳೆಯ ವಯಸ್ಸಿನ ಗಂಡು ಭಿಕ್ಕುಗಳನ್ನು ವಿಚಲಿತರನ್ನಾಗಿಸಬಹುದು ಎಂಬ ಭಯದ ಕಾರಣದಿಂದ ಕಠಿಣ ನಿಯಮಗಳನ್ನು ಮಹಿಳಾ ಭಿಕ್ಕುಣಿಯರಿಗೆ ಹಾಕಿದಂತಿದೆ. ಇದರ ಮಧ್ಯದಲ್ಲಿಯೂ ಮಹಿಳೆಯರು ಬಿಡುಗಡೆಗೊಂಡು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರ ಕುರಿತು ಅನೇಕ ಉಲ್ಲೇಖಗಳಿವೆ. ಥೇರೀಗಾಥಾದಲ್ಲಿ ಮುತ್ತಾಳ ಕುರಿತಂತಿರುವ ಉಲ್ಲೇಖವೊಂದು ಹೀಗಿದೆ : "ಕೋಸಲದ ಒಬ್ಬ ಬಡಬ್ರಾಹ್ಮಣ ಚಿಕ್ಕವಯಸ್ಸಿನಲ್ಲಿಯೇ ಮಗಳು 'ಮುತ್ತಾಳ'ನ್ನು ಗೂನು ಬೆನ್ನಿನ ಮುದುಕನೊಬ್ಬನಿಗೆ ಧಾರೆ ಎರೆದಿದ್ದ. ಈ ಮದುವೆಯನ್ನು ನಿರಾಕರಿಸಿ ಕುಟುಂಬ, ಗಂಡನನ್ನು ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದೆ ಎಂದು ಒಂದು ಗಾಥಾದಲ್ಲಿ ಹೇಳಿರುವಳು".

"ಆಹಾ, ಕಡೆಗೂ ನಾನು ಮುಕ್ತಳು, ಅದೆಷ್ಟು ಅದ್ಭುತ ಸ್ವಾತಂತ್ರ್ಯ!
ಮೂರು ವಕ್ರವಸ್ತುಗಳಿಂದ ನಾನು ಮುಕ್ತಳು;
ಬೀಸುವ ಕಲ್ಲು, ಒಸಕೆ ಮತ್ತು ಗೂನು ಬೆನ್ನಿನ ಗಂಡ
ಯಾವುದೂ ಈಗಿಲ್ಲ. ಆದರಷ್ಟೇ ಅಲ್ಲ;
ನಾನು ಮರುಹುಟ್ಟು ಮತ್ತು ಸಾವಿನಿಂದಲೂ ಮುಕ್ತಳು,

ನನ್ನನ್ನು ಜಗ್ಗಿ ಎಳೆಯುತ್ತಿದ್ದ ಎಲ್ಲವನ್ನೂ ದೂರ ಬೀಸಾಡಿದ್ದೇನೆ" [ಲೋಕಾಯತ: ಅನುವಾದ, ಜಿ.ರಾಮಕೃಷ್ಣ, ಪು.೩೨೬] ಹುಟ್ಟಿನಾರಭ್ಯ ಬಂಧನದಲ್ಲಿದ್ದ ಹೆಣ್ಣುಜೀವ ಬಿಡುಗಡೆ ಹೊಂದಿದಾಗಿನ ಅನುಭೂತಿಯನ್ನು ಹೇಳಿಕೊಳ್ಳುವಾಗ ಬಂಧನದ ಪರಿಕರಗಳಲ್ಲಿ ನಿರ್ಜೀವ ವಸ್ತುಗಳಾದ ಬೀಸುವಕಲ್ಲು, ಒನಕೆಯ ಜೊತೆಗೆ ಗೂನು ಬೆನ್ನಿನ ಗಂಡನನ್ನು ಸಮೀಕರಿಸಿದ್ದು ಚಿಂತನೆಗೆ ತೊಡಗಿಸುತ್ತದೆ. ಇಲ್ಲಿಯವರೆಗೂ ವಸ್ತುವಿನ ಜೊತೆಗೆ ಹೆಣ್ಣನ್ನು ನಿಲ್ಲಿಸಿದ್ದನ್ನು ನೋಡಿದ್ದೇವೆ. ಆದರೆ ಇಲ್ಲಿ ಮತ್ತಾ ಯಾವ ವ್ಯವಸ್ಥೆ ಯಾವ ವ್ಯಾಖ್ಯಾನವನ್ನು ಹೆಣ್ಣಿನ ಕುರಿತು ಮಾಡಿಕೊಂಡು ಬಂದಿತ್ತೋ ಅದೇ ಮಾದರಿಯ ಆಯುಧದ ಮೂಲಕವೆ ಸಮಾಜವನ್ನು ಎದುರಿಸಿ ಹೊರಬಂದು ತನ್ನ ಆಯ್ಕೆಯ ಹಕ್ಕನ್ನು ಬದುಕಿನ ಹಕ್ಕೆಂದು ಹೇಳುತ್ತಾಳೆ. ಬೀಸುವ ಕಲ್ಲು, ಒನಕೆ, ಗೂನು ಬೆನ್ನಿನಿಂದ ಬಿಡುಗಡೆ ಹೊಂದುವುದೆಂದರೆ ಕುಟುಂಬ ಚೌಕಟ್ಟನ್ನು ಮೀರಿ ಬರುವುದೆ ಆಗಿದೆ. ಒನಕೆ, ಬೀಸುವ ಕಲ್ಲುಗಳ ಕೇವಲ ಸಂಕೇತಗಳೂ ಅಲ್ಲ, ವಸ್ತುಗಳು ಅಲ್ಲ. ಪುರುಷಪ್ರಧಾನ ಸಮಾಜದ ಕುಟುಂಬದಲ್ಲಿ ಒನಕೆಯಿಂದ ಪದಾರ್ಥಗಳನ್ನು ಕುಟ್ಟಿದಂತೆ ಬೀಸುಕಲ್ಲಿನಿಂದ ಧಾನ್ಯಗಳನ್ನು ನುರಿಸಿದಂತೆ ಹೆಣ್ಣು ಜೀವನವನ್ನು ಹಿಂಸಿಸಲಾಗುತ್ತಿತ್ತು. ಇದರೊಂದಿಗೆ ಗೂನು ಬೆನ್ನಿನ ಗಂಡನು ಸೇರಿಕೊಂಡಿದ್ದ ಇಂತಹ ಹಿಂಸೆಯಿಂದ ಬಿಡುಗಡೆ ಹೊಂದುವುದೆಂದರೆ 'ಮರುಹುಟ್ಟು ಪಡೆದ ಹಾಗೆನೇ ಸಾವಿನಿಂದಲೂ ಮುಕ್ತಳು ಎಂದು ಚೇತೋಹಾರಿಯಾಗಿ ಮಾತನಾಡುತ್ತಾಳೆ. ಕೌಟುಂಬಿಕ ಹಿಂಸೆಯಿಂದಾಗಿ ನಿತ್ಯ ಸಾಯುವ ಕ್ರಿಯೆಯಿಂದ ಬಿಡುಗಡೆ ಹೊಂದುವುದರ ಮೂಲಕ ಗಾಳಿ ಬೆಳಕಿನ ಹೊರಲೋಕದಲ್ಲಿ ತನ್ನ ಅಸ್ಮಿತೆಯನ್ನು ದಾಖಲಿಸುತ್ತಲೇ ಒಳಲೋಕ ಜಗ್ಗಿ ಎಳೆಯುತ್ತಿದ್ದವುಗಳನ್ನೆಲ್ಲ ಕಿತ್ತು ಬಿಸಾಡುವುದೆಂದರೆ ವಿಸ್ಮೃತಿಗೆ ಒಳಗಾಗದೆ ಮುಕ್ತ ಮುಕ್ತಳಾದೆ ಎನ್ನುತ್ತಾಳೆ. ಕೌಟುಂಬಿಕ ಹಿಂಸೆಯಿಂದ ಬಿಡುಗಡೆ ಹೊಂದಿ ಸಂಘ ಸೇರಿ ಭಿಕ್ಕುನಿಯರಾಗಿ ಬದುಕಲೆಂದು ಬಂದವರಿಗೆ ಬುದ್ಧಗುರು ಪರ್ಯಾಯವನ್ನು, ಹಲವು ಗೆರೆಗಳನ್ನು ಎಳೆಯುವುದರ ಮೂಲಕ ತೋರಿಸಿದ. ಈ ಕಾಲದಲ್ಲಿ ಒಂದು ಸಂಗತಿಯೆಂದರೆ ಸತಿ ಸಹಗಮನಕ್ಕೊಳಗಾಗುವುದರ ಕುರಿತು ವಿರೋಧಗಳಿರುವುದನ್ನು ಗಮನಿಸಬೇಕು. ಹೀಗಾಗಿಯೆ ವಿಧವೆಯರೆ ಭಿಕ್ಕುನಿಯರಾಗುತ್ತಿದ್ದರು. ಹೆಣ್ಣಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದು ಬುದ್ಧನಂತಹವರಿಗೂ ಸಾಧ್ಯವಾದಂತಿಲ್ಲ. ವಾರಸುದಾರಿಕೆಯ ಪಾವಿತ್ರತೆಯ ಪ್ರಶ್ನೆಗಳು ಕಾಡಿರಬಹುದು.

ಅದೇ ರೀತಿ ಜೈನಧರ್ಮವು ಮಹಿಳೆಯ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಬಹುದಾದ್ದೇನನ್ನು ಹೇಳಲಿಲ್ಲ. ಧಾರ್ಮಿಕವಾಗಿ ಮಹಿಳೆಯರಿಗೆ ಮೋಕ್ಷದ ಬಾಗಿಲನ್ನು ತೆರೆದವರು ಶ್ವೇತಾಂಬರರು, ಸ್ತ್ರೀಯರೂ ಸನ್ಯಾಸಿನಿ(ಕಂತಿ)ಯರಾಗಿ ಧರ್ಮ ಪ್ರಚಾರಕರಾಗುವ ಅವಕಾಶವಿತ್ತು. ಕಂತಿಯಾಗಿ ಧರ್ಮಕಾರ್ಯದಲ್ಲಿ ತೊಡಗಬಯಸುವ ಮಹಿಳೆಯರು ಯಾರ ಅಪ್ಪಣೆಗಾಗಿ ಕಾಯಬೇಕಾಗಿರಲಿಲ್ಲವೆಂಬುದೊಂದೇ ಈ ಧರ್ಮ ಮಹಿಳೆಯರಿಗಾಗಿ ಮಾಡಿದ ಮಹದುಪಕಾರ. ಬೌದ್ಧ ಭಿಕ್ಕುನಿಯರಿಗಿದ್ದ ನಿಯಮಗಳೇ ಜೈನ ಧರ್ಮದ ಕಂತಿಯರಾದವರಿಗೂ ಇದ್ದವು. ಗಂಡಸರಿಗೆ ಮಾತ್ರ ಮೋಕ್ಷದ ಮಾರ್ಗ ತೆರೆದಿದೆ. ಹೆಣ್ಣು ಮೋಕ್ಷ ಬಯಸುವಂತಿರಲಿಲ್ಲ. ಹೆಣ್ಣು ಭವದಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಬೇಕಾದರೆ ಗಂಡು ಜೀವವಾಗಿಯೇ ಹುಟ್ಟಿರಬೇಕು ಎಂಬುದರ

ಮೂಲಕ ಮಹಿಳೆಯರಿಗೆ ಧಾರ್ಮಿಕ ಸಮಾನತೆಯ ನ್ಯಾಯವನ್ನು ನಿರಾಕರಿಸಲಾಗಿದೆ. ಇಂತಹ ಲಿಂಗವಿರೋಧಿ ತಾತ್ವಿಕ ನೆಲೆಯ ಧರ್ಮಗಳಿಂದ ಹೆಣ್ಣಿನ ಬಿಡುಗಡೆ ಸಾಧ್ಯವಾಗದು. ಕುಲೀನ ಮಹಿಳೆಯರು ಗಂಡ ಸತ್ತ ಮೇಲೆ 'ಸತಿ' ಹೋಗುವುದಕ್ಕಿಂತಲೂ ಧಾರ್ಮಿಕ ಕಾರ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿದು, ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳಬೇಕೆಂದು ಉದಾರವಾಗಿ ಹೇಳಿದೆ. ವಾರಸುದಾರಿಕೆಯ ಶುದ್ಧತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡೆ ಈ ಕಾಲದಲ್ಲಿ ಮಹಿಳೆಯರು ತಮ್ಮ ಕರ್ತವ್ಯವನ್ನು ನಿರ್ವಹಿಸಿರುವರು. ಅಂತಹ ಮಹಿಳೆಯರು ಚರಿತ್ರೆಯಲ್ಲಿ ದಾಖಲಾಗಿರುವರು. ಅತ್ತಿಮಬ್ಬೆಯಂತಹ ಮಹಿಳೆಯರನ್ನು ಮುಂದಿಟ್ಟುಕೊಂಡು ಜೈನಧರ್ಮದ ಉದಾರತೆಯನ್ನು ಅಳೆಯುವಾಗ ಚರಿತ್ರೆಯ ಗ್ರಹಿಕೆ ಇರಬೇಕಾಗುತ್ತದೆ.

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಅತ್ಯಂತ ಸಂಚಲವನ್ನುಂಟು ಮಾಡಿದ ವೀರಶೈವ ಧರ್ಮ ಮಹಿಳೆಯರನ್ನು ಸಮಾನವಾಗಿಯೆ ಕಾಣಲು ಪ್ರಯತ್ನಿಸಿತು. ಆದರೆ ಆ ಕಾಲದಲ್ಲಿ ಹೆಣ್ಣಿನ ಬಗ್ಗೆ ಔದಾರ್ಯವಿತ್ತೇ ವಿನಃ ಸಮಾನತೆಯ ಸಖ್ಯದ ಜಾಡಿರಲಿಲ್ಲ. ಅಲ್ಲಿಯು ವೈರುಧ್ಯಗಳಿರುವುದನ್ನು ಕಾಣಬಹುದು. 'ಶರಣಸತಿ ಲಿಂಗಪತಿ' ಎಂದು ಹೊರಟ ಶರಣರ ನಡಿಗೆ ಕುಟುಂಬದೊಳಗಿಂದ ಹೊರಟದ್ದಲ್ಲ. ಹೆಣ್ಣಾಗುವುದರಲ್ಲಿಯೇ ಶರತ್ವವಿದೆಯೆಂದವರು ಹೆಣ್ಣಾದವಳನ್ನು ಹಲವು ಪರೀಕ್ಷೆಗೆ ಒಳಪಡಿಸುತ್ತಾರೆ. ಆ ಕಾಲದ ಒತ್ತಡಗಳು ಅವರನ್ನು ಹಾಗೆ ನಿರ್ಬಂಧಿಸಿರಬಹುದು. ಹೆಣ್ಣನ್ನು ನಿರ್ಜೀವ ವಸ್ತುಗಳಾದ ಹೊನ್ನು, ಮಣ್ಣಿನೊಂದಿಗೆ ಸಮೀಕರಿಸಿದ್ದರಲ್ಲಿಯೇ ವೈದಿಕಹಿತ ಶರಣರ ಮೂಲಕವೂ ಜೀವಂತವಾಗಿದೆ. ಇದೆಲ್ಲದಕ್ಕೂ ಕಾರಣ ದೇಹಮೀಮಾಂಸೆಯ ಅಘನಿತ ಭಯ ಕಾಡಿದಂತಿದೆ. ಪುರೋಹಿತಶಾಹಿಯನ್ನು ಪ್ರಬಲವಾಗಿ ವಿರೋಧಿಸಿದ ವೀರಶೈವ ಧರ್ಮದ ನಿಜವಾದ ಶಕ್ತಿಯೆಂದರೆ ಕಾಯಕ ಜೀವಿಗಳು ಲಿಂಗ ತಾರತಮ್ಯತೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ, ಪರ್ಯಾಯ ಬದುಕಿನ ಕಲ್ಪನೆ. ಶರಣ ಚಳುವಳಿಯಲ್ಲಿ ಕಾಣಬಹುದಾದ ಅತ್ಯಂತ ಆರೋಗ್ಯಕರ ಸಂಗತಿಯೆಂದರೆ ಸ್ತ್ರೀಯರಿಗೆ ಏನು ಬೇಕು, ಬೇಡ ಎಂಬುದನ್ನು ಸ್ತ್ರೀಯರೇ ಹೇಳಿರುವುದು. ಆಧ್ಯಾತ್ಮದ ಮೀಮಾಂಸೆ ಮತ್ತು ಲಿಂಗ ಸಮಾನತೆಯನ್ನು ಎತ್ತಿಹಿಡಿಯಲೆಂದು ಜೇಡರ ದಾಸಿಮಯ್ಯನಂತಹ ಹಿರಿಯ ಶರಣರು ಮಾತನಾಡಿದ್ದನ್ನು ಪ್ರಶ್ನಿಸುವ, ಪರೀಕ್ಷಿಸುವ ಶಕ್ತಿ ಶರಣೆಯರಿಗಿತ್ತು ಎಂಬುದನ್ನು ಕಾಲ ಅಲಕ್ಷಿಸಿದೆ. ಜೇಡರ ದಾಸಿಮಯ್ಯನವರು ದೈಹಿಕ ಅಂಗರಚನೆಯನ್ನು ಮೀರಿ ಆಧ್ಯಾತ್ಮವನ್ನು ಪರಿಭಾವಿಸುವ ರೀತಿ ಹೀಗಿದೆ...

> **"ಮೊಲೆಮುಡಿ ಬಂದಡೆ ಹೆಣ್ಣೆಂಬರು**
> **ಗಡ್ಡ ಮೀಸೆ ಬಂದಡೆ ಗಂಡೆಂಬರು**
> **ನಡುವೆ ಸುಳಿವ ಆತ್ಮನು**
> **ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ"–**

ಆತ್ಮಕ್ಕೆ ಲಿಂಗ ಸೂತಕವಿಲ್ಲವೆಂದು ಒತ್ತಿ ಹೇಳುತ್ತಾರೆ. ಆದರೆ ಆತ್ಮ ಪರಮಾತ್ಮನ ಅರಿಯಲು ಬೇಕಾದ ಮೂಲ ಯಾವುದು ಎಂಬುದನ್ನು ಮರೆತು ಮಾತನಾಡುತ್ತಾರೆ. ಭವದ ಬದುಕಿನಲ್ಲಿಯೇ ಶರಣ ಹುಟ್ಟಿ ಇಹಪರಗಳನ್ನು ಗೆಲ್ಲಬೇಕಾದರೆ ಜ್ಞಾನ ಅರಿವಿನ

ಸಾಕ್ಷಾತ್ಕಾರವಾಗಬೇಕು ಎಂಬುದನ್ನು ಹೆಣ್ಣನ್ನು ಹೊರಗಿಟ್ಟು ಶರಣತತ್ವ ಮುನ್ನೆಲೆಗೆ ಬಂದಿತ್ತು. ಅದನ್ನು ಗೊಗ್ಗವ್ವೆ, ಕಾಳವ್ವೆ, ಅಂಬಿಗರ ಚೌಡಯ್ಯ ಪ್ರಶ್ನಿಸುತ್ತಾರೆ. ಮನುಷ್ಯನಲ್ಲಿ ಆತ್ಮದ ಅರಿವು ಮೂಡಬೇಕಾದರೆ ಜ್ಞಾನ ಬೇಕು ಎಂಬುದನ್ನು ಯಾವ ಕಾಲದ ಮಹಾತ್ಮರು ಪರಿಭಾವಿಸಿದಂತಿಲ್ಲ. ಅದನ್ನು ಮೊಟ್ಟ ಮೊದಲಿಗೆ ಗೊಗ್ಗವ್ವೆ ಜಗತ್ತು ಕೇಳುವ ಹಾಗೆ ಹೇಳಿದ ರೀತಿ ಹೀಗಿದೆ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ"

ಜೇಡರ ದಾಸಿಮಯ್ಯ ಯಾವ ಮಾನದಂಡದಿಂದ ಲಿಂಗ ನಿರಸನ ಕ್ರಿಯೆಗೆ ತೊಡಗಿದ್ದನೋ ಅದೇ ಮಾನದಂಡದಿಂದಲೇ ಹೆಣ್ಣಿನ ಹಕ್ಕೊತ್ತಾಯ ಏನನ್ನು ಬಯಸುತ್ತದೆ ಎಂಬುದನ್ನು ಹೇಳಿರುವಳು. ವೈದಿಕ ಧರ್ಮದ ಬಹುದೊಡ್ಡ ಪಿತೂರಿಯೆ ಶೂದ್ರ ಮತ್ತು ಮಹಿಳೆಯರನ್ನು ಅಕ್ಷರ ಮತ್ತು ಜ್ಞಾನದಿಂದ ವಂಚಿತರನ್ನಾಗಿಸುವುದಾಗಿತ್ತು. ಈ ಪಿತೂರಿಯನ್ನು ವೈಚಾರಿಕ ಮತ್ತು ವಾಸ್ತವದ ನೆಲೆಯಲ್ಲಿ ಮೊಟ್ಟಮೊದಲಿಗೆ ಪ್ರಶ್ನಿಸುತ್ತಾಳೆ. ಯಾವುದೇ ಧರ್ಮಗಳಾಗಲಿ, ಧಾರ್ಮಿಕ ಮಹಾತ್ಮರಾಗಲಿ ಹೆಣ್ಣಿಗೆ ಬೇಕಿರುವುದೇನು ಎಂಬುದನ್ನು, ಹೆಣ್ಣನ್ನು ಹೊರಗಿಟ್ಟೆ ತೀರ್ಮಾನಿಸಿರುವರು. ಹೀಗಾಗಿಯೆ ಇಂದಿಗೂ ಮಹಿಳೆಯರು ಪುರುಷ ಪ್ರಧಾನ ಸಂಸ್ಕೃತಿಯ ವಾಹಕಗಳಾಗಿ ಬಳಕೆಯಾಗುತ್ತಿರುವರು. ಜ್ಞಾನ ವಲಯಗಳಿಂದಲೇ ಹೆಣ್ಣನ್ನು ಹೊರಗಿಟ್ಟು ಚರಿತ್ರೆ ಕಟ್ಟಿರುವುದರಿಂದ ಹೆಣ್ಣು ವ್ಯಕ್ತಿಯಾಗಿ ಕಾಣೆಯಾಗಿರುವಳು. ಅದೇ ಸಂದರ್ಭದಲ್ಲಿ ಶಕ್ತಿಸ್ವರೂಪಿಣಿಯಾಗಿ ಆರಾಧಿಸಲ್ಪಟ್ಟಿರುವಳು. ಹೆಣ್ಣಿನ ಹೆಣ್ತನವನ್ನು ಆರಾಧಿಸಿ ಗೌರವಿಸಿದ ಪುರುಷ ವರ್ಗ ಹೆಣ್ಣಾಗುವುದು ಪುಣ್ಯದ ಕೆಲಸವೆಂದು ಸಾರುತ್ತಲೇ ಹೆಣ್ಣನ್ನು ವಿಸ್ಮೃತಿಗೆ ಒಳಗಾಗುವಂತೆ ಅಕ್ಷರ ವಿದ್ಯೆಯನ್ನು ದುಡಿಸಿಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರಿಗೆ ಸರಿದೊರೆಯಾಗಿ ವಿಚಾರ ವಿನಿಮಯಕ್ಕೆ ಮುಂದಾದ ವಚನಕಾರ್ತಿಯರ ಗ್ರಹಿಕೆಗಳು ಏಕಮುಖಿಯಾದವುಗಳಲ್ಲ. ಕುಟುಂಬ ಹೆಣ್ಣಿಗೆ ಸುರಕ್ಷಿತ ಚೌಕಟ್ಟೆಂದು ಭಾವಿಸಿದ ಸಮಾಜದೊಳಗೆ ಹೆಣ್ಣಿಗೆ ಕುಟುಂಬ ಸುರಕ್ಷಿತತೆಯನ್ನು ನೀಡಲಾರದು. ಅದೊಂದು ಯಾತನಾಮಯ ಶಿಬಿರವೆಂದು ಸ್ವತಃ ಕುಟುಂಬದೊಳಗಿದ್ದ ಶರಣೆಯರು ನಿರ್ಭಿಡೆಯಿಂದ ಮಾತನಾಡುವುದು ಆ ಕಾಲದ ಮಹಿಳೆಯರಿಗಿದ್ದ ಚಾರಿತ್ರಿಕ ಗ್ರಹಿಕೆಗೆ ಹಿಡಿದ ಕನ್ನಡಿ. ಅದೇ ನೆಲೆಯಲ್ಲಿ ಬಯಲಲ್ಲಿದ್ದ ವಚನಕಾರ್ತಿಯರು ತಮ್ಮ ಅನುಭವಗಳನ್ನು ನಿರ್ಭಿಡೆಯಿಂದ ಹೊರಹಾಕಿರುವುದು ಇಂದಿಗೂ ಕೂಡಾ ಅಗಾಧ ಸಂಗತಿಯೆ. ಜ್ಞಾನಮುಖಿಯಾಗಿ ಹೊರಟ ಹನ್ನೆರಡನೆಯ ಶತಮಾನದ ಮಹಿಳೆಯರ ನಡಿಗೆಯ ಹೆಜ್ಜೆಗಳು ಸ್ತ್ರೀ ಅಸ್ಮಿತೆಯ ಮಾರ್ಗ ನಿರ್ಮಿಸುವ ಮೊದಲೆ ಶರಣ ಚಳುವಳಿ ರಾಜಸತ್ತೆಯಿಂದ ಚದುರಿಹೋಗುವಂತಾಯಿತು. ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಧಾರ್ಮಿಕ ಸಮಾನತೆಯ ಮೂಲಕ ಆಗುಮಾಡಿಕೊಳ್ಳುವ ಪ್ರಯತ್ನದಲ್ಲಿ ಶೂದ್ರ ಮತ್ತು ಮಹಿಳೆಯರನ್ನು ಗಂಭೀರವಾಗಿ ಬಸವಾದಿ ಶರಣರು ಪರಿಗಣಿಸಿದ್ದರು. ಹೀಗಾಗಿಯೆ ಹೆಣ್ಣಿನ ಗೃಹಕೃತ್ಯಕ್ಕೆ ಸಾಮಾಜಿಕ ಗೌರವವನ್ನು ಮತ್ತು ಆರ್ಥಿಕ ಮನ್ನಣೆಯನ್ನು ನೀಡುವ

ಪ್ರಯತ್ನವನ್ನು ಮಾಡಿದರು. ಇಂದಿಗೂ ದುಡಿಮೆಯೆಂದರೆ ಸಂಬಳದ ಮಾನದಂಡದಿಂದಲೇ ಗುರುತಿಸುವ ಪರಿಪಾಠವಿರುವುದರಿಂದ ದಿನವಿಡೀ ಮಹಿಳೆಯರು ಮನೆಯಲ್ಲಿ ದುಡಿಮೆಯಲ್ಲಿ ತೊಡಗಿಕೊಂಡರೂ ಅದನ್ನು ದೇಶದ ಉತ್ಪಾದನಾ ಲೆಕ್ಕದಲ್ಲಿ ಪರಿಗಣಿಸುತ್ತಿಲ್ಲ. ಹೆಣ್ಣಿನ ಕ್ರಿಯಾಶೀಲತೆಯನ್ನು, ದೈಹಿಕ ದುಡಿಮೆಯನ್ನು ಕೌಟುಂಬಿಕ ಏಳು-ಬೀಳಿಗೆ ತಗುಲುಹಾಕಲಾಗಿದೆ. ಅಕ್ಷರಸ್ಥ ಮತ್ತು ಮೇಲ್ವರ್ಗದ ಕುಲೀನ ಸ್ತ್ರೀಯರು 'ಹೌಸ್ ವೈಫ್' (ಗೃಹಿಣಿ) ಸಿಂಡ್ರೋಮ್‌ದಿಂದ ಇಂದಿಗೂ ಬಿಡುಗಡೆ ಹೊಂದಿಲ್ಲವೆಂಬುದು ಗಮನಿಸಬೇಕಾದ ಸಂಗತಿ.

ಧರ್ಮದ ಮೂಲಕ ನಡೆದ ಚರ್ಚೆಗಳಿಗಿಂತಲೂ ಭಿನ್ನವಾದ ಚರ್ಚೆಗಳು ನಮ್ಮ ಆಧುನಿಕ ಸಂದರ್ಭದಲ್ಲಿ ನಡೆದಿವೆ. ಇದಕ್ಕೆ ಕಾರಣ ನಮ್ಮ ಕಾಲದ ಸಾಮಾಜಿಕ-ರಾಜಕೀಯ ಬಿಕ್ಕಟ್ಟುಗಳು. ಇದು ಮಹಿಳೆಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿರುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಈ ವಿಧಾನ ಮಹಿಳೆಯ ಮನೋಭೂಮಿಕೆಯನ್ನು ಅರಿತುಕೊಳ್ಳುವಲ್ಲಿ ಸಹಾಯಕವಾಗಿವೆ. ಜಾತಿ, ವರ್ಗ, ವರ್ಣಗಳ ಸಂಘರ್ಷಕ್ಕೆ ಒಳಗಾದ ಸಮಾಜ ಹೆಣ್ಣಿನ ವಿಷಯಕ್ಕೆ ಬಂದಾಗ ಸಮಾನ ಗುಂಪಾಗಿ ಕಾಣಿಸಿಕೊಂಡಿದೆ. ಯಾಕೆಂದರೆ ಈ ಮೂರೂ ಅಂಶಗಳು ಅಧಿಕಾರಕ್ಕಾಗಿ ಆಕ್ರಮಣಶೀಲತೆಯನ್ನೇ ಅವಲಂಬಿಸಿವೆ. ಅಂತಹ ಆಕ್ರಮಣಶೀಲತೆಯ ಪ್ರವೃತ್ತಿಯಿಂದ ದೂರವಿರುವ ಮಹಿಳೆ ತನ್ನ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ರೂಪಿಸುವುದು ಅಗತ್ಯವಿದೆ. ಅಂತಹ ಅಗತ್ಯತೆಯ ಚಾರಿತ್ರಿಕ ಅಂಶಗಳನ್ನು ಸಮಕಾಲೀನ ಸ್ತ್ರೀವಾದ ಮುಕ್ತವಾದ ಅಭಿಪ್ರಾಯಗಳನ್ನು ಮಂಡಿಸಿದೆ.

ನಾನು ಶ್ರೇಷ್ಠ ಎನ್ನುವ ಪುರುಷನ ವ್ಯಸನಕ್ಕೂ, ಮಹಿಳೆಯು ನಾನು ಸಮಾನಳು ಎನ್ನುವುದಕ್ಕೂ ಅಗಾಧ ವ್ಯತ್ಯಾಸವಿದೆ. ಶ್ರೇಷ್ಠ ಎನ್ನುವುದು ಒಂದು ಅಹಂಭಾವ. ಮುಂದುವರೆದಂತೆ ಅದೊಂದು ಅಕ್ರಮಶೀಲ ಪ್ರವೃತ್ತಿ. ಅದೇ ಮಹಿಳೆ ಇದನ್ನು ಪ್ರತಿಪಾದಿಸುತ್ತಿರುವ ನೆಲೆ ಅತ್ಯಂತ ಜೀವಪರವಾಗಿದೆ. ಶತಶತಮಾನಗಳಿಂದಲೂ ಅಧೀನತೆಯನ್ನು Feel ಮಾಡಿರುವ ಮಹಿಳೆ ಇಂದು ಕ್ರಿಯಾತ್ಮಕವಾಗಿ ಪ್ರಶ್ನಿಸುತ್ತಿರುವುದು, ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವುದರ ಹಿಂದೆ ಪುರುಷನ ಹಿತಾಸಕ್ತಿಯೂ ಇದೆ. ಹೆಣ್ಣು ಎಂದಿಗೂ ಕುಟುಂಬವನ್ನು ನಿರಾಕರಿಸಿಲ್ಲ, ಮಾತೃತ್ವವನ್ನು ನಿರಾಕರಿಸಿಲ್ಲ, ಪರಶುರಾಮನಂತೆ ತಾಯಿಯನ್ನೋ, ತಂದೆಯನ್ನೋ ಹತ್ಯೆ ಮಾಡಿಲ್ಲ. ಆಕೆ ಏನಿದ್ದರೂ ಸಂಗೋಪನೆಯ ಶಕ್ತಿಯಾಗಿ ಕಾಣಿಸಿಕೊಂಡಿದ್ದಾಳೆ. ಆಕೆಯ ಸಮಾಜದ ಕಲ್ಪನೆಯಲ್ಲಿ ಧರ್ಮದ ಕಲ್ಪನೆಯಲ್ಲಿ ಪುರುಷನಿದ್ದಾನೆ. ಆತನ ಗೈರು ಹಾಜರಿಯನ್ನು ಯಾವ ಸ್ತ್ರೀವಾದವೂ ಪ್ರತಿಪಾದಿಸಿಲ್ಲ. ಅದೇ ಪುರುಷನ ದೃಷ್ಟಿಕೋನದಲ್ಲಿ ಮಹಿಳೆ ಸಮಾಜದ ಪ್ರತಿನಿಧಿಯಾಗಿ, ಕುಟುಂಬದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದಿಲ್ಲ. ಈ ದ್ವಂದ್ವವನ್ನು ಬಿಡಿಸಲು ಮಹಿಳೆಗೆ ತನ್ನದೇ ಆದ ತಾತ್ವಿಕತೆಯ ಅವಶ್ಯಕತೆ ಇದೆ. ಅದು ಚಳುವಳಿಯ ರೂಪದಲ್ಲಿರಬಹುದು ಇಲ್ಲವೆ ಹೋರಾಟದ ರೂಪದಲ್ಲಿರಬಹುದು ಅಥವಾ ಸಾಹಿತ್ಯದ ಮೂಲಕವಾಗಿರಬಹುದು. ಇಲ್ಲೆಲ್ಲಾ ಹೆಣ್ಣು ನಿರೀಕ್ಷಿಸುತ್ತಿರುವ ತನ್ನ ಪ್ರಾತಿನಿಧ್ಯವನ್ನು ಆದರೆ ಅದು ಅನಾಯಾಸವಾಗಿ ಸಿಗುವುದಿಲ್ಲ. ಯಾಕೆಂದರೆ ಅದು ಒಬ್ಬ ಪುರುಷನನ್ನು ಪರಿವರ್ತಿಸುವ ಪ್ರಕ್ರಿಯೆ ಅಲ್ಲ. ಇಡೀ ಸಮಾಜವನ್ನು ಬದಲಾಯಿಸುವ ಇರಾದೆ

ಇರುವುದರಿಂದ ಈ ಚಳುವಳಿಗೆ ಸ್ಪಷ್ಟವಾದ ತಾತ್ವಿಕ ನೆಲೆ ಬೇಕಾಗುತ್ತದೆ. ಅಂತಹ ಚಿಂತನೆಗಳು ವಿಭಿನ್ನ ಆಯಾಮಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅದರಲ್ಲಿಯೂ ಮುಖ್ಯವಾಗಿ ಸ್ತ್ರೀವಾದ ಸಿದ್ಧಾಂತದ ನೆಲೆ ಒಂದಾದರೆ, ಮತ್ತೊಂದು ಸಾಹಿತ್ಯದ ನೆಲೆಯಾಗಿದೆ. ಆದರೆ ಇವೆರಡೂ ಭಿನ್ನ ಚಿಂತನೆಗಳಲ್ಲ. ಪರಸ್ಪರ ಸಹಕರಿಸುತ್ತಿರುವ ಈ ಅಧ್ಯಯನದ ನೆಲೆಗಳು ಸ್ತ್ರೀವಾದಿ ಓದನ್ನು ರೂಪಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ಇವೆರಡೂ ನೆಲೆಗಳು ಪ್ರಯತ್ನಿಸುತ್ತಿರುವುದು ಸ್ತ್ರೀ ಪುರುಷರಿಬ್ಬರೂ ಸಮಾನತೆಯನ್ನು ಸಾಧಿಸಬೇಕಾಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿಯೇ ಸ್ತ್ರೀವಾದಿ ಚಿಂತನೆಗಳು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ನಡೆದಿವೆ ಎಂಬುದನ್ನು ಡಾ.ವೀಣಾ ಮುಜುಂದಾರ್ ಅವರು ವಿಶ್ಲೇಷಿಸುತ್ತಾರೆ.

೧) ವಾಸ್ತವವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ಎಂದರೆ ಈವರೆಗೆ ಸತ್ಯದ ಚಿತ್ರಣವೆಂದು ಗ್ರಹಿಕೆಯಾಗಿರುವುದರಲ್ಲಿ ಎಷ್ಟೊಂದು ಅಭ್ಯಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಬಗೆಗೆ ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕು. ಸತ್ಯ, ವಾಸ್ತವ ಎಂದು ಗ್ರಹಿಸಿದ್ದು ಪುರುಷ ದೃಷ್ಟಿಕೋನದ್ದಾಗಿದೆಯಲ್ಲವೇ ಎಂಬ ಅರಿವು.

೨) ಸಮಸ್ಯೆಯನ್ನು ಗುರುತಿಸುವಲ್ಲಿ ಆಗಿರುವ ಸ್ಥಿತ್ಯಂತರಗಳು ಸ್ತ್ರೀಗೆ ಗೌರವಾದರಗಳ ಸ್ಥಾನ ಇತ್ತು ಎಂದು ಈವರೆಗೆ ನಂಬಿಸುತ್ತಾ ಬರಲಾಗಿದೆ. ಇತ್ತೀಚೆಗಷ್ಟೇ ಸಮಸ್ಯೆಯೊಂದಿದೆ ಎಂಬುದನ್ನು ಗುರುತಿಸಿ ಒಪ್ಪಲಾಗಿದೆ. ಅಂದರೆ ರೋಗ ನಿದಾನ (diagnosis) ಜಾರಿಗೊಂಡಿದೆ.

೩) ಆಗಿಹೋದ ತಪ್ಪುಗಳನ್ನು ಮರೆಯಿಸುವ ಪ್ರಯತ್ನ ಸಾಗಿದೆ. ಈ ಪ್ರಯತ್ನ ಹೊಸದಲ್ಲ. ಸ್ತ್ರೀಯನ್ನು ಭ್ರಾಮಕ ನೆಲೆಯಲ್ಲಿಟ್ಟು ವಂಚಿಸಲಾಗುತ್ತಿದೆ. ಮಾತೃತ್ವ, ದೈವತ್ವಗಳ ಮಾತು; ವೇದ ಕಾಲದಲ್ಲಿ ಎಂತೆಂಥ ಸ್ತ್ರೀಯರ ಇರುವಿಕೆ ಸಾಧ್ಯವಿತ್ತು ಎಂಬ ನಿದರ್ಶನಗಳಿಂದ ಪ್ರಯೋಜನವಿಲ್ಲ. ಏಕೆಂದರೆ ಈ ನಿದರ್ಶನಗಳು ಕೇವಲ ಅಪವಾದಗಳು. ಒಬ್ಬ ಇಂದಿರಾಗಾಂಧಿಯನ್ನು ತೋರಿ ಸ್ತ್ರೀಗೆ ಮಹತ್ವದ ಸ್ಥಾನ ಕೊಡಲಾಗಿದೆ ಎಂದಂತೆ, ಬಹುತೇಕ ಸ್ತ್ರೀಯರ ಪಾಡೇನು ಎಂಬುದನ್ನು ಗಮನಿಸಬೇಕು.

೪) ಈವರೆಗೆ ನಡೆದು ಬಂದದ್ದನ್ನು ಪೂರ್ಣ reverse ಮಾಡಬೇಕೋ ಅಥವಾ ನಡೆಯುತ್ತಿರುವ ಕ್ರಮವನ್ನು ತಿದ್ದುಪಡಿ ಮಾಡಿ ಪ್ರಯೋಗಿಸಬೇಕೋ ಎಂಬ ಡೋಲಾಯಮಾನತೆ. ಇಲ್ಲೂ ಸಹ ಭ್ರಮೆಯ ಪ್ರಯೋಗವಿದೆ. ಅಭಿವೃದ್ಧಿ, ಪ್ರಗತಿ, ಸಮಾನತೆಗಳೆಂಬ ಮಾತನಾಡುತ್ತಾ ಜನತೆ, ಸಮುದಾಯ ಎಂಬ ಪದಗಳನ್ನು 'ಪುರುಷ' ಎಂಬುದಕ್ಕೆ ಬದಲಾಗಿ ಬಳಸಿದಾಗ 'ಎಲ್ಲ ಸರಿಹೋಯಿತು' ಎಂಬ ಭಾವ ಬರುತ್ತದೆ. ಆ ವಾಸ್ತವದಲ್ಲಿ ಈ 'ಜನತೆ' 'ಸಮುದಾಯ'ದಲ್ಲಿ ಸ್ತ್ರೀ ಸೇರ್ಪಡೆಯಾಗುವುದಿಲ್ಲ. ಈ ಬಗೆಗೆ ಮೈ ಮರೆಯದೆ 'ಸ್ತ್ರೀ' ಸೇರುತ್ತಾಳೆ ಎಂಬ ಬಗ್ಗೆ ಸ್ಪಷ್ಟನೆ ಪಡೆಯಬೇಕು.

ಇಡೀ ಈ ಚಿಂತನೆಯಲ್ಲಿ ಸ್ತ್ರೀಗೆ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟವಾದ ಮಂಡನೆ ಇದೆ. ಸ್ತ್ರೀಗೆ ಬೇಕಾಗಿರುವುದು ಬೇರೆಯೇ ಆದ ವಿಶಿಷ್ಟ ಸ್ಥಾನಮಾನಗಳಲ್ಲ. ಸಮಾಜದ ಜವಾಬ್ದಾರಿಗಳನ್ನು ಹಂಚಿಕೊಳ್ಳುವಲ್ಲಿ ಈಗಿರುವ ವ್ಯವಸ್ಥೆಯ ಅಳವಡಿಕೆಯಲ್ಲಿ ಸ್ತ್ರೀಯ ಪಾಲು, ಜನತೆ, ಸಮುದಾಯ, ಸಮಾಜ ಎಂದಾಗ 'ಸ್ತ್ರೀ'ಯನ್ನೂ ಒಳಗೊಂಡಂತೆ

ಎಲ್ಲರೂ ಎಂಬಂತಹ ವ್ಯಾಖ್ಯಾನ" (ಎಚ್.ಎಸ್.ಶ್ರೀಮತಿ : ಸಮಕಾಲೀನ ಕನ್ನಡ ಸಾಹಿತ್ಯ : ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ : ಪುಟ : ೨೨೭–೨೨೮)

ಎಲ್ಲರನ್ನೂ ಒಳಗೊಳ್ಳಬೇಕಾದ ನಮ್ಮ ಸಾಂಸ್ಕೃತಿಕ ಸಂಸ್ಥೆಗಳು ಮಾಡಿದ್ದಾದರೂ ಏನನ್ನು ? ಬೌದ್ಧಿಕ ವಲಯಕ್ಕೆ ಹೆಣ್ಣನ್ನು ದೂರಮಾಡಿ ಅನುಭವಲೋಕಕ್ಕೆ ಸೀಮಿತಗೊಳಿಸಿ, ಆಕೆಯನ್ನು 'ಅಡಿಗೆಮನೆ'ಗೆ ಸಂಕೇತವಾಗಿ ಬಳಸಿ, ಈ ಸಮಾಜ ತಲುಪಿದ್ದಾದರೂ ಎಲ್ಲಿ ? ಅಪೂರ್ಣವಾದ ಬದುಕನ್ನು ಪರಿಚಯಿಸಿದ ಇದುವರೆಗಿನ ಪುರುಷ ಚಿಂತನೆಗಳು ಪೂರ್ಣಗೊಳ್ಳಬೇಕಾದರೆ ಮಹಿಳಾ ಅನುಭವ ಲೋಕವನ್ನು ಆಗು ಮಾಡಿಕೊಳ್ಳಲೇಬೇಕು. ಅಂತಹ ಅಸಮಗ್ರ ಸಾಹಿತ್ಯವನ್ನು ಸಮಗ್ರಗೊಳಿಸುವ ಆಲೋಚನೆಯೂ ಸ್ತ್ರೀವಾದಕ್ಕಿದೆ. ಈ ಕಾರಣಕ್ಕಾಗಿ ಇದುವರೆಗಿನ ಶಾಸ್ತ್ರ, ಪುರಾಣ, ಕಾವ್ಯ, ಚರಿತ್ರೆಯಲ್ಲಿ ಮಹಿಳೆಯ ಆಕೃತಿಗಳನ್ನು ಸ್ತ್ರೀವಾದಿ ಚಿಂತನೆಯ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಚರಿತ್ರೆಯುದ್ದಕ್ಕೂ ಗಂಡಾಳ್ವಿಕೆಯನ್ನು ಒಪ್ಪಿಕೊಂಡು ಬಂದ ಸಮಾಜದ ಮನಸ್ಥಿತಿಗೆ ಲಿಂಗಭೇದವಿಲ್ಲ. ಹೀಗಾಗಿಯೇ ನಮ್ಮ ಸಾಹಿತ್ಯಾದಿ ಕಲೆಗಳೆಲ್ಲವೂ ಗಂಡು ಮನಸ್ಥಿತಿಯ ಸ್ಥಿರೀಕರಣಕ್ಕೆ ಸಾಕಷ್ಟು ಶ್ರಮಿಸಿವೆ. ಈ ಚರಿತ್ರೆಯನ್ನು ನೆನಪಿಟ್ಟುಕೊಂಡು ಆಧುನಿಕ ಕಾಲದ ಮಹಿಳೆಯರು ತಮ್ಮ ಬಿಡುಗಡೆಯ ನಕ್ಷೆಯನ್ನು ಅಕ್ಷರದ ಮೂಲಕ ಬರೆಯಲು ಪ್ರಾರಂಭಿಸಿದರು. ಈ ಪ್ರಯತ್ನ ಸ್ವಾತಂತ್ರ್ಯ ಪೂರ್ವದಿಂದ ಇಂದಿನವರೆಗೂ ವ್ಯಕ್ತಿ ನೆಲೆಯಿಂದ, ಸಂಘಟಿತ ನೆಲೆಯಲ್ಲಿ ನಡೆದಿರುವುದಕ್ಕೆ ಸಾಕ್ಷಿ ಪುರಾವೆಗಳಿವೆ. ಆದರೆ ಕಾಲ ದಾಖಲಿಸಿಕೊಳ್ಳುವ ಒತ್ತಾಸೆಯನ್ನು ಇಂದು ಸಾಹಿತ್ಯ ಪರಿಷತ್ತಿನ ಮೂಲಕ ಹೊರಹಾಕಿದೆ. ಹೀಗಾಗಿ ಮಹಿಳೆಯರು ತಮ್ಮ ಅನುಭವಗಳನ್ನು ತಮಗಿರುವ ಲೋಕ ಗ್ರಹಿಕೆಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹಾಕುವ ಪ್ರಯತ್ನವನ್ನು ಗಂಭೀರವಾಗಿಯೆ ಮಾಡಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಂಡು ಸಂಭ್ರಮಿಸಿದೆ. ಈ ಸಂಭ್ರಮಕ್ಕೆ ಮಹಿಳೆಯರು ಕಾರಣೀಭೂತರು ಎನ್ನುವುದರಲ್ಲಿ ಅನುಮಾನಗಳಿಲ್ಲ. ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರು ನಂಬಿರುವ ಸಾಮಾಜಿಕ ನ್ಯಾಯ, ಪ್ರತಿಭಾ ನ್ಯಾಯ, ಪ್ರಾದೇಶಿಕ ನ್ಯಾಯ, ಲಿಂಗ ಸಮಾನತೆಯ ನ್ಯಾಯವನ್ನು ಅನುಷ್ಠಾನಗೊಳಿಸಿರುವರು. ಅದರಂಗವಾಗಿ ಇಂದು (ಮಹಿಳಾ ಸಂಪುಟಗಳು) ಮಹಿಳಾ ಸಾಹಿತ್ಯದ ಎಂಟು ಸಂಪುಟಗಳು ಲೋಕದ ನ್ಯಾಯದ ತಕ್ಕಡಿಯನ್ನು ಸರಿದೂಗಿಸುವ ಇರಾದೆಯನ್ನು ಈಡೇರಿಸಿಕೊಳ್ಳುತ್ತಿದೆ. ಕಥೆ, ಕಾವ್ಯ, ಲಲಿತ ಪ್ರಬಂಧ, ಅಂಕಣ, ವಿಮರ್ಶೆ, ಸ್ತ್ರೀವಾದ, ಸಂಕೀರ್ಣ, ಜಾನಪದವೆಂಬ ಎಂಟು ಸಂಪುಟಗಳು ಮಹಿಳೆಯರು ವಿವಿಧ ಪ್ರಕಾರಗಳು ಮಾಡಿದ ಸಾಹಿತ್ಯ ಕೃಷಿಯ ಪ್ರಾತಿನಿಧಿಕ ಸಂಕಲನಗಳಾಗಿವೆ. ಸಾಹಿತ್ಯ ಚರಿತ್ರೆಯ ಒಂಟಿಕಾಲಿನ ನಡಿಗೆಗೆ ಜಂಟಿಕಾಲುಗಳ ಹೆಜ್ಜೆಗಳ ನಾದ ಮುಂದಿನ ತಲೆಮಾರು ಸಾಹಿತ್ಯ ಚರಿತ್ರೆ ಬರೆಯುವುದಕ್ಕೆ ಓದುವುದಕ್ಕೆ ಶೋಧಿಸುವುದಕ್ಕೆ ಬಹುದೊಡ್ಡ ಆಕರ ಸಾಮಗ್ರಿಗಳಾಗಬಲ್ಲವು.

ಪರಿಕಲ್ಪನಾತ್ಮಕ ಎಂಟು ಸಂಪುಟಗಳಲ್ಲಿ ಮಹಿಳೆಯರ ಅನುಭವಗಳು ಅಂತರ್ಗತವಾಗಿರುವ ವಿಷಯಗಳನ್ನು, ಅವುಗಳ ಆಶಯಗಳನ್ನು ದಾಖಲಿಸುವುದು ಕಾಲದ ಅಗತ್ಯವೆಂದು ಭಾವಿಸಿರುವೆ.

**ಕಾವ್ಯ ಸಂಪುಟ ಒಂದು : 'ರಾಜಕಾರಣವೇ ಕಾವ್ಯಕಾರಣ'** : ಪಿ.ಚಂದಿಕಾರವರು ಪ್ರಾತಿನಿಧಿಕ ಮಹಿಳಾ ಕಾವ್ಯದ ಸಂಪಾದನೆಯ ಪ್ರಾರಂಭದಲ್ಲಿಯೇ ಕವಿತೆಯೇ ಏಕೆ ? ಎಂದು ಪ್ರಶ್ನಿಸಿಕೊಳ್ಳುತ್ತಲೇ ಅದಕ್ಕೆ ಉತ್ತರಗಳನ್ನು ಹೆಣ್ಣಿನ ಒಳಲೋಕದಿಂದಲೇ ಹುಡುಕುವ ಪ್ರಯತ್ನ ಮಾಡಿರುವರು "ಕನ್ನಡ ಮಹಿಳಾ ಕಾವ್ಯದ ಮೊದಲ ಹಂತದಲ್ಲಿ ಅಕ್ಷರಜ್ಞಾನ, ಎರಡನೆಯ ಹಂತದಲ್ಲಿ ಅರಿವು ಮತ್ತು ಮೂರನೆಯ ಹಂತದಲ್ಲಿ ಆತ್ಮ ಪ್ರತ್ಯಯವನ್ನೊಳಗೊಂಡ ದೊಡ್ಡ ಪರಿವರ್ತನೆಯ ನೆಲೆಗಳನ್ನು ಕಾಣುತ್ತೇವೆ ಎಂದು ಕಾವ್ಯಲೋಕದ ಮಹಿಳಾ ಪ್ರವೇಶಿಕೆಗೆ ತಾತ್ವಿಕ ಚೌಕಟ್ಟೊಂದು ಇತ್ತು ಎಂಬುದನ್ನು ಮುಂದಿಟ್ಟುಕೊಂಡು ಅದರ ಮೂಲಕ ಕಾವ್ಯ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಮೊದಲ ತಲೆಮಾರಿನ ಕವಯಿತ್ರಿಯರಿಗೆ, ರಾಷ್ಟ್ರೀಯ ಚಳುವಳಿ, ಗಾಂಧಿ ಪ್ರಭಾವ ಮುಂತಾದ ಕಾರಣಗಳಿಗಾಗಿ ಆದರ್ಶ ಸಮಾಜದ ಹಂಬಲ ಮುಖ್ಯವಾಗಿತ್ತು. ತಿರುಮಲೆ ರಾಜಮ್ಮ, ಸರಸ್ವತಿಬಾಯಿ ರಾಜವಾಡೆಯಂಥವರು ಈ ಪಥದಲ್ಲಿ ನಡೆದರೆ ಬೆಳಗೆರೆ ಜಾನಕಮ್ಮ, ಕಾವೇರಮ್ಮನಂಥವರು ಹೆಣ್ಣಿನ ನೋವಿನ ಕಾರಣಗಳನ್ನು ಹುಡಕಲು ಹೊರಟರು.

ಆಧುನಿಕ ಓದಿನ ಪ್ರಭಾವಕ್ಕೊಳಗಾದ ನಂತರದ ತಲೆಮಾರು ಸಮಾಜವೆಂದರೆ ಕೇವಲ ಪುರುಷನೆಂಬುದನ್ನು ಪ್ರಶ್ನಿಸುವುದಕ್ಕೆ ಜಗತ್ತಿನಾದ್ಯಂತ ಪ್ರಾರಂಭವಾಗಿದ್ದ ವಿ-ಮೆನ್ ಎನ್ನುವ ಚಳುವಳಿಯ ಇದರ ಪ್ರಭಾವ ಚ.ಸರ್ವಮಂಗಳಾರಂಥವರ 'ಅವನು ಬಸವ'ದ ಮೂಲಕ ಪುರುಷ ಪ್ರಧಾನ ಸಾಂಸ್ಕೃತಿಕ ಮನಸ್ಸು, ಎಳೆದ ಗೆರೆಯನ್ನು ಅಳುಕಿಸದೆ ಅದರ ಸಮಾನಾಂತರವಾದ ಹಿರಿದಾದ ಗೆರೆ ಎಳೆಯುವುದರ ಮೂಲಕ ಕಾವ್ಯದ ಮಡಿವಂತಿಕೆಯ ಲೋಕದಲ್ಲೊಂದು ಕಲ್ಲು ಒಗೆದು ತರಂಗಗಳು ಏಳುವಂತೆ ಮಾಡಿದರು. ಇದರ ಮುಂದುವರಿಕೆಯಾಗಿ ಸ್ತ್ರೀವಾದವನ್ನು ಅರ್ಥೈಸಿಕೊಂಡು ಹೆಣ್ಣಿನ ಅಸ್ತಿತ್ವ, ಅನನ್ಯತೆಯ ಹುಡುಕಾಟಕ್ಕೆ ಒಂದು ತಲೆಮಾರೆ ಸೃಷ್ಟಿಯಾಯಿತು. ಮಹಿಳಾ ಕಾವ್ಯವೆಂಬುದು ಲೋಕಗ್ರಹಿಕೆಯ ಸಂಚಾರಕ್ಕೆ ಹೊರಟಿತು. ಇದೇ ಹೊತ್ತಿಗೆ ಕರ್ನಾಟಕದಲ್ಲಿ ಸಾಹಿತ್ಯಿಕ ಚಳುವಳಿಯೊಂದು ಮಹಿಳೆಯರ ಬರಹಕ್ಕೆ ಹಕ್ಕೊತ್ತಾಯಕ್ಕೆ ಒಂದು ವೇದಿಕೆಯನ್ನು ಕಲ್ಪಿಸಿತು. ದಲಿತ ಬಂಡಾಯ ಚಳುವಳಿಯ ಪ್ರಭಾವಕ್ಕೊಳಗಾಗಿ ಮಾತೆ ಆಡದ ಸಮುದಾಯಗಳ ಧ್ವನಿಯಾಗಿ ಅಕ್ಷರಗಳಿಗೆ ಪ್ರತಿಭಟನೆಯ ಅಸ್ತ್ರದ ನಿಗಿ ನಿಗಿ ಕಿಚ್ಚನ್ನು ಪರಿಚಯಿಸಿದರು. ಈ ಹೊತ್ತಿನಲ್ಲಿ ಅಕ್ಷರಲೋಕ ಬೆಚ್ಚಿ ಬೀಳಿಸುವಂತಹ ಸಾಮಾಜಿಕ ಸ್ಫೋಟಕಗಳು ಕಾಣಿಸಿಕೊಂಡವು. ಅಭಿಜಾತ ಸಾಹಿತ್ಯದ ಮಾದರಿಗಳನ್ನು ಮುರಿದು ಕಟ್ಟುವ ಕ್ರಿಯೆಗಳು ಅನುಭವದ ತಾಜಾತನದಿಂದ ಆದವು. ಹೀಗೆ ಮಾತನಾಡಿದ, ಬರೆದ ಬಹುದೊಡ್ಡ ಗುಂಪು ಅಲಕ್ಷಿತಲೋಕದಿಂದ ಬಂದವರಾಗಿದ್ದರು. ಈ ಎಲ್ಲ ಸಾಹಿತ್ಯಿಕ, ಸಾಮಾಜಿಕ, ಲಿಂಗ ರಾಜಕಾರಣಗಳ ಗ್ರಹಿಕೆಗಳನ್ನಿಟ್ಟುಕೊಂಡು ಈ ಸಂಪುಟ ಮಹಿಳಾ ಕಾವ್ಯದ (ಪ್ರಾತಿನಿಧಿಕ) ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕನ್ನಡ ಕಾವ್ಯದ ನಾಡಿಮಿಡಿತವನ್ನು ಹಿಡಿದಿಟ್ಟಿದೆ.

**ಕಥಾ ಸಂಪುಟ ಎರಡು : ಒಳಕುದಿಯ ಹೊರಹಾಕುವ ಜೀವಗಳ ಹಸಿಮಾತು :** ಹೆಣ್ಣಿನ ಒಡಲು ಕಥೆಗಳ ಕಡಲು ಎಂದು ಹೇಳಲಾಗಿದೆ. ಈ ಕಡಲಿನ ಆಳ ಅಗಲಗಳನ್ನು ಡಾ.ಪದ್ಮಿನಿ ನಾಗರಾಜು ಅವರು ಮಹಿಳೆಯರ ಪ್ರಾತಿನಿಧಿಕ ಕಥೆಗಳ ಮೂಲಕ ಅಳೆಯುವ ಪ್ರಯತ್ನವನ್ನು ಈ ಸಂಪುಟದಲ್ಲಿ ಮಾಡಿರುವರು. ಮಾನವ ಇತಿಹಾಸ 'ಮಹಿಳಾ ಇತಿಹಾಸವಲ್ಲ'ವೆಂಬ ಪ್ರಶ್ನೆಯೊಂದಿಗೆ ಒಡಲಿನ ಕಥೆಗಳ ಕಡಲಿನಲ್ಲಿರುವ ಮುತ್ತುರತ್ನಗಳು ಕಪ್ಪೆ ಚಿಪ್ಪುಗಳನ್ನು ಒಟ್ಟಿಗೆ ಸಂಗ್ರಹಿಸಿರುವರು. "ಸ್ತ್ರೀ ಪರ ಸಾಹಿತ್ಯ ರಚಿಸಿದ ಆರ್.ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬರವರನ್ನು ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯರು ಎಂದು ಇವರಿಬ್ಬರನ್ನು ಗುರುತಿಸಲಾಗುತ್ತದೆ." ಮೊದಲ ತಲೆಮಾರಿನ ಕಥೆಗಾರ್ತಿಯರಿಗೆ ಅಕ್ಷರಲೋಕದ ಹಿನ್ನೆಲೆಯಿತ್ತು, ಆದರ್ಶವೆಂದು ಹೇಳಿದ ಸಾಮಾಜಿಕ, ಕೌಟುಂಬಿಕ ಮಾದರಿಗಳಿದ್ದವು. ಇಂತಹ ಮಾದರಿಗಳನ್ನಿಟ್ಟುಕೊಂಡು ಮೊದಲ ತಲೆಮಾರಿನ ಕಥೆಗಾರ್ತಿಯರು ಕಥೆ ಬರೆದದ್ದು ಕೂಡಾ ಆ ಕಾಲದ ಮಡಿವಂತಿಕೆ ಸಮಾಜದಲ್ಲಿ ಸಾಹಸವೆಂದೆ ಭಾವಿಸಲಾಗಿತ್ತು "ಸೀಮಿತ ನೆಲೆಗಟ್ಟಿನಲ್ಲಿ ಮಹಿಳೆ ಪ್ರಾರಂಭದಲ್ಲಿ ಬರೆಯಲಾರಂಭಿಸಿದ ಅವಳ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಕೂಡಾ ಅವಳು ಕಂಡು ಕೇಳಿದ, ಅನುಭವಿಸಿದ ಘಟನೆಗಳನ್ನೇ ಆಧರಿಸಿದ್ದವಾಗಿದ್ದವು. ಅಂತಹ ಸಾಹಿತ್ಯದಲ್ಲಿ ಗಟ್ಟಿತನ ಕಂಡುಬರದಿದ್ದರೂ, ಬರೆದಳೆಂಬ ಹೆಮ್ಮೆಯ ಬದಲು "ಅಡಿಗೆಮನೆ ಸಾಹಿತ್ಯ" ಎಂದು ಅವಹೇಳನಕ್ಕೊಳಗಾದರೂ ಮಹಿಳೆಯರು ಧೃತಿಗೆಡದೆ ಬರೆದೇ ಬರೆದರು. ಇಂದು ಅಂತಹ ಮಾತುಗಳನ್ನು ಧಿಕ್ಕರಿಸಿ ಸಮಾನವಾಗಿ ಬರೆದ ಮಹಿಳಾ ಸಾಹಿತ್ಯ (ಕಥೆ)ವನ್ನು ಕಡೆಗಣಿಸಲು ಸಾಧ್ಯವೇ ಇಲ್ಲ"ವೆಂದು ಹಲವು ಪ್ರಥಮಗಳನ್ನು ಕನ್ನಡ ಕಥಾಪರಂಪರೆಯಲ್ಲಿ ಮಹಿಳೆಯರು ಸಾಧಿಸಿರುವುದನ್ನು ಈ ಸಂಪುಟದಲ್ಲಿ ದಾಖಲಿಸಿರುವರು.

**ಲಲಿತ ಪ್ರಬಂಧ ಸಂಪುಟ ಮೂರು : ಆತ್ಮದೊಂದಿಗಿನ ಆತ್ಮಸಂವಹನ :** ಬರಹಗಾರರಲ್ಲಿ ಓದುಗರು ಇರುತ್ತಾರೆ. ಓದುಗರಲ್ಲಿ ಬರಹಗಾರರು ಇರಬೇಕಾಗಿಲ್ಲ. ಬರಹಗಾರರಲ್ಲಿರುವ ಓದುಗರ ನಡುವಿನ ಸಂಬಂಧಗಳು ಆತ್ಮದೊಂದಿಗಿನ ಆತ್ಮಸಂವಹನದಂತಿರುತ್ತದೆ ಎಂಬುದನ್ನು ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಸಾಹಿತ್ಯದಲ್ಲಿ ಗಂಭೀರತೆಗೆ ಮಾತ್ರ ಸ್ಥಾನವೆಂಬುದನ್ನು ಬದಿಗಿಟ್ಟು ಸಾಹಿತ್ಯವು ಮನುಷ್ಯಲೋಕದ ಕನ್ನಡಿಯೆಂದು ಭಾವಿಸುವುದಾದರೆ ಅಲ್ಲಿ ಉಲ್ಲಾಸ, ಉತ್ಸಾಹ, ಸರಸ, ವಿನೋದಗಳಿಗೆಲ್ಲವುಗಳಿಗೂ ಜಾಗವಿದೆ ಎಂಬುದನ್ನು ಬಿಂಬಿಸಲೆಂದೆ 'ಲಲಿತ ಪ್ರಬಂಧ'ಗಳ ಪ್ರಕಾರವೊಂದು ಹುಟ್ಟಿಕೊಂಡಿದೆ. "ವಿ.ಸೀ.ಯವರು ಭಾವಿಸಿದಂತೆ ಲಲಿತ ಪ್ರಬಂಧಗಳೆಂದರೆ 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ" ಎನ್ನುತ್ತಾರೆ. 'ನೇಯುವ' ಈ ಕ್ರಮ ಪ್ರಬಂಧಕಾರರ ಕಲೆಗಾರಿಕೆಯನ್ನು ತೋರಿಸುತ್ತದೆ. ಲಲಿತ ಪ್ರಬಂಧಗಳಲ್ಲಿ ವೈಚಾರಿಕತೆ ಇದೆ. ಕಾಲ್ಪನಿಕತೆಯೂ ಇದೆ. ಹಾಸ್ಯ ವಿಡಂಬನೆಗಳೂ ಇವೆ. ಇಂಥ ವಿಭಿನ್ನ ಎಳೆಗಳ ಕಲಾತ್ಮಕ ನೇಯ್ಗೆಯುಳ್ಳ ಬರಹವೇ ಲಲಿತ ಪ್ರಬಂಧ" ಈ ಕಲಾತ್ಮಕ ನೇಯ್ಗೆಯಲ್ಲಿ ಗಂಡಸಿಗೆ ಅಪರಿಚಿತವಾಗಿದ್ದ ಅದ್ಭುತಲೋಕವೊಂದರ ಪರಿಚಯವನ್ನು ಮಹಿಳೆಯರು ಮಾಡಿಸಿರುವರು. ಅದು ಮಹಿಳಾ ಲೋಕವೆಂದು ಕರೆಯಿಸಿಕೊಂಡ ಅಡಗಿಮನೆಯ ಒಳಗುಟ್ಟನ್ನು ಅದರ ಸೌಂದರ್ಯ ಸಾಧ್ಯತೆಗಳನ್ನು

ಅದರೊಂದಿಗಿದ್ದ ಅದರೊಂದಿಗಿನ ಅನುಭವಗಳನ್ನು ನವಿರಾಗಿ ಹೇಳಿ, ತಾವು ಹಗುರಾಗಿ ಓದುಗರ ಹೃದಯವನ್ನು ಭಾರಗೊಳಿಸುವ ಹಲವು ಕಹಿ ಸತ್ಯಗಳಿಗೆ ಅಕ್ಷರದ ನೆಯ್ಗೆ ಕುಸುರಿತನದ ಎಲ್ಲ ಹಂತಗಳ ಮಾದರಿಗಳನ್ನು ಈ ಸಂಪುಟದಲ್ಲಿ ಕಾಣಬಹುದು.

**ವಿಮರ್ಶಾ ಸಂಪುಟ ನಾಲ್ಕು : "ಶಕ್ತರನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತದೆಯೇ ಹೊರತು ಅಶಕ್ತರನ್ನಲ್ಲ"** : ಎನ್ನುವ ಕಾಲಾತೀತ ಸತ್ಯದ ಪುನರ್ ದರ್ಶನವನ್ನು ಡಾ.ಎಂ.ಎಸ್.ಆಶಾದೇವಿಯವರು ವಿಮರ್ಶಾ ಸಂಪುಟದ ಮೂಲಕ ಮಾಡಿರುವರು. "ಹೆಣ್ಣಿನ ಮಟ್ಟಿಗೆ ಹಲವು ಬಹಿಷ್ಕೃತ, ಅಸಾಧ್ಯ ಕ್ಷೇತ್ರಗಳಲ್ಲಿ ಒಂದಾಯಿತು" ಎಂದು ಸಂಪಾದಕರು ಸರಿಯಾಗಿಯೇ ವಿಮರ್ಶಾ ಕ್ಷೇತ್ರದ ಲಿಂಗರಾಜಕಾರಣವನ್ನು ಗುರುತಿಸಿರುವರು. ಮೊದಲ ತಲೆಮಾರಿನ ಲೇಖಕಿಯರು ತಮ್ಮ ಬರಹದ ಬಗ್ಗೆ ಪುರುಷ ವಿಮರ್ಶಕರು ಉದಾಸೀನತೆಯಿಂದ ಕಾಣುತ್ತಿರುವುದರ ಕುರಿತು ಸಹನೆಯಿಂದಲೇ ಮಾತನಾಡಿರುವರು. ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ರಾಜಕಾರಣದ ಒಳ ಸುಳಿವುಗಳನ್ನು ಗ್ರಹಿಸುವುದರಲ್ಲಿ ಮೊದಲ ತಲೆಮಾರಿನ ಲೇಖಕಿಯರು ಮುಂದಾಗಲಿಲ್ಲ. ದೂರದೃಷ್ಟಿಯ ಕೊರತೆಯಿಂದ ಹಿರಿಯ ತಲೆಮಾರಿನ ಲೇಖಕಿಯರು ಪುರುಷಲೋಕ ಬಯಸಿದ್ದೆಲ್ಲವನ್ನು ಬಿಟ್ಟುಕೊಟ್ಟು "ಇಟ್ಟಂತೆ ಇರುವೆ ಶಿವಾ" ಎನ್ನುವ ಹಾದಿಯಲ್ಲಿಯೇ ನಡೆದದ್ದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದವರಿಗೆ ಎದುರಾದ ಬಹುದೊಡ್ಡ ಬಿಕ್ಕಟ್ಟೆಂದು ಹೇಳಬಹುದು. ಕಲೆಯ ಕುರಿತ ಹಾಗೇ ಸ್ಥಾಪಿತ ವ್ಯಾಖ್ಯಾನಗಳನ್ನು ಮುರಿದು ಕಟ್ಟುವ ಕ್ರಿಯೆಗಳಿಗಿಂತಲೂ ಸಹನೆಯಿಂದ ಗೆಲ್ಲುವ ವಿಶ್ವಾಸದಿಂದಲೇ ಬರಹವನ್ನು ಪ್ರಾರಂಭದಲ್ಲಿ ಅಗಾಧವಾಗಿಯೇ ಪ್ರೀತಿಸಿದರು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶೆ ಮತ್ತು ಮೀಮಾಂಸೆ ಪ್ರಧಾನವಾದ ಕಾರಣ ಸಾಂಸ್ಕೃತಿಕ ರಾಜಕಾರಣದ ಚುಕ್ಕಾಣಿ ಗಂಡಸಿನ ಕೈಯಲ್ಲಿಯೆ ಇತ್ತು. ಹೀಗಾಗಿ ಮಹಿಳೆಯರ ಕೃತಿ ಕುರಿತ ಹಾಗೆ ಅವಜ್ಞತೆ ಮತ್ತು ಅಸಡ್ಡೆಯಿಂದ ನೋಡಿದ್ದರ ಕುರಿತು ತಕರಾರುಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಮರ್ಶಕಿಯರು ಎತ್ತಿದ ಮೇಲೆಯೇ ಸಾಹಿತ್ಯ ರಾಜಕಾರಣ ಅರ್ಥವಾಯಿತು. ಹೀಗಾಗಿ ಸಿದ್ಧಮಾದರಿಯ ಅಳತೆಗೋಲಿನಿಂದ ಅಳೆಯುವುದರ ಕುರಿತು ಪರ್ಯಾಯ ಸ್ತ್ರೀ ವಿಮರ್ಶಾ ಪರಿಭಾಷೆಗಳ ಹುಡುಕಾಟಕ್ಕೆ ತೊಡಗಿದರು. ಹೀಗಾಗಿಯೇ ಪುರುಷನಿಷ್ಠ ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ಮೀರಿ ಸ್ತ್ರೀ ನಿಷ್ಠ ವಿಮರ್ಶಾ ಮಾನದಂಡಗಳನ್ನು ಹುಡುಕಿಕೊಂಡರು. ಬಹುಮುಖಿ ಉಭಯಲಿಂಗಿ ಆಶಯಗಳ ಪ್ರಾತಿನಿಧಿಕ ವಿಮರ್ಶೆಯ ಪರಿಭಾಷೆಗಳ ಪರಿಚಯವನ್ನು ಈ ಸಂಪುಟದಲ್ಲಿ ಕಾಣಬಹುದು.

**ಸ್ತ್ರೀವಾದಿ ಸಂಪುಟ ಐದು : ಉಭಯಲಿಂಗಿ ಜ್ಞಾನದ ಪರಿ ಇಂತು** : ಆರ್ಥಿಕ ಸಂರಚನೆಯಲ್ಲಿ ಹುದುಗಿರುವ ಸಾಮಾಜಿಕ, ಸಾಂಸ್ಕೃತಿಕ ನಮ್ಮ ಬದುಕಿನ ಸ್ವರೂಪವನ್ನು ನಿರ್ಧರಿಸುತ್ತದೆ. ಬಹುತ್ವವನ್ನು ಒಳಗೊಂಡಿರುವ ಮನುಷ್ಯನ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಕಾಲ, ದೇಶಗಳು ನಿರ್ಧರಿಸುತ್ತವೆ ಎನ್ನುವ ಸಾಮಾಜಿಕ ವ್ಯಾಖ್ಯಾನ ನಾವು ಕಾಣುವ ಪ್ರಪಂಚವನ್ನು ಕುರಿತಾದದ್ದು. ಆಯಾಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳೆಲ್ಲವೂ ಪುರುಷಮಯಗೊಂಡಿರುವುದರಿಂದ ಉತ್ಪಾದಕ ನೆಲೆಯಲ್ಲಿ

ಮಹಿಳೆ ಕಾಣೆಯಾಗಿರುವಳು. ರೂಢಿಗತ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಸ್ತ್ರೀವಾದಿ ಪ್ರಜ್ಞೆಯ ಮೂಲಕ ಅಳೆಯಹೊರಟಿದ್ದರ ಹಿಂದೆ ಪಶ್ಚಿಮದಲ್ಲಿ ನಡೆದ ಮಹಿಳಾ ಚಳುವಳಿಯ ಒತ್ತಾಸೆಗಳಿವೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ನಲುಗಿಹೋದ ಹೆಣ್ಣು ಜೀವದ ಕಾರ್ಯಕಾರಣಗಳನ್ನು ಹುಡುಕುವ ಪ್ರಯತ್ನ ಒಂದು ಕಡೆಯಾದರೆ ಇನ್ನೊಂದು ಕಡೆ ಸ್ತ್ರೀವಾದಿ ಪ್ರಜ್ಞೆಯ ನೆಲೆಯಲ್ಲಿ ಸ್ತ್ರೀ ಸಂಸ್ಕೃತಿಯ ಶೋಧದ ಪ್ರಯತ್ನಗಳು ಆಧುನಿಕ ಓದಿನ ಮುಖೇನ ಕಾಣಿಸಿಕೊಂಡಿತು. ಹೊರ ಮತ್ತು ಒಳಜಗತ್ತಿನ ಶಕ್ತಿ ಕೇಂದ್ರಗಳೆಂದು ಭಾವಿಸಿರುವ ಉತ್ಪಾದನಾ ನೆಲೆಯಲ್ಲಿ ಹೆಣ್ಣು ಗಂಡಿಗೆ ಸಮಾನತೆಯ ಹಕ್ಕೊತ್ತಾಯವನ್ನು ಸ್ತ್ರೀವಾದಿ ವಿಚಾರಧಾರೆ ಪ್ರತಿಪಾದಿಸಿತು. "ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಠತೆಯ ವಿರುದ್ಧ ತನ್ನ ಹೋರಾಟವನ್ನು ಹಲವು ರೀತಿಗಳಲ್ಲಿ ಮಾಡಬೇಕಾಗಿದೆ. ಈ ಹೋರಾಟಕ್ಕೆ ಬೀಳಿಸುವುದರಲ್ಲಷ್ಟೇ ಆಸಕ್ತಿಯಿಲ್ಲ, ಕಟ್ಟುವುದರಲ್ಲಿ ಕೂಡ. ರಚನಾತ್ಮಕವಾದ ತಮ್ಮ ಕರ್ತವ್ಯಗಳನ್ನು ಈ ವಿಮರ್ಶೆ ಮರೆಯುವಂತಿಲ್ಲ. ಆದ್ದರಿಂದ ಸ್ತ್ರೀವಾದಿ ನೆಲೆಯಿಂದ ಬರುವ ಸಾಹಿತ್ಯಕ್ಕೆ ಆದ್ಯ ಗಮನ ನೀಡುತ್ತವೆ" ಎಂದು ಡಾ.ವಿಜಯಾ ದಬ್ಬೆಯವರು ಸ್ತ್ರೀವಾದ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಹೊತ್ತಿನಲ್ಲಿ ಹೇಳಿರುವ ವಿಚಾರಗಳು ಮುಂದಿನ ದಿನಗಳಲ್ಲಿ ಮಹಿಳೆಯರ ಬರಹಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿದವು. ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟು ಬಹುರೂಪದ್ದು. ವರ್ಗ ವರ್ಣಗಳಲ್ಲಿ ಹಂಚಿಹೋಗಿರುವ ಭಾರತದ ಮಹಿಳೆಯರ ಬದುಕಿನ ಅನ್ವೇಷಣೆ ಪಶ್ಚಿಮದ ಚೌಕಟ್ಟಿಗೆ ಒಗ್ಗುವುದರಲ್ಲಿ ಹಲವು ಅನುಮಾನಗಳನ್ನು ಹುಟ್ಟುಹಾಕಿದವು. ಪುರುಷ ದ್ವೇಷ ಮತ್ತು ಕೌಟುಂಬಿಕ ಬದುಕನ್ನು ಮುರಿಯುವ ಮನೆಮುರಿಕಿಯರೆಂದು ಭಾವಿಸುವ ಹಾಗೇ ಸ್ತ್ರೀವಾದದ ಸೈದ್ಧಾಂತಿಕತೆಯನ್ನು ಮೊದಮೊದಲು ಅನುಮಾನದಿಂದ ನೋಡಲಾಯಿತು. ಇದಕ್ಕೆ ಕಾರಣ ಶ್ರೇಣೀಕೃತ ನೆಲೆಯಿಂದ ಬಂದ ಮಹಿಳೆಯರ ಗ್ರಹಿಕೆಗಳಾಗಿದ್ದವು. ನಂತರದ ದಿನಗಳಲ್ಲಿ ಭಾರತದ ಚರಿತ್ರೆ ಮುಖೇನ ಸ್ತ್ರೀವಾದಿ ಸಿದ್ಧಾಂತವನ್ನು ಅರ್ಥೈಸಿಕೊಳ್ಳುವ ಪ್ರಯತ್ನಗಳು ಹಲವು ನೆಲೆಯಿಂದ ಬಂದ ಮಹಿಳೆಯರ ಮೂಲಕ ನಡೆದ ಕಾರಣ ಸ್ತ್ರೀವಾದ ವಿಶ್ವಾಸಾರ್ಹತೆಯನ್ನು ಸಮಾಜದಲ್ಲಿ ಗಳಿಸಲು ಸಾಧ್ಯವಾಯಿತು. ಈ ಸಾಧ್ಯತೆಗಳನ್ನು ಈ ಸಂಪುಟದ ಬರಹಗಳಲ್ಲಿ ಕಾಣಬಹುದು.

**ಅಂಕಣ ಬರಹ ಸಂಪುಟ ಆರು : ಮಾರುಕಟ್ಟೆಯೊಳಗೆ ಮಾನಸಿಯ ಮಾತುಗಳು:** ಕನ್ನಡ ಸಾಹಿತ್ಯದ ಪ್ರಕಾರಗಳಿಗೆ ಹೋಲಿಸಿದರೆ ಅಂಕಣ ಬರಹಗಳು ಇತ್ತೀಚಿನ ಬೆಳೆಯಾಗಿದೆ. ಇದು ಒಂದು ರೀತಿಯಲ್ಲಿ ವಿಮರ್ಶಕರ ಮತ್ತು ಗಂಭೀರ ಓದುಗರ ಅಲಕ್ಷ್ಯಕ್ಕೆ ಇತ್ತೀಚಿನವರೆಗೂ ಒಳಗಾದ ಪ್ರಕಾರವಾಗಿತ್ತು. ಸಾಹಿತ್ಯಕ್ಕಿರುವ ಮಹತ್ವವನ್ನು ಅಂಕಣ ಬರಹಕ್ಕೆ ನೀಡದೆ ಹೋದ ಕಾರಣ ಸಾಹಿತಿಗಳು ಈ ಪ್ರಕಾರದ ಕೃಷಿಯಲ್ಲಿ ಹೆಚ್ಚು ತೊಡಗಿದಂತಿಲ್ಲ ಡಿ.ವಿ.ಜಿ., ಪಾ.ವೆಂ., ನಿರಂಜನರು, ಹಾ.ಮಾ.ನಾಯಕರಂತಹವರು ಇದನ್ನು ಗಂಭೀರವಾಗಿ ತೆಗೆದುಕೊಂಡ ಕಾರಣದಿಂದ ಸಾಹಿತ್ಯದ ಪ್ರಕಾರಗಳ ವ್ಯಾಪ್ತಿಗೆ ಇತ್ತೀಚೆಗೆ ಸೇರಿಸಲ್ಪಟ್ಟಿದೆ. ಸ್ವತಃ ಪತ್ರಿಕೆಯನ್ನು ಹುಟ್ಟುಹಾಕಿದ ಲಂಕೇಶ, ತೇಜಸ್ವಿ, ಚಂದ್ರಶೇಖರ ಪಾಟೀಲರಂಥವರು ಅಂಕಣ ಬರಹಗಳ ಮೂಲಕವೇ ಗುರುತಿಸಿಕೊಂಡಿದ್ದುಂಟು. ಸಮಕಾಲೀನ ಬಿಕ್ಕಟ್ಟುಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆದ

ಈ ಪ್ರಕಾರ ಇಂದು ಎಲ್ಲರನ್ನು ಒಳಗೊಳ್ಳುತ್ತಿದೆ. ಕನ್ನಡದ ಮುಖ್ಯ ಬರಹಗಾರರು ಮತ್ತು ಯುವ ಬರಹಗಾರರು ಇಂದು ಪತ್ರಿಕೆಗಳಲ್ಲಿ, ಬ್ಲಾಗ್‌ಗಳಲ್ಲಿ, ಅಂಕಣಗಳನ್ನು ಬರೆಯುತ್ತಿರುವರು. ಅಂಕಣಗಳಿಲ್ಲದೆ ಪತ್ರಿಕೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ ಹಾಗೆ ಇಂದು ಅಂಕಣ ಬರಹ ಮಾನ್ಯತೆಗೆ ಒಳಗಾಗಿದೆ.

ಅಂಕಣ ಬರಹಕ್ಕೆ ಸಮ್ಮಂದಿಸಿ ಹೇಳುವುದಾದರೆ, ಎರಡು ರೀತಿಯ ಅಂಕಣಕಾರರನ್ನು ಕಾಣುತ್ತೇವೆ. ಒಂದು ಸಾಹಿತಿಗಳು ಬರೆಯುವ ಅಂಕಣಗಳು ಮತ್ತು ಭಿನ್ನ ಭಿನ್ನ ಕ್ಷೇತ್ರದ ತಜ್ಞರು ಬರೆಯುವ ಅಂಕಣ. ಸಾಹಿತಿಗಳು ಬರೆಯುವ ಅಂಕಣಕ್ಕೂ ವಿಷಯ ಪರಿಣಿತರು ಬರೆಯುವ ಅಂಕಣಗಳ ಉದ್ದೇಶ, ವ್ಯಾಪ್ತಿ, ವಸ್ತುವಿಷಯಗಳ ನಿರೂಪಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಕಾರಣ ಬರಹಗಾರನ ಆಯ್ಕೆ, ಆಸಕ್ತಿ, ಎನ್ನಬಹುದು ಈ ಕಾರಣಕ್ಕಾಗಿಯೇ ಮಹಿಳಾ ಅಂಕಣಕಾರರು ಭಿನ್ನರಾಗುತ್ತಾರೆ.

ಪುರುಷ ಕೇಂದ್ರಿತ ಸಮಾಜವನ್ನು ಪುರುಷ ಮಾನದಂಡದಿಂದಲೇ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಅದೇ ಮಹಿಳೆಯರು ತಮ್ಮ ಅಸ್ಮಿತೆಗೆ ಉಂಟಾದ ಎಲ್ಲ ಬಿಕ್ಕಟ್ಟುಗಳನ್ನು ತಮ್ಮದೇ ಆದ ಅನುಭವ, ಭಾಷೆ, ರೂಪಕಗಳ ಮೂಲಕ ಅಭಿವ್ಯಕ್ತಪಡಿಸುತ್ತಾಳೆ. ಪುರುಷರ ಗ್ರಹಿಕೆಗೆ ನಿಲುಕದ ಬದುಕಿನ ಅಮೂರ್ತವಾದ ಹಲವಾರು ಸಂಗತಿಗಳನ್ನು, ಹಿತಾಸಕ್ತಿಗಳನ್ನು ಪ್ರಶ್ನಿಸುವ, ಪರಿವರ್ತಿಸುವ ರೀತಿಯ ಬರಹಗಳನ್ನು ಮಹಿಳೆಯರು ಅಂಕಣದ ರೂಪಿ ಬರಹಕ್ಕೆ ಒಗ್ಗಿಸಿಕೊಂಡಿರುವರು. ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಕನ್ನಡ ಪತ್ರಿಕೆಗಳು ಮಹಿಳಾ ಅಂಕಣಕಾರರಿಗೆ ನೀಡಿರುವ ಪ್ರೋತ್ಸಾಹ ಆರೋಗ್ಯಕರ ಬೆಳವಣಿಗೆಯಾಗಿದೆ. ಪ್ರಮುಖ ಪತ್ರಿಕೆಗಳಲ್ಲಿ ಮಹಿಳಾ ಅಂಕಣಕಾರರು, ರಾಜಕೀಯ, ಸಾಮಾಜಿಕ ಸಮಸ್ಯೆಗಳು, ಆರೋಗ್ಯ, ನೈರ್ಮಲ್ಯ, ಸಾಹಿತ್ಯ, ಕಲೆ ಮುಂತಾದವುಗಳ ಕುರಿತು ಬರೆಯುತ್ತಿರುವುದು ಮತ್ತು ಓದುವ ವರ್ಗವನ್ನು ವಿಸ್ತರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಹೀಗೆ ವಿಭಿನ್ನ ನೆಲೆಯಲ್ಲಿ ವಿಭಿನ್ನ ಪತ್ರಿಕೆ, ಕಾಲಗಳಲ್ಲಿ ಪ್ರಕಟಗೊಂಡ ಸ್ತ್ರೀ ದೃಷ್ಟಿಕೋನದ ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಈ ಸಂಪುಟದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಸಂಕೀರ್ಣ ಸಂಪುಟ ಏಳು : ಬಯಲ ರೂಪಿನ ಬಣ್ಣದ ಬಿಂಬಗಳು :** ಸಂಕೀರ್ಣ ಎಂಬ ಪದ ಬಳಕೆ ನವ್ಯ ವಿಮರ್ಶಕರ ಮೂಲಕ ಸಾಹಿತ್ಯಲೋಕಕ್ಕೆ ಪರಿಚಯವಾದ ಹಾಗಿದೆ "ಯಾವುದೇ ವಿಷಯ–ವಸ್ತುಗಳನ್ನು ಏಕಮುಖಿಯಾಗಿ ಗ್ರಹಿಸದಿರುವಿಕೆಯನ್ನು ಸಂಕೀರ್ಣವೆಂದು ಭಾವಿಸಿದಂತಿದೆ. "ಸರಳವಲ್ಲ, ಜಟಿಲ ಮತ್ತು ಕಷ್ಟಕರವಾದದ್ದು" ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಬದುಕಿನ ಸಂಕೀರ್ಣತೆಗೆ ಕಾರಣವಾದ ಸಂಗತಿಗಳ ಮೇಲೆ ಕ್ಷ ಕಿರಣ ಬೀರುವ ಪ್ರಯತ್ನವನ್ನು ಆಯಾ ಕ್ಷೇತ್ರದಲ್ಲಿ ಮಾಡಲಾಗಿದೆ. ಯಾವುದೇ ಸಾಹಿತ್ಯ ಪ್ರಕಾರದಲ್ಲಿ ಸೇರ್ಪಡಿಸಲು ಸಾಧ್ಯವಾಗದ, ವಿಶಿಷ್ಟ ಬರಹಗಳನ್ನು ದಾಖಲೆಯ ಮತ್ತು ಓದುಗರನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಿಸಲು ಮುಂದಾದಾಗ ಅದಕ್ಕೊಂದು ಗುರುತು ಬೇಕಾಗಿತ್ತು. ಅದನ್ನು ಸಂಕೀರ್ಣವೆಂದು ಕರೆದು ಭಿನ್ನ ಭಿನ್ನ ಜ್ಞಾನಶಾಖೆಗಳ ಗ್ರಹಿಕೆಗಳನ್ನು ಒಂದೆಡೆ ತರುವ ಪ್ರಯತ್ನವನ್ನು ಪ್ರಾತಿನಿಧಿಕವಾಗಿ ಮಾಡಲಾಗಿದೆ.

ಹೆಣ್ಣು-ಗಂಡುಗಳನ್ನು ಒಳಗೊಂಡ ಹಾಗೇ ಸಮಾಜ ಏಕಕಾಲದಲ್ಲಿ ಹಲವು ಕಾಲಗಳ ಮೌಲ್ಯಗಳ ಕುರಿತು ಮಾತನಾಡುತ್ತಿರುತ್ತದೆ. ಸರಳವಲ್ಲದ ಬದುಕಿನ ಅನುಭವಗಳ ಅನಾವರಣ ಸಂಕೀರ್ಣ ನೆಲೆಯಲ್ಲಿಯೇ ಆಗುವುದು ಸಹಜ. ಒಂದು ವಸ್ತು ವಿಷಯ, ಕ್ಷೇತ್ರ, ಸಂಗತಿ, ಭಾವ, ಬಣ್ಣಗಳ ಕುರಿತು ಮಾತನಾಡುವ ಬರೆಯುವ ಕ್ರಿಯೆ ಮುಂದುವರಿದಂತೆ, ಬೆಳೆದಂತೆ ಹಲವು ನೆಲೆಯಲ್ಲಿ ಅದರ ಸಾಧ್ಯಾಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಅಂತಹ ಸಾಧ್ಯತೆಗಳು ಕೇವಲ ಪುರುಷರಿಗೆ ಸೀಮಿತಗೊಂಡಿಲ್ಲ. ಮಹಿಳೆಯರು ತಮಗೆ ದೊರೆತ ಅವಕಾಶಗಳ ಅನುಭವಗಳನ್ನು ದಾಖಲಿಸುವಾಗ, ಹಂಚಿಕೊಳ್ಳುವಾಗ ಅನೇಕ ಬಗೆ, ರೀತಿ, ಶೈಲಿ, ಭಾಷೆಯ ಬಳಕೆ, ಪ್ರಯೋಗಗಳು ಕನ್ನಡದ ಸಂದರ್ಭದಲ್ಲಾಗಿವೆ. ಆಧುನಿಕ ಓದಿನ ಕಾರಣದಿಂದ ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ತಮ್ಮಿರುವಿಕೆಯನ್ನು ಸಾಬೀತುಪಡಿಸುವಾಗಿನ ಅನುಭವಗಳನ್ನು ಹಂಚಿಕೊಂಡ ಬರಹಗಳನ್ನು ಉಪೇಕ್ಷಿಸುವಂತಿಲ್ಲ. ಸಾಹಿತ್ಯ, ಸಂಗೀತ, ರಾಜಕೀಯ, ಧಾರ್ಮಿಕ, ಆರ್ಥಿಕ, ವಿಜ್ಞಾನ, ಮಾನವಿಕ, ರಂಗಭೂಮಿ, ಅಭಿನಯ, ಮಾಧ್ಯ, ಬಣ್ಣ, ಉದ್ಯಮ ಮುಂತಾದ ರಂಗಗಳಲ್ಲಿ ಪ್ರವೇಶಿಸಿರುವಳು. ಈ ಕ್ಷೇತ್ರಗಳ ಅನುಭವಗಳನ್ನು, ಅವುಗಳ ಪರಿಚಯಿಸುವ ವಿಕಾಸದ ಮಾದರಿಗಳನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟಿರುವರು. ಓದುಗರ ಅಭಿರುಚಿಯನ್ನು ಮತ್ತು ಚಿಂತನಾಶೀಲತೆಯನ್ನು ಉದ್ದೀಪಿಸುವ ಮಹಿಳೆಯರ ಬರಹಗಳ ಒಟ್ಟುಗೂಡುವಿಕೆಯ ಕಾರಣ ಸಂಕೀರ್ಣ ಸಂಪುಟವೊಂದು ಸಿದ್ಧಗೊಂಡಿದೆ.

**ಜಾನಪದ ಸಂಪುಟ ಎಂಟು : ಹಾಡು ಹಾಡೆಂದರೆ ಏನೆಂದು ಹಾಡಲಿ... ಹಾಡಲ್ಲ ಅದು ನಮಪಾಡ :** ಜಾನಪದ ಸಾಹಿತ್ಯ ಸಂದರ್ಭದಲ್ಲಿ ಒಂದು ಜನಪ್ರಿಯವಾದ ವ್ಯಾಖ್ಯಾನವಿದೆ. ಅದೇನೆಂದರೆ "ಜನವಾಣಿ ಬೇರು; ಕವಿವಾಣಿ ಹೂ" ಎಂದು ಈ ಜನವಾಣಿಯ ಬೇರಿಗೆ ನೀರೆರೆದವರು ನೀರೆಯರು ಎಂಬುದನ್ನು ಕೂಡಾ ಚರಿತ್ರೆ ಮರೆಮಾಚಿದೆ. ಬ್ರಿಟೀಷರಾಗಮನದಿಂದ ಬೆಳಕು ಬೆಂಕಿ ಕೂಡಿಯೆ ಈ ನೆಲದಲ್ಲಿ ಹಲವು ಪಲ್ಲಟಗಳನ್ನುಂಟು ಮಾಡಿದ್ದವು. ಮೌಖಿಕ ಪರಂಪರೆಯಲ್ಲಿದ್ದ ಬದುಕಿನ ಶ್ರೀಮಂತ ದಾಖಲೆಗಳನ್ನು ಸಂಗ್ರಹಿಸುವ, ಸಂಪಾದಿಸುವ ಕೆಲಸಗಳನ್ನೆಲ್ಲ ಮೊದಲ ತಲೆಮಾರಿನ ಶಿಷ್ಟ ಸಾಹಿತಿಗಳು ಮಾಡಿದರು. ಕೈಗಾರೀಕರಣದಿಂದ ಉದ್ಭವಿಸಿದ ಬಿಕ್ಕಟ್ಟಿಗೆ ತಾಯ್ತನದಂತಿದ್ದ ಜಾನಪದ ಸಾಹಿತ್ಯ ಸಂಸ್ಕೃತಿಯಲ್ಲಿ ಪರಿಹಾರಗಳಿವೆ ಎಂದು ಶಿಷ್ಟಲೋಕ ಪರಿಭಾವಿಸಿತ್ತು. ಆದರೆ ತಾಯಿಯನ್ನೇ ಹೆಡೆಮುರಿಗಿ ಕಟ್ಟಿ ಕತ್ತಲಲ್ಲಿ ಕೂಡಿಹಾಕಿದ್ದನ್ನು ಮರೆತಿತ್ತು. ಹೆಣ್ಣಿನ ಚಾರಿತ್ರಿಕ ಸೋಲಿಗೆ ಕಾರಣಗಳನ್ನು ಅಕ್ಷರವಂಚಿತ ಮಹಿಳೆಯರು ಅನುಭಾವಾಧಾರದ ಮೇಲೆ ಮೌಖಿಕವಾಗಿ ದಾಖಲಿಸುವುದನ್ನು ಮರೆಯಲಿಲ್ಲ. ಹೆಣ್ಣಿನ ಯಾತನಾಮಯ ಬದುಕಿಗೆ ಕಾರಣಗಳನ್ನು ಸಾಮಾನ್ಯ ಹೆಣ್ಣು ಮಹಿಳೆಯೊಬ್ಬಳು ಗ್ರಹಿಸಿದ ರೀತಿ ವಿಸ್ಮಯಗೊಳಿಸುವಂತಿದೆ.

> **"ಹೆಣ್ಣೀನ ಗೋಳಹತ್ತಿ ಬನ್ನಿಯ ಮರಬೆಂದೋ**
> **ಅಲ್ಲಿ ಸನ್ಯಾಸಿ ಮಠ ಬೆಂದು ಹಾರವರ**
> **ಪಂಚಾಂಗ್ಹತ್ತಿ ಉರಿದಾವೋ"-**

ಹೆಣ್ಣಿಗೆ ಅಕ್ಷರದ ಬಾಧ್ಯಸ್ಥಿಕೆಯಿಲ್ಲದಿದ್ದರು ಅರಿವಿನ ಬಾಯಾಗಿ ಮಾತನಾಡಿರುವರು. ಭೂಮಿ ಮೇಲಿನ ಅಸಂಖ್ಯಾತ ಹೆಣ್ಣುಜೀವಗಳ ಗೋಳಿಗೆ ಕಾರಣವನ್ನು ಗುರುತಿಸುವಲ್ಲಿ

ಅನುಭವವೊಂದೆ ಆಧಾರವೆಂಬುದನ್ನು ಗಂಭೀರವಾಗಿ ಪರಿಗಣಿಸುವಂತಹದ್ದು. ತಮ್ಮ ಇರುವಿಕೆಯ ಅರಿವು ಅನುಭವಕ್ಕೆ ಬಂದ ಮೇಲೆ ಪ್ರತಿಭಟಿಸುವ ಪ್ರಶ್ನಿಸುವ, ಅಸಹಾಯಕತೆ, ತೋರ್ಪಡಿಸುವ ಹಲವು ಮಾರ್ಗಗಳಲ್ಲಿ (ಪ್ರಕಾರಗಳಲ್ಲಿ) ದಾಖಲಿಸಿರುವರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಜಾನಪದಕ್ಕೆ ಬೇಡಿಕೆ ಬಂದಾಗ ವ್ಯಾಪಾರಕ್ಕೆ ಮುಂದಾದವರು ಗಂಡಸರೇ ಆಗಿದ್ದರು. ಇದರ ಮಧ್ಯದಲ್ಲಿಯು ಅಕ್ಷರಲೋಕಕ್ಕೆ ತೆರೆದುಕೊಂಡ ಮಹಿಳೆಯರು ಪೂರ್ವಿಕರ ಮೌಖಿಕ ಪರಂಪರೆಯಲ್ಲಿ ತಾವಿರುವುದನ್ನು ಅರಿತರು. ಅಕ್ಷರಲೋಕಕ್ಕೆ ತೆರೆದುಕೊಂಡ ಹೆಣ್ಣುಮಕ್ಕಳು ಜಾನಪದ ಬದುಕನ್ನು, ಸಂಸ್ಕೃತಿಯನ್ನು ಅರ್ಥೈಸಿಕೊಂಡಿರುವ ಬರಹವನ್ನು ಪ್ರಾತಿನಿಧಿಕವಾಗಿ ಸಂಗ್ರಹಿಸುವ ಹಂಬಲದಿಂದ ಮಹಿಳಾ ಜಾನಪದ ಸಂಪುಟ ಸಿದ್ಧಗೊಂಡಿದೆ. ಹೀಗೆ ಒಟ್ಟು ಎಂಟು ಸಂಪುಟಗಳು ಪರಿಷತ್ತಿನ ಹಿರಿಮೆಗೆ ಗರಿಯಂದೇ ಭಾವಿಸುವೆ.

ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತರುವುದರ ಮೂಲಕ ಚಾರಿತ್ರಿಕ ಮೈಲುಗಲ್ಲೊಂದನ್ನು ಊರಿತ್ತು. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರಿಗೆ ಮಹಿಳಾ ಸಾಹಿತ್ಯ ಸಂಪುಟಗಳನ್ನು ಹೊರತರುವ ಕುರಿತು ಪತ್ರವೊಂದನ್ನು ಬರೆದಾಗ ಅದಕ್ಕೆ ತಕ್ಷಣ ಸ್ಪಂದಿಸಿ ಕಾರ್ಯೋನ್ಮುಖರಾದರು. ಈ ಮಾಲಿಕೆಗಳ ಸಂಪಾದಕತ್ವದ ಜವಾಬ್ದಾರಿಯನ್ನು ನನಗೆ ವಹಿಸಿದರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾದ ಕಾರ್ಯ ಮಾಡಿರುವ ಲೇಖಕಿಯರನ್ನು ಸಂಪರ್ಕಿಸಿ ಇಂತಹದೊಂದು ಮಹತ್ತರವಾದ ಕೆಲಸ ಮಾಡಿಕೊಡಲು ಸಭೆ ಕರೆದು ಎಂಟು ಸಂಪುಟಗಳ ಸಂಪಾದನಾ ಜವಾಬ್ದಾರಿಯನ್ನು ವಹಿಸಿದರು. ಕಾಲಬದ್ಧ ಯೋಜನೆಯಿಂದು ಪದೇ ಪದೇ ನೆನಪಿಸಿ ಕಡಿಮೆ ಅವಧಿಯಲ್ಲಿ ಗಂಭೀರವಾದ ಕೆಲಸವನ್ನು ನಮ್ಮಿಂದ ಮಾಡಿಸಿದ ತಾಯಿ ಹೃದಯದ ಡಾ.ಮನು ಬಳಿಗಾರ ಅವರಿಗೆ ಅನಂತ ಕೃತಜ್ಞತೆಗಳು.

ಪರಿಷತ್ತಿನ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತಿರುವ ಹಿರಿಯರಾದ ಡಾ.ಪದ್ಮರಾಜ ದಂಡಾವತಿಯವರು ನಮ್ಮ ಆಮೆಗತಿಯ ನಡಿಗೆಯನ್ನು ತೀವ್ರಗೊಳಿಸುವಂತೆ ಉತ್ತೇಜಿಸಿ ನಮ್ಮಿಂದ ಇಂತಹದೊಂದು ಮಹತ್ವದ ಕೆಲಸ ಮಾಡಿಸಿರುವರು. ಅವರಿಗೆ ಕೃತಜ್ಞತೆಗಳನ್ನು ತಿಳಿಸುವುದು ನಮ್ಮ ಕರ್ತವ್ಯ. ಈ ಎಂಟು ಸಂಪುಟಗಳ ಜವಾಬ್ದಾರಿಯನ್ನು ಹೊತ್ತ ನನಗೆ ಹೆಗಲೆಣೆಯಾದ ಸಹೋದರಿ ಪಿ.ಚಂದ್ರಿಕಾ, ಡಾ.ಆಶಾದೇವಿ, ಡಾ.ಪದ್ಮಿನಿ ನಾಗರಾಜು, ಪ್ರತಿಭಾ ನಂದಕುಮಾರ, ಡಾ.ಲಕ್ಷ್ಮಿದೇವಿ, ಡಾ.ತಮಿಳ್ ಸೆಲ್ವಿ ಮತ್ತು ಬಾ.ಹಾ.ರಮಾಕುಮಾರಿ, ಡಾ.ಗುರುದೇವಿ ಹುಲ್ಲೆಪ್ಪನವರ ಇವರಿಗೆಲ್ಲ ಕೃತಜ್ಞತೆಗಳನ್ನು ಹೇಳುವುದು ಔಪಚಾರಿಕವಲ್ಲ. ನಾಡಿನುದ್ದಕ್ಕೂ ಸಾಹಿತ್ಯ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಲೇಖಕಿಯರನ್ನು ಒಳಗೊಳ್ಳಬೇಕೆಂಬ ಹಂಬಲ ನಮ್ಮದಾಗಿದ್ದರೂ ಕಾಲಮಿತಿ ಮತ್ತು ಸಂಪರ್ಕಿಸುವ ಸಾಹಸದಲ್ಲಿ ಯಶಸ್ಸು ಕಾಣದೆ ಕೊನೆಗೆ ಪ್ರಾತಿನಿಧಿಕತನವನ್ನು ಮುಂದಿಟ್ಟುಕೊಂಡು ಈ ಮಹತ್ತರ ಯೋಜನೆಯನ್ನು ಪೂರೈಸಿದ ಸಂತೋಷ ನಮಗಿದೆ. ಇದು ಪ್ರಾರಂಭವಷ್ಟೇ ಮುಂದಿನ ದಿನಗಳಲ್ಲಿ ಇದರ ಮುಂದುವರಿಕೆಯಾದ ಗಮನಾರ್ಹವಾದದ್ದನ್ನು ಸಾಧಿಸುತ್ತೇವೆ ಎಂಬ ವಿಶ್ವಾಸ ಮೂಡಿಸಿದ

ಪರಿಷತ್ತಿಗೆ ಕೃತಜ್ಞತೆಗಳು. ಕಾರ್ಯದರ್ಶಿಯಾದ ರಾಜಶೇಖರ ಹತಗುಂದಿ, ಚೆನ್ನೇಗೌಡ ಅವರಿಗೂ ಮತ್ತು ಲೇಖನಗಳ ಸಂಗ್ರಹಿಸುವಲ್ಲಿ ಸಹಾಯ ಮಾಡಿದ ಡಾ.ವೆಂಕಟಗಿರಿ ದಳವಾಯಿ ಅವರಿಗೂ ಮತ್ತು ಸಕಾಲಕ್ಕೆ ಅಂದವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಪ್ರೀತಿಯ ಹುಡುಗ ಕೊಟ್ರೇಶ್ ಕೊಟ್ಟೂರು, ನಾಗರತ್ನಾಳಿಗೂ ಹಾಗೂ ಪ್ರಕಟಣಾ ವಿಭಾಗದ ಎಲ್ಲರಿಗೂ ನೆನಕೆಗಳು.

ಕನ್ನಡ ಸಾಹಿತ್ಯ ಪರಿಷತ್ತು ಇಂತಹದೊಂದು ಚಾರಿತ್ರಿಕ ಕಾರ್ಯ ಮಾಡುತ್ತಿರುವ ಹೊತ್ತಿನಲ್ಲಿ ಪರಿಷತ್ತಿನ ಅಧ್ಯಕ್ಷರು ಅತ್ಯಂತ ಆಸಕ್ತಿ ಮತ್ತು ಎಚ್ಚರಿಕೆಯಿಂದ ಸಲಹೆ ಸೂಚನೆಗಳನ್ನು ನೀಡುವಾಗಲೆಲ್ಲ ಲೇಖಕಿಯರ ಅನುಮತಿಯನ್ನು ಕಡ್ಡಾಯವಾಗಿ ಪಡೆಯಲೇಬೇಕು ಎನ್ನುತ್ತಿದ್ದರು. ಜಗತ್ತನ್ನು ನೋಡಬೇಕು, ಜಗತ್ತು ನಮ್ಮನ್ನು ಗಮನಿಸಬೇಕು ಎನ್ನುವ ಉದಾರವಾದ ಮನೋಭಾವ ಲೇಖಕಿಯರಲ್ಲಿದೆ. ಕಡಿಮೆ ಅವಧಿಯಲ್ಲಿ ಬೃಹತ್ ಕೆಲಸಕ್ಕೆ ಕೈ ಹಾಕಿರುವುದರಿಂದ ಬಹುಪಾಲು ಲೇಖಕಿಯರನ್ನು ಸಂಚಾರಿ ವಾಣಿಯ ಮೂಲಕ ಸಂಪರ್ಕಿಸಿ ಅನುಮತಿ ಪಡೆದಿದ್ದೇವೆ. ಎಷ್ಟೋ ಜನ ಹಿರಿಯ ಜೀವಗಳು ನಮ್ಮೊಂದಿಗಿಲ್ಲ, ಅವರ ಬರಹವನ್ನು ಬಿಡುವಂತಿಲ್ಲ, ಅವರ ಸಂಬಂಧಿಕರನ್ನು ಸಂಪರ್ಕಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ. ಎಷ್ಟೋ ಜನ ಲೇಖಕಿಯರ ಹಳೆಯ ವಿಳಾಸಗಳು, ಫೋನ್ ನಂಬರುಗಳು ಬದಲಾಗಿವೆ. ಹೀಗಾಗಿ ಆ ತೊಂದರೆಯನ್ನು ಅನುಭವಿಸುವುದು ಅನಿವಾರ್ಯವಾಗಿತ್ತು. ಎಲ್ಲ ಮಿತಿಗಳ ಮಧ್ಯದಲ್ಲಿ ಒಂದು ಚಾರಿತ್ರಿಕ ಕಾರ್ಯಮಾಡುತ್ತಿರುವುದರಿಂದ ನಮ್ಮೆಲ್ಲ ಲೇಖಕಿಯರು ಗೌರವದಿಂದ ಈ ಕೆಲಸವನ್ನು ಮನಸಾರೆ ಒಪ್ಪಿಕೊಳ್ಳುವರೆಂಬ ನಂಬಿಕೆ ನಮಗಿದೆ.

**–ಡಾ. ಮಲ್ಲಿಕಾ ಘಂಟಿ**

# ಪ್ರಸ್ತಾವನೆ

## ರಾಜಕಾರಣವೇ ಕಾವ್ಯ ಕಾರಣ

ಕೂಡ್ಲಿಗಿ ತಾಲ್ಲೂಕಿನ ಕಾನಾಮಡುಗು ಎಂಬ ಗ್ರಾಮದಲ್ಲಿ ದೊರೆತಿರುವ ಮಹಾಸತಿ ಕಲ್ಲು ಕುತೂಹಲಕರವಾದ ಕಥೆಯನ್ನು ಹೇಳುತ್ತದೆ. ಈ ಮಾಸ್ತಿಯು ಅತಿಲಂಪಟನಾಗಿದ್ದ ತನ್ನ ಗಂಡನನ್ನು ಮೊಸರು ಕಡೆಯುವ ಮಂತಿನಿಂದ ಹೊಡೆದು ಕೊಂದು, ನಂತರ ತಪ್ಪಿಸಿಕೊಂಡು ಹೋಗಿ ಆತ್ಮಹತ್ಯೆ ಮಾಡಿಕೊಂಡು ಮಹಾಸತಿಯಾದಳು ಎಂದಿದೆ. ಗಂಡನನ್ನು ಅನುಸರಿಸಿದವಳು ಮಾತ್ರ ಮಹಾಸತಿ ಆಗಲು ಸಾಧ್ಯವಿರುವಾಗ, ಗಂಡನನ್ನು ಕೊಂದವಳನ್ನು ಮಹಾಸತಿ ಎಂದು ಸಮಾಜ ಒಪ್ಪಿಕೊಳ್ಳಲು ಹೇಗೆ ಸಾಧ್ಯವಾಯಿತು? ಎನ್ನುವ ಅಚ್ಚರಿ ಕಾಡುತ್ತದೆ. ಇಲ್ಲಿ ಹೆಣ್ಣು ತನಗಿರುವ ಜವಾಬ್ದಾರಿಯನ್ನು ನಿರೂಪಿಸಲಿಕ್ಕೆ ಇದು ಮಹತ್ವದ ಕತೆ. ಈ ಸಮಾಜವನ್ನು ಸರಿದಾರಿಯಲ್ಲಿ ನಡೆಯುವ ಹಾಗೆ ಮಾಡಲು ಆ ಹೆಣ್ಣು ಗಂಡನನ್ನು ಕೊಂದಿದ್ದಾಳೆ ಎನ್ನುವುದುದಕ್ಕೆ ಅವಳನ್ನು ಮಹಾಸತಿ ಎಂದು ಕರೆದಿರುವುದು ಸರಿಯೇ! ಆದರೆ ಆ ಸತಿ ಯಾಕೆ ಆತ್ಮಹತ್ಯೆ ಮಾಡಿಕೊಂಡಳು? ಎನ್ನುವುದು ಯಾರಿಗಾದರೂ ಅಚ್ಚರಿಯೆ. ಪ್ರತಿಭಟನೆ ನ್ಯಾಯಪರವಾಗಿದ್ದಾಗ ಸಮ್ಮತವೇ, ಆದರೆ ಪ್ರತಿಭಟಿಸುವವರನ್ನು ಈ ಸಮಾಜ ತುಳಿಯಲಿಕ್ಕೆ ನೋಡುತ್ತದೆ. ಬದುಕುವ ಹೋರಾಟಕ್ಕೆ ತನ್ನನ್ನು ತಾನು ತೆತ್ತುಕೊಳ್ಳಲಾಗದ ಆ ಹೆಣ್ಣು ಆತ್ಮಹತ್ಯೆಗೆ ಶರಣಾಗಿದ್ದು ನಿಜಕ್ಕೂ ವಿಷಾದದ ಸಂಗತಿ.

ಹಾಗೆಯೇ ಸಿರಿ ಪಾಡ್ದನಗಳಲ್ಲಿ ಸಿರಿಯು ಪ್ರತಿಭಟನೆ ಎನ್ನುವಂತೆ ತನ್ನ ಲಂಪಟ ಗಂಡನನ್ನು ಬಿಟ್ಟು ಕೊಡರಾಳ್ವನೆಂಬ ಪುರುಷನನ್ನು ಕೂಡುತ್ತಾಳೆ. ಸಿರಿಯ ಕುರಿತಾದ ಪಾಡ್ದನಗಳು ಈಗಲೂ ಹಾಡಲ್ಪಡುತ್ತವೆ. ನಮ್ಮೆಲ್ಲರಿಗೂ ಗೊತ್ತಿರುವ ಕೆರೆಗೆ ಹಾರದ ಭಾಗೀರಥಿ ತನ್ನನ್ನು ಹಾರವಾಗಿ ಕೊಡುವವರ ಬಗ್ಗೆ ಮೌನ ತಾಳಿದರೆ, ಇಂಥದ್ದೇ ಇನ್ನೊಂದು ಕೆರೆಗೆ ಹಾರವಾಗಿ ಹೋಗುವ ಕಥೆಯ ನಾಗಮ್ಮ ತನ್ನನ್ನು ಈ ಸ್ಥಿತಿಗೆ ತಂದ ಗಂಡನ ಮತ್ತು ತವರು ಮನೆಯವರನ್ನು ಶಪಿಸಿ ಹಾರವಾಗುತ್ತಾಳೆ. ತನಗೆ ಮೋಸ ಮಾಡಿದ ಮೈಸೂರು ಮಹಾರಾಜರಿಗೆ 'ಮಾಲಿಂಗಿ ಮಡುವಾಗಿ, ತಲಕಾಡು ಮರಳಾಗಿ ಮೈಸೂರು ಮಹಾರಾಜರಿಗೆ ಮಕ್ಕಳಾಗದಿರಲಿ' ಎಂದು ಶಾಪ ಹಾಕಿ, ಆ ಶಾಪ ಮೈಸೂರು ಮಹಾರಾಜರನ್ನು ಬಹುಕಾಲ ಹಿಂಬಾಲಿಸಿದ್ದನ್ನು ತಲಕಾಡಿನ ಕಥೆ ಹೇಳಿದರೆ, ರಾಜರ ಪಾಳೆಗಾರರ ಹೆಣ್ಣುಬಾಕತನವನ್ನು, ದುರಾಡಳಿತವನ್ನು ಅನೇಕ ಲಾವಣಿಗಳು ಹೇಳುತ್ತವೆ. ಕಿತ್ತೂರು ಚೆನ್ನಮ್ಮನ ಸೊಸೆಯನ್ನು ಕುರಿತ ಲಾವಣಿಯೊಂದರಲ್ಲಿ ಹೆಣ್ಣಿನ ಇಚ್ಛಾಶಕ್ತಿಯ ಉತ್ತಮಿಕೆಗೆ ಹೆಗ್ಗುರುತಾಗುತ್ತದೆ. ಹೆಣ್ಣಿನ ಬೇರೆ ಬೇರೆ ಸ್ಥಿತಿಗಳನ್ನು ಹೇಳುವ ಇಂಥಾ ಕಥೆ-ಕಾವ್ಯಗಳು ಅಸಂಖ್ಯವಾಗಿದ್ದು ಸ್ತ್ರೀಯರು ವ್ಯವಸ್ಥೆಯನ್ನು

ಪ್ರಶ್ನಿಸುತ್ತಾ, ದೂಷಿಸುತ್ತಾ, ಶಾಪ ಹಾಕಿ, ತಮ್ಮ ದುಃಸ್ಥಿತಿಗೆ ತಾವೇ ಪರಿಹಾರಗಳನ್ನು ಕಂಡುಕೊಂಡಿದ್ದಾರೆ. ಹಾಗೆ ನೋಡಿದರೆ ಶಾಪಗಳು ಇಂಥಾ ಸ್ತ್ರೀಯರಿಗೆ ಆದ ಅನ್ಯಾಯವನ್ನು ಸಾವಿರಾರು ವರ್ಷಗಳು ನೆನಪಿಟ್ಟುಕೊಳ್ಳುವಲ್ಲಿ ಬಹುಮಹತ್ವದ ಪಾತ್ರವನ್ನೇ ನಿರ್ವಹಿಸಿದೆ. ಶ್ರಮ ಸಂಸ್ಕೃತಿಯ ಬಹುದೊಡ್ಡ ಭಾಗವಾದ ಸ್ತ್ರೀಯರನ್ನು ದಾಖಲಾದ ಚರಿತ್ರೆಯಲ್ಲಿ ಕಡೆಗಣಿಸಲಾಗಿದೆ. ಅವಳನ್ನು ಸೋಲುವ ಗುಣಾಲಂಕರಗಳ ಮೂಲಕವೇ ನೋಡಲಾಗಿದೆ. ಸೋತವರಿಗೂ ಒಂದು ಚರಿತ್ರೆ ಇದ್ದೇ ಇದೆ. ಆ ಚರಿತ್ರೆಯ ಮೂಲೆ ಮೂಡುಕುಗಳಲ್ಲಿ ನೋವಿನ ಛಾಯೆಯಲ್ಲದ್ದಿದ, ಒಳಸುಳಿಗಳನ್ನು ಹುಟ್ಟುಹಾಕಬಲ್ಲ ಅನೇಕ ಸಂಗತಿಗಳಿವೆ. ಪ್ರಜ್ಞೆಯ ಆಳದಲ್ಲಿ ತನ್ನ ಅಸ್ತಿತ್ವಕ್ಕಾಗಿ ನಡೆದ ಘರ್ಷಣೆಗಳಲ್ಲಿ ತನ್ನದೇ ಆದ ಚರಿತ್ರೆಯನ್ನು ಕಟ್ಟಿಕೊಳ್ಳುವ ಮಹತ್ವದ ಹೆಜ್ಜೆಗಳನ್ನು ಯಾವತ್ತಿನಿಂದಲೂ ಮಾಡುತ್ತಲೇ ಇದ್ದಾಳೆ. ತನ್ನ ಸೋಲು ಮತ್ತು ಪ್ರತಿಭಟನೆಯ ಝಲಕುಗಳನ್ನು ಮುಂದಿನ ತಲೆಮಾರುಗಳಿಗೆ ತಲುಪಿಸುವ ಕೆಲಸವನ್ನು ಮಾಡುವ ಮೂಲಕ ಇದನ್ನು ಸಾಧಿಸಲು ಎಲ್ಲ ರೀತಿಯ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾಳೆ. ಆ ನೆನಪುಗಳನ್ನು ಕಥೆಗಳಲ್ಲಿ, ಕವಿತೆಗಳಲ್ಲಿ ದಾಖಲು ಮಾಡುತ್ತಾ. ಸಮಾಜ ಹೇಳುವ ಮೌಲ್ಯಗಳಿಗಿಂತ ಭಿನ್ನವಾದ, ಮನುಷ್ಯ ಸಹಜ ದಾರಿಯನ್ನು ತುಳಿದು ಸ್ವಾತಂತ್ರ್ಯದ ಹೆಜ್ಜೆಗಳನ್ನು ಮೂಡಿಸಿದ್ದಾಳೆ.

'ಮಾತೃಮೂಲ ಸಂಸ್ಕೃತಿ'ಯಿಂದ 'ಪಿತೃಸಂಸ್ಕೃತಿ'ಯ ಕಡೆಗೆ ಜಾರಿ, ಸಂಸ್ಕೃತಿಯನ್ನು ರಕ್ಷಿಸುವ ನೆಪವೊಡ್ಡಿ ಸರಿ–ತಪ್ಪುಗಳನ್ನು ಹೇರುತ್ತಾ ಹೆಣ್ಣನ್ನು ಕಟ್ಟಿಹಾಕುವ ಪ್ರಯತ್ನದಲ್ಲಿ ಈ ಸಮಾಜ ಸದಾಕಾಲಕ್ಕೂ ಸರ್ವಸಿದ್ಧವಾಗೇ ಇರುತ್ತದೆ. ಪುರುಷ ಹೇಳುವ ಪವಿತ್ರಾಪವಿತ್ರದ ಪ್ರಶ್ನೆಯಿಂದಾಗಿ ಹೆಣ್ಣು ದ್ಯೂತಕ್ಕೆ, ಅಗ್ನಿಗೆ, ಶಾಪಕ್ಕೆ ಒಳಗಾಗುತ್ತಲೇ ಬಂದಿದ್ದಾಳೆ. ನೈತಿಕತೆ ಎನ್ನುವ ಸಂಕೋಲೆಗಳಲ್ಲಿ ಅವಳನ್ನು ಹಿಡಿದಿಟ್ಟು ನಿಯಮಗಳಲ್ಲಿ ಬದುಕುವಂತೆ ಮಾಡಿದೆ. ಋಗ್ವೇದದಲ್ಲಿ ಹೆಣ್ಣು ಪ್ರತಿ ಋತುದರ್ಶನದ ನಂತರ ಹೊಸಹೆಣ್ಣಾಗುವ ಉಲ್ಲೇಖವಿದೆ. ಇದೇ ಮುಂದುವರೆದಂತೆ ಮಹಾಭಾರತದಲ್ಲಿ ಮತ್ಸ್ಯಗಂಧಿಗೆ ಪರಾಶರ ಮತ್ತೆ ಕನ್ಯತ್ವದ ವರವನ್ನು ದಯಪಾಲಿಸುತ್ತಾನೆ. ಅಲ್ಲಿ 'ಮತ್ಸ್ಯಗಂಧಿ' 'ಯೋಜನಗಂಧಿ'ಯಾಗಿ ಬದಲಾಗುತ್ತಾಳೆ. ಮಳೆಗಾಲದಲ್ಲಿ ಭೂಮಿ ಮತ್ತೆ ಹೊಸದಾಗುವ ಹಾಗೆ ಮೊದಲಗಿತ್ತಿಯಾಗಿ ಮತ್ತೆ ಕನ್ಯೆಯಾಗುತ್ತಾಳೆ. ಇದು ಸೋಜಿಗ! ಅವಳ ಒಳಗಿನ ಈ ಶಕ್ತಿಗೆ ಚೌಕಟ್ಟಿನಲ್ಲಿ ಬಂಧಿಸುವ ಕೆಲಸ ಋಗ್ವೇದದ ನಂತರ ಕಾಲದಲ್ಲಾಯಿತು. ತಾಯ್ತನದ ಆಧಾರದ ಮೇಲೆ ಆಕೆಯನ್ನು ಆಸ್ತಿಯನ್ನಾಗಿಯೂ, ಬರಿಯ ಕ್ಷೇತ್ರವನ್ನಾಗಿಯೂ ನೋಡತೊಡಗಿದರು. ವೇದಕಾಲೀನ ಮಹಿಳೆಯರಿಗೆ ಇದ್ದ ಸ್ವಾತಂತ್ರ್ಯ ನಂತರಕಾಲದಲ್ಲಿ ಕಸಿಯಲಾಯಿತು. ಅಲ್ಲಿ ಬರುವ ಹೆಣ್ಣುಮಕ್ಕಳು ಇಬ್ಬರು ಪುರುಷರನ್ನು ಮದುವೆಯಾಗಬಹುದಿತ್ತು. (ಉಲ್ಲೇಖ ಘೋಷ – ವಿಮೆನ್ ಇನ್ ವೇದಿಕ್ ಏಜ್– ಬನಾರಸ್ ಯೂನಿವರ್ಸಿಟಿ) ಅವರು ಮಹಾ ಜ್ಞಾನಿಗಳಾಗಿದ್ದರು, ಪುರುಷನ ಸಮಕ್ಕೂ ನಿಂತು ವಾದ ಮಾಡಬಲ್ಲವರಾಗಿದ್ದರು. ಆದರೆ ಅವರನ್ನು ಮಾದರಿಯನ್ನಾಗಿ ಈ ಸಮಾಜ ತೆಗೆದುಕೊಳ್ಳಲಿಲ್ಲ. ಪುರುಷನ ನೆರಳಲ್ಲಿ ಬದುಕುವ ಅರಿವಿನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳದ ಹೆಣ್ಣುಗಳು ಮಾತ್ರ ಈ ಸಮಾಜಕ್ಕೆ ಯಾವತ್ತೂ ಪ್ರಿಯರೇ.

ಜಗತ್ತಿನ ಎಲ್ಲಾ ಜ್ಞಾನಶಾಖೆಗಳೂ ಹೆಣ್ಣಿನ ಬೆರಗಿನ ಒಡಲಿನ ಬಗೆಗೆ ಮಾತಾಡುತ್ತವೆ. ಮನುಷ್ಯನ ಹುಟ್ಟು ಸಾವಿನ ಮಧ್ಯದ ಬದುಕು ನಿಗೂಢವಾದ ಸಂಗತಿಗಳ ಜೊತೆ

ತಳುಕು ಹಾಕಿಕೊಂಡ ಸೃಷ್ಟಿಮೂಲ ಸಂಗತಿಗಳನ್ನು ಬೆದಕುತ್ತಾ ಹೋದಂತೆಲ್ಲಾ ಹೆಣ್ಣು ನಿಗೂಢವಾಗುತ್ತಾ ಹೋಗುತ್ತಾಳೆ. ಸೃಷ್ಟಿಸುವ ಶಕ್ತಿ ಇರುವುದು ಹೆಣ್ಣು ಮತ್ತು ಭೂಮಿಗೆ ಮಾತ್ರ. ದೇವೀ ಪುರಾಣದ ತಾಯಿಗೆ ಮಕ್ಕಳ ಹಸಿವಿನ ಕಡೆಗೆ ಮಾತ್ರ ಗಮನ ಇಲ್ಲ, ಅವಳ ಎಲ್ಲ ಗಮನ ಆ ಮಕ್ಕಳು ತಿಂದೆಸೆವ ಹಣ್ಣುಗಳಲ್ಲಿ ಅಡಕವಾಗಿರುವ ಮರಗಳು ಮತ್ತು ಅದಲ್ಲಿ ಬಿಡುವ ಕೋಟ್ಯಾಂತರ ಹಣ್ಣುಗಳು ಮತ್ತು ಅದರಲ್ಲಿನ ಮರಗಳು, ಅವು ತೀರಿಸಬಹುದಾದ ಕೋಟ್ಯಾಂತರ ಜೀವಿಗಳ ಹಸಿವು ಅವಳ ಕಣ್ಣಿಗೆ ಕಾಣುತ್ತಾ ಹೋಗುತ್ತದೆ. ಪಾಲಿಸುವ, ಲಾಲಿಸುವ, ಆಲಿಸುವ ಹೆಣ್ಣಿನ ಇಂಥಾ ದೊಡ್ಡ ಶಕ್ತಿ ಸಮಾಜಕ್ಕೆ ಕಾಣದಾಗದೇ ಹೋದದ್ದು ದುರಂತ. ಕಾಣುವ ಒಡಲಿಗಿಂತ ಕಾಣದ ವೀರ್ಯದ ಕಡೆಗೆ ನೋಟದ ಹಂಗನ್ನು ಇಟ್ಟುಕೊಂಡಿದ್ದು ಇದೇ ಕಾರಣಕ್ಕೆ. ನೆಲದ ಮೇಲೆ ನಿಂತು ಅಮೂರ್ತವಾದ ಆಕಾಶದ ಸೆಳೆತಕ್ಕೆ ಒಳಗಾಗಿದ್ದು ಮತ್ತೊಂದು ಹಂತದ ಬೆಳವಣಿಗೆ.

ಪುರಾಣಗಳು ಅನೇಕ ಕಾರಣಕ್ಕೆ ಇಂಥಾ ಕಥೆಗಳನ್ನು, ಮಾದರಿಗಳನ್ನು ಮತ್ತೆ ಮತ್ತೆ ನಿರೂಪಿಸುತ್ತಾ ಬಂದಿವೆ. ಅತ್ಯಂತ ಸೂಕ್ಷ್ಮರಾದ ಕವಿಗಳೂ ತಮ್ಮ ಕಾವ್ಯದಲ್ಲಿ ಇಂಥದ್ದನ್ನು ತರಲು ಯತ್ನಿಸಿದ್ದಾರೆ. ಬಂಧುವರ್ಮನ ಪಾಂಡು–ಮಾದ್ರಿ ಪ್ರಸಂಗವು ಹೆಣ್ಣು ತಾಯಾದ ಮಾತ್ರಕ್ಕೆ ಅವಳ ಅಪೇಕ್ಷೆಗಳನ್ನು ಕಳಕೊಳ್ಳಬೇಕು ಎನ್ನುವುದು ಸರಿಯಾ? ಎಂದು ಪ್ರಶ್ನಿಸುತ್ತದೆ. ಸಲ್ಲೇಖನ ವ್ರತ ಸ್ವೀಕರಿಸಿದ ಪಾಂಡು, ತನ್ನ ಪತ್ನಿಯರಿಬ್ಬರನ್ನು ಕರೆದು 'ಮಕ್ಕಳನ್ನು ನೋಡಿಕೊಂಡು ನೀವಿರಿ' ಎಂದಾಗ, ಆಗ ಮಾದ್ರಿಯ ಮಾತು ಮಹತ್ವದ್ದು. ಗಂಡನ ಮಾತನ್ನು ತಿರಸ್ಕರಿಸುತ್ತಾ 'ನಾನು ಬಾಲ್ಯಕಾಲದಲ್ಲಿ ತಂದೆಯ ಮನೆಯಲ್ಲಿ ಆನಂದವಾಗಿದ್ದೆ, ಯೌವ್ವನದಲ್ಲಿ ಗಂಡನ ಆಸರೆಗೆ ಬಂದು ಆತನ ಜೊತೆ ಸುಖವನ್ನು ಅನುಭವಿಸುವ ಆಸೆಯಲ್ಲಿದ್ದೆ, ಅಷ್ಟರಲ್ಲಿ ಈ ಮಕ್ಕಳು ಹೊಟ್ಟೆಗೆ ಬಂದು ನನ್ನನ್ನು ನನ್ನ ಗಂಡನಿಂದ ದೂರ ಮಾಡಿದರು. ಹುಟ್ಟುತ್ತಲೆ ನನ್ನ ಯೌವ್ವನವನ್ನೂ ನನ್ನ ಸಮಯವನ್ನು ಎಲ್ಲವನ್ನೂ ಕಸಿದುಕೊಂಡರು. ಈ ಮಕ್ಕಳು ನಾಳೆ ಮದುವೆಯಾಗಿ ತಮ್ಮ ಹೆಂಡತಿಯರ ಜೊತೆ ಹೊರಟು ಹೋಗುತ್ತಾರೆ, ಇಂಥಾ ಮಕ್ಕಳಿಗಾಗಿ ನನ್ನ ಇಚ್ಛೆಯನ್ನು ನಾನು ಹೇಗೆ ಕೈ ಬಿಡಲಿ? ನಾನು ನನ್ನ ಗಂಡನ ಜೊತೆ ಹೋಗುವವಳೇ ಸರಿ' ಎನ್ನುತ್ತಾಳೆ. ನಂತರ ಅವಳು ಹೇಳುವ ಮಾತುಗಳು 'ಗಂಡನಿಲ್ಲದ ಹೆಣ್ಣಿನ ಬದುಕು ರಸ್ತೆಯ ಬದಿಯಲ್ಲಿ ಫಲಬಿಟ್ಟ ಮರ ಯಾರು ಬೇಕಾದರೂ ಕಲ್ಲು ಹೊಡೆಯಬಹುದು' ಎಂದು. ಇಲ್ಲಿ ನನಗೆ ತುಂಬಾ ಮುಖ್ಯ ಎನ್ನಿಸುವುದು ಮಾತೃತ್ವದ ಸುತ್ತಾ ಹರಡಿರುವ ಭಾವುಕ ಪರಿಧಿಯನ್ನು ಮಾದ್ರಿ ಹರಿದು ಹಾಕುತ್ತಾಳೆ. ಆದರೆ ಕಲ್ಲಿಂದ ತಪ್ಪಿಸಿಕೊಳ್ಳಲು ಸತಿ ಹೋಗುವ ಇಂಥಾ ಮಾದರಿಗಳನ್ನು ಮಾತ್ರ ಸಮಾಜ ವೈಭವೀಕರಿಸುತ್ತದೆ.

'ಪಾವಿತ್ರ್ಯ' ಎನ್ನುವುದು ಎಲ್ಲಿದೆ? ಎನ್ನುವ ಪ್ರಶ್ನೆ ಕೂಡಾ ಉತ್ತರಿಸಲಿಕ್ಕಾಗದಷ್ಟು ಗೋಜಲಿನ ಸಂಗತಿಯೇ. ರೇಣುಕೆ ತನ್ನ ಪಾವಿತ್ರ್ಯದ ಬಲದಿಂದಲೇ ನದಿಯ ತಡಿಯ ಹಸಿಮಣ್ಣಿನಿಂದ ಕೊಡವನ್ನು ಮಾಡಿ ಆ ಕೊಡದಲ್ಲಿ ನೀರನ್ನು ತರುತ್ತಿದ್ದಳು. ಒಂದು ದಿನ ನದಿ ತಟದಲ್ಲಿ ಶೃಂಗಾರದ ದೃಶ್ಯವನ್ನು ನೋಡಿ ಮೋಹಗೊಳ್ಳುತ್ತಾಳೆ. ಹಾಗೆ ಮೋಹಗೊಂಡ ಅವಳನ್ನು ಗಂಡ ಜಮದಗ್ನಿ ಕೊಲ್ಲುವಂತೆ ಆದೇಶಿಸುತ್ತಾನೆ. ಅಂಥಾ

ದೃಶ್ಯವನ್ನು ಕಂಡ ಮಾತ್ರಕ್ಕೆ, ಮನಸ್ಸು ವಿಚಲಿತವಾದ ಮಾತ್ರಕ್ಕೆ ಅವಳನ್ನು ಕೊಲೆ ಮಾಡಬೇಕು ಎನ್ನುವ ಕ್ರೂರ ನಿಲುವಿಗೆ ಬರುವುದು ನಾಗರಿಕ ಸಮಾಜದ ದುರಂತ. ಮನುಷ್ಯ ಸಹಜವಾದ ಬಯಕೆಗಳಿಗೂ, ನಾವೇ ರೂಪಿಸಿಕೊಂಡ ಪರಂಪರೆಗೂ ಮಧ್ಯೆ ಇಂಥಾದ್ದೊಂದು ತಿಕ್ಕಾಟ ಇದ್ದೇ ಇದೆ. ಈ ಸಂಘರ್ಷವನ್ನು ಹೆಣ್ಣಾಗಿಯೇ ಎದುರಿಸುವ ಸವಾಲು ನಮ್ಮ ಮುಂದಿದೆ.

**ಕವಿತೆಯೇ ಏಕೆ?**

ಹೆಣ್ಣು ಎಂದರೆ ದೇಹ ಎಂದೇ ಭಾವಿಸಲಾಗುತ್ತಿರುವ ಹೊತ್ತಿನಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುವುದು ಹೇಗೆ? ಎನ್ನುವ ಗೊಂದಲಕ್ಕೆ ಸಹಜವಾಗೇ ಗುರಿಯಾಗಿದ್ದಾಳೆ. ವಿದ್ಯಾಭ್ಯಾಸ ಅವಳನ್ನು ಜಾಗೃತಗೊಳಿಸಿ, ತನ್ನ ಒಳಗಿನ ಶಕ್ತಿಗೆ ಒತ್ತಾಸೆಯನ್ನು ನೀಡುತ್ತಿದೆ. ಇದು ಸಹಜವಾಗೇ ಪರಂಪರೆ ಹೇಳಿಕೊಟ್ಟ ಹೆಣ್ಣು ಮತ್ತು ದೇಹಭಾಷೆಯ ಮೀಮಾಂಸೆಯು ಬದಲಾಗಬೇಕಿರುವ ಜರೂರನ್ನು ಹೇಳುತ್ತಿದೆ. ಹೆಣ್ಣಿನ ದೇಹವನ್ನು ಹಿಂದಿನಿಂದಲೂ ಪ್ರಚೋದಕ ಎಂದಷ್ಟೇ ಗುರುತಿಸಲಾಗಿದೆ. ನಮ್ಮ ಪ್ರಾಚೀನ ಕವಿಗಳೆಲ್ಲರೂ ಹೆಣ್ಣನ್ನು ಕಾಮದ ಸಂಕೇತವೆಂದೇ ವರ್ಣಿಸಿದ್ದಾರೆ. ಶೃಂಗಾರ ಎಂದರೆ ಹೆಣ್ಣನ್ನು ಅವಳ ಅವಯವಗಳ ಬಿಡಿಬಿಡಿ ವಿವರಗಳ ಜೊತೆ ವರ್ಣಿಸುವುದೇ ಆಗಿರುತ್ತದೆ. ಆದರೆ ಬುದ್ಧಿಯ ವಿಷಯ ಬಂದಾಗ ಹೆಣ್ಣನ್ನು ಚಿಂತಿಸಬಾರದ ಸ್ಥಿತಿಯಲ್ಲಿ ಮಾತ್ರ ಈ ಸಮಾಜ ಸ್ವೀಕರಿಸಿದೆ. ಎಷ್ಟೇ ಸರಿಯಾಗಿ ಯೋಚನೆ ಮಾಡುತ್ತಿದ್ದಾಗಲೂ ಒಂದು ಮಾತು ಗಂಡನ್ನು ಕೇಳಬೇಕು, ಯಾಕೆಂದರೆ ಗಂಡಿಗೆ ಲೋಕಜ್ಞಾನ ಅಧಿಕಾರಯುತವಾಗಿ ದತ್ತವಾಗಿದೆ ಎಂದೇ ನಂಬಲಾಗುತ್ತದೆ. ಆದರೆ ಹೆಣ್ಣಿಗೆ ಯಾವ ಅಧಿಕಾರವೂ ಇಲ್ಲ, ಇರುವುದೆಲ್ಲಾ ಈ ಸಮಾಜ ಕೊಟ್ಟ ಜವಾಬ್ದಾರಿ ಮತ್ತು ಆ ಮೂಲಕ ಮಾತ್ರವೇ ಕಟ್ಟಿಕೊಳ್ಳಬೇಕಿರುವ ಬದುಕು ಮಾತ್ರ. ಇಂಥಾ ನಂಬಿಕೆಗಳು ಹೆಣ್ಣನ್ನು ಘಾಸಿಗೊಳಿಸಿದ್ದು ನಿಜ. ಭಾವನಾತ್ಮಕ ಮೇಲಾಟದಿಂದ ಸ್ತ್ರೀಸಹಜವಾದ ಪಾಲನೆಯ ಶಕ್ತಿಯನ್ನು ಹಾಗೂ ಬೌದ್ಧಿಕ ನಿಲುವುಗಳನ್ನು ಸಮತೂಕದಲ್ಲಿ ಗ್ರಹಿಸಲಿಕ್ಕಾಗದೇ ಹೋಗಿದೆ. ಇದು ನೋವಿನ ಸಂಗತಿಯೂ ಹೌದು. ಕಲಾತ್ಮಕತೆಯ ಎತ್ತರಗಳಲ್ಲಿ ಮತ್ತು ಅತ್ಯಂತ ಮೊನಚಾಗಿ ಇಂಥಾ ಸಂಗತಿಗಳನ್ನು ಈ ಸಮಾಜಕ್ಕೆ ಹೇಳಬೇಕಾದಾಗ ಧ್ವನಿ ಮುಖ್ಯವಾಗುತ್ತದೆ. ಇಂಥಾ ಧ್ವನಿ ತರಂಗೋಪಾದಿಯಲ್ಲಿ ಸಮಾಜವನ್ನು ಮುಟ್ಟಬೇಕು ಎನ್ನುವ ಉದ್ದೇಶ ಪ್ರಾಮಾಣಿಕವಾಗಿದ್ದಾಗ ಕವಿತೆ ಕೈ ಹಿಡಿಯುತ್ತದೆ. ಪದೇ ಪದೇ ಕೊಚ್ಚಿ ಹಾಕಿದರೂ ಹೆಣ್ಣಿನ ಅಂತಃಸತ್ವವನ್ನು ಎತ್ತಿ ಹಿಡಿಯುವಂತೆ ಪ್ರಚೋದಿಸುತ್ತಾ ಅವಳ ದೇಹ ಮತ್ತು ಬುದ್ಧಿಯಲ್ಲಿನ ಕಲಾತ್ಮಕತೆಯ ಎತ್ತರವನ್ನು ಸಾಧಿಸುವಲ್ಲಿ ಕೈದೀವಿಗೆಯಾಗಿ ಕತ್ತಲಲ್ಲೂ ದಾರಿ ತೋರುತ್ತದೆ. ಹೆಣ್ಣಿನ ಚರಿತ್ರೆಯಲ್ಲಿ ಕಾಣದ ನೋವು ಅವಮಾನಗಳಿಂದ ತುಂಬಿದ್ದರೂ, ಅವಳು ಸಾಧಿಸಿರುವ ಮನುಷ್ಯ ಘನತೆಯ ಎತ್ತರಗಳು ಅವಳನ್ನು ತೀವ್ರವಾಗಿ ಮಾತಾಡಲು ಪ್ರೇರೇಪಿಸುತ್ತಿರುತ್ತದೆ. ಘಾತಕಾರಿ ಸಂಗತಿಗಳಿಗೆ ಇಂಥಾ ತೀವ್ರತೆಯೆ ಉತ್ತರವಾಗಿ ಕೂಡಾ ಆಕೆಗೆ ಕಂಡಿದೆ. ಪದಗಳಲ್ಲಿ ಹ್ರಸ್ವವಾಗಿ ಪರಿಣಾಮದಲ್ಲಿ ದೀರ್ಘವಾಗುವ ಕಾವ್ಯ ಸಾಹಿತ್ಯದ ಎಲ್ಲ ಮಾಧ್ಯಮಗಳಿಗಿಂತ ಹೆಚ್ಚು ತೀವ್ರ ಮೊನಚಾಗಿರುವುದರಿಂದ ಹೆಣ್ಣಿಗೆ ಕಾವ್ಯದ ಆಯ್ಕೆ ಖಂಡಿತಾ ಆಕಸ್ಮಿಕವಲ್ಲ.

ಕನ್ನಡ ಮಹಿಳಾ ಕಾವ್ಯದ ಮೊದಲ ಹಂತದಲ್ಲಿ ಅಕ್ಷರ ಜ್ಞಾನ, ಎರಡನೆಯ ಹಂತರಲ್ಲಿ ಅರಿವು ಮತ್ತು ಮೂರನೆಯ ಹಂತದಲ್ಲಿ ಆತ್ಮ ಪ್ರತ್ಯಯವನ್ನೊಳಗೊಂಡ ದೊಡ್ಡ ಪರಿವರ್ತನೆಯ ನೆಲೆಗಳನ್ನು ಕಾಣುತ್ತೇವೆ. ಅದು ಸ್ವ ಮತ್ತು ಲೋಕ ದೃಷ್ಟಿಗಳೆರಡನ್ನೂ ಒಳಗೊಂಡಂತೆ ತಾನೂ ಮಾತಾಡುತ್ತೇನೆ ಎನ್ನುವ ಆತ್ಮವಿಶ್ವಾಸ ಚಿಮ್ಮುವ ಉತ್ಸಾಹ. ಮಾತನಾಡುವುದು ಎಂದರೆ ಅದೊಂದು ಅಸಾಧಾರಣ ಕ್ರಿಯೆ. ಹೆಣ್ಣು – ಯಾರು ಎಷ್ಟೇ ಹೊಸಗಿ ಹಾಕಿದರೂ, ಮಾತುಗಳಿಗೆ ಕಡಿವಾಣ ಹಾಕಿದರೂ, ತನ್ನೊಳಗಿನ ಆಸೆಗಳಿಗೆ ಕಥೆ–ಕವಿತೆಗಳಲ್ಲಿ ಅನಾದಿಕಾಲದಿಂದಲೂ ಜೀವದಾಯಿನಿಯಾಗಿ ಮೈದುಂಬಿದ್ದಾಳೆ. ಸೃಜನಶೀಲತೆ ಎನ್ನುವುದು ಅವಳಿಗೆ ಲೋಕವೊಂದರ ಸೃಷ್ಟಿ, ದೇಹಸತ್ವದ ದೃಷ್ಟಿ, ದಕ್ಕಬೇಕಿರುವ ಸಮಷ್ಟಿ. ಒಂದು ಮಳೆಗೆ ಅರಳಿಕೊಳ್ಳುವ ಭೂಮಿ, ಅದರ ಮೈಮೇಲೆ ತಾನೇ ತಾನಾಗಿ ಜೀವ ತಳೆವ ಕೋಟಿಕೋಟಿ ಸಂತತಿ, ಹೀಗೆ ಹುಟ್ಟುವೆಲ್ಲದಕ್ಕೂ ಸ್ತ್ರೀತ್ವವೇ ಸಾಕ್ಷಿ. ಕಲೆಯ ಉಗಮ ಕೂಡಾ ಹೀಗೆ. ಸರಸ್ವತಿ ಪಾರ್ವತಿಯರು ವಿದ್ಯೆ ಮತ್ತು ಕಲೆಗಳ ಅಧಿದೇವತೆಯರು. ಆದರೆ ವ್ಯಾಸ ತನ್ನ ಕಾವ್ಯರಚನೆಯ ಹೊತ್ತಿಗೆ ಗಣಪತಿಯನ್ನು ಆಹ್ವಾನ ಮಾಡುತ್ತಾನೆ. ವಿದ್ಯೆಯ ಅಧಿದೇವತೆಯಾದ ಸರಸ್ವತಿಯನ್ನಲ್ಲ. ಸರಸ್ವತಿಯೇ ಕಾವ್ಯ ರಚನೆಯ ಹೊತ್ತಲ್ಲಿ ವ್ಯಾಸನ ಎದುರು ಕುಳಿತಿದ್ದರೆ ಅವಳು ಕೇಳುವ ಪ್ರಶ್ನೆಗಳಿಗೆ ವ್ಯಾಸನ ಹತ್ತಿರವೂ ಉತ್ತರಗಳಿರುತ್ತಿರಲಿಲ್ಲ. ಇದು ಗಾಢವಾಗಿ ಗೊತ್ತಿದ್ದರಿಂದಲೇ ಜಾನಪದ ಕಥೆಗಳನ್ನು 'ಅಜ್ಜಿಯ ಕಥೆಗಳು' ಎಂದಿದ್ದಾರೆಯೇ ಹೊರತು ಅಜ್ಜನ ಕಥೆಗಳೆಂದಲ್ಲ–ಅಂತೆಯೇ 'ಗರತಿಯ ಹಾಡುಗಳು' ಕೂಡಾ. ಇಡೀ ದೈನಿಕವನ್ನೇ ಕಲಾತ್ಮಕವಾಗಿಸಿಕೊಳ್ಳುವ ಆಕೆಯ ಬೆರಳಿಂದ ಜಾರುವ ರಂಗೋಲಿ ಪುಡಿಯಿಂದ ಮೊದಲುಗೊಂಡು ದೇಹ ಮತ್ತು ವ್ಯಕ್ತಿತ್ವವನ್ನು ಕಲಾತ್ಮಕವಾಗಿ ಅಭಿವ್ಯಕ್ತಿಗೊಳಿಸಿಕೊಂಡಿದ್ದಾಳೆ. ಅವಳ ಈ ಮೂಲಭೂತ ಗುಣವೇ ಮಾತುಗಾರಿಕೆಗೂ ಇದೆ. ಗೆರೆಕೆಡದ ಹಾಗೆ ರಂಗೋಲಿ ಬರೆದಂತೆ ತನ್ನ ಬದುಕನ್ನು ಸುತ್ತಲಿನ ಸಂಬಂಧವನ್ನೂ ಕಾಪಿಟ್ಟುಕೊಂಡೆ ಇರುವ ಪರಿಮಿತಿಯಲ್ಲೇ ಅರಳುವ ಚೈತನ್ಯವನ್ನು ತುಂಬಿಕೊಂಡಿದ್ದಾಳೆ. ಅರಿವಿನ ಪರಿಧಿಯನ್ನು ಕಾಲಮಾನಗಳಿಗೆ ಅನುನುಗುಣವಾಗಿ, ತನ್ನ ಅಭಿವ್ಯಕ್ತಿಯ ಮಾಧ್ಯಮಗಳನ್ನೂ ವಿಸ್ತರಿಸಿಕೊಂಡಿದ್ದಾಳೆ. ಸಾಮುದಾಯಿಕ ಪ್ರಜ್ಞೆಯ ಮೂಲಕವೇ 'ಸ್ವ'ದ ಕಡೆಗೆ ಚಲಿಸುವ, 'ಸ್ವ'ದಿಂದಲೇ ಸಮುದಾಯವನ್ನು ಸಂಧಿಸುವ ವಿಲಕ್ಷಣ ಚಮತ್ಕಾರವೊಂದು ಸಾಹಿತ್ಯದಲ್ಲಿ ಸದಾಕಾಲಕ್ಕೂ ನಡೆಯುತ್ತಲೇ ಬಂದಿದೆ. ಹೀಗಾಗೇ ಅವಳಿಗೂ ಕಲಾಮಾಧ್ಯಮದಲ್ಲಿ ಮಾತಾಡುವುದು ಎಂದರೆ ತಾನಾಗಿಯೂ ತಾನಾಗದೆ, ಒಂದು ಇಡೀ ಸಮುದಾಯವನ್ನು ತನ್ನೊಂದಿಗೆ ಕೊಂಡೊಯ್ಯಬಲ್ಲ ಅಸಾಮಾನ್ಯವಾಗುವ ಮಾರ್ಪಾಡು.

ಮೊದಲ ಹಂತದ ಲೇಖಕಿಯರಿಗೆ ಕಾವ್ಯ ಕಾಡದಿರಲು ಒಂದು ಕಾರಣ ಎಂದರೆ ಬರೆಯುವ ತನ್ನ ಶಕ್ತಿಯನ್ನು ಲೋಕದ ಎದುರು ನಿರೂಪಿಸುವ ಜರೂರತ್ತು, ಬರೆಯಬಲ್ಲ ಸಾಧ್ಯತೆಗಳ ಹುಡುಕಾಟದಲ್ಲಿ ಗದ್ಯದ ಕಡೆಗೆ ವಾಲಿದ್ದು ಹೆಚ್ಚು. ಮುಂದಿನ ದಿನಗಳಲ್ಲಿ ಸ್ವ ಅರಿವಿನ ಮೂಲಕ ಹೆಣ್ತನವನ್ನು ಸಾಮಾಜಿಕತೆಯ ಜೊತೆ ಬೆರೆಸುವ ಸಂಕೀರ್ಣವಾದ ಪ್ರಯತ್ನದ ಕಡೆಗೆ ವಾಲಿದಂತೆಲ್ಲಾ ಕನ್ನಡ ಮಹಿಳಾ ಕಾವ್ಯ 'ಅವಳ' ಮಾತುಗಳನ್ನು ವಾಚ್ಯವಾಗದ, ವಿವರಣೆಗಿಂತ ಅನುಭವದ ತೀವ್ರತೆಯನ್ನು ಸ್ಥಾಪಿಸುವ ಗುರುತರವಾದ

ಹೊಣೆಯನ್ನು ಹೊತ್ತಿತು. ಹಾಗಾಗಿ ಎರಡನೆಯ ಹಂತದಲ್ಲಿ ಅಂದರೆ ನವ್ಯ ಮತ್ತು ನವ್ಯೋತ್ತರ ಕಾಲದಲ್ಲಿ ಮಹಿಳಾ ಬರವಣಿಗೆಯಲ್ಲಿ ಕಾವ್ಯ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು.

ಮೊದಲ ಘಟ್ಟದ ಮಹಿಳಾ ಕಾವ್ಯ ರೊಮ್ಯಾಂಟಿಕ್ ಎನ್ನುವುದಕ್ಕಿಂತ ಸಾಮಾಜಿಕ ಸ್ಥಿತಿಗತಿಗಳನ್ನು ಹೇಳಲಿಕ್ಕೆ ನಿಂತಿದ್ದರಿಂದ ಅಂತರಂಗದ ನಿವೇದನೆಯಾಗಲೀ, ಆತ್ಮವಿಮರ್ಶೆಯಾಗಲೀ ತುಂಬಾ ಕಡಿಮೆ ಪ್ರಮಾಣದಲ್ಲಿತ್ತು. ಆದರ್ಶಮಯವಾದ ಕನಸೊಂದನ್ನು ಕಾಣುವ ಈ ಕವನಗಳು ಕಂಡಿದ್ದನ್ನು ಹೇಳುವ ಮತ್ತು ಅಂತಃಕರಣಪೂರಿತವಾಗಿ ಸಮಾಜವನ್ನು ನೋಡುವ ಒಂದು ಮಾದರಿಯೆಂದೇ ಹೇಳಬಹುದು. ತಿರುಮಲಾಂಬಾ, ತಿರುಮಲೆ ರಾಜಮ್ಮ, ನೆಲ್ಲಿಕಾರು ಜೈನಮಹಿಳೆ ರಾಧಮ್ಮ, ಸೀತಾದೇವಿ ಪಡುಕೋಣೆ, ಚಂದ್ರಭಾಗಿ, ಸರಸ್ವತಿಬಾಯಿ ರಾಜವಾಡೆ ಇಂಥಾ ಕವಯತ್ರಿಯರಿಗೆ ಆದರ್ಶಮಯವಾದ ಸ್ವತಂತ್ರ ಸಂಗ್ರಾಮದ ಗಾಢವಾದ ಹಿನ್ನಲೆಯಿದ್ದು ಅವರ ಲೋಕಗ್ರಹಿಕೆ ಭಾವಕೋಶಗಳಿಗಿಂತ ಕಾಲದ ಪ್ರಭಾವವೇ ಮುಖ್ಯವಾಗಿದ್ದನ್ನು ಮತ್ತು ಕಾವ್ಯ ಸಂಪ್ರದಾಯದ ಸದ್ಯದ ಮತ್ತು ಪರಂಪರೆಯ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಪ್ರವೇಶವೇ ಪ್ರಧಾನವಾದ ಈ ಹೊತ್ತಿನಲ್ಲಿ ಬರೆಯಲಿಕ್ಕೆ ಒತ್ತಾಸೆ ಮತ್ತು ಪ್ರೇರಣೆಗಳಿಂದ ಗಂಡಿನ ಬಗ್ಗೆ ಕೃತಜ್ಞತಾ ಭಾವವೇ ಮುಖ್ಯವಾಗಿತ್ತು. ಹೀಗಾಗಿ ವ್ಯಕ್ತಿ ವಿಶಿಷ್ಟತೆಗಿಂತ ಪರಂಪರೆಯ ಮುಂದುವರೆದ ಭಾಗವಾಗಿ ಮಾತ್ರ ಕಾಣಿಸಿಕೊಂಡರು. ಪ್ರಶ್ನಿಸುವ ಜರೂರಿಗಿಂತ ಹೊಂದಾಣಿಕೆಗೇ ಹೆಚ್ಚಿನ ಮಹತ್ವ ನೀಡಲಾಯಿತು. ಆದರೆ ತನ್ನೊಳಗೆ ಶತಮಾನಗಳಿಂದ ಆರದ ಗಾಯವೊಂದನ್ನು ಹೊತ್ತು ತಿರುಗುತ್ತಿದ್ದ ಸ್ತ್ರೀತನಕ್ಕೆ ಉತ್ತರದಾಯಿತ್ವವನ್ನು ಒದಗಿಸಿಕೊಡುವ ಹಾಗೆ ಬರೆಯುವ ಸೂಚನೆಯನ್ನು ಅಲ್ಲಲ್ಲಿ ಬಿಟ್ಟುಕೊಟ್ಟಿದ್ದು –ಬೆಳಗೆರೆ ಜಾನಕಮ್ಮ, ಕಾವೇರಮ್ಮ, ಶಾರದಾಜಡೆ ಮುಂತಾದವರು.

ತನ್ನ ಅರಿವನ್ನು ವಿಸ್ತರಿಸಿಕೊಳ್ಳುತ್ತಾ ತನ್ನೊಂದಿಗೆ ಇರುವ ಭಿನ್ನತೆಯನ್ನು ಪುರುಷ ಜಗತ್ತಿಗೆ ಹೇಳುವ ಹಂತದಲ್ಲಿ ಹೆಣ್ಣಿಗೆ ಅನೇಕ ಸಮಸ್ಯೆಗಳು ಕಾಡಿವೆ. ನಾನೂ ನಿನ್ನ ಹಾಗೆ ಜೀವ ಭಾವ ಸ್ಪಂದನೆಗಳಿರುವ ಒಬ್ಬ ಮನುಷ್ಯಳು ಎಂದು ಹೇಳುವ ಪ್ರಯತ್ನ ಜಗತ್ತಿನಾದ್ಯಂತ ವಿ–ಮೆನ್ ಎನ್ನುವ ಚಳುವಳಿ ಆರಂಭವಾಗಿದ್ದು ಕನ್ನಡವನ್ನು ಆವರಿಸಿಕೊಂಡಿದ್ದು ಎಂಬತ್ತರ ದಶಕದಲ್ಲಿ. ಬಸವ ನಿಂತು ಮಾಡುವುದನ್ನು ಕಮಲ ಕುಂತು ಮಾಡುತ್ತಾಳೆ (ಅವನು ಬಸವ –ಚ. ಸರ್ವಮಂಗಳಾ) ಎಂದು ವಾಚ್ಯಮಾತುಗಳಲ್ಲಿ ಹೇಳಿದರೂ ಅದು ಕನ್ನಡ ಕಾವ್ಯಲೋಕದಮಟ್ಟಿಗೆ ಅಘಾತಕಾರಿ ಮಾತುಗಳೇ ಆಗಿದ್ದವು. ಇದನ್ನು ಹೀಗೆ ಬರೆಯಬಹುದೇ? ಎಂದು ಪ್ರಶ್ನಿಸಿದ್ದರೂ ಕಾವ್ಯ ಮಾದರಿಗಳ ಹುಡುಕಾಟದಲ್ಲಿ ಇಂಥಾ ಮಾತುಗಳು ಹೊಸ ಸಂಚಲನವನ್ನು ಹುಟ್ಟುಹಾಕಿತ್ತು. ಸ್ವ ಅರಿವು ಮತ್ತು ಅಕ್ಷರವೇ ಬದುಕಿನ ಘನತೆಯನ್ನಾಗಿಸಿಕೊಂಡ ಪ್ರಜ್ಞಾಪೂರ್ವಕ ಸ್ಥಿತಿಯೊಂದು ಭಾವುಕತೆ ಮತ್ತು ಆದರ್ಶದ ಜೊತೆ ಬೆರೆತು ಹೊಸ ವಿನ್ಯಾಸವೊಂದು ಮಹಿಳಾಕಾವ್ಯಕ್ಕೆ ಸಿಕ್ಕಿತು. ಪುರುಷನ ಪ್ರಶ್ನಾತೀತ ಸ್ಥಿತಿಯನ್ನು ಭಾವುಕತೆಯ ಅಂಚಿನಲ್ಲೇ ನಿಂತು ವ್ಯಂಗ್ಯ, ವಿಡಂಬನೆಗಳ ಮೂಲಕ 'ನಾವು ಹುಡುಗಿಯರೇ ಹೀಗೆ' ಎಂದು ದೃಢವಾದ ನಿಲುವಿನೊಂದಿಗೆ ಹೊಸಪ್ರವೇಶಿಕೆಯನ್ನು ಕನ್ನಡ ಮಹಿಳಾ ಕಾವ್ಯ

ಗಳಿಸಿಕೊಂಡಿತು. ತನ್ನ ಒಳಗನ್ನು ನೋಡುತ್ತಾ, ಘೋಷಿತ ಉಧೃತಗಳನ್ನು ಹೊಡೆದುರುಳಿಸಿ, ಇರುವ ಶಬ್ದಕ್ಕೆ ಹೆಣ್ತನದ ಪರಾಗವನ್ನು ಹಚ್ಚುವ ಕೆಲ ಪ್ರಜ್ಞಾಪೂರ್ವಕವಾಗಿ ಆಯಿತು. ಆ ವೇಳೆಗಾಗಲೇ ಸ್ತ್ರೀವಾದ ಹೆಣ್ಣಿನ ಅಸ್ಮಿತೆಯ ಅನೇಕ ಪ್ರಶ್ನೆಗಳನ್ನು ಗಂಡುಗ್ರಹಿಕೆಯ ನೋಟಗಳನ್ನು ಪ್ರಚುರಪಡಿಸಿತ್ತು. ಚ. ಸರ್ವಮಂಗಳಾ, ವೈದೇಹಿ, ಪ್ರತಿಭಾ ನಂದಕುಮಾರ್, ನಳಿನಾ ದೇಶಪಾಂಡೆ, ಶಶಿಕಲಾ ವೀರಯ್ಯ ಸ್ವಾಮಿ, ಹೇಮಾ ಪಟ್ಟಣಶೆಟ್ಟಿ, ಸ ಉಷಾ ಮೊದಲಾದವರ ಕಾವ್ಯ ಮಹಿಳಾ ಕಾವ್ಯ ಮಾರ್ಗವೊಂದನ್ನು ನಿರ್ದೇಶಿಸಿತ್ತು. ಸ್ತ್ರೀವಾದ ಅರಿವನ್ನು ಸೃಜನಾತ್ಮಕವಾಗಿಸುವ ಸಾಲುಸಾಲು ಸವಾಲುಗಳು ಕವಿತೆಯ ಸ್ವರೂಪವನ್ನು ದಟ್ಟವಾಗಿಸುತ್ತಿತ್ತು. ಸಂಬಂಧಗಳ ಹಾಸುಹೊಕ್ಕಲ್ಲಿ ಭಾಷೆಯಲ್ಲಿನ ಅರ್ಥವನ್ನು ವಿಸ್ತರಿಸಿದರು. ನಮ್ಮ ನಡುವಣ ಕಥೆ, ಪುರಾಣ, ಇತಿಹಾಸ ದಂತಕಥೆಗಳ ಸಂಗತಿಗಳಿಗೆ, ನಮ್ಮ ನಡುವಣ ಜೀವಂತ ಪಾತ್ರಗಳಿಗೆ ಪುನರ್ ವ್ಯಾಖ್ಯಾನವನ್ನು ಕೊಟ್ಟರು. ಚಿಕ್ಕದ್ದರಲ್ಲಿರುವ ಮಹತ್ವದ ಸಂಗತಿಗಳನ್ನು ಅದರೊಂದಿಗೆ ಹೆಣ್ಣಿನ ಅನುಭವವನ್ನು ವಿಸ್ತರಿಸಿ, ಇರುವ ಚೌಕಟ್ಟುಗಳನ್ನು ಮೀರಿದರು. ಇದುವರೆಗೂ ತಳೆದ ಮೌನಕ್ಕೆ, ಅದಕ್ಕಿರುವ ಎಲ್ಲ ಅರ್ಥಗಳನ್ನು ಆಕ್ರೋಶ ಮತ್ತು ಆಕ್ರೋಶ ರಹಿತಸ್ಥಿತಿಗಳಲ್ಲಿ ವಿವರಿಸಿದರು. ತಾರ್ಕಿಕವಾಗಿ ಸಂವಾದವನ್ನು ಸಾಮಾಜಿಕವಾಗಿ ಬೆಳೆಸಲು ಸಾಧ್ಯವಾಗಿದ್ದು ತನ್ನ ಅಸೀಮ ಶಕ್ತಿಯನ್ನು ತಾನೇ ಅರಿತುಕೊಳ್ಳುವುದರಲ್ಲಿ. ತನಗೆ ಈವರೆಗೂ ಸಮಾಜ ನೀಡದೆ ಇದ್ದ ಚರಿತ್ರೆಯನ್ನು ತಾನೇ ಜಾತಿ, ಧರ್ಮಗಳ ಮೂಲಕ ತನ್ನದೇ ಭಾವಕೋಶಗಳಲ್ಲಿ ಅಡಕವಾಗಿರುವ ಅನೇಕ ಸಂಗತಿಗಳಿಂದ ಹೆಕ್ಕಿ ತೆಗೆದು ತಾನೇ ಕಟ್ಟಿಕೊಳ್ಳಲಾರಂಭಿಸಿದಳು. ಈ ಚರಿತ್ರೆಯ ಶೋಧ ತಮ್ಮನ್ನು ತಾವು ಅರ್ಥ ಮಾಡಿಕೊಳ್ಳುವುದಕ್ಕೂ, ಇತರರಿಗೆ ಅರ್ಥ ಮಾಡಿಸುವುದಕ್ಕೂ ಸಾಧ್ಯವಾಗುವ ಆಶಯವನ್ನು ಹೊಂದಿತ್ತು. ಇದು ಬಹುದೊಡ್ಡ ನಡೆ.

ಕನ್ನಡ ಅಭಿಜಾತ ಮಹಿಳಾ ಕಾವ್ಯ ದಲಿತ ಬಂಡಾಯದ ಹೊತ್ತಲ್ಲಿ ತನ್ನ ಧ್ವನಿಯನ್ನು ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ಗಟ್ಟಿಯಾಗಿ ಮಾತಾಡಿದ್ದು ನಿಜವೇ. ವಾಚ್ಯವಾಗಿದ್ದೂ ನಿಜವೇ. ಆನಂತರ ಕಾಲದಲ್ಲಿ ಏರುಧ್ವನಿಯನ್ನು ಒಡೆದು ವ್ಯಂಗ್ಯದ, ವಿಡಂಬನೆಯನ್ನು ದಾಟಿ ಕಲಾತ್ಮಕ ನಿಲುವುಗಳಿಗೆ ಆತುಕೊಳ್ಳುವುದು ಸ್ವಲ್ಪ ತಡವೂ ಆಯಿತು. ಪುರುಷ ಕಾವ್ಯ ಎಂದು ಯಾವತ್ತೂ ಕರೆಸಿಕೊಳ್ಳದ ಆದರೆ ದಟ್ಟ ಗಂಡು ನೋಟವುಳ್ಳ ಪ್ರಧಾನ ಕಾವ್ಯ ಹೆಣ್ಣು ಕಾವ್ಯ ಇದೆಯಾ? ಎನ್ನುವ ಪ್ರಶ್ನೆ ಕೇಳಿದ್ದಿದೆ. ಸ್ತ್ರೀ ವಿಶಿಷ್ಟ ನೆಲೆಗಳು ಇದ್ದೇ ಇವೆ ಎಂದು ಸಾಧಿಸುವುದು ಅವತ್ತಿಗೆ ಮಹಿಳಾ ಕವಿಗಳಿಗೆ ಅಗತ್ಯವಾಗಿತ್ತು. ಮುಟ್ಟಿನಿಂದ ಹುಟ್ಟಿದ ಕೂಸುಗಳಿಗೆ ಮುಟ್ಟಿನ ಮುಜುಗರವನ್ನೂ, ಮುಟ್ಟಿನ ಮಹತ್ವವನ್ನೂ ಸಾರುವ ಮೂಲಕ ಹೆಣ್ಣು ದೇಹ ಮಿಥ್ಯೆಯಲ್ಲ; ಜ್ವಲಿತ ಸತ್ಯಗಳಲ್ಲಿ ಒಂದು ಎಂದು ಹೇಳುತ್ತಾ, ಹೊಸ ತಾರ್ಕಿಕತೆಯನ್ನು, ಎಲ್ಲವೂ ಸಪಾಟು ಎನ್ನುವಲ್ಲೇ ಇರುವ ವೈವಿಧ್ಯಮಯತೆಯನ್ನು ಹೇಳಲು ಉದ್ಯುಕ್ತಗೊಂಡಿತು. ದಲಿತ-ಬಂಡಾಯದ ನಂತರದ ಮಹಿಳಾ ಕಾವ್ಯ ಒಂದು ದಿಕ್ಕನ್ನು ಹಿಡಿಯಲಿಲ್ಲ. ಹಲವು ತೊರೆಗಳಾಗಿ ಹರಿದು ವೈವಿಧ್ಯಮಯವಾದ ಜಗತ್ತನ್ನು ಕಾಣಿಸಿತು. ಎಲ್ಲ ಜಾತಿ, ಧರ್ಮ, ವರ್ಗದ ಧ್ವನಿಗಳು ನಿಖರವಾಗಿ ದಾಖಲಾಯಿತು. ಲಲಿತಾಸಿದ್ಧಬಸವಯ್ಯನಂಥವರು ಯಂತ್ರ ನಾಗರಿಕತೆಯ ಪರಿಣಾಮ ನಶಿಸಿಹೋಗುತ್ತಿರುವ ಪಾರಂಪರಿಕವಾದ ಕುಶಲತೆ, ಪರಿಶ್ರಮಗಳಿಂದ ಮೊದಲುಗೊಂಡು

ಆಫೀಸುಗಳಲ್ಲಿ ದುಡಿಯುವ ಹೆಣ್ಣಿನ ಬೇರೆ ಬೇರೆ ಸಮಸ್ಯೆಗಳನ್ನೂ, ಪುರುಷ ರಾಜಕಾರಣದ ವಿವಿಧ ಮಗ್ಗುಲುಗಳನ್ನು ಹೇಳಲು ತಮ್ಮದೇ ಮಾತುಗಳನ್ನು ಕಟ್ಟಿಕೊಳ್ಳತೊಡಗಿದರು. 'ಮಾಗಾಡಮ್ಮ ಉಫೇ ಉಫೇ' ಎನ್ನುವ ಪದ್ಯದಲ್ಲಿ ಕೆಲಸದ ಹೆಣ್ಣೊಬ್ಬಳ ಮೂಲಕ ಶ್ರಮ ಮೂಲ ಸಂಸ್ಕೃತಿಗಳಲ್ಲಿರುವ ಕೌಶಲ್ಯವನ್ನು ಕುರಿತು ಮಾತಾಡುತ್ತಾ ಹೆಣ್ಣು ಮತ್ತು ಆಹಾರದ ಪದ್ಧತಿಯಲ್ಲಿರುವ ಅವಿನಾಭಾವವನ್ನು ರಾಗಿ ಕೇರುವ ಸದ್ದಿನ ಜೊತೆ ಮಿಳಿತ ಮಾಡುತ್ತಾರೆ. ಇದು ಯಾವ ಮುಖ್ಯವಾಹಿನಿ ಪದ್ಯಗಳಲ್ಲೂ ಕಾಣಲು ಸಾಧ್ಯವೇ ಇಲ್ಲ.

ಕಾವ್ಯವೆಂದರೆ ಸದ್ಯದ ಪ್ರತಿಕ್ರಿಯೆ ಮಾತ್ರವಲ್ಲ. ಅದೊಂದು ನಿರಂತರ ಅರ್ಥಪರಿವರ್ತನೆಯ ಕ್ರಮ. ಕಾವ್ಯ ವರ್ತಮಾನದ ಹಂಗನ್ನು ಉಳಿಸಿಕೊಂಡಂತೆ ನಿಂತ ನೆಲದ ಎಲ್ಲ ಮಜಲುಗಳನ್ನೂ ಒಳಗೊಳ್ಳುತ್ತದೆ. ಕಾವ್ಯದ ಹಂಗು ಮಾನವೀಯ ಮೌಲ್ಯಗಳನ್ನು ಕಳಕೊಳ್ಳುತ್ತಿರುವ ಜಗತ್ತಿನ ಜೊತೆಗಿನ ಬಹುದೊಡ್ಡ ಗುದ್ದಾಟವೇ ಆಗಿದೆ. ಬಿರುಕುಬಿಟ್ಟ ಸಂಬಂಧಗಳು, ಅಲ್ಲಾಡುತ್ತಿರುವ ನಂಬಿಕೆ, ತೀವ್ರತೆ ಕಳಕೊಳ್ಳುತ್ತಿರುವ ಪ್ರೀತಿ ದ್ವೇಷವನ್ನೂ ಮೀರಿ ದೊಡ್ಡ ಹುಡುಕಾಟಕ್ಕೆ ನಿಂತಿದೆ. ಯಂತ್ರಗಳನ್ನು ಕಳಚಿ ಪ್ರೀತಿಯ ಕೈತುತ್ತಿಗೆ ಹಾತೊರೆವ ಮನಸುಗಳನ್ನು ಸೃಷ್ಟಿಸುವಂಥದ್ದೇ ಆಗಿದೆ.

ಇಷ್ಟೆಲ್ಲಾ ಬರೆಯುವ ಸವಾಲುಗಳೆ ಬೇರೆ. ಯಾವುದೇ ಕಾವ್ಯ ಖಾಸಗಿ ಡೈರಿಯಲ್ಲ. ಆದರೂ ಹೆಣ್ಣಿನ ಖಾಸಗೀತನವನ್ನು ಕವಿತೆಯಲ್ಲಿ ಹುಡುಕುತ್ತಾರೆ. ಗಂಡಿನ ರಸಿಕತನ ಹೆಣ್ಣಿನಲ್ಲಿ ಲಂಪಟತನವಾಗುತ್ತದೆ, ಅಥವಾ ಹಾಗೇ ಬರೆದುಬಿಟ್ಟರೆ ಬರೆಯುವವರೆಲ್ಲಾ ಚಾರಿತ್ರ್ಯಹೀನರೆಂದು ಷರಾ ಬರೆಯಲೂ ಹಿಂಜರಿಯುವುದಿಲ್ಲ. ಗೊತ್ತಾಗುವುದಿಲ್ಲ ಎಂದು ತನ್ನನ್ನು ತಾನು ಸ್ವರಕ್ಷಣೆಯ ಅಸ್ತ್ರವನ್ನಾಗಿ ಕಾವ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಂಡ ಮೇಲೂ ಭಯ ಕಾಡುತ್ತಲೇ ಇರುತ್ತದೆ. ತುಂಬಾ ಬೋಲ್ಡ್ ಆಗಿ ಬರುವುದು ಇಂದು ಸಾಧ್ಯವಾಗುತ್ತಿದ್ದರೂ ಖಾಸಗೀತನದ ಮೇಲೆ ಸಮಾಜ ಮಾಡಬಹುದಾದ ಆಕ್ರಮಣಗಳನ್ನು ಕುರಿತು ಅಳುಕು ಇದ್ದೇ ಇದೆ. ಈ ಹೆದರಿಕೆಯೇ ಅವಳ ಕವಿತೆಯನ್ನು ಹೆಚ್ಚು ಅಮೂರ್ತವಾಗಿಸಿದೆ. ಹಾಗಾಗಿಯೇ ಕಾವ್ಯವೆಂದರೆ ಹೀಗೆ ಎಂದು ಹೆಣ್ಣಿಗೆ ಹೇಳಿಕೊಡುತ್ತಾ ಬಂದರೂ ಅದನ್ನು ಕೇಳಿಯೂ ಮೀರುತ್ತಲೇ ಬಂದಿದ್ದಾಳೆ. ಬಹು ದೊಡ್ಡ ಉದಾಹರಣೆ ಎಂದರೆ 'ತಂಗಿ ಜಾನಕಿಗೆ' ಕವಿತೆ. ಹಾಗಾದರೆ ಬೇಂದ್ರೆ ಹೇಳಬಾರದಿತ್ತೇ? ಎಂದು ಕೇಳಿದರೆ ಉತ್ತರ ಸರಳ; ಹೇಳಬಾರದಿತ್ತು ಎಂದರೆ, ಅವರ ಮಾತುಗಳ ಹಿಂದಿನ ಅಂತಃಕರಣವನ್ನು ತಿರಸ್ಕರಿಸಿದ ಹಾಗೇ ಆಗುತ್ತದೆ. ಆದರೆ ಕಡೆಗೂ ಅವರಿಗೆ ಗೊತ್ತಿರುವ ಕಾವ್ಯದ ಮಾನದಂಡಗಳನ್ನು ಹೇಳುವುದರ ಮೂಲಕ ಹೆಣ್ಣಿನ ಕಾವ್ಯ ಮಾದರಿಯೊಂದಿರಬಹುದು ಎನ್ನುವುದನ್ನು ಗಮನಿಸದೆ ತಮ್ಮ ಮಾದರಿಯನ್ನು ನಿಗದಿ ಮಾಡುತ್ತಾರೆ.

ಜಗತ್ತು ಹೇಳುವ ಕಾವ್ಯಮಾದರಿ ತನ್ನ ಒಳಗು ಹೇಳುವ ಮಾದರಿಗಳಲ್ಲಿ ಆಯ್ಕೆಯ ಪ್ರಶ್ನೆ ಬಂದಾಗ ಅದೊಂದು ಜೀವನ್ಮರಣದ ಪ್ರಶ್ನೆಯಾಗುತ್ತದೆ. ತನ್ನ ದಾರಿಯನ್ನು ಕಂಡುಕೊಳ್ಳುವ ಹೆಣ್ಣಿನ ಹಾದಿ ತನ್ನ ಬದುಕಿನ ತಾತ್ವಿಕತೆಯಷ್ಟೇ ಭಿನ್ನವಾದ ಅಭಿವ್ಯಕ್ತಿಯ ಕ್ರಮವನ್ನು ಕಾವ್ಯದಲ್ಲೂ ತರುತ್ತಾಳೆ. ಅಗತ್ಯವೆಂದದ್ದು ಅನಿವಾರ್ಯವಲ್ಲ (ಅಳಿ– ಎಚ್.

ಎಸ್. ಅನುಪಮ) ಎನ್ನುತ್ತಲೇ ಸಾದ್ಯಂತವಾದ ಚಿತ್ರವೊಂದನ್ನು ಸಮಾಜಕ್ಕೆ ತೋರುವ ಪ್ರಯತ್ನ ಮಾಡುತ್ತಾಳೆ. ಹಳೆ ಬಟ್ಟೆಯ ಥರಾವಾರಿ ಬಳಕೆ ಹೆಣ್ಣು ಲೋಕಕ್ಕಷ್ಟೆ ಗೊತ್ತು ಅದನ್ನು ಕೌದಿಯಾಗಿಸುವಾಗ ಕೌದಿಯ ತುಂಬೆಲ್ಲಾ ಅಣಕಿಸುವ ಆಧುನಿಕ ಚಿತ್ರಗಳು (ಕೌದಿ– ಸರಸ್ವತಿ ಚಿಮ್ಮಲಗಿ) ಕಾಣತೊಡಗಿ ವಿಭಿನ್ನವಾದ ಅರ್ಥಾಂತರಗಳು ಹೆಣ್ಣಿನ ಜಗತ್ತಿನಿಂದಲೇ ಹುಟ್ಟಿಕೊಳ್ಳುತ್ತದೆ.

ಕವಿತೆ ಹೆಣ್ಣಿಗೆ ಅಭಿವ್ಯಕ್ತಿಯ ಕ್ರಮವೂ ಹೌದು ಸ್ವರಕ್ಷಣೆಯ ಕೇಂದ್ರವೂ ಹೌದು. ಇದು ದ್ವಂದ್ವ ನಿಜ ಆದರೆ ಅವಳ ನಿಜವಾದ ನಿಲುವು ಕೂಡಾ. ಬರೆದು ಬೆತ್ತಲಾಗುವುದಕ್ಕಿಂತ ನಿಗೂಢವಾಗುವುದು ಅವಳಿಗೆ ಹೆಚ್ಚು ಆಪ್ತ. ಅಸ್ತಿತ್ವವನ್ನೂ ಮೀರಿದ ಅನತಿ ಕೇಂದ್ರಗಳನ್ನು ಸುತ್ತಲೂ ಅವಳೇ ನಿರ್ಮಿಸಿಕೊಳ್ಳುತ್ತಾಳೆ. ಬೆರಳಸಂದಿಯ ಬದುಕಿನಿಂದ ಹಿಡಿದು ಪುರಾವೆಗಳನ್ನು ಕೇಳುವವರ ಬಗ್ಗೆ ದೊಡ್ಡ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಮೀರುವ ಬದುಕಿನ ಬಯಕೆಗಳನ್ನು ಎದೆಯಲ್ಲಿರಿಸಿಕೊಂಡು ಟಿಪಿಕಲ್ ಮಾದರಿಗಳನ್ನು ದಾಟುವ ಆಶಯವನ್ನು ಹೊಂದಿದ್ದು ಅದಕ್ಕನುಗುಣವಾದ ರೂಪಕಗಳನ್ನು ಹೆಣೆಯುತ್ತಾರೆ. ಈ ರೂಪಕಗಳು ಚಿತ್ರಗಳು ಮೇಲು ನೋಟಕ್ಕೆ ಸಾಧಾರಣ, ಆದರೆ ಬಿಡುಗಡೆಗೆ ಬಹುದೊಡ್ಡ ರೂಪಕವಾಗಿಯೂ ಕಾವ್ಯ ಬಿಡುಗಡೆಯ ರಹದಾರಿಯಾಗಿಯೂ ಕಂಡಿತು.

## ಅನುಭವ ಮತ್ತದರ ತೀವ್ರತೆ

ಹೆಣ್ಣಿನ ಲೋಕನಿಂದನೆಯ ಕಥೆ ಇವತ್ತು ನಿನ್ನೆಯದಲ್ಲ. ವೇದಕಾಲದಿಂದಲೂ ಹೆಣ್ಣಿನ ಶಕ್ತಿಯನ್ನು ಅವಮಾನಿಸುತ್ತಲೇ ಬಂದಿದೆ. ಇನ್ನು ಸೀತೆ, ದ್ರೌಪತಿ, ಅಹಲ್ಯೆ, ರೇಣುಕೆ ಹೀಗೆ ಸಾಲು ಸಾಲು ಹೆಸರುಗಳು ಲೋಕನಿಂದನೆಯ ಉದಾಹರಣೆಗಳು. ಇಂಥಾ ಕತೆಗಳನ್ನು ಕೇಳುತ್ತಲೇ ಬೆಳೆವ ಹೆಣ್ಣಿಗೆ ಅವಳ ಭಾವಕೋಶಗಳ ಪದರದಲ್ಲಿ ಈ ಕತೆಗಳು ಮತ್ತೆ ಮತ್ತೆ ತಾಕುತ್ತಾ ಹೊಸದೇ ಜಗತ್ತನ್ನು ತೆರೆಯುತ್ತದೆ. ಒಳಗೊಳಗೇ ಮದರಿಗಳನ್ನು ರೂಪಿಸುತ್ತಾ ಹೋಗುತ್ತದೆ. ಲೋಕನಿಂದನೆಗೆ ಅಳುವ ಬದಲು ಎದುರು ನಿಲ್ಲುವ ಹೆಣ್ಣಿನ ಮೊದಲ ಮಾತುಗಳು ನಮಗೆ ಕೇಳಿಬರುವುದು ವಚನಗಳಲ್ಲಿ. ಸ್ತ್ರೀ ಪುರುಷ ಭಿನ್ನ ದೈಹಿಕ ವಾಸ್ತವಗಳನ್ನು ಒಪ್ಪಿಕೊಂಡು ಸಮಾನತೆಯ ಕನಸಿಗೆ ಇಂಬುಕೊಡುವಂತೆ ಪ್ರತಿಭಟನೆಯ ನೆಲೆಗಳಲ್ಲಿ ರೂಪುಗೊಂಡಿವೆ. ಇಷ್ಟಾಗಿಯೂ ಭಾವಲೋಕದ ಅನುಭೂತಿ ಸಾಮಾಜಿಕತೆಯ ಜೊತೆ ಮಿಳಿತವಾದಾಗ ಹುಟ್ಟುವ ಘರ್ಷಣೆಗೆ ಎದುರಾಗಿ ನಿಂತು ತನ್ನ ಸಮಶೀಲಕ, ಸಮಗ್ರಾಹಕನಲ್ಲದಿದ್ದರೆ ನಾನು ಅವರೊಂದಿಗೆ ವ್ಯವಹರಿಸಲಾರೆ (ಅಕ್ಕಮ್ಮನ ವಚನ) ಎಂದು ತನ್ನತನದ ಬಗ್ಗೆ ದಾರ್ಷ್ಟ್ಯದಿಂದ ನುಡಿವ ಮೊದಲ ಮಾತುಗಳಲ್ಲಿನ ತೂಕ ಇಂದಿಗೂ ಅಚ್ಚರಿಯನ್ನು ಹುಟ್ಟುಹಾಕುತ್ತದೆ. ಹೆಣ್ಣು ದೇಹ, ಭಾವಲಯಗಳೇ ಬೇರೆಯಾಗುವ, ಮಾತಿನ ಸುಳಿಯಲ್ಲೇ ತಿರುಗುವ ದೈಹಿಕಗಳು ವಿಷದವಾಗುವ ಹೊತ್ತಿನಲ್ಲಿ ಬಿಟ್ಟುಕೊಡುವ ಅರ್ಥಗಳು ಹೆಣ್ಣಿನ ಬಗ್ಗೆ ಇವತ್ತಿಗೂ ಇರುವ ನಂಬುಗೆಗಳ ಬುಡವನ್ನೇ ಅಲ್ಲಾಡಿಸುತ್ತವೆ. ಮಾತು ಜ್ಞಾನಕ್ಕಿಂತ ಭಾವಸತ್ವಗಳ ಹೋರಾಟವಾಗುವ ಎಲ್ಲ ನಿಖರ ಅಂಶಗಳೂ ವಚನಕಾರ್ತಿಯಲ್ಲಿ ಕಾಣುತ್ತವೆ. ನಿಯಮಗಳ ಜಗತ್ತನ್ನು ಧಿಕ್ಕರಿಸಿ ನಿಯಮರಹಿತವಾದ ಭಾವ ಜಗತ್ತಿನ

ಜೊತೆ ವ್ಯವಹರಿಸುವ ಅಕ್ಕಮಹದೇವಿ, ಮುಕ್ತಾಯಕ್ಕ ಕಾವ್ಯಮಾದರಿಗಳಲ್ಲೂ ಮಹತ್ವದ್ದನ್ನು ದಕ್ಕಿಸಿಕೊಂಡಿದ್ದಾರೆ. ಹೆಣ್ಣಿನ ಸಂಕಥನವನ್ನು ಸೂತ್ರವಾಗಿಸಿಕೊಂಡು ವಿಸ್ಮಯಾನುಭವಕ್ಕೆ ತೆರೆದುಕೊಳ್ಳುವ ಈ ವಚನಕಾರ್ತಿಯರು ತಮ್ಮ ಜೀವನ್ಮರಣದ ಪ್ರಶ್ನೆಯನ್ನು ಹುಡುಕುತ್ತಾ ಹೋಗುತ್ತಾರೆ. ಹೀಗೆ ಹುಡುಕಿಕೊಂಡ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಸುಲಭ ಸಾಧ್ಯವಲ್ಲ. ಕಾವ್ಯದಲ್ಲಿನ ಮಾತು, ಸಾರ್ವಜನಿಕತನದಲ್ಲಿ ಖಾಸಗಿತನವನ್ನು ಹುದುಗಿಸುವ ಸವಾಲು. ಆದ್ದರಿಂದಲೇ ವಚನಗಳು ಎಂದೂ ರಂಜನೆಯಾಗಲಿಲ್ಲ. ಅದು ಅಮಿತವಾದುದನ್ನು ಆಶಿಸಿ ನಿನ್ನೆಗಳ ಎದೆಗೆ ಬೇರುಬಿಟ್ಟ ವಟವೃಕ್ಷ. ಅರ್ಥವೋ ಕಾಣದ್ದರ ಹಿಂದೆ ಹೊರಟ ದೊಡ್ಡ ಒಡಪು. ಒಡಲಲ್ಲಿ ಹುದುಗಿಟ್ಟುಕೊಂಡ ಶತಮಾನಗಳಿಂದ ಕುದಿಯುತ್ತಲೇ ಇರುವ ಲಾವಾರಸ ಚಿಮ್ಮಲು ಸಿದ್ಧವಾದ ಸ್ಥಿತಿ. ಕನ್ನಡದ ಮೊದಲ ಮಹಿಳಾಕಾವ್ಯದಲ್ಲೆ ಇಂಥಾ ತೀವ್ರತೆ ಕಂಡಿದ್ದಾದರೂ ಹೇಗೆ? ಎನ್ನುವ ಸೋಜಿಗ ಕಾಡದೆ ಇರದು. ಗೇಯತೆಯಿಂದ ಅದು ಹಿಗ್ಗಿತೋ! ಅದರ ಹುಟ್ಟಿನಲ್ಲೇ ಅಂಥಾ ತೀವ್ರತೆ ಇದೆಯೋ!! ಅಥವಾ ಈ ದ್ವಿತ್ವವೇ ಅದಕ್ಕೆ ಕಾರಣವಾಯಿತೋ ಎನ್ನುವುದು ನಮ್ಮನ್ನು ಕಾಡುತ್ತದೆ. ಆದರೆ ಅಂತಸ್ಥವಾದ ಭಾವ ಲಯಗಳು, ತಾನು ಕಂಡುಕೊಂಡ ಸತ್ಯಗಳ ಜೊತೆ ಸಂಧಿಸುವಾಗ ಹುಟ್ಟಿಕೊಳ್ಳುವ ನಿರಾಕರಣೆ ಕಾವ್ಯದ ನೆಲೆಯಾಗುತ್ತದೆ. ಇದುವರೆಗೂ ಹೆಣ್ಣಿನ ಇರುವಿಕೆಯನ್ನೇ ಪ್ರಶ್ನಿಸಿದ ಗಂಡಿನ ಆಗುವಿಕೆಯನ್ನು ನಿರಾಕರಿಸುವ ವಚನಕಾರ್ತಿಯರು ಸ್ವತಂತ್ರವಾಗಿ ಮಾತಾಡುತ್ತಾರೆ. ಇಂದ್ರಿಯಾತೀತವಾದದ್ದನ್ನು ಇಂದ್ರಿಯಗಳ ಮೂಲಕ ಕಂಡರಿಸುತ್ತಾ ಭಾವಜಗತ್ತನ್ನು ಅನಾವರಣಗೊಳಿಸುತ್ತಾರೆ. ಈ ನಿರಾಕರಣೆಯೇ ಭಿನ್ನತೆಯ ವ್ಯಾಖ್ಯಾನವನ್ನು ಬರೆಯುತ್ತದೆ. ಈ ಆಧುನಿಕವಾದ ನಿಲುವಿನ ಕಾರಣಕ್ಕೆ ವಚನಕಾರ್ತಿಯರು ಅದರಲ್ಲೂ ಅಕ್ಕಮಹಾದೇವಿ ಪ್ರೇರಕಶಕ್ತಿಯಾಗುತ್ತಾಳೆ. ಹೀಗಾಗೇ ವಚನಗಳ ವಸ್ತು ಅದರ ಅಭಿವ್ಯಕ್ತಿ, ಸ್ವರೂಪ ಎಲ್ಲವೂ ಇವತ್ತಿನವರೆಗಿನ ಎಲ್ಲ ಕವಯತ್ರಿಯರ ಮೇಲೂ ಒಂದಿಲ್ಲೊಂದು ಬಗೆಯಲ್ಲಿ ಪ್ರಭಾವ ಬೀರಿಯೇ ಇದೆ.

**ಪ್ರತಿಭಟನೆಯ ನಂತರ ಏನು?**

ಪ್ರತಿಭಟನೆ ಮಹಿಳಾ ಕಾವ್ಯದ ಪ್ರಧಾನ ಧಾರೆಯೂ ಹೌದು, ಆತ್ಯಂತಿಕ ಸತ್ಯವೂ ಹೌದು. ಆದರೆ ಅದನ್ನು ವಿನ್ಯಾಸಗೊಳಿಸುವಾಗ ಮಹಿಳಾ ಕಾವ್ಯಕ್ಕೆ ತಾನು ತಾನಾಗಿರುವುದನ್ನೂ, ತನ್ನೊಳಗಿನ ಕ್ರೋಧವನ್ನೂ ತೋಡಿಕೊಂಡ ಮೇಲೆ ತನ್ನ ಅರಿವಿನಾಳದ ಸಂಗತಿಗಳನ್ನು ಪ್ರಜ್ಞೆಗೆ ವಿಸ್ತರಿಸುತ್ತಾ ಹೋದಂತೆಲ್ಲಾ ತನ್ನ ಹೆಣ್ಣುಪಾತ್ರದ ಅವಸ್ಥೆಯನ್ನು ತಾನೇ ನಿರೂಪಿಸುವ ಜರೂರಿಗೆ ಎದುರಾಯಿತು. ಬರವಣಿಗೆ ಬಿಡುಗಡೆಯ ಹಾದಿಯಾಗಿ ಕಂಡಿತು. ಅದು ಅಸ್ತಿತ್ವವನ್ನು ನಿರೂಪಿಸಿಕೊಳ್ಳುವ ಅಗ್ನಿದಿವ್ಯವೂ ಹೌದು. ಸಮಾಜದ ಜೊತೆಗಿನ ಸಂಘರ್ಷಕ್ಕೆ ಎದುರಾದಾಗ ಉಂಟಾಗುವ ಸಂಚಲನೆ ಸಮಾಜದಲ್ಲಿ ತನ್ನ ಗುರುತೇ ಇಲ್ಲದೆ ಕೊಚ್ಚಿಹೋಗುವ ಅಪಾಯದಿಂದ ಪಾರುಮಾಡುತ್ತದೆ. ತನ್ನೊಳಗಿನ ಎಲ್ಲ ಭಾವಗಳಿಗೂ ಮಹತ್ವವನ್ನು ತಾನೇ ಒದಗಿಸಿಕೊಡುತ್ತಾ ಗುಪ್ತಗಾಮಿನಿಯಾತ್ತಾಳೆ. ಧೋರಣೆಗಳಿಂದಲೇ ತುಂಬಿದ ಪುರುಷನಿಗಿರುವ ಮನೋಸಂಕೀರ್ಣತೆಗಿಂತ ಭಿನ್ನವಾದ ತನ್ನ ಮನೋಸಂಕೀರ್ಣತೆಗೆ ಶಾಬ್ದಿಕದ ಜೊತೆ ಕಲಾತ್ಮಕತೆಯನ್ನೂ ಬೆರೆಸಿದ ಒಳನೆಯ್ಗೆಯಲ್ಲಿ

ಮರುಜೀವ ದಕ್ಕುವತ್ತ ಹೆಜ್ಜೆ ಇಟ್ಟಿದ್ದಾಳೆ. ಈ ಮೂಲಕ ತನ್ನ ವ್ಯಕ್ತಿತ್ವದ, ಭಿನ್ನ ದೈಹಿಕವಾದ ಅನುಭವದ ಅಭಿವ್ಯಕ್ತಿಗೆ ನಿಖರವಾದ ರೂಪುಕೊಟ್ಟಿದ್ದಾಳೆ.

## ಕವಿತೆಯ ವಸ್ತು

ಮಹಿಳಾ ಕಾವ್ಯದಲ್ಲಿ ಮಹತ್ತು ಒಳಗಿನ ಸಂಗತಿಗಳ ಮೂಲಕವೇ ರೂಪುಗೊಳ್ಳುತ್ತದೆ. ಆಶಯ ಅನುಭವಗಳ ಮೂಲಕವೇ ಅನಾವರಣಗೊಳ್ಳುತ್ತದೆ, ಅಭಿವ್ಯಕ್ತಿ ಸಹಜತೆಗೆ ಕನ್ನಡಿ. ಈ ಎಲ್ಲ ಕಾರಣಕ್ಕೆ ಅವಳಿಗೆ ತನ್ನ ಒಳಗನ್ನು ಹೊರಗಿನ ಸಂಗತಿಗಳ ಜೊತೆ ಬೆರೆಸುವಾಗ ತುಂಬಾ ಸರಳವಾದ ಪ್ರತಿಮೆಗಳ, ರೂಪಕಗಳ ನೇರ ಮಾತುಗಳ ಮೂಲಕ ಅಭಿವ್ಯಕ್ತವಾಗುತ್ತದೆ. ಇವು ರೂಪುಗೊಳ್ಳುವಾಗ ಜಗತ್ತಿನ ಅಥವಾ ಅಂತರಂಗದ ಗ್ರಹೀತಗಳ ಸೂಕ್ಷ್ಮತೆ ಮತ್ತು ಆತ್ಮ ನಿರೀಕ್ಷೆಗಳು ಭಾವುಕ ಮತ್ತು ತನ್ನ ಸುತ್ತಾ ಕೋಟೆಯಂತೆ ಕಟ್ಟಿರುವ ಸಾಮಾಜಿಕ ಮತ್ತು ಲಿಂಗ ರಾಜಕಾರಣವನ್ನು ಸುತ್ತಿ ಆರ್ಥಿಕತೆ ಹಾಗೂ ಧರ್ಮದ ಕಡೆಗೂ ಹರಿಯುತ್ತದೆ. ಇವುಗಳಿಂದ ಪ್ರಣೀತವಾದ ಹೆಣ್ಣು ಬದುಕಿನ ಸತ್ಯಗಳು ಕಾವ್ಯದಲ್ಲಿ ನಿರೂಪಿತವಾಗುತ್ತದೆ. ಈ ಸತ್ಯಗಳಿಗೆ ಮಾತುಕೊಡುವಾಗ ಸಮಾಜಕ್ಕೆ ಹೀಗಾಗಿದೆ ಎಂದು ಮೃದುವಾಗಿ ಹೇಳುವ, ನೀತಿಯನ್ನು ಬೋಧಿಸುವ, ಕಟುವಾಗಿ ಮುಖಾಮುಖಿಯಾಗುವ ತನ್ನದೇ ದಾರಿಗಳನ್ನು ಕಂಡುಕೊಳ್ಳುತ್ತಾಳೆ. ಹೀಗಾಗೇ ಗಂಡು ಭಾಷೆಯಯನ್ನೂ, ಅದು ಹೇಳುವ ಕಲಾತ್ಮಕತೆಯನ್ನು ನೇರವಾಗಿ ತಿರಸ್ಕರಿಸುತ್ತದೆ. ಮತ್ತು ತನ್ನದೇ ಕಲಾಮೀಮಾಂಸೆಯನ್ನೂ ರೂಪಿಸಿಕೊಳ್ಳಲು ಹವಣಿಸುತ್ತದೆ. ಮತ್ತು ಅಭಿವ್ಯಕ್ತಿಗೆ ತನ್ನದೇ ಆದ ಭೂಮಿಕೆಯನ್ನು ರೂಪಿಸಿಕೊಳ್ಳುತ್ತದೆ.

ಕವಿತೆ ಎನ್ನುವುದು ದಿನ ನಿತ್ಯ ನಡೆಯುವ ಸಹಜ ಕ್ರಿಯೆ ಎನ್ನಿಸುವುದು ತನ್ನ ದೈನಿಕದ ಜೊತೆ ಅದನ್ನು ಜೋಡಿಸುವುದರಿಂದ. ಜೋಡಿಸುವುದನ್ನು ಸಂರಚನೆ ಎಂದು ತಾಂತ್ರಿಕವಾಗಿ ಹೇಳಲಾಗಿದೆ. ಈ ಸಂರಚನೆಯಲ್ಲಿ ಭಾವ ಮತ್ತು ಭಾಷೆ ಬಹು ಮುಖ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಕನ್ನಡ ಅಭಿಜಾತ ಮಹಿಳಾ ಕಾವ್ಯದ ನೆಲೆಗಟ್ಟಿರುವುದು ಪ್ರತಿಭಟನೆಯಲ್ಲಿ, ಪ್ರತಿಭಟನೆ ನೆಲಸಂಸ್ಕೃತಿಯ ವಿರುದ್ಧ, ನೀತಿ ನಿಯಮಗಳ ವಿರುದ್ಧ ಗಂಡಿನ ಸ್ವರತಿಯ ವಿರುದ್ಧ. ಗಟ್ಟಿಯಾಗಿ ಇದನ್ನು ಅಲ್ಲಗಳೆಯುವ ಕಾವ್ಯಕ್ಕೆ ಸಿಕ್ಕಿದ್ದು ಪಿತೃಸಂಸ್ಕೃತಿಯಲ್ಲಿ ಹೆಣ್ಣಿನ ಮೇಲೆ ಹೇರಲ್ಪಟ್ಟ ನಿಯಂತ್ರಣಕ್ಕೆ ಒಳಗು ಮಾಡುವ ಸಂಗತಿಗಳ ಬಗ್ಗೆ. ಮತ್ತು ಗಂಡಿಗೆ ಹೆಣ್ಣಿನ ಮಹತ್ವವನ್ನು, ಅವಳ ಇರುವನ್ನು ಅವಳ ಒಳಗಿನ ಉನ್ಮಾದ ಉದ್ರೇಕ ಪ್ರೇಮ ಕಾಮಗಳಂಥಾ ತೀವ್ರಭಾವವನ್ನು ಹೊರಗೆಡುವುದರ ಬಗ್ಗೆ. ಕಾವ್ಯ ಸಂಕಲನದ ಹೆಸರುಗಳನ್ನು ಕೂಡಾ ಹಾಗೇ ಇಡಲಾರಂಭಿಸಿದರು. (ಈ ನೆಲದ ಹಾಡು, ತಿರುಗಿ ನಿಂತ ಪ್ರಶ್ನೆ, ಅಸ್ಮಿತಾ, ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ ಹೀಗೆ) ಗಂಡಿನ ಜೊತೆ ಜಗಳವಾಡುತ್ತಲೇ ತನ್ನನ್ನು ಕಾಡುವ ಸಂಗತಿಗಳನ್ನು ನಿರ್ಭಿಡೆಯಿಂದ ಜಗತ್ತಿನ ಎದುರು ಇಡುವ ಮೂಲಕ ಗಂಡಿಗಿಂತ ಭಿನ್ನವಾದ ಸಂವೇದನೆಯೊಂದು ಇದೆ ಎನ್ನುವುದನ್ನು ಸಾರುವ ಗುರಿಯನ್ನು ಹೊಂದಿದ್ದರು.

ಹಡೆವ ಯಂತ್ರವನ್ನಾಗಿಸಿ, ವಂಶವನ್ನು ಬೆಳೆಸುವ ಸಾಧನವಾಗಿ ಮಾತ್ರ ನೋಡಲಾಗಿದ್ದಕ್ಕೆ ಕೋಪ, ಗಂಡು ನೀಡಿದ ಸಾಮಾಜಿಕ ಮಾದರಿಗಳನ್ನು

ಅನುಸರಿಸಬೇಕಾದ ಅನಿವಾರ್ಯತೆಯನ್ನು ತಂದಿಟ್ಟಿದ್ದಕ್ಕೆ ಬೇಸರ. ಪರಂಪರೆಯೇ ಅವಳ ಮನಸ್ಸಿನಲ್ಲಿ ಅನೇಕ ಕತ್ತಲೆಯ ಕೋಣೆಗಳನ್ನು ನಿರ್ಮಿಸಿಬಿಟ್ಟಿತ್ತು. ಈ ಕತ್ತಲೆ ಕೋಣೆಗಳು ಅವಳಲ್ಲಿನ ಸೃಜನಶೀಲತೆಗೆ ಆರಂಭದ ಬಿಂದುವಾಯಿತು.

ಕಥನ ಹಂಗನ್ನು ಮೀರುವ ಕಾವ್ಯದಲ್ಲಿ ಕಥೆ ಇದ್ದರೂ ಅದು ಗೌಣ. ಕಥೆ ಕಾದಂಬರಿ ನಾಟಕಗಳು ವಿವರಗಳಲ್ಲೇ ಶಕ್ತಿದುಂಬಿ ಸಂವಹಿಸುತ್ತದೆ. ಕಾವ್ಯ ಹಾಗಲ್ಲ ಹಂಗುಗಳನ್ನು ಮೀರಿ ಪ್ರತಿಮೆ, ರೂಪಕಗಳ ಮೂಲಕ ವ್ಯಕ್ತವಾಗುತ್ತದೆ. ಇದರ ಗುಣ ಹಸ್ವ ಆದರೆ ಪರಿಣಾಮ ಮಾತ್ರ ದೀರ್ಘ. ಒಂದು ಕ್ಷಣದ ಭಾವ, ಭೂತ ಮತ್ತು ಭವಿಷ್ಯತ್ತುಗಳ ಹಾಸು ಹೊಕ್ಕ ನೆಯ್ಗೆಯಲ್ಲಿ ಅಪೇಕ್ಷಿತವಾದ ಒಂದು ಸ್ಥಿತಿಯಲ್ಲಿ ಮಹಿಳಾ ಕಾವ್ಯ ನಿಲ್ಲುತ್ತಿದೆ. ಆದ್ದರಿಂದಲೇ ಭಾವನಾತ್ಮಕವಾದ ಸ್ವಾತಂತ್ರ್ಯ ಪದಕ್ಕಿಂತ ಬಿಡುಗಡೆಯನ್ನೇ ನಂಬಿದೆ.

ಕವಿತೆ ಎಂದರೆ ಅಂತರಂಗದ ಒತ್ತಡದ ಬಿಡುಗಡೆ ಎನ್ನುವ ಹಾಗೆ ತನ್ನ ಒಳಗಿನ ಕಲಾಲೋಕದ ಅನಾವರಣ ಕೂಡಾ ಹೌದು.

ಮಗು ಹೊಸಲನ್ನು ದಾಟಬೇಕು ಅದು ಸಂಭ್ರಮ; ಆದರೆ ಹೆಣ್ಣು ಹೊಸ್ತಿಲ ಒಳಗೇ ಇರಬೇಕು ಇದು ಸಮಾಜದ ನಿಯಮ. ಅಂತೆಯೇ ಕಿಟಕಿ ಕೂಡಾ. ಮನೆ ಎನ್ನುವುದು ನಿಯಮಿತ ಬೆಳಕು ಹಾಯುವ ಜಾಗ ಮಾತ್ರ ಹೊರಜಗತ್ತಿನ ಜೊತೆ ಸಂಪರ್ಕ ಸಾಧಿಸುವ ಏಕೈಕ ಮಾರ್ಗ ಎನ್ನುವಾಗ ಮೀರುವಿಕೆಯ ಚಿತ್ರಗಳು ಹೇರಳವಾಗಿ ಇಲ್ಲೇ ಕಾಣತೊಡಗಿತ್ತು. ಆಕಾಶ ಅದರಲ್ಲಿ ಹಾರುವ ಹಕ್ಕಿ ವಾಸ್ತವ ಚಿತ್ರಗಳಂತೆ ಅವಳಿಗೆ ಫ್ಯಾಂಟಸಿಯೂ ಆಯಿತು. ವಸ್ತು ಯಾವುದಾದರೇನು? ಅದರೊಂದಿಗೆ ತನ್ನ ಸಂಬಂಧ ಸ್ಥಾಪಿತವಾಗದೆ ಏನನ್ನೂ ಹೇಳಲಾಗುವುದಿಲ್ಲ. ಸಾರಿಗೆ ಹಾಕುವ ಒಗ್ಗರಣೆ (ವೈದೇಹಿ), ಚಹಾ ಮಾಡುವ (ಶ್ರೀದೇವಿ ಕೆರೆಮನೆ), ಮೊರದಲ್ಲಿ ಕೇರುವ ಧಾನ್ಯ (ಲಲಿತಾ ಸಿದ್ಧಬಸವಯ್ಯ), ಒಲೆ ಉರಿಸುವುದು (ಕವಿತಾ ರೈ), ನೀರು ಸೇದುವುದು (ವಿನಯಾ) ಕಸಿ ಮಾಡುವುದು (ಸ. ಉಷಾ) ಕೊಚ್ಚಿ ಹಾಕುವ ಗಿಡದಲ್ಲಿನ ತಾಕತ್ತನ್ನು, ಕೊಚ್ಚುವ ಕೈಗಳ ಕೋಪವನ್ನೂ ಮತ್ತೆ ಚಿಗುರುವ ಅಪರಿಮಿತವಾದ ಶಕ್ತಿಯನ್ನೂ (ನುಗ್ಗೆ ಮರ– ಸಬೀಹಾ ಭೂಮಿಗೌಡ) ಹೆಣ್ಣಿನ ಅಸ್ಮಿತೆಯನ್ನೇ ಪ್ರಶ್ನಿಸುವ ಹೆಸರಿನ ಪ್ರಶ್ನೆಗಳು (ಮಲ್ಲಿಕಾ ಗಂಟಿ) ಹೆಣ್ಣುಧ್ವನಿಯ ಸಾಧ್ಯತೆಯನ್ನೇ ಪ್ರಶ್ನಿಸುವ ಸಿಕಾಡ ಜಗತ್ತಿನ ವಿಚ್ಛಿದ್ರಕ ಸಂಗತಿಗಳು (ಎಲ್ ಸಿ ಸುಮಿತ್ರಾ) ಮರ್ಯಾದಾ ಹತ್ಯೆಯ ನೋವುಗಳು (ಲತಾ ಗುತ್ತಿ) ಹೀಗೆ ಸ್ಪಷ್ಟ ಚಿತ್ರಗಳ ಮೂಲಕ ಮೂಲೆ ಮುಡುಕುಗಳಲ್ಲಿ ಮರೆಯಾಗಿದ್ದ ಸಂಗತಿಗಳನ್ನು ಕವಿತೆಯ ಪರಿಧಿಯಲ್ಲಿ ತಂದಳು, ಬಾಲ್ಯ ಯವ್ವನ, ಪ್ರೇಮ, ವಿರಹ, ದೈಹಿಕ ವಾಂಛೆಗಳು, ತಾಯ್ತನದ ತುಡಿತ, ಕುಟುಂಬ ಎಲ್ಲವನ್ನೂ ಬರೆಯುವುದರ ಮೂಲಕ ಭಿನ್ನ ಸಂವೇದನೆಯನ್ನು ದಾಖಲಿಸುವಾಗ ತನ್ನ ಮೇಲೆ ಪ್ರಭಾವಬೀರಿದ, ತನ್ನನ್ನು ಅತ್ಯಂತ ಅವಮಾನಕ್ಕೆ ಗುರಿಮಾಡಿದ ಎಲ್ಲವನ್ನೂ ಪದೇಪದೆ ನೆನಪಿಸಿಕೊಳ್ಳುತ್ತಾಳೆ. ಅಂಥಾ ಪುರಾಣ ಪಾತ್ರಗಳಾದ ಸೀತೆ, ದ್ರೌಪದಿ, ಅಹಲ್ಯೆ, ಅಮೃತಮತಿ, ದಮಯಂತಿ, ಚಂದ್ರಮತಿ ಹೀಗೆ ಸಾಲು ಸಾಲು ಪುರಾಣ ಪಾತ್ರಗಳನ್ನು ತನ್ನ ಆಶಯಕ್ಕೆ ದುಡಿಸಿಕೊಂಡಿದ್ದಾಳೆ. ಅವಳಿಗೆ ಇವು ಪಾತ್ರಗಳು ಮಾತ್ರವಲ್ಲ ತನ್ನ ನಿಜದ ನೆಲೆಯನ್ನು

ತೋರುತ್ತಿರುವ ಕೈಮರ. ನಿರಾಸೆ ವಿಷಾದಗಳು ಬಿಡದೆ ಹಿಂಬಾಲಿಸಿದಾಗ ಇವುಗಳನ್ನು ನೆನೆಪಿಸಿಕೊಳ್ಳುವ ಮೂಲಕ ತನ್ನ ನೆಲೆಯ ಹುಡುಕಾಟವನ್ನು ಶುರುಮಾಡಿದಳು. ಬಿಡುಗಡೆ ದಾರಿಗೆ ಹೊಂದಿಕೊಳ್ಳುವಂತೆ ಆತ್ಮಕಥನಾತ್ಮಕ ಸ್ವಕೀಯ ನೆಲೆಗಳನ್ನು ಕಂಡುಕೊಂಡಳು. ಇನ್ನು ಬುದ್ಧ, ಕೃಷ್ಣ, ರಾಮರ ಥರದ ಪಾತ್ರಗಳ ಮೂಲಕ ತನಗಾದ ಅನ್ಯಾಯಕ್ಕೆ ನ್ಯಾಯವನ್ನು ಕೇಳುತ್ತಾಳೆ. ಯಾವ ಹೆಣ್ಣಿಗೋ ಎಂದೋ ಆದ ಅನ್ಯಾಯ, ತನಗೇ ಆದ ಅನ್ಯಾಯ ಎನ್ನುವ ತೀವ್ರತೆಯು ಮತ್ತೆ ಮತ್ತೆ ಆ ಕಥಾನಕಗಳನ್ನು ನೆನಪಿಸಿಕೊಳ್ಳುತ್ತ, ಅವುಗಳನ್ನು ತನ್ನ ದೈನಿಕದ ಜೊತೆ ಸೇರಿಸುತ್ತಾಳೆ. ತನಗೆ ವಿಲ್ ಬರೆಯಲಾಗದ ಆಸ್ತಿ ಅಧಿಕಾರ ದಕ್ಕದೇ ಹೋದರೂ ತನಗಿರುವ ಆಸ್ತಿ ವಿವರಗಳನ್ನೂ ಅದರ ಅಮೂಲ್ಯತೆಯನ್ನೂ (ಶಶಿಕಲಾ ವೀರಯ್ಯಸ್ವಾಮಿ–ನನ್ನ ಉಯಿಲು) ಹೆಣ್ಣುಮಕ್ಕಳ ಸಬಲೀಕರಣವನ್ನು ಹೊರ ಜಗತ್ತು ಹೇಳುತ್ತಿದ್ದರೂ ರೆಸ್ಕ್ಯೂ ಹೋಂಗಳಲ್ಲಿನ ಅವಳ ದಾರುಣತೆ ಬೇರೆಯೇ ಆಗಿದೆ (ಎಲ್ ಜಿ ಸುಮಿತ್ರ). ಇನ್ನು ಗಂಡಿನ ಚರಿತ್ರೆ ಹೆಮ್ಮೆಯದ್ದು ಎಂದು ಹೇಳುವಾಗ ಅಲ್ಲ ಅದು ವಿಕಲಾಂಗ ಸ್ಥಿತಿಯೇ ಹೊರತು ಅದರಲ್ಲಿ ಹೆಮ್ಮೆಗೆ ಕಾರಣಗಳೇ ಇಲ್ಲ (ವಿಕಲಾಂಗ ಪುರುಷನ ಶಿಶ್ನಪುರಾಣ– ಅನಸೂಯ ಕಾಂಬಳೆ) ಎನ್ನುತ್ತಾ ಅಹಂನ್ನು ಒಡೆಯುತ್ತಾಳೆ. ಹೀಗೆ ಅನೇಕ ಕೊಲಾಜ್‌ನ ಮೂಲಕ ಹೊಸ ವಿನ್ಯಾಸವೊಂದು ಕಟ್ಟಿಕೊಡುತ್ತಾ ಹೋಗುತ್ತಾಳೆ. ಈ ನೆಲೆಯಲ್ಲಿ ಕತ್ತಲೆಯನ್ನು, ಒಡೆದ ಕನ್ನಡಿ, ಕಾಡು ಮತ್ತು ನದಿಗಳನ್ನು ಪ್ರತಿಮೆಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ. 'ನೋಡಬಾರದು ಚೀಲದೊಳಗಣಬು' (ವೈದೇಹಿ) ಎನ್ನುತ್ತಾ ಗಂಡಸರಿಗೆ ಅರ್ಥವೇ ಆಗದ ವ್ಯಾನಿಟಿ ಬ್ಯಾಗ್‌ನ ಲೋಕದ ದರ್ಶನ ಮಾಡಿಸುವ ಯತ್ನ ಮಾಡುತ್ತಾರೆ. ಈ ನುಡಿಗಟ್ಟು ಪುರುಷನಿಗೆ ಸಾಧ್ಯವೇ ಇಲ್ಲ ಎನ್ನುವ ಹಾಗೇ ಹೊಸದೇ ಜಗತ್ತು ಅನಾವರಣಗೊಳ್ಳುತ್ತದೆ. ಜಡೆ ಹಾಕುವುದು, ಕುಂಟಾಪಿಲ್ಲೆ ಆಟ, ಅಳಗುಳಿಮಣೆ, ಸೀರೆ ಉಡುವುದು ಹೀಗೆ ಹೊಸ ಕಾವ್ಯ ಭಾಷೆ ನಿರ್ಮಾಣ ಆಗುತ್ತಿದೆ. ಮಹಿಳಾ ಕಾವ್ಯದಲ್ಲಿ ಇನ್ನು ಪುರಾಣಗಳಂತೂ ತನ್ನ ಆಕಾಶದರಮನೆಗಳನ್ನು ಬಿಟ್ಟು ನೆಲದ ಮೇಲೆ ನಡೆದಾಡುವ ಸಾಮಾನ್ಯ ಜೀವಗಳಂತೆ ತನ್ನ ರೆಕ್ಕೆ ಪುಕ್ಕಗಳನ್ನು ಕಳಚಿಟ್ಟು ನಿರಾಳವಾಗುತ್ತವೆ ('ಜಾತ್ರೆಯಲ್ಲಿ ಶಿವ'– ಸವಿತಾ ನಾಗಭೂಷಣ) ಇದು ಮಹಿಳಾ ಕಾವ್ಯ ಹೊಸ ನುಡಿಗಟ್ಟಿನ ಮೂಲಕ ಪ್ರವೇಶ ಪಡೆದಿದೆ ಎನ್ನುವುದಕ್ಕೆ ಆಧಾರಗಳನ್ನು ಒದಗಿಸಿಕೊಡುತ್ತದೆ. ಇದರೊಂದಿಗೆ ಆಧ್ಯಾತ್ಮಿಕತೆಯೂ ಜೀವನದ ಒಂದು ಭಾಗವಾಗಿ ಇಲ್ಲಿ ದುಡಿಯುತ್ತಲೇ ಇದೆ. ಈ ಆಧ್ಯಾತ್ಮಿಕತೆ ಜೀವನಾನುಭವದ ಒಳಗೆ ಗಾಢವಾಗಿ ಗೂಡುಕಟ್ಟಿದ ಜೀವನ ಶ್ರದ್ಧೆಯಿಂದಲೇ ಹುಟ್ಟಿಕೊಂಡಿದ್ದು ಎನ್ನುವುದನ್ನು ಮರೆಯುವಂತಿಲ್ಲ.

ಇನ್ನು ಹೊಸಬರ ಕಾವ್ಯವಂತೂ ವೈವಿಧ್ಯತೆಯ ಆಗರ. ಆಧುನಿಕ ಓದಿನ ಜೊತೆಗೆ ಆಧುನಿಕ ಜಗತ್ತಿಗೂ ಒಮ್ಮೆಲೆ ತೆರೆದುಕೊಂಡ ಯುವ ಜನಾಂಗಕ್ಕೆ ತನ್ನ ಸಾಂಸ್ಕೃತಿಕ ಹಿನ್ನೆಲೆಯ ಸ್ಪಷ್ಟ ಕಲ್ಪನೆಗಳಿವೆ. ಆದ್ದರಿಂದಲೇ ಹೊಸಯುಗದ ತಲ್ಲಣಗಳಿಗೆ ಭಾಷೆಯನ್ನು ಹೊಸದಾಗೇ ಹೊಂದಿಸುವಲ್ಲಿ ಯಾಶಸ್ವಿಯಾಗಿರುವುದು. ಮತ್ತು ಹೊಸ ಪರಿಭಾಷೆಗಳಲ್ಲಿ ಕಟ್ಟಿಕೊಡುತ್ತಿರುವುದು ಚಿಯರ್ಸ್ ಗರ್ಲ್, ಟ್ರಯಲ್ ರೂಂನ ಅಪ್ಸರೆಯರು, ಎಂಟ್ರೋಪಿ, ದೇವರದನ ಹೀಗೆ ಬೇರೆಬೇರೆ ಸ್ತರಗಳನ್ನು ಕವಿತೆಯ ಚೌಕಟ್ಟಿಗೆ ತರುತ್ತಿದ್ದಾರೆ. ಕಾವ್ಯ ಅಪ್ಪ, ಅಮ್ಮ, ಮನೆ, ಸಂಸಾರ ಎನ್ನುವ ಭಾವುಕ

ಲೋಕದ ಪಯಣ ಮಾತ್ರವಲ್ಲ, ಸ್ತ್ರೀ ದೈಹಿಕಗಳ ಮೂಲಕ ರೂಪುಪಡೆದವು ಮಾತ್ರವೇ ಅಲ್ಲ, ಅದರಾಚೆಗಿನ ಲೋಕಸತ್ಯಗಳಿಗೆ ಕಣ್ಣಾಗಬಲ್ಲದು ಕೂಡಾ ಎನ್ನುವುದನ್ನು ಗಾಢವಾಗಿ ಹೇಳುತ್ತದೆ.

ಆಕಾಶದಿಂದ, ಅಡುಗೆ ಮನೆಯಿಂದ, ಸಂಸಾರಿಕ ಚೌಕಟ್ಟಿನಿಂದ, ಜಾನಪದಗಳಿಂದ ಮಹಿಳಾ ಕಾವ್ಯ ವಸ್ತುಗಳನ್ನು ತರುತ್ತಿದೆ. ಇದು ಹೊಸ ಸಂಕಥನಗಳಿಗೆ ದಾರಿ ಮಾಡಿಕೊಟ್ಟು, ರೂಢಿಗತಾರ್ಥಗಳನ್ನು ಕಳೆದುಕೊಂಡ ಭಾಷೆ ಹೊಸ ಅರ್ಥದಲ್ಲಿ ಹೊಳೆಯುತ್ತದೆ. ಕಾವ್ಯದ ಮೂಲ ತಾತ್ವಿಕತೆ ಸಂಕಟವನ್ನು ಮಾತ್ರ ಹೇಳುವುದಲ್ಲ ಜೀವನದ ಸಾತತ್ಯತೆ, ಸಾಂದ್ರತೆಗಳನ್ನು ಕೂಡಾ ಹೇಳುವಂಥದ್ದು ಎನ್ನುವುದನ್ನು ಮನನ ಮಾಡಿಕೊಡುತ್ತದೆ.

ಇದರಿಂದ ಈವರೆಗೂ ಕನ್ನಡ ಕಾವ್ಯಲೋಕದಲ್ಲಿ ಪ್ರವೇಶಿಕೆಯನ್ನೇ ಪಡಕೊಳ್ಳದ ಅನೇಕ ಸಂಗತಿಗಳಿಂದ ಸಮೃದ್ಧವಾಯಿತು. ಆಶಯವನ್ನು ರೂಪಕ ಮಾಡಿಕೊಂಡು ಪ್ರೇರಕ ಅರಿವೊಂದರ ಮೂಲಕ ತಲುಪುವ ಪ್ರಯತ್ನ ಮಾಡಿದ್ದು, ಈ ನಿಟ್ಟಿನಲ್ಲಿ ಹೊಸ ಧ್ವನಿ, ಹೊಸ ಆಕೃತಿ, ಹೊಸ ವಸ್ತು ವಿನ್ಯಾಸ, ಹೊಸ ಲೋಕದೃಷ್ಟಿ, ಭಾಷಿಕ ವಿನ್ಯಾಸ, ನುಡಿಗಟ್ಟು, ಲಯ, ಹೊಸ ಕಲಾತ್ಮಕತೆ, ಹೊಸ ಕಾವ್ಯಮೀಮಾಂಸೆಯ ಹಂಬಲದೊಂದಿಗೆ ಪ್ರಕಟವಾಯಿತು. ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರು ಅವರೇ ಬರೆದರು. ಕೆಲವರು ಕಂಡುಡಿದ್ದನ್ನು ಬರೆದರು. ಹೀಗಾಗಿ ಮನೆಕೆಲಸದ, ಬೀದಿ ಕಸಗೂಡಿಸುವ, ಲೈಂಗಿಕ ಕಾರ್ಯಕರ್ತೆಯರು, ಗಾರ್ಮೆಂಟ್ಸ್ ಕೆಲಸ ಮಾಡುವವರು, ತಲಾಕ್‌ನ ತೂಗುಗತ್ತಿಯ ಕೆಳಗೆ ನಿಂತವರು, ಬುರ್ಕಾದ ಹಿಂಸೆ ಅನುಭವಿಸಿ ಬುರ್ಕಾವನ್ನು ತಿರಸ್ಕರಿಸಿದವರು– ಹೀಗೆ ಸಮಾಜದ ಭಿನ್ನ ಭಿನ್ನ ಸ್ತರದ ಸಮಸ್ಯೆಗಳನ್ನು ಕವಿತೆ ಮಾತಾಡಲು ಸಾಧ್ಯವಾಯಿತು. (ಧರ್ಮ ಸಮನ್ವಯತೆಯ ಬಗ್ಗೆ ಮಹಿಳಾ ಕಾವ್ಯ ಮಾತನಾಡಿದಷ್ಟು ಕನ್ನಡದಲ್ಲಿ ಆಧುನಿಕ ಮುಖ್ಯವಾಹಿನಿ ಕಾವ್ಯ ಮಾತಾಡಿಲ್ಲ) ಹೀಗಾಗಿ ಕಾವ್ಯದ ಗ್ರಹೀತವಾದ ಸಂಗತಿಗಳು ಪಕ್ಕಕ್ಕೆ ಸರಿದು ಹೋಯಿತು. ಹಲವು ಕಿರುದಾರಿಗಳು, ಕೊಲಾಜ್ ಮಾದರಿ, ಮಹಾಕಾವ್ಯಗಳು, ಖಂಡಕಾವ್ಯಗಳೂ ಸಿದ್ಧ ಚೌಕಟ್ಟುಗಳನ್ನು ಮುರಿದು ಕಟ್ಟುವ ಹಂಬಲಗಳು ಬೇರೆ ಬೇರೆ ಪ್ರಯೋಗಗಳಲ್ಲಿ ಸಿದ್ಧಿತವಾದವು. ಜಾಗತೀಕರಣ, ಉದಾರೀಕರಣ, ಆಧುನಿಕೋತ್ತರ ಸ್ಥಿತಿಯಿಂದಾಗಿ ಸಮುದಾಯದ ಆತಂಕಗಳಿಗೆ ಧ್ವನಿಯಾಯಿತು. ಪಾಶ್ಚಿಮಾತ್ಯ ಕಾವ್ಯದ ಪ್ರಭಾವ– ಬೋದಿಲೇರ್ ಎಲಿಯೆಟ್, ಝೆನ್ ಕಾವ್ಯ, ಹಾಯ್ಕುಗಳು, ಆಫ್ರಿಕನ್ ಕಾವ್ಯ, ಅರಬ್ ಮಹಿಳಾ ಕಾವ್ಯ ಹೀಗೆ ಅನೇಕ ಪ್ರಭಾವಗಳಲ್ಲಿ ಕವಿತೆ ಹಾಯತೊಡಗಿತು.

## ಮಾನಸಿಕ ಸಂರಚನೆ ಮತ್ತು ಮಹಿಳಾ ಕಾವ್ಯ

ಗಂಡು ಕೇಂದ್ರೀಕೃತ ಹೆಣ್ಣಿನ ಕೇಂದ್ರಗಳು ಚೆದುರಿದಂತಿದೆ. ಅಂಗರಚನೆಯಲ್ಲಿ ಮಾತ್ರವಲ್ಲದೆ; ಅವಳ ಮಾನಸಿಕ ಸ್ಥಿತಿ ಕೂಡಾ ಇದಕ್ಕಿಂತ ಭಿನ್ನವಲ್ಲ. ಹೀಗಾಗೇ ಬಿಡುಗಡೆಯ ಹಾದಿಗಳನ್ನು ಅವಳು ಹೀಗೆ ಬಹುವಾಗೆ ಹುಡುಕಿಕೊಳ್ಳುತ್ತಾಳೆ. ಸಾಧಾರಣವಾಗಿ ಕಟ್ಟಳೆಗಳ ನಡುವೆಯೇ ತನ್ನೆಲ್ಲ ಚಿಂತನೆಗಳನ್ನೂ ಕ್ರಿಯೆಗಳನ್ನು ಇಡಲು ಬಯಸುತ್ತಾಳೆ. ಆದರೆ ಅದನ್ನು ದಾಟುವ ಹಂಬಲಮಾತ್ರ ಅವಳ ಶ್ರದ್ಧೆಯ ಮೂಲದಿಂದಲೇ

ಹುಟ್ಟಿಕೊಂಡಿದೆ. ಲಕ್ಷ್ಯ ಅದೇ ಆದರೆ ಹೊರಗೆ ತಾನು ಸಮಾಜದ ಮುದ್ದಿನ ಮಗಳಾಗಲಿಕ್ಕೆ ಬಯಸುತ್ತಾಳೆ. ತಾನು ತಾನಾಗುವ ಹಂಬಲವನ್ನು ಮತ್ತೆ ತನ್ನೊಳಗೆ ಕಾಪಿಟ್ಟುಕೊಂಡ ಕತ್ತಲೆಯ ಕೋಣೆಯೊಳಗೆ ತಳ್ಳುತ್ತಾಳೆ. ಹಾಗೆ ತಳ್ಳಿದ ಆ ಹಂಬಲ ಅವಳ ಸೃಜನಕ್ರಿಯೆಗನುಗುಣವಾಗಿ ಬೆಳೆಯುತ್ತದೆ, ಅಥವಾ ಮುರುಟುತ್ತದೆ.

ಜಗದ ಹುಟ್ಟಿನ ಮೂಲವಾದ ಗರ್ಭ ಅವಳ ಹೆಮ್ಮೆಯಂತೆ ಅವಮಾನವೂ ಆಗಿರುವುದು ಇಂಥಾ ವೈರುಧ್ಯಗಳಿಗೆ ಕಾರಣವಾಗಿದೆ ಎಂದೆ ಹೇಳಬಹುದಾಗಿದೆ. ಅವಳಿಗೆ ಎಲ್ಲಕ್ಕೂ ಕಾರಣಗಳನ್ನು ಹೇಳಲೇಬೇಕಾದ ಜರೂರತ್ತನ್ನು ಈ ಸಮಾಜ ತಂದೊಡ್ಡಿದೆ, ಕಡೆಗೆ ತನ್ನ ಗರ್ಭಕ್ಕೂ ಕೂಡಾ. ಹೀಗಾಗಿ ಅವಳ ಇಚ್ಚೆ ಅವಳ ಇಚ್ಚೆಯಾಗಿ ಉಳಿಯುವುದಿಲ್ಲ. ಕಾಮವೂ ಕೂಡಾ ಅವಳು ನಿಯಂತ್ರಿಸಲೇಬೇಕಾದ ಸಂಗತಿಯಾಗುತ್ತದೆ. ನದಿ ಜೋರಾಗಿ ಹರಿದು ಸಮುದ್ರ ಸೇರುವುದು ದೊಡ್ಡ ವಿಷಯವಲ್ಲ ಆದರೆ ಅಂಚಿಗೆ ತಾಕಿ ಅಲ್ಲಲ್ಲಿ ಸುಳಿಗಳನ್ನು ಸೃಷ್ಟಿಸುವಂತೆ ಈ ಎಲ್ಲಾ ಸಂಗತಿಗಳೂ ಅವಳಲ್ಲಿ ಸುಳಿಯೊಂದನ್ನು ಸೃಷ್ಟಿಸುತ್ತವೆ.

**ಮಹಿಳಾ ಕಾವ್ಯ – ತೆರೆಯ ಬೇಕಿರುವ ದಾರಿಗಳು**

ಇವತ್ತಿನ ಕಾವ್ಯ ಮುಂದಿನ ಕಾವ್ಯದ ದಿಕ್ಕುಗಳನ್ನು ನಿರ್ಧರಿಸುತ್ತಿರುತ್ತದೆ. ಇರುವ ಮತ್ತು ಆಗುವ ದಾರಿಗಳ ನಡುವೆ ಒಂದು ಸಂಘರ್ಷ ಇದೆ. ಈ ಹಿನ್ನೆಲೆಯಲ್ಲಿ ಹೊಸ ಮಿಥ್‌ಗಳ ರಚನೆಗೆ ಸಿದ್ಧಗೊಳ್ಳಲಾಯಿತು. ಹಾಗೇ ಮುಂದೆ ಕೂಡಾ ಹೊಸ ಮಿಥ್‌ಗಳನ್ನು ಎಲ್ಲಿಂದ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಗುರುತರವಾದ ಜವಾಬ್ದಾರಿ ಇದ್ದೇ ಇದೆ. ಇದು ನಮ್ಮ ಪುರಾಣಗಳಿಂದಲೇ ಆಗಬೇಕು ಅಂತೇನೂ ಇಲ್ಲ, ವಿಜ್ಞಾನಗಳಿಂದಲೂ ಆಗಬಹುದು, ತಂತ್ರಜ್ಞಾನದಿಂದಲೂ ಆಗಬಹುದು ಅಂಥಾ ಪ್ರಯತ್ನ ಮಾಡುತ್ತಿರುವವರು ಇಲ್ಲವೆಂದಲ್ಲ ಆದರೆ ತುಂಬಾ ಕಡಿಮೆ. (ಈ ಸಂಕಲನದಲ್ಲಿ ಟೀನಾಶಶಿಕಾಂತ್‌ರ ವಿಜ್ಞಾನವನ್ನು ಆಧಾರವಾಗಿಟ್ಟುಕೊಂಡ ಕವಿತೆಯೊಂದನ್ನು ಕೊಡಲಾಗಿದೆ) ಇಂಥಾ ದೊಡ್ಡ ಆಕಾಂಕ್ಷೆ ಮಹಿಳಾ ಕಾವ್ಯ ಮುಂದುವರೆಸಬೇಕು ಎಂದರೆ ಕೆಲ ಗಡಿಗಳನ್ನು ನಾವೇ ವಿಸ್ತರಿಸಿಕೊಳ್ಳಬೇಕಿದೆ. ಮಧ್ಯಮ ವರ್ಗದ ಮಹಿಳಾ ಕಾವ್ಯದ ಜೊತೆಗೆ ಬುಡಕಟ್ಟು ಮಹಿಳೆಯರು, ಮುಸ್ಲೀಂ ಮಹಿಳೆಯರ, ಎಲೈಟ್ ಕ್ಲಾಸ್‌ಗಳಿಂದ ಮಹಿಳಾಕಾವ್ಯ ಬರಬೇಕು. ಪದ್ಮ ಸಚ್ಚಿದೇವ್ ಅವರು ಡೋಗ್ರಿಯಂಥಾ ಸಣ್ಣ ಭಾಷೆಯಲ್ಲಿ ಬರೆಯುತ್ತಿರುವ ಕವಯತ್ರಿ, ಜಾನಪದ ಹಿನ್ನೆಲೆಯನ್ನು ಆಧುನಿಕತೆಗೆ ಹೊಂದಿಸಿ ಕಾವ್ಯದ ಅಪಾರ ಸಾಧ್ಯತೆಯನ್ನು ಅನಾವರಣ ಗೊಳಿಸುತ್ತಿದ್ದಾರೆ. ನಿರ್ಮಲಾ ಪುತುಲ್ ಹಿಂದಿ ಭಾಷೆಯಲ್ಲಿ ಬರೆಯುತ್ತಿರುವ ಕವಯತ್ರಿ. ಈಕೆ ತನ್ನ ಬುಡಕಟ್ಟಿನ ಸಂಗತಿಗಳನ್ನು ಕವಿತೆಗೆ ತಂದು ಅದ್ಭುತವಾದ ರೂಪಕಗಳನ್ನಾಗಿಸುತ್ತಿದ್ದಾರೆ. ಕನ್ನಡವೂ ತುಂಬು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ್ದು, ಬುಡಕಟ್ಟುಗಳು, ಜಾನಪದ ಪ್ರತಿಮೆಗಳಿಂದ ಆಧುನಿಕ ಜಗತ್ತನ್ನು ಪ್ರವೇಶಿಸಬೇಕಿದೆ. ನೆಲಮೂಲ ಸಂಸ್ಕೃತಿಗಳಿಂದ, ಶ್ರಮಮೂಲ ಸಂಸ್ಕೃತಿಗಳಿಂದ, ಬುಡಕಟ್ಟುಗಳಿಂದ ಮಹಿಳಾಕಾವ್ಯ ಬಹುವಾಗಿ ಪ್ರಭಾವಿತವಾಗಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನಗಳು ಆಗಬೇಕಿದೆ. (–ಲಲಿತಾ ಸಿದ್ದಬಸವಯ್ಯ, ಧರಣಿದೇವಿ ಮಾಲಗತ್ತಿ, ಲತಾ ರಾಜಶೇಖರ್ ಥರದವರು ಪ್ರಯೋಗಗಳನ್ನು ಮಾಡುತ್ತಿದ್ದಾರೆ–) ಆಗೊಮ್ಮೆ ಚಿಮ್ಮು ಹಲಗೆಯ ಮೇಲೆ ಕಾವ್ಯ ಜಿಗಿಯುತ್ತದೆ.

## ಈ ಸಂಕಲನದ ಸ್ವರೂಪ

ಮಹಿಳಾ ಕಾವ್ಯದ ಈ ಸಂಕಲನ ಯಾಕೆ ಬೇಕು? ಎನ್ನುವ ಪ್ರಶ್ನೆಯನ್ನು ನನಗೆ ನಾನೇ ಹಾಕಿಕೊಂಡೆ. ಅನೇಕ ಹಿರಿಯ ಕವಿ ವಿಮರ್ಶಕರು ಕನ್ನಡ ಒಟ್ಟು ಕಾವ್ಯದ ಸ್ವರೂಪವನ್ನು ಆಧರಿಸಿ ಪ್ರಾತಿನಿಧಿಕ ಸಂಕಲನಗಳನ್ನು ತಂದಿದ್ದಾರೆ. (ಅಕ್ಷರ ಹೊಸಕಾವ್ಯ, ಹೊಸಗನ್ನಡ ಕಾವ್ಯ, ಭಾರತಸ್ವಾತಂತ್ರ್ಯದ ಗಾಯತ್ರಿ(ಸಂ) ಸನದಿ ಇತ್ಯಾದಿ) ಆದರೆ ಅದರಲ್ಲಿ ಮಹಿಳಾ ಕವಿಗಳಿಗೆ ತುಂಬಾ ಕಡಿಮೆ ಜಾಗವನ್ನು ಕೊಟ್ಟಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣ ಇದುವರೆವಿಗೂ ಮಹಿಳಾ ಕಾವ್ಯವನ್ನು ಅದರ ಆತ್ಯಂತಿಕ ಸ್ಥಿತಿಯನ್ನು ಹಾಗೂ ಅದರ ಮಜಲುಗಳನ್ನು ಗುರುತಿಸುವ ಕೆಲಸ ಆಗದೇ ಇದ್ದದ್ದು. ಅಥವಾ ಇರುವ ಅಳತೆಗೋಲುಗಳಿಗೆ ಮಹಿಳಾ ಕಾವ್ಯ ಸಿಕ್ಕದಿರುವುದೇನಾದರೂ ಇದೆಯಾ ಎಂದು ನೋಡಿದರೆ ಹೌದು ಅದೂ ಕಾರಣವೇ ಅನ್ನಿಸುತ್ತದೆ. ಯಾವ ಮೀಮಾಂಸೆಯ, ಕಾವ್ಯ ಪ್ರಯೋಜನಗಳ ಒಳಗೂ ಮಹಿಳಾಕಾವ್ಯ ಬರದೇ ತನ್ನದೇ ಸ್ವತಂತ್ರ ಅಸ್ತಿತ್ವವನ್ನು ಪಡಕೊಳ್ಳುತ್ತಿರುವ ಪ್ರಕ್ರಿಯೆಯಲ್ಲಿ ಪುರುಷರ ಯೋಚನೆಗಳು ಹಾಯದೇ ಇರುವುದು ಕಾರಣವೇ. ಪಾಶ್ಚಾತ್ಯರಲ್ಲಿ ಇಂಥಾದ್ದೊಂದು ಪ್ರಯತ್ನ ನಡೆಯುತ್ತಿದೆ. ಮಹಿಳಾ ಕಾವ್ಯವನ್ನು ಬೇರೊಂದು ಕಂಪಾರ್ಟ್‌ಮೆಂಟ್ ಎಂದು ನೋಡದೆ ಅದರ ವೈಶಿಷ್ಟ್ಯತೆಗಳಿಂದ ಕಂಡರಿಸುವ, ಅದರ ಮೀಮಾಂಸೆಯನ್ನು ಹುಡುಕುವ, ವಕ್ರೀಭವಿತಗೊಂಡ, ಪಲ್ಲಟಗೊಂಡ, ಬದುಕಿನ ಶ್ರದ್ಧೆಯ ಆಳದಲ್ಲೇ ರೂಪುಗೊಂಡ ಅನೇಕ ಸಂಗತಿಗಳ ಮೂಲಕ ಅತ್ಯುತ್ತಮ ಧ್ವನಿ, ರೂಪ, ಮನೋಭಾವವನ್ನು ದಾಖಲಿಸುತ್ತಿದ್ದಾರೆ. ಆದರೆ ಕನ್ನಡದಲ್ಲಿ ಇಂಥಾ ಪ್ರಯತ್ನಗಳು ಇನ್ನೂ ನಡೆದಿಲ್ಲ ಎನ್ನುವುದು ಮಹಿಳಾ ಕಾವ್ಯವನ್ನು ಗಂಭೀರವಾಗಿ ನೋಡುತ್ತಿಲ್ಲ, 'ಏನೋ ಬರೆಯುತ್ತಿದ್ದಾಳೆ', ಬರೆದದ್ದರಲ್ಲಿ ಆಕಸ್ಮಿಕವಾಗಿ ತಮ್ಮ ಮಾನದಂಡಕ್ಕೆ ತಾಕಿ ಅವುಗಳನ್ನು ಮಾತ್ರ ಪ್ರಮುಖ ಎಂದು ಗುರುತಿಸುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಆದರೆ ಅದಲ್ಲ ಎನ್ನುವುದನ್ನು ಈ ಸಂಕಲನದ ಎಲ್ಲ ಕವಿತೆಗಳೂ ಒಂದಲ್ಲೊಂದು ರೀತಿಯಲ್ಲಿ ಹೇಳುತ್ತಿರುವುದು ಬಹು ಮುಖ್ಯವಾದ ಸಂಗತಿಯಾಗಿ ನನಗೆ ಕಂಡಿದೆ.

ಕವಿತೆಯ ಜೊತೆ ನನ್ನ ಸುದೀರ್ಘ ಪಯಣದಲ್ಲಿ ಒಳ್ಳೆಯ ಮಾದರಿಗಳನ್ನು ಕೊಟ್ಟ ಮಹಿಳಾ ಕವಿಗಳನ್ನು ಮತ್ತೆ ಓದುವ ಅವಕಾಶ ಭಿನ್ನವಾಗಿ ನೋಡುವಂತೆ ಒತ್ತಾಯ ಮಾಡುತ್ತಿದೆ. ಸಾಮಾನ್ಯವಾಗಿ ಮಹಿಳಾ ಧ್ವನಿ ಎಂದರೆ ವಚನಗಳಿಂದ ಆರಂಭವಾಗುತ್ತದೆ ಎಂದು ಗುರುತಿಸಲ್ಪಟ್ಟಿದೆ. ಆದರೆ ಅದಕ್ಕೂ ಮೊದಲೇ ಬೀಜರೂಪಿಯಾಗಿದ್ದ ಆಶಯಗಳಲ್ಲಿ ಹುದಗಿದ್ದ ಮಹಿಳಾ ಧ್ವನಿಯನ್ನೂ ನಾನು ಕಾವ್ಯ ಎಂದೇ ಗಣಿಸಿದ್ದೇನೆ. ಶಾಸನದಲ್ಲಿನ ಮಹಿಳೆಯ ಮನೋಬಿಂಬದಿಂದ ಹಿಡಿದು ಸಾವಿರ ವರ್ಷಗಳ ವಿಶಾಲ ಬಿತ್ತಿಯಲ್ಲಿ ಮಹಿಳಾ ಧ್ವನಿಗಳನ್ನು ಒಂದು ಕಡೆ ತರುವುದು ಅತ್ಯುತ್ತಮ ರೂಪಗಳನ್ನು ಮನೋಭಾವವನ್ನು, ನುಡಿಗಟ್ಟುಗಳನ್ನು ದಾಖಲಿಸುವ ನಿಟ್ಟಿನಲ್ಲಿ ಈ ಪ್ರಯತ್ನ ಮಾಡಿದ್ದೇನೆ. ಎಲ್ಲ ಕಾಲಗಳ, ಎಲ್ಲ ಪ್ರದೇಶಗಳ, ಎಲ್ಲಾ ಹಿನ್ನೆಲೆಗಳ ಮಹಿಳಾ ಕಾವ್ಯದ ಝಲಕುಗಳು ತಪ್ಪದ ಹಾಗೆ, ಭಿನ್ನ ಸಮಾಜ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಬರೆಯುತ್ತಿರುವವರನ್ನು ಒಂದು ಕಡೆಗೆ ತರುವುದರ ಮೂಲಕವೇ ಅಗಾಧವಾದ ವ್ಯತ್ಯಾಸವೊಂದು ತೋರುತ್ತದೆ ಎನ್ನುವುದು ನನ್ನ ನಂಬಿಕೆ. 'ಮಹಿಳಾ

ಕಾವ್ಯ ಎನ್ನುವುದು ಒಂದಿದೆಯಾ?' ಎಂಬ ವ್ಯಂಗ್ಯ, ವಿಡಂಬನೆಯಿಂದ ಕೂಡಿದ ಕೆಲವೊಮ್ಮೆ ಗಂಭೀರವೂ ಆದ ತಗಾದೆಯೊಂದು ಕನ್ನಡದಲ್ಲಿ ಮಾತ್ರವಲ್ಲ; ಬೇರೆ ಭಾಷೆಗಳಲ್ಲಿ ಕೂಡಾ ಇದೆ. ಹೆಣ್ಣಿನ ಅಸ್ಮಿತೆಯನ್ನು ಪ್ರಶ್ನಿಸುವ ಯಾವ ಸಮಾಜವೇ ಆದರೂ ಇದನ್ನು ಕೇಳುತ್ತದೆ. ಹೀಗೆ ಕೇಳಿದಾಗಲೆಲ್ಲಾ ಹೆಣ್ಣು ಕೆರಳಿದ್ದಾಳೆ. ಸ್ತ್ರೀತ್ವಕ್ಕೂ ಇರುವ ರಾಜಕಾರಣ ನಂಟಿನ ಬಗ್ಗೆ ಮಾತಾಡಿದ್ದಾಳೆ, ಸಾಮಾಜಿಕ ಬದಲಾವಣೆಯನ್ನು ಬಯಸಿ ಅದರ ಭಾಗವಾಗಲಿಕ್ಕೂ ಯತ್ನಿಸಿದ್ದಾಳೆ. ಬರಿಯ ತಿದ್ದುವಿಕೆ ಮಾತ್ರ ತನ್ನ ಜವಾಬ್ದಾರಿ ಎಂದು ಅವಳು ಭಾವಿಸಿಲ್ಲ. ಅವಳು ಆಮೂಲಾಗ್ರವಾದ ಬದಲಾವಣೆಗೆ ಹಂಬಲಿಸಿದ್ದಾಳೆ. ಹೀಗಾಗಿ ಮಹಿಳಾ ಕಾವ್ಯ ವಿರಾಮಕಾಲದ ಬರವಣಿಗೆ ಅಲ್ಲ, ಆಳದಲ್ಲಿ ಒಳಮನಸಿನ ಜಿಜ್ಞಾಸೆ ಇದೆ, ಹಠ ಇದೆ ಪ್ರಶ್ನೆಯಲ್ಲಿ, ಭಾವದಲ್ಲಿ ಒಂದು ಹೊಸ ಸಮಾಜದ ಕನಸು ಇದೆ.

ಮಹಿಳಾ ಕಾವ್ಯದ ಭಿನ್ನತೆಯ ಅನನ್ಯತೆ ಏನು ಎಂದರೆ ಪುರುಷ ರಾಜಕಾರಣದ ಮಿತಿಗಳನ್ನು ತೋರಿಸುವುದು, ದೌರ್ಬಲ್ಯ ತೋರುವುದು, ಯಾವುದನ್ನು ಪ್ರತಿಷ್ಠೆ, ಹೆಮ್ಮೆ ಎಂದುಕೊಂಡಿದೆಯೋ ಅದರ ಪುಳ್ಳುತನವನ್ನು ಎತ್ತಿ ತೋರುವುದೇ ಆಗಿದೆ. ಇಷ್ಟಾದರೂ ಹೆಣ್ಣು ಕಾವ್ಯ ಮೀಮಾಂಸೆಯನ್ನು ಒಡೆದು ತೋರಲಿಕ್ಕೆ ಯಾಕೆ ಆಗುತ್ತಿಲ್ಲ ಎಂದರೆ ಸಿದ್ಧತೆ ಇಲ್ಲದೇ ಇರುವುದು. ಮೊದಲಿಗೆ ಸಾಮಾನ್ಯ ಮೀಮಾಂಸಾ ಪರಿಕರಗಳಿಗೆ ಎಟುಕದ ಅನೇಕ ಸ್ತರಗಳು ಮಹಿಳಾ ಕಾವ್ಯದಲ್ಲಿದೆ ಎನ್ನುವುದನ್ನು ನಂಬಬೇಕಿದೆ. ಮಹಿಳೆಗೆ ಕಾವ್ಯ ಅಂದರೆ ಭಾವವಿರೇಚನವೂ ಅಲ್ಲ. ನಶೆ ಏರಿ ಇಳಿಯುವುದಲ್ಲ. ಅಷ್ಟಕ್ಕೂ ಕಾವ್ಯದ ಅಮಲೂ ಕೂಡಾ ಸಾಂದರ್ಭಿಕ. ಹೆಣ್ಣಿಗೆ ಬೇಕಾದ ರಮಣೀಯತೆಯ ಕಲ್ಪನೆಯೇ ಬೇರೆ. ಕಾವ್ಯಕ್ಕೆ ವ್ಯುತ್ಪತ್ತಿ ಬೇಕು ನಿಜ; ಅದು ಚರ್ಚೆಯಿಂದ ವಿದ್ವಾಂಸರ ಒಡನಾಟದಿಂದ ದಕ್ಕುತ್ತದೆಯೇ ಎಂದರೆ ಹಾಗೂ ಇಲ್ಲ. ಹಾಗಾದರೆ ಹೆಣ್ಣಿನ ಪ್ರತಿಭೆಯ ಮೂಲಗಳು ಯಾವುದು? ಅಚ್ಚರಿಯೆಂದರೆ ವ್ಯುತ್ಪತ್ತಿ, ಪ್ರತಿಭೆಯ ಮೂಲಗಳು ಒಂಟಿತನವೇ. ಅಡುಗೆ ಮನೆ, ಹಿತ್ತಲಜಗತ್ತು, ಗರ್ಭದಾರಣೆಯೇ ಅವಳ ಜಗತ್ತು. ಹೀಗಾಗೇ ಅವಳ ಕಲ್ಪನೆಯಲ್ಲೇ ವಕ್ರೀಭವನಗೊಂಡ ನೋಟವೊಂದು ರೂಪುಗೊಳ್ಳುತ್ತದೆ. ಅವಳ ಶೃಂಗಾರದ ಕಲ್ಪನೆ, ಅವಳ ಸಾವಿನ, ಕೂಟದ ಕಲ್ಪನೆ ಏನು ಇದೆ ಎಲ್ಲವನ್ನೂ ಹೆಕ್ಕಿ ತೆಗೆಯಬೇಕಿದೆ. ಹಾಗೆ ನೋಡಿದರೆ ಗಂಡಿಗೆ ಬಿಡುಗಡೆಯಾದ ಕಾಮ ಹೆಣ್ಣಿಗೆ ಬಿಡುಗಡೆ ಅಲ್ಲ. ಅದು ಕೂಡುವಿಕೆ ಮತ್ತು ಬೆಳಯುವಿಕೆಯ ದೊಡ್ಡ ಶಕ್ತಿ. ಹೀಗಿರುವಾಗ ಹೆಣ್ಣಿನ ಕವಿತೆಯ ಆಕ್ಷೇಪನ್ನುಗಳೇ ಬೇರೆಯಾಗುತ್ತದೆ. ಆದ್ದರಿಂದಲೇ ಮಹಿಳಾಕಾವ್ಯಕ್ಕೆ ಪ್ರವೇಶಿಕೆಗೆ ಸಿದ್ಧತೆಯೇ ಬೇರೆ ಆಗಬೇಕಿದೆ ಎನ್ನುವ ಜರೂರನ್ನು ತೋರಿಸುವ ಪದ್ಯಗಳನ್ನು ಇಲ್ಲಿ ಒಟ್ಟಿಗೆ ಕೊಡಲು ಯತ್ನಿಸಿದ್ದೇನೆ. ಇಲ್ಲಿನ ಕವಿತೆಗಳನ್ನು ಎರಡು ಭಾಗಗಳಲ್ಲಿ ಕೊಟ್ಟಿದ್ದೇನೆ. ಮೊದಲ ಭಾಗದಲ್ಲಿ ಶಾಸನ, ಹಳಗನ್ನಡ, ವಚನಕಾರ್ತಿಯರು, ಕೀರ್ತನಕಾರ್ತಿಯರು ಮತ್ತು ಜಾನಪದ ಕಲಾವಿದರು ಬೆಳೆಸಿರುವ ಕಾವ್ಯ ಸ್ವರೂಪವನ್ನಾಧರಿಸಿ ವಿಭಾಗಿಸಿಕೊಂಡಿದ್ದೇನೆ. ಇನ್ನು ಎರಡನೆಯ ಭಾಗದಲ್ಲಿ ಹೊಸಗನ್ನಡ ಹೇಳಿರುವ ಕಾವ್ಯದ ವ್ಯಾಖ್ಯಾನದಲ್ಲಿ ತನ್ನ ಅಸ್ಮಿತೆಯನ್ನು ಕಂಡರಿಸಿಕೊಂಡ ಅತ್ಯುತ್ತಮ ಮಾದರಿಗಳನ್ನು ಸಂಕಲಿಸಿದ್ದೇನೆ.

ಅತ್ತಿಮಬ್ಬೆ ಶಾಸನದಲ್ಲಿ ಆಕೆಯೇ ಹೇಳಿ ಬರೆಸಲಾದ್ದರಿಂದ ಅದು ಆಶಯದ

ರೂಪದಲ್ಲಿ ಆಕೆಯದ್ದೇ. ತನ್ನ ಕಥೆಯನ್ನೂ ತಾನೇ ಹೇಳಿಕೊಂಡಿದ್ದರಿಂದ ಇಲ್ಲಿ ಅದನ್ನು ಮಹಿಳೆಯ ಮೊದಲಮಾತು ಎಂದೇ ತೆಗೆದುಕೊಂಡಿದ್ದೇನೆ. ಇನ್ನು ಕಂತಿ ಹಂಪರ ಸಮಸ್ಯೆಯಲ್ಲಿ ಹೆಣ್ಣು ಮಾತಾಡುತ್ತಾಳೆ ಎನ್ನುವುದೇ ದೊಡ್ಡ ಸಂಗತಿ ಎನ್ನುವಾಗ ಪುರುಷನೊಡ್ಡಿದ ಸಮಸ್ಯೆಯನ್ನು ಬಿಡಿಸುವ, ತುಂಬಿದ ರಾಜಸಭೆಯಲ್ಲಿ ಎದುರಿಸುವ ಧೈರ್ಯವನ್ನು ತೋರುವುದು ಅಪೂರ್ವ ಸಂಗತಿಯಾಗುತ್ತದೆ. ಸರ್ವಶಾಸ್ತ್ರ ಪ್ರವೀಣೆಯಾದ ಎರಡನೆಯ ಪುಲಕೇಶಿಯ ಸೊಸೆ ಕನ್ನಡತಿ ವಿಜ್ಜಿಕೆ (ವಿಜಯಾಂಬಿಕೆ) ಸಂಸ್ಕೃತದಲ್ಲಿ 'ಕೌಮುದಿ ಮಹೋತ್ಸವ' ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದ ಉಲ್ಲೇಖ ದೊರೆಯುತ್ತದೆ. ದಂಡಿಯೂ ತನ್ನ ಕೃತಿಯಲ್ಲಿ ವಿಜ್ಜಿಕೆಯನ್ನು ಹೆಸರಿಸುತ್ತಾನೆ (೧೩ನೆಯ ಶತಮಾನ– ಇದರ ಮೊದಲ ಪ್ರತಿ ಪ್ರಕಟಗೊಂಡಿದ್ದು ೧೯೨೯) ಒಂದು ನೆಲೆಯಲ್ಲಿ ಈ ಕಾವ್ಯವನ್ನು ವೈದರ್ಭಿ ಶೈಲಿಯ ಅತ್ಯುತ್ತಮ ಮಾದರಿಯೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. (ಈ ಪಠ್ಯವನ್ನು ಕೆ. ಟಿ ಪಾಂಡುರಂಗಿ ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ). ನಂತರ ವಚನಕಾರ್ತಿಯರು ಕಾವ್ಯಕ್ಕೆ ಹೊಸಭಾಷ್ಯವನ್ನು ಬರೆಯುತ್ತಾರೆ. ಅದನ್ನು ಬಿಟ್ಟರೆ ನಮಗೆ ಮತ್ತೆ ದೊರಕುವ ಹೆಸರು ಸಂಚಿ ಹೊನ್ನಮ್ಮಳದ್ದು, ಇದು ತುಂಬಾ ಸೂಕ್ಷ್ಮ ಅವಗಾಹನೆಗೆ ಒಳಗಾಗಬೇಕಿರುವ ಕೃತಿ. ಹೆಣ್ಣಿನ ಆಸೆಗಳನ್ನು ಸಮಾಜವೇ ನಿರ್ಧರಿಸಿಬಿಟ್ಟಿರುತ್ತದೆ. ಅದೆಲ್ಲವೂ ನಿಜ. ಆದರೆ ತಿಳಕೊಳ್ಳಬೇಕಾದ ಕೆಲ ನಿಜಗಳು ಇನ್ನೂ ಇವೆ ಎಂದು ಅವಳು ಗಂಡು ಹೆಣ್ಣಿನ ಸಂಬಂಧದ ಬಗ್ಗೆ ಮಾತಾಡುತ್ತಾಳೆ. ಅಂತರಾಳದ ನೋವುಗಳು ಅಲ್ಲಲ್ಲಿ ಸಣ್ಣ ಅಲೆಯೊಂದು ದಡಕ್ಕೆ ಮುಟ್ಟುವ ಹಾಗೆ ಕಾಣುತ್ತದೆ.

ಇನ್ನು ಕೀರ್ತನಕಾರ್ತಿಯರಲ್ಲಿ ಆರಾಧನೆಯ ಗುಣವೇ ಮುಖ್ಯವಾಗುವುದರಿಂದ ಅಲ್ಲಿ ಇಂಥಾ ಪ್ರತಿಭಟನೆ ನೇರವಾಗಿ ಕಾಣದೇ ಹೋದರೂ ಸ್ತ್ರೀ ಅಸ್ತಿತ್ವವನ್ನೇ ಪ್ರಶ್ನಿಸುವ ಸಮಾಜದೆದುರು ತಮ್ಮ ಬರವಣಿಗೆಯ ಮೂಲಕವೆ ಉತ್ತರವನ್ನು ಕೊಟ್ಟವರು ಅವರು. ಸಮಾಜದ ನಿಲುವನ್ನು ಎಲ್ಲರೂ ಒಂದೇ ರೀತಿಯಾಗಿ ಖಂಡಿಸಬೇಕಾಗಿಲ್ಲ ನಿಜ. ಆದರೆ ಬರವಣಿಗೆ ಎನ್ನುವುದನ್ನು ಬಿಡುಗಡೆ ಎಂದು ಭಾವಿಸದಿದ್ದರೆ, ನಿಶ್ಚಿತವಾದ ನಿಲುವಿನ ಅನಾವರಣ ಅಂದುಕೊಳ್ಳದಿದ್ದರೆ ಎಲ್ಲವೂ ಮಳೆಬಿಲ್ಲಿನ ಹಾಗೆ ಕರಗಿ ಹೋಗುತ್ತವೆ.

ಜನಪರ ಹಾಡುಕಾರ್ತಿಯರು ಮತ್ತು ತತ್ವಪದಕಾರ್ತಿಯರು ಹಾಡುತ್ತಲೇ ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಇರುವ ಕಾವ್ಯವನ್ನು ವಿಸ್ತಾರವಾಗಿಸುವ, ಹೊಸದಾಗೇ ಅನೇಕ ಸಂಗತಿಗಳನ್ನು ಸೇರಿಸುವ ಕೆಲಸ ಮಾಡುತ್ತಲೇ ಇರುತ್ತಾರೆ. ಇವರನ್ನ ಕವಿ ಅಲ್ಲ ಎನ್ನುವುದಕ್ಕೆ ಬರುವುದೇ ಇಲ್ಲ. ಹೆಣ್ಣು ಮತ್ತು ಹೆಣ್ತನವನ್ನೇ ಆಧರಿಸಿದ ಕಾವ್ಯಗಳನ್ನೇ ಇವರು ಹಾಡುವುದು ವಿಶೇಷ.

ಎಚ್. ವಿ. ಸಾವಿತ್ರಮ್ಮ ತಮ್ಮ ಕಾದಂಬರಿ 'ಸೀತೆ ರಾಮ ರಾವಣ'ದಲ್ಲಿ ಅಗ್ನಿಪರೀಕ್ಷೆಗಾಗಿ ಸಿದ್ಧವಾದ ಸೀತೆ ರಾಮನಿಗೆ ಯುದ್ಧದಲ್ಲಿ 'ರಾವಣ ಸಾಯದೆ ಇದ್ದಿದ್ದರೆ ನನಗೆ ಈ ಅಗ್ನಿಪರೀಕ್ಷೆಯದಿನ್ನ ತಪ್ಪುತ್ತಿತ್ತು' ಎನ್ನುತ್ತಾಳೆ. ಇದು ಬರಿಯ ಆಧುನಿಕ ವಿದ್ಯಾಭ್ಯಾಸ ತಂದ ಅರಿವು ಅಂತ ಮಾತ್ರ ಹೇಳಲಿಕ್ಕಾಗುವುದಿಲ್ಲ ಎಲ್ಲ ಕಾಲಕ್ಕೂ

ಸಾಮಾಜಿಕ ನ್ಯಾಯವೊಂದಿದ್ದಂತೆ ಕಾವ್ಯನ್ಯಾಯ ಕೂಡಾ ಇರುತ್ತದೆ. ತನ್ನ ಕಾಡಿಗಟ್ಟಿದ ರಾಮನನ್ನು ಜಾನಕಿ ತಿರಸ್ಕರಿಸುತ್ತಾಳೆ. ಅದನ್ನು ಸಾಂಕೇತಿಕವಾಗಿ ತನ್ನ ತಾಯಾದ ಭೂಮಿಯ ಮಡಿಲನ್ನು ಮತ್ತೆ ಸೇರುತ್ತಾಳೆ ಎಂದಿರುವುದು. ಪ್ರತಿಭಟನೆಯ ಇಂಥಾ ನಿಲುವು ಸ್ಪಷ್ಟವಾಗಿ ಕಾಣುವುದು ಎಪ್ಪತ್ತರ ದಶಕದ ನಂತರದ ಮಹಿಳಾ ಕಾವ್ಯದಲ್ಲಿ. ಸ್ತ್ರೀತ್ವದ ಗಾಢ ಅನುಭೂತಿ ಸೂಕ್ಷ್ಮಕ್ಕೆ ಮಿಡಿವ ಮನ ಸ್ವ ಮರುಕವನ್ನು ಮೀರಿ ಮುಂದಿನ ಹಂತ ತಲುಪಿತು. ಅದರ ಬಗ್ಗೆ ಹಿಂದೆ ಚರ್ಚೆ ಮಾಡಿರುವುದರಿಂದ ಇಲ್ಲಿ ಹೇಳಲು ಹೋಗುವುದಿಲ್ಲ.

ಈ ಸಂಕಲನದಲ್ಲಿ ಎಲ್ಲವೂ ಇದೆ; ಇದೊಂದು ಕೊಲಾಜ್ ಮಾದರಿಯ ಸಂಕಲನ. ಶಾಸನಗಳಲ್ಲಿ ಮಹಿಳಾ ಅಭಿವ್ಯಕ್ತಿಯಿಂದ ಹಿಡಿದು ಇವತ್ತಿನ ವರೆಗೂ ಮಹಿಳಾ ಕಾವ್ಯ ಹಾದು ಬಂದ ದಾರಿಗಳ ಕಿರುಪರಿಚಯ ಆಗುವಂತೆ ಕವಿತೆಗಳನ್ನಿಲ್ಲಿ ಕೊಡಲಾಗಿದೆ. ಸಣ್ಣ ಕವಿತೆಯಿಂದ ಹಿಡಿದು ಮಹಾಕಾವ್ಯದ ಝಲಕನ್ನು ಹೇಳುವ ದೀರ್ಘ ಕಾವ್ಯ ಭಾಗವನ್ನು ಆರಿಸಿಕೊಡಲಾಗಿದೆ. ಜಾನಪದದಿಂದ ಅಭಿಜಾತ ಕಾವ್ಯದ ವರೆವಿಗೂ ಇದು ಹರಡಿಕೊಂಡಿದೆ. ವಸ್ತು ವಿಷಯಗಳಂತೆ ಅದರ ಸ್ವರೂಪವೂ ಕುತೂಹಲಕಾರಿಯೇ. ಸಾತ್ವಿಕ ಶಕ್ತಿಯ ಸಂಕೇತವಾದ ಅತ್ತಿಮಬ್ಬೆ, ಒಡಪಿನ ಮಾತುಗಳ ಕಂತಿ, ನಿರ್ಭಿಡೆಯಾಗಿ ಮಾತಾಡುವ ವಚನಕಾರ್ತಿಯರು, ಪುರುಷ ಪರವಾಗಿದ್ದುಕೊಂಡೆ ಅದನ್ನು ಮೀರುವ ಹೊನ್ನಮ್ಮ, ಸಾಂಪ್ರದಾಯಿಕತೆಯಲ್ಲಿಯೂ ಅದನ್ನು ಮೀರುವ ಸಂಗತಿಗಳನ್ನು ಹೆಣ್ಣು ಹೇಳಬಾರದ ಶೃಂಗಾರವನ್ನು ಒಳಗೊಂಡಂತೆ ನವರಸಗಳನ್ನು ಚಿಕ್ಕ ಹಾಡು, ದೊಡ್ಡ ಹಾಡುಗಳು ಎಂದು ಅದರ ಬೇರೆ ಬೇರೆ ರೂಪಗಳಲ್ಲಿ ಹೇಳುವ ಹರಪನಹಳ್ಳಿ ಭೀಮವ್ವ ಹೇಳಿರುವುದು ಅಚ್ಚರಿಯೆನ್ನಿಸುತ್ತದೆ. ಸಾಹಿತ್ಯಚರಿತ್ರೆಯಲ್ಲಿ ಎಲ್ಲೂ ಹರಪನ ಹಳ್ಳಿ ಭಿಮವ್ವನ ಹೆಸರು ಯಾಕೆ ಕೇಳಿಬರುತ್ತಿಲ್ಲ? ಮದನ, ರತಿಯರ, ಶಕುಂತಲಾ ದುಶ್ಯಂತರ ಪ್ರೇಮ ಪ್ರಣಯವನ್ನು ಆಕೆ ಸಾದ್ಯಂತವಾಗಿ ವಿವರಿಸಿದ್ದಾರೆ. ಹರಿದಾಸರು ಮಾಡಿರುವ ಎಲ್ಲ ಪ್ರಯೋಗಗಳನ್ನು ಈಕೆಯೂ ಮಾಡಿದ್ದಾರೆ. ಮೂಡಲಪಾಯಕ್ಕೆ ಹೊಂದುವಂತೆ ತಮ್ಮ ಕಾವ್ಯವನ್ನು ರಚಿಸಿರುವ ಭೀಮವ್ವ ತಮ್ಮ ಕಾವ್ಯದ ತುಂಬಾ ಕಣ್ಣಿಗೆ ಕಟ್ಟುವ ಚಿತ್ರಗಳನ್ನು ಮಾತಲ್ಲಿ ಕಡೆಯುವಷ್ಟು ನಿಪುಣೆ. ಇಂಥಾ ದೊಡ್ಡ ಚಿತ್ರಕ ಹಾಗೂ ನಾಟಕೀಯ ಗುಣವನ್ನು ಈಕೆ ಎಲ್ಲಿಂದ ಪಡಕೊಂಡರು ಎನ್ನುವುದು ವಿಸ್ಮಯವೇ. ಇಂತಲ್ಲಿ ಸಾಹಿತ್ಯ ಚರಿತ್ರೆಯ ಆಯ್ಕೆಯ ಕ್ರಮಗಳು ನಮ್ಮನ್ನು ಚಿಂತನೆ ಹಚ್ಚುವಂತೆ ಮಾಡುತ್ತದೆ.

ಇಲ್ಲಿ ಕವಿತೆಗಳನ್ನು ಸಂಕಲಿಸುವಾಗ ಈಗಾಗಲೇ ಸಂಕಲನ ಬಂದ ಕವಿಗಳನ್ನು ಇಲ್ಲಿ ಪರಿಗಣಿಸಿದ್ದೇನೆ. ಕಾರಣ ಒಂದು ಪದ್ಯ ಅಥವಾ ಎರಡು ಪದ್ಯಗಳಿಂದ ಕೆಲವೊಮ್ಮೆ ಕವಿ ಅರ್ಥವಾಗದೇ ಹೋಗಬಹುದು (ಕೆಲವೊಮ್ಮೆ ಒಂದೇ ಕವಿತೆ ಮುಖ್ಯವಾಗಲೂಬಹುದು.) ಈಗಂತೂ ಸಾಮಾಜಿಕ ಜಾಲತಾಣಗಳು ಅಪರಿಮಿತವಾದ ಅವಕಾಶಗಳನ್ನು ಒದಗಿಸುತ್ತಿರುವುದರಿಂದ ಅಲ್ಲಿ ಏನು ನಡೆಯುತ್ತಿದೀಂದು ಕೆಲವೊಮ್ಮೆ ನನ್ನ ಗಮನಕ್ಕೆ ಬರದೇ ಹೋಗಬಹುದು. ಹೀಗಾಗಿ ಕವಿತಾಸಂಕಲನ ನನ್ನ ಆಯ್ಕೆಯ ಮಾನದಂಡವಾಗಿತ್ತು. ಆದರೂ ಕವನ ಸಂಕಲನ ತರದ ಇಬ್ಬರು ಅಥವಾ ಮೂವರನ್ನು ನಾನು ತೆಗೆದುಕೊಳ್ಳುವುದು ಅನಿವಾರ್ಯವಾಗಿತ್ತು ಯಾಕೆಂದರೆ ಅವರು ಕವಿತೆಗೆ

ಹೊಸ ತಿರುವು ತರಬಲ್ಲ ವಸ್ತು ಮತ್ತು ಭಾಷಿಕ ಚೌಕಟ್ಟನ್ನು ಕೊಡಲು ಪ್ರಯತ್ನಿಸುತ್ತಿರುವುದು. ಮತ್ತು ಕೆಲ ಕವಿಗಳು ನನ್ನ ಕಣ್ತಪ್ಪಿನಿಂದ ಬಿಟ್ಟು ಹೋಗಿದ್ದರೆ ಕೆಲವರನ್ನು ಅನುಮತಿ ಕೇಳಿಯೂ ಕೊಡದೇ ಹೋದದ್ದು, ಮತ್ತು ನನಗಿದ್ದ ಕಾಲಮಿತಿಯಲ್ಲಿ ದೊಡ್ಡದೊಂದು ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವುದು ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯದಡಿ ಪರಿಷತ್ತು ನಾನು ಆಯ್ಕೆಮಾಡದ ಕೆಲಕವಿಗಳನ್ನು ಆಯ್ಕೆ ಮಾಡಿದೆ ಹಾಗೂ ಇನ್ನೂ ಕೆಲ ಕವಿಗಳನ್ನು ಸೇರಿಸುವ ಮನಸ್ಸು ನನಗೂ ಇತ್ತಾದರೂ ಸಾಹಿತ್ಯ ಪರಿಷತ್ತು ನನಗೆ ಹಾಕಿರುವ ಪುಟಗಳ ಮಿತಿ ಕೂಡಾ ಇದಕ್ಕೆ ಕಾರಣವಾಗಿದೆ ಎನ್ನುವುದನ್ನು ಇಲ್ಲಿ ನಾನು ಹೇಳಲೇ ಬೇಕು.

ಇಲ್ಲಿನ ಕವಿತೆಗಳು ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎನ್ನುವ ಮಾನದಂಡದ ಒಳಗೆ ತರುವುದು ನನ್ನ ಕೆಲಸವಲ್ಲ ಎನ್ನುವ ಸ್ಪಷ್ಟ ಅರಿವಿನಿಂದಲೇ ನಾನು ಈ ಕೆಲಸವನ್ನು ಮಾಡಿದ್ದೇನೆ. ಇಲ್ಲಿನ ಪದ್ಯಗಳು ಕನ್ನಡ ಬಹುಕಾಲ ನೆನಪಿಟ್ಟುಕೊಳ್ಳುವ ಮಾತುಗಳನ್ನು ಆಡುತ್ತಿದೆ, ಮತ್ತು ರಾಜಕಾರಣದ ಎದುರಾಗಿ ತನ್ನದೇ ಉತ್ತರವನ್ನು ಕಂಡುಕೊಳ್ಳುತ್ತಿದೆ ಎನ್ನುವುದಕ್ಕಾಗಿ ಈ ಕವಿತೆಗಳನ್ನು ಇಲ್ಲಿ ಕೊಟ್ಟಿದ್ದೇನೆ. ಹೆಣ್ಣು ದೇಹ ಭಾಷೆಯ ಮೂಲಕ ವ್ಯಕ್ತವಾಗುವ ಭಿನ್ನ ರಾಗವೊಂದನ್ನು ಗುರುತಿಸುವುದು ಭಿನ್ನ ಸಂವೇದನೆಯ ಮೂಲಕವೇ ತನ್ನನ್ನು ಆಳಲು ಪ್ರಯತ್ನಿಸುವ ಪುರುಷಾಹಂಕಾರಕ್ಕೆ ಉತ್ತರವನ್ನು ಕೊಡುವುದು ಮತ್ತು ಆ ಮೂಲಕ ಭಿನ್ನ ಮೀಮಾಂಸೆಯ ನೆಲೆಗಳನ್ನು ಕಂಡುಕೊಳ್ಳುತ್ತಿರುವುದು ಮಾತ್ರ ಈ ಎಲ್ಲಾ ಕವಿತೆಗಳ ಮುಖ್ಯ ಉದ್ದೇಶವಾಗಿದೆ. ಮತ್ತು ಯಾವುದೇ ಕವಿತೆಯಾದರೂ ಎಂದೋ ಬರೆದರೂ ಇವತ್ತಿನ ಮಾತುಗಳಾಗಿ ಕೇಳುತ್ತಿದ್ದರಷ್ಟೇ ಪ್ರಸ್ತುತವಾಗುವುದು. ಇಂಥಾ ಪ್ರಸ್ತುತತೆಯನ್ನು ಇವು ಕಾಪಾಡಿಕೊಳ್ಳುತ್ತಿವೆ ಎನ್ನುವುದಕ್ಕೆ ಪ್ರಮುಖವಾಗಿವೆ.

ಇನ್ನು ಆಧುನಿಕ ಕಾವ್ಯದಲ್ಲಿ ಬೇರೆ ಬೇರೆ ಪ್ರಯೋಗಗಳ ಕಾರಣಕ್ಕಾಗಿ ಇಲ್ಲಿ ಕವಿತೆಗಳನ್ನು ಜೋಡಿಸಲಾಗಿದೆ. ವಚನ, ತ್ರಿಪದಿ, ಸಾನೆಟ್, ಗಜಲ್‌ಗಳು, ಮಹಾಕಾವ್ಯ, ಖಂಡಕಾವ್ಯ, ಮುಕ್ತ ಛಂದಸ್ಸಿನ ಕವಿತೆಗಳನ್ನು ಇಲ್ಲಿ ಕೊಡಲಾಗಿದೆ. ಮಹಿಳಾ ಧ್ವನಿಗಳ ನಿರಂತರ ತಂತುವೊಂದು ಹಳೆಗನ್ನಡದಿಂದ ಇವತ್ತಿನವರೆಗೂ, ಮೌಖಿಕದಿಂದ, ಸಂಪ್ರದಾಯ ಹಾಡುಗಳ ವರೆಗೂ ಕಾವ್ಯದಲ್ಲಿ ಹೇಗೆ ಕಾಣುತ್ತದೆ ಎನ್ನುವ ಕುತೂಹಲದಿಂದಲೇ ಇಲ್ಲಿನ ಕವಿತೆಗಳನ್ನು ಜೋಡಿಸಿದ್ದೇನೆ. ನನಗೆ ಗೊತ್ತು ಇದೊಂದು ಸೀಮಿತ ಪ್ರಯತ್ನ ಮಾತ್ರ ಎಂದು. ಮಹಿಳಾ ಧ್ವನಿಗಳನ್ನು ಫೈನ್ ಟ್ಯೂನ್ ಮಾಡುತ್ತಾ ಮಾಡುತ್ತಾ ಉತ್ತಮವಾದುದ್ದನ್ನು ಮಾತ್ರ ಎತ್ತಿಡುತ್ತೇವೆ ಎನ್ನುವ ಧೋರಣೆಯಿಂದ ಕಾಲಕಾಲಕ್ಕೆ ಪಕ್ಕಕ್ಕೆ ಸರಿಸಲಾಗಿದೆ. ಆದರೆ ಯಾವುದನ್ನು ಅಮುಖ್ಯ ಎಂದು ಕರೆಯಲಾಗಿದೆಯೋ ಅಲ್ಲೇ ಸಮಾಜದ ಜೊತೆ ಹೆಣ್ಣಿನ ಸಂಘರ್ಷದ ಸ್ವರೂಪಗಳ ಎಳೆಗಳು ಹರಡಿಕೊಂಡಿದೆ. ಆದ್ದರಿಂದ ದೊಡ್ಡ ಮತ್ತು ಸಣ್ಣ ಕವಿಗಳಲ್ಲಿನ ವ್ಯತ್ಯಾಸ ಮಾಡುವ ಕ್ರಮವೇ ಅನೇಕ ಮಹಿಳಾ ಕವಿಗಳ ಇಲ್ಲವಾಗುವಿಕೆಗೆ ಕಾರಣವೂ ಆಗಿದೆ. ಮೊದಲ ಹಂತರ ಲೇಖಕಿಯರು ಹೆಚ್ಚು ಹೆಚ್ಚು ಅನುವಾದಗಳಲ್ಲಿ ತೊಡಗಿಕೊಂಡಿದ್ದು ನಂತರ ಕಾಪಿರೈಟ್ ಆಕ್ಟ್ ಬಂದನಂತರ ಎಲ್ಲಿ ಅನುಮತಿಗಾಗಿ ಕೇಳುವುದು ಎಂದು ಅನುವಾದ ಮಾಡುವುದನ್ನೇ ನಿಲ್ಲಿಸಿಬಿಟ್ಟರು ಎಂದು ಡಾ. ಎಂ ಉಷಾ ಅವರು

ಹೇಳುತ್ತಾರೆ. ಇಂಥಾ ಸಂದರ್ಭಗಳಲ್ಲಿ ಬದಲಾವಣೆಗಳಲ್ಲಿ ಹುದಗಿಕೊಂಡ ಮಹಿಳಾ ಚರಿತ್ರೆಯ ಅನೇಕ ಸಂಗತಿಗಳು ಇವತ್ತು ಮುನ್ನೆಲೆ ಬರಬೇಕಿದೆ. ಆ ಮೂಲಕ ಚರಿತ್ರೆಯ ಪದರಗಳಲ್ಲಿ ಅಡಗಿರುವ ಸಂಗತಿಗಳು ನಮ್ಮ ಚರಿತ್ರೆಯನ್ನು ನಿಖರಗೊಳಿಸುತ್ತವೆ. ಈ ನಿಟ್ಟಿನಲ್ಲಿ ನನಗೆ ಈ ಕವಿತೆಗಳು ಯೋಚಿಸಲಿಕ್ಕೆ ಹಚ್ಚಿದೆ ಎನ್ನುವುದು ಈ ದಾರಿಯಲ್ಲಿ ನನಗೆ ದಕ್ಕಿದ ಪ್ರಯೋಜನ.

ಇಂಥಾದ್ದೊಂದು ಅದ್ಭುತ ಅವಕಾಶಕ್ಕಾಗಿ ಕನ್ನಡಿಗರ ಮಾತೃಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿಗೂ, ಕೆಲಸವನ್ನು ಒಪ್ಪಿಸಿದ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರಿಗೂ, ಮಾಲಿಕೆಯ ಸಂಪಾದಕರಾದ ಪ್ರೊ. ಮಲ್ಲಿಕಾ ಘಂಟಿಯವರಿಗೂ ಆಭಾರಿಯಾಗಿದ್ದೇನೆ. ಕವಿತೆಯನ್ನು ಬಳಸಿಕೊಳ್ಳಲು ಅನುಮತಿಕೊಟ್ಟ ಎಲ್ಲ ಕವಿಗಳಿಗೂ ಹಾಗೂ ಅವರ ಕುಟುಂಬ ವರ್ಗದವರಿಗೂ ನನ್ನ ಧನ್ಯವಾದಗಳು. ದೊರಕದೇ ಇರುವ ಪುಸ್ತಕಗಳನ್ನು ಕರೋನಾದ ಕಷ್ಟಕಾಲದಲ್ಲಿ ಒದಗಿಸಿದ ಎಲ್ಲ ಸ್ನೇಹಿತರನ್ನೂ ಸ್ಮರಿಸದೇ ಇರುವುದು ಹೇಗೆ? ಕಾವ್ಯ ಪ್ರೀತಿಯಿಂದ ತಾವೇ ಒಂದು ಸಂಸ್ಥೆಯಂತೆ ಕೆಲಸ ಮಾಡುತ್ತಿರುವ ಕಾವ್ಯಬೋಧಿಯ ಎಚ್ ಎಸ್ ಅನುಪಮಾ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಸಂಪಾದಿತ ಪುಸ್ತಕಗಳಿಂದ ಆಯ್ದ ಭಾಗಗಳಿಗೆ ಅನುಮತಿಸಿದ ಮೈಸೂರು ವಿವಿ ಮತ್ತು ಹಂಪಿವಿವಿಗಳ ಪ್ರಸಾರಾಂಗಗಳನ್ನು ಗೌರವದಿಂದ ಸ್ಮರಿಸುತ್ತೇನೆ. ಮತ್ತು ಈ ದಾರಿಯಲ್ಲಿ ನೆರವನ್ನು ನೀಡಿದ ಡಾ. ವಿಜಯ, ನರಹಳ್ಳಿ ಬಾಲಸುಬ್ರಹ್ಮಣ್ಯ, ದೇವು ಪತ್ತಾರ್, ಬೇಲೂರು ರಘುನಂದನ್, ನ. ರವಿಕುಮಾರ್ ಹಾಗೂ ಸಂಧ್ಯಾ ಹೆಗಡೆ ದೊಡ್ಡ ಹೊಂಡ, ಸುಮಾ ಸಂಜೀವ್ ಅವರಿಗೆ ನನ್ನ ಕೃತಜ್ಞತೆಗಳು.

–ಡಾ. ಪಿ. ಚಂದ್ರಿಕಾ
ಅಭಿನವ
೧೭/೧೮–೨, ಮೊದಲನೆ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ,
ಬೆಂಗಳೂರು –೪೦

# ಪರಿವಿಡಿ

## ಭಾಗ – ೧


| | | | |
|---|---|---|---|
| ೧. | ಅತ್ತಿಮಬ್ಬೆಯ ಶಾಸನ (ಆಯ್ದ ಭಾಗ) | : | ೩ |
| ೨. | ಕಂತಿ ಹಂಪರ ಸಮಸ್ಯೆಗಳು | : | ೬ |
| ೩. | ವಚನಕಾರ್ತಿಯರು | : ಸೂಳೆ ಸಂಕವ್ವೆ<br>ಅಕ್ಕಮ್ಮ<br>ಅಕ್ಕಮಹಾದೇವಿ<br>ಗೊಗ್ಗವ್ವೆ (ಧೂಪದ ಗೊಗ್ಗವ್ವೆ)<br>ಮುಕ್ತಾಯಕ್ಕ ·<br>ಮೋಳಿಗೆಯ ಮಹಾದೇವಿ | ೮ |
| ೪. | ಹದಿಬದೆಯ ಧರ್ಮ | : ಸಂಚಿ ಹೊನ್ನಮ್ಮ | ೧೧ |
| ೫. | ತೋರಬಾರದೆ ನಿಮ್ಮ ಚರಿತೆಯನು | : ಹೆಳವನಕಟ್ಟೆ ಗಿರಿಯಮ್ಮ | ೧೪ |
| ೬. | ಪತಿದಾನ ಕೊಟ್ಟ ಹಾಡು | : ಹರಪನಹಳ್ಳಿ ಭೀಮವ್ವ | ೧೬ |
| ೭. | ತಾಯಿ ಮಗನ ಸಂತಾಪ | : ದರೋಜಿ ಈರಮ್ಮ | ೧೯ |
| ೮. | ಕುಟುಂಬ ಯೋಜನೆ ಲಾವಣಿ | : ತಂಬೂರಿ ರಾಜಮ್ಮ | ೨೨ |
| ೯. | ಏಳು ಸಮುದ್ರ ಅಳೆವ ನಾರಿ | : ತಿಮ್ಮಕ್ಕನ ಪದ | ೨೩ |
| ೧೦. | ಗಿರಿಜಾ ಕಲ್ಯಾಣ (ಸಂಕ್ಷಿಪ್ತ ರೂಪ) | : ಸಿರಿಯಜ್ಜಿ | ೨೭ |
| ೧೧. | ಭಾರತೀ ದೇವಿಯ ಸ್ತೋತ್ರ | : ಕೋಲಾರ ಪದ್ಮಾಬಾಯಿ | ೩೧ |


## ಭಾಗ – ೨


| | | | |
|---|---|---|---|
| ೧೨. | ಕೀರ್ತಿಶೇಷರಾದ ಲೋಕಮಾನ್ಯ ಬಾಲಗಂಗಾಧರ ತಿಲಕ ಸ್ಮರಣಂ | : ನಂಜನಗೂಡು ತಿರುಮಲಾಂಬ | ೩೫ |
| ೧೩. | ಸಮದರ್ಶನ ಧ್ವಜ | : ಭಾರತಿ (ತಿರುಮಲೆ ರಾಜಮ್ಮ) | ೩೭ |
| ೧೪. | ಹುಡುಕು–ಅಡಗು | : ಜಯದೇವಿತಾಯಿ ಲಿಗಾಡೆ | ೩೮ |
| ೧೫. | ನರಸಿಯ ಪರಿಸೆ | : ಬೆಳಗೆರೆ ಜಾನಕಮ್ಮ | ೩೯ |
| ೧೬. | ಹೊಲೆಯರ ಹೆಣ್ಣು | : ಎಲ್.ವಿ. ಕಾವೇರಮ್ಮ | ೪೧ |
| ೧೭. | ಕಾಲವೂ ಒಂದಿತ್ತು! | : ಶಾರದಾ ಜಡೆ | ೪೩ |
| ೧೮. | ಶಬ್ದ ದರಿದ್ರ | : ಶೈಲಜಾ ಉಡುಚಣ | ೪೪ |
| ೧೯. | ವಚನ | : ಕಮಲಾ ಹಂಪನಾ | ೪೫ |
| ೨೦. | ಪುನರ್ಜನ್ಮ | : ಕುಲಶೇಖರಿ | ೪೬ |
| ೨೧. | ಕೌದಿ | : ಸರಸ್ವತಿ ಚಿಮ್ಮಲಗಿ | ೪೭ |

೨೨. ರೆಸ್ಕ್ಯೂ ಹೋಂ : ಎಲ್.ಜಿ. ಸುಮಿತ್ರ ೪೮
೨೩. ಯಶೋಧರಾ ಮಲಗಿರಲಿಲ್ಲ : ಮಾಲತಿ ಪಟ್ಟಣಶೆಟ್ಟಿ ೫೦
೨೪. ಎಲ್ಲೋ ಜೋಗಪ್ಪ : ಬಿ. ಟಿ. ಲಲಿತಾ ನಾಯಕ್ ೫೨
೨೫. ಯಾವ ನಾಳೆಯೂ ನಮ್ಮದಲ್ಲ : ಉಷಾ ಪಿ. ರೈ. ೫೪
೨೬. ದೇವೀ ಮಹಾತ್ಮೆ : ಲಲಿತಾ ಸಿದ್ಧಬಸವಯ್ಯ ೫೬
೨೭. ತಂದೆ ಮನೆ ಕಿಟಕಿ : ವೈದೇಹಿ ೫೯
೨೮. ಮಲಗು ಬಾ : ಉತ್ತನೂರು ರಾಜಮ್ಮ ವಿ. ಶೆಟ್ಟಿ ೬೧
೨೯. ಅಮೀಬ : ವಿಜಯ ಸುಬ್ಬರಾಜ್ ೬೨
೩೦. ಆಲದ ನೆರಳು : ಆರ್. ನಿರ್ಮಲಾ ೬೪
೩೧. ಬುದ್ಧ ಪೂರ್ಣಿಮೆ : ನಳಿನಿ ಮಯ್ಯ ೬೬
೩೨. ಸಂಸಾರ : ಚ. ಸರ್ವಮಂಗಳ ೬೭
೩೩. ನನ್ನ ಉಯಿಲು : ಶಶಿಕಲಾ ವೀರಯ್ಯಸ್ವಾಮಿ ೬೮
೩೪. ನೀರು ನೆರಳು : ಎನ್. ವಿ. ಭಾಗ್ಯಲಕ್ಷ್ಮೀ ೭೦
೩೫. ನೆರೆ : ಪ್ರಭಾವತಿ ಎಸ್.ವಿ. ೭೨
೩೬. ಕೆರೆಯ ಮುಚ್ಚುವರಂತೆ : ಕನ್ನಿಕಾ ಹೆಗಡೆ ೭೪
೩೭. ನಾನೂ ಶಾಪವೂ : ಕಮಲಾ ಹೆಮ್ಮಿಗೆ ೭೫
೩೮. ಮನೆ ಜಗಳ : ವಿಜಯಾ ದಬ್ಬೆ ೭೬
೩೯. ಪುರುಸೊತ್ತು ಸಿಗದೆ : ಸಂಧ್ಯಾ ರೆಡ್ಡಿ ೭೭
೪೦. ಖಾಪ್ಸ್ ಪಂಚಾಯತಿ :-ಲತಾ ಗುತ್ತಿ ೭೯
೪೧. ನಿಜದ ಕನಸು : ಹೇಮಾ ಪಟ್ಟಣಶೆಟ್ಟಿ ೮೧
೪೨. ಕವಿತೆಗಳ ಹಿಂದೆ : ಬಾ.ಹ. ರಮಾಕುಮಾರಿ ೮೩
೪೩. ಹೊಸ ಹುಟ್ಟಿನ ಹಾಡು : ಸ. ಉಷಾ ೮೫
೪೪. ಗಜಲ್ : ಮುಕ್ತಾಯಕ್ಕ ೮೮
೪೫. ಒದ್ದೆಕಣ್ಣಿನ ಬಾಗಿನ : ಬಾನು ಮುಷ್ತಾಕ್ ೮೯
೪೬. ಪರದೆ ಸರಿದಂತೆ : ಡಿ.ಬಿ. ರಜಿಯಾ ೯೧
೪೭. ತಾವರೆಯ ಕೊಳದಂತಿಹುದೀ ಲೌಕಿಕದ ಬಾಳು : ಡಾ. ಲತಾ ರಾಜಶೇಖರ್ ೯೨
೪೮. ನಾವು ಕಚ ಕುಚಗಳ ಬಗ್ಗೆ ಬರೆಯಬಾರದು : ಪ್ರತಿಭಾ ನಂದಕುಮಾರ್ ೯೪
೪೯. ಮನೆಯೊಡೆಯರೆಲ್ಲ ರಾಜಾರೋಸು : ಮಾಧವಿ ಭಂಡಾರಿ ಕೆರೆಕೋಣ ೯೬
೫೦. ನೀ ಹೀಗೆ ಮಾಡಬಾರದಿತ್ತು : ಸುಕನ್ಯಾ ಮಾರುತಿ ೯೮

೫೧. ಸೀರೆ : ವಿಜಯಶ್ರೀ ಸಬರದ ೧೦೦

೫೨. ಸಿಕಾಡ ಮತ್ತು ಪ್ರೇಯಿಂಗ್ ಮ್ಯಾಂಟಿಸ್ : ಎಲ್. ಸಿ. ಸುಮಿತ್ರಾ ೧೦೨

೫೩. ತಲ್ಲಾಕಿನ ಕತ್ತಿಗಳು : ಕೆ. ಷರೀಫಾ ೧೦೩

೫೪. ಅವರಂತಾಗದೆ : ಮೀನಾ ಮೈಸೂರು ೧೦೫

೫೫. ಹೆಸರಿಲ್ಲದವರು : ಡಾ. ಮಲ್ಲಿಕಾ ಘಂಟಿ ೧೦೭

೫೬. ಮುಖವಾಡಗಳ ಮಾರುವ ಊರಿನಲ್ಲೊಂದು ಸುತ್ತು : ಎಂ. ಆರ್. ಕಮಲ ೧೦೮

೫೭. ನುಗ್ಗೆಮರ : ಡಾ. ಸಬೀಹಾ ಭೂಮಿಗೌಡ ೧೧೦

೫೮. ಸಂಸ್ಕೃತಿಗೆ ಸುತ್ತಿಗೆ : ವಸಂತ ಕಲ್ಬಾಗಲ್ ೧೧೨

೫೯. ತೊರೆಗಳೆಲ್ಲ ಬರಲಿ ಬಿಡು ಎದೆಯ ಕಡಲಿಗೆ : ಸುಕನ್ಯಾ ಕಳಸ ೧೧೪

೬೦. ಸಮಯವಿದೆಯೆ ಪಪ್ಪಾ? : ಸವಿತಾ ನಾಗಭೂಷಣ ೧೧೫

೬೧. ಎರಡು ಔತಣಕೂಟಗಳು : ಪುಷ್ಪ ಎಚ್.ಎಲ್. ೧೧೮

೬೨. ಪ್ರಳಯದ ಮೇಲೊಂದು ಪ್ರಣಯ : ಸಂಧ್ಯಾದೇವಿ ೧೨೧

೬೩. ಜೀವ ಸಂಪಿಗೆ : ದು ಸರಸ್ವತಿ ೧೨೨

೬೪. ಮಳೆ : ಡಾ. ಟಿ.ಸಿ. ಪೂರ್ಣಿಮಾ ೧೨೫

೬೫. ನೆರೆ ಕೆರೆ : ಹಾ. ಮ. ಕನಕ ವಿಷ್ಣುನಾದ್ ೧೨೬

೬೬. ಗಾರ್ಮೆಂಟ್ ಹುಡುಗಿ ಹೊಲೆದ ಚಂದದ ಪೋಷಾಕು : ಸಬಿತಾ ಬನ್ನಾಡಿ ೧೨೮

೬೭. ನೆರಿಗೆಗಳು : ಜ್ಯೋತಿ ಗುರುಪ್ರಸಾದ್ ೧೩೦

೬೮. ಕಾಡುಜೇಡ ಹಾಗೂ ಬಾತುಕೋಳಿ ಹೂವು : ಎಚ್. ಆರ್. ಸುಜಾತ ೧೩೨

೬೯. ಸೆಲ್ಫಿ : ಎಚ್.ಎನ್. ಆರತಿ ೧೩೩

೭೦. ರಂಗೋಲಿ : ಮಮತಾ ಸಾಗರ ೧೩೫

೭೧. ಡುಂಡುಭ ವಿಲಾಪ : ಡಾ. ಧರಣಿದೇವಿ ಮಾಲಗತ್ತಿ ೧೩೭

೭೨. ಅಮ್ಮನಾಗುವುದೆಂದರೆ : ರೂಪ ಹಾಸನ ೧೩೯

೭೩. ಒಂದೇ ಭೂಗೋಲ : ಸುನಂದಾ ಪ್ರಕಾಶ ಕಡಮೆ ೧೪೧

೭೪. ಬೆಳ್ಳಕ್ಕಿ ಬೆಳ್ಳಕ್ಕಿ ಉಂಗ್ರಕೊಡೆ : ಸುಧಾಶರ್ಮ ಚವತ್ತಿ ೧೪೩

೭೫. ಮಡಕೆಯ ಮಾಡುವಡೆ : ಡಿ.ಸಿ. ಗೀತಾ ೧೪೫

೭೬. ನಡೆ : ವಿನಯಾ ೧೪೭

೭೭. ಬೋಳುಮರ : ವೀಣಾ ಬನ್ನಂಜೆ ೧೪೯

೭೮. ಆ ದಾರಿಗಳು ಪಾದಗಳ ಕಂದನ ಹಾಗೇ
ಕಾಪಾಡುತ್ತವೆ : ಡಾ. ಪಿ. ಚಂದ್ರಿಕಾ ೧೫೦
೭೯. ಬೆಂಕಿ ಬಿದ್ದಿದೆ : ವಿದ್ಯಾ ಹೆಗಡೆ ೧೫೨
೮೦. ನರಕ : ಡಾ. ತಮಿಳ್ ಸೆಲ್ವಿ ೧೫೩
೮೧. ಅನುಕೂಲಕ್ಕೊಂದು ಸಿದ್ಧಾಂತ! : ಎಂ. ಆರ್. ಭಗವತಿ ೧೫೫
೮೨. ಅಳಿ : ಡಾ. ಅನುಪಮಾ ಎಚ್.ಎಸ್. ೧೫೬
೮೩. ಸೀರೆ ಕದ್ದವನು ನೀನೆ... : ಅನಸೂಯ ಕಾಂಬ್ಳೆ ೧೫೮
೮೪. ಅಮ್ಮ ಮತ್ತು ಸಮುದ್ರ : ಕೆ.ಎನ್. ಲಾವಣ್ಯಪ್ರಭಾ ೧೬೦
೮೫. ಕಾಯುತ್ತ ನಿಂತವರು : ತಾರಿಣಿ ಶುಭದಾಯಿನಿ ೧೬೨
೮೬. ಮಾಯಾ ಸರೋವರ : ಡಾ. ಗೀತಾ ವಸಂತ ೧೬೩
೮೭. ಎಂಟ್ರೋಪಿ : ಟೀನಾ ಶಶಿಕಾಂತ್ ೧೬೫
೮೮. ದಾಹ ಮತ್ತು ಬಾವಿ : ಕಾದಂಬಿನಿ ರಾವಿ ೧೬೭
೮೯. ಅವರೆ ಹೂ ಕ್ರೋಟಾನ್ ಗಿಡ : ಸಂಧ್ಯಾ ರಾಣಿ ೧೬೯
೯೦. ಗುಂಗು ಬಿಡಿಸುವ ಮಂತ್ರ : ಕವಿತಾ ರೈ ೧೭೧
೯೧. ಬಹಳಷ್ಟು ಸಲ ಹೀಗಾಗುತ್ತದೆ : ರೇಣುಕಾ ರಮಾನಂದ ೧೭೩
೯೨. ಆಕಾಶ ಓ ಆಕಾಶ : ಮಿತಾ ದೇವನೂರು ೧೭೫
೯೩. ದಾರಿ...!! : ರಂಗಮ್ಮ ಹೊದೇಕಲ್ ೧೭೬
೯೪. ಕ್ಯಾಪ್ಟನ್ ಕವಿತೆ : ಜ. ನಾ. ತೇಜಶ್ರೀ ೧೭೮
೯೫. ತೂರಿ ಬರುತ್ತಿದೆ ಬೆಳಕು : ವಿಭಾ ತಿರಕಪಡಿ ೧೭೯
೯೬. ಬಾಗಿಲದ್ದೇ ಗೊಂದಲ : ಮಮತಾ ಅರಸೀಕೆರೆ ೧೮೦
೯೭. ಬಾಲ್ಯ ಮತ್ತು ಒಂದೆರಡು ಚಿತ್ರಗಳು : ಛಾಯಾ ಭಗವತಿ ೧೮೨
೯೮. ಬಿಸಿ ಚಹಾ : ಶ್ರೀದೇವಿ ಕೆರೆಮನೆ ೧೮೩
೯೯. ಚಿಯರ್ಸ್ ಗರ್ಲ್ಸ್ : ದೀಪಾ ಹಿರೇಗುತ್ತಿ ೧೮೫
೧೦೦. ಛೇ.. : ದೀಪ್ತಿ ಭದ್ರಾವತಿ ೧೮೭
೧೦೧. ಅವನ ಹುಟ್ಟಿಗೆ ಹದಿನಾಲ್ಕುವರ್ಷ! : ಚೇತನಾ ತೀರ್ಥಹಳ್ಳಿ ೧೮೯
೧೦೨. ಬಾಲ ಸರಸ್ವತಿ : ಅಕ್ಷತಾ ಹುಂಚದಕಟ್ಟೆ ೧೯೧
೧೦೩. ತೊರೆದು ಜೀವಿಸಬಹುದೆ : ವಿದ್ಯಾರಶ್ಮೀ ಪೆಲತಡ್ಕ ೧೯೩
೧೦೪. ದೇವರ ದನ : ರೋಸಿ ಡಿಸೋಜಾ ೧೯೪
೧೦೫. ಅಜ್ಜಿ, ಮೊಮ್ಮಗಳು ಮತ್ತು ವಾಷಿಂಗ್
ಮಶೀನು : ಶ್ರೀದೇವಿ ಕಳಸದ ೧೯೬
೧೦೬. ಗೋಡೆಗಂಟಿದ ಕಿಟಕಿ : ಕೆ.ಎಂ. ವಸುಂಧರಾ ೧೯೮

೧೦೭. ಮೀರುವವನು ಮುಳುಗುವವಳು : ಭಾರತೀ ದೇವಿ ೨೦೦
೧೦೮. ಎರವಲು ರೇಷಿಮೆ ಸೀರೆ : ದೀಪಾ ಗಿರೀಶ್ ೨೦೨
೧೦೯. ಟ್ರಯಲ್ ರೂಂನ ಅಪ್ಸರೆಯರು : ಭುವನ ಹಿರೇಮಠ ೨೦೪
೧೧೦. ಲ್ಯಾಬ್ ಎಕ್ಸಾಮ್ : ಕಾವ್ಯಾ ಕಡಮೆ ನಾಗರಕಟ್ಟೆ ೨೦೬
೧೧೧. ಹರಿವ ನದಿ : ರೂಪಶ್ರೀ ಕಲ್ಲಿಗನೂರು ೨೦೭
೧೧೨. ಗುಟುಕು – ೫ : ನಜ್ಮಾ ನಜೀರ್ ೨೦೯
೧೧೩. ಮಹಿಳಾ ಸಾಹಿತಿ : ಡಾ. ನೀಲಗಂಗಾ ಚರಂತಿಮಠ ೨೧೧
೧೧೪. ಜಂಕ್ಷನ್ : ಗಿರಿಜಾ ಶಾಸ್ತ್ರಿ ೨೧೨
೧೧೫. ಒಂದು ನೋವು : ಡಾ. ಜಿ.ಪಿ. ಕುಸುಮ ೨೧೩
೧೧೬. ಸಿಕ್ಕರೆ ನಗುವ ತಂದುಕೊಡುವೆಯಾ, ಗೆಳತಿ! : ಡಾ. ಕೆ. ರಾಜೇಶ್ವರಿ ಗೌಡ ೨೧೫
೧೧೭. ಬೇಡಲಿಲ್ಲ ಬೆಳದಿಂಗಳು : ಶಾರದಾ ಮುಳ್ಳೂರು ೨೧೬
೧೧೮. ಕತ್ತಲೆಯಲ್ಲಿ ಬೆಳಕಿನ ಬಿತ್ತನೆ : ಡಾ. ಕವಿತಾ ಶಿ. ಕುಸುಗಲ್ಲ ೨೧೭
೧೧೯. ಕಳೆದುಹೋದ ಮಗನ ಆಸೆ : ಲಲಿತಾ ಕೆ. ಹೊಸಪ್ಯಾಟಿ ೨೧೮
೧೨೦. ಬುದ್ಧ : ರಜಿಯಾ ಬಳಬಟ್ಟಿ ೨೧೯
೧೨೧. ಮುಖವಾಡಗಳು ಮಾರಾಟಕ್ಕಿವೆ : ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ೨೨೦
೧೨೨. ಹೆಣ್ಣಿಗೆ... : ಭಾರತೀ ಪಾಟೀಲ ೨೨೨
೧೨೩. ಒಂಟಿ ಪಯಣಿಗರು : ಹೇಮಾ ವಸ್ತ್ರದ ೨೨೩
೧೨೪. ಹರಿವಲ್ಲ ಹರಿದಾರಿ ಮನಸ : ಆಶಾ ಕಡಪಟ್ಟಿ ೨೨೫
೧೨೫. ಉರಿದುಹೋದ ಕನಸುಗಳು : ವೈ.ಕೆ. ಸಂಧ್ಯಾಶರ್ಮ ೨೨೬

*********

# ಭಾಗ – ೧

# ಅತ್ತಿಮಬ್ಬೆಯ ಶಾಸನ(ಆಯ್ದ ಭಾಗ)

ಗದಗ ಜಿಲ್ಲೆ ಲಕ್ಕುಂಡಿಯ ಎರಡು ಶಾಸನಗಳು ಅತ್ತಿಮಬ್ಬೆಗೆ ಸಂಬಂಧಿಸಿದವು. ಅತ್ತಿಮಬ್ಬೆಯು ೧೦೦೭ರಲ್ಲಿ ತನ್ನ ಗುರುಗಳಾದ ಅರ್ಹನಂದಿ ಪಂಡಿತ ದೇವರಿಗೆ ಲಕ್ಕುಂಡಿಯಲ್ಲಿ ಬಸದಿಯನ್ನು ಮಾಡಿಸಿ, ಅದಕ್ಕೆ ಸುರಕಿ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದನ್ನು ಹೇಳುವ ಉದ್ದೇಶದ ಈ ಶಾಸನದಲ್ಲಿ ಅತ್ತಿಮಬ್ಬೆಯ ಗುಣಗಣಗಳ ಪ್ರಶಸ್ತಿ ಇದೆ.

ಕಲ್ಯಾಣದ ಐವರು ಚಕ್ರವರ್ತಿಗಳಾದ ತೈಲಪ ಸತ್ಯಾಶ್ರಯ, ಐದನೆಯ ವಿಕ್ರಮಾದಿತ್ಯ, ಅಯ್ಯಣದೇವ, ಎರಡನೆಯ ಜಯಸಿಂಹರಿಂದ ಪೂಜಿತಳಾಗಿ ಬಹುಮಾನ್ಯಳಾಗಿ ಬೆಳಗಿದ ಅತ್ತಿಮಬ್ಬೆ ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಶಕ್ತಿಯಾಗಿ ಬೆಳಗಿದವಳು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಣಬರುವ ಮೊಟ್ಟ ಮೊದಲ ಮಹಿಳೆ. ಅವಳ ಉನ್ನತ ವರ್ಚಸ್ವೀಯಾದ ವ್ಯಕ್ತಿತ್ವದಿಂದ ಬಹುಜನರ ಮನ್ನಣೆಗೆ ಪಾತ್ರಳಾಗಿದ್ದು ಕವಿಗಳಿಗೆ ಆಶ್ರಯದಾತಳಾಗಿದ್ದಳು. ರಾಜಕೀಯವಾಗಿ ಕರ್ನಾಟಕವನ್ನು ಆಳಿದ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯಕ್ಕೆ ತಮ್ಮ ಕುಟುಂಬವನ್ನೇ ತೆತ್ತುಕೊಂಡ ಆಂಧ್ರ ಮೂಲದ ವೆಂಗಿ ವಿಷಯದ ಕಮ್ಮೆನಾಡಿನ ಪುಂಗನೂರಿನ ನಾಗಮಯ್ಯ ಈಕೆಯ ತಾತ. ಮೂಲತಃ ಬ್ರಾಹ್ಮಣನಾಗಿದ್ದು ನಂತರ ಜೈನಧರ್ಮವನ್ನು ಅವಲಂಬಿಸಿದ್ದವನು. ತಂದೆ ಮಲ್ಲಪ್ಪಯ್ಯ ಹಾಗೂ ಚಿಕ್ಕಪ್ಪ ಪೊನ್ನವಯ್ಯ ಅತ್ಯಂತ ಶೂರರೂ, ಜೈನಮತಾವಂಬಿಗಳೂ ದಾನ ಧರ್ಮಗಳಲ್ಲಿ ನಂಬಿಕೆಯಿಟ್ಟವರೂ ಆಗಿದ್ದರು. ಮಲ್ಲಪ್ಪಯ್ಯನ ಎಂಟು ಜನ ಮಕ್ಕಳಲ್ಲಿ ಅತ್ತಿಮಬ್ಬೆ ಒಬ್ಬಳಾಗಿದ್ದು ತನ್ನ ಬದುಕಿನುದ್ದಕ್ಕೂ ಜೈನಧರ್ಮಾವಲಂಬಿಯಾಗಿದ್ದು ಅದರಲ್ಲೇ ಸಾರ್ಥಕ್ಯವನ್ನು ಕಂಡುಕೊಂಡಳು. ಅತ್ತಿಮಬ್ಬೆ ಯುದ್ಧ ಮಾಡಿದ ಉಲ್ಲೇಖ ದೊರೆಯದಿದ್ದರೂ ಪರಿಸರ ಕಾರಣವಾದ ಕ್ಷಾತ್ರಧರ್ಮ ಅವಳಲ್ಲಿ ಅಚ್ಚೊತ್ತಿತ್ತು. 'ಅಜಿತನಾಥ ಪುರಾಣ'ದ ಒಂದು ಪದ್ಯ ಹೇಳುವಂತೆ – ಯುದ್ಧವೊಂದರಲ್ಲಿ ಅವಳು ಕ್ಷಾತ್ರ ತೇಜಸ್ಸನ್ನು ಮೆರೆದಿದ್ದಾಳೆ. ಯುದ್ಧ ಭೂಮಿಯಲ್ಲಿ ಶತ್ರು ಸೈನ್ಯವನ್ನು ಎದುರಿಸಿ ಗೆದ್ದ ಪ್ರಥಮ ಮಹಿಳೆ. ಲಕ್ಕುಂಡಿಯ ಶಾಸನವೂ ಅವಳು ಗೋದಾವರಿ ನದಿಯ ಪ್ರವಾಹಕ್ಕೆ ಅಂಜದೆ ಮುಂದುವರೆದು ಮದಿಸಿದ ಆನೆಗೆ ಹೆದರದೆ ಎದುರು ನಿಂತಿದ್ದನ್ನು ಹೇಳುತ್ತದೆ.

ಗಂಡನ ಮನೆಯಲ್ಲಿ ಶೈವ ಧರ್ಮ ಪರಿಪಾಲನೆಯಿದ್ದಾಗಲೂ ಅವಳಿಗೆ

ಜಿನಧರ್ಮ ಪಾಲಿಸುವಲ್ಲಿ ಯಾವ ತೊಂದರೆಯೂ ಆಗಲಿಲ್ಲ. ಚಾಲುಕ್ಯ ಸಾಮ್ರಾಟರಲ್ಲಿ ನಿಷ್ಠೆ ಹೊಂದಿದ್ದ ಗಂಡ ನಾಗದೇವ ಯುದ್ಧದಲ್ಲಿ ಮಡಿದ ನಂತರ ಪುತ್ರ ಪಾಲನೆಗಾಗಿ ಅವನೊಡನೆ ಸತಿ ಹೋಗದೆ, ಮಗ ಅಣ್ಣಿಗದೇವನೊಡಗೂಡಿ ಜಿನಧರ್ಮ ಪ್ರಚಾರಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡಳು.

ಜೈನಧರ್ಮದ ಉಚ್ಛ್ರಾಯ ಕಾಲದಲ್ಲಿ ಬದುಕಿದ್ದ ಅತ್ತಿಮಬ್ಬೆ ಮಹಾಕವಿ ರನ್ನನ ಆಶ್ರಯದಾತಳಾಗಿದ್ದು, ೧೫೦೦ ಜಿನ ಪ್ರತಿಮೆಗಳನ್ನು ದಾನ ಮಾಡಿದಳು. ಜೈನರಲ್ಲಿ ಎಲ್ಲಕ್ಕಿಂತ ಮುಖ್ಯವಾದ ದಾನ ಶಾಸ್ತ್ರದಾನವಾಗಿದ್ದು, ಅದಕ್ಕಾಗಿ ಹೊಸ ಕೃತಿರಚನೆಗೆ ಪ್ರೋತ್ಸಾಹವನ್ನು ಕೊಡಲಾಗುತ್ತಿತ್ತು. ಹಾಗೆಯೇ ಅತ್ತಿಮಬ್ಬೆ ಕೂಡಾ ಪೊನ್ನನ ಶಾಂತಿಪುರಾಣದ ೧೦೦೦ ಪ್ರತಿಗಳನ್ನು ಮಾಡಿಸಿದುದು, ರನ್ನನಿಂದ 'ಅಜಿತನಾಥ ಪುರಾಣ'ವನ್ನು ಬರೆಸಿದ್ದು ಹಾಗೂ ಜೈನ ಧರ್ಮದ ಉನ್ನತಿಯನ್ನು ತೋರಲು ೧೫೦೦ ಬಸದಿಗಳನ್ನು ಕಟ್ಟಿದ್ದ ವಿವರಗಳನ್ನು ಲಕ್ಕುಂಡಿಯ ಶಾಸನ ಹೇಳುತ್ತದೆ.

ಈ ಶಾಸನ ಅತ್ತಿಮಬ್ಬೆಯ ಜೀವನವೇ ಕಾವ್ಯಾತ್ಮಕವಾದ ಸ್ಥಿತಿಯನ್ನು ಹೇಳುತ್ತಿದೆ. ಉತ್ಕಟವಾದ ದೈವನಿಷ್ಠೆ, ಧರ್ಮಾಚರಣೆ ಅವಳ ಬದುಕಿಗೆ ಮೇರು ಕಳಸಗಳಾಗಿವೆ. ಅವಳ ಇತಿ ವೃತ್ತಾಂತವನ್ನು ಅವಳೇ ಹೇಳಿರುವ ಸಾಧ್ಯತೆ ಶೇ ೧೦೦ರಷ್ಟು ಸತ್ಯವಾಗಿರುವುದು ಅತ್ತಿಮಬ್ಬೆಯ ಪ್ರಶಸ್ತಿಯಲ್ಲಿ ಆಧಾರ ಸಹಿತ ಸಿಗುತ್ತದೆಯಾದ್ದರಿಂದ ಇದು ಅವಳ ಶಾಸನ ಎಂದೇ ಪರಿಗಣಿಸಬೇಕು. ಶಾಸನಗಳೆಲ್ಲವೂ ಯಾರ ಹೆಸರಲ್ಲಿದ್ದರೂ ಬರೆದವರು ಮಾತ್ರ ಯಾವಾಗಲೂ ಬೇರೆಯವರೇ. ಅತ್ತಿಮಬ್ಬೆ ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಸ್ತ್ರೀ ಅಭಿವ್ಯಕ್ತಿಯ ಪ್ರತೀಕ. ಅವಳ ಶಾಸನದ ಒಂದು ಭಾಗ ಇಲ್ಲಿದೆ ॥ವ॥

ಆ ಮಹೀದೇವ ಕುಳಗಗನ ಗಭಸ್ತಿಮಾಳಿಗೆ ಮಹಾಸತೀರತ್ನಂ ಕುಳಪತ್ನಿಯಾಗಿ ಗುಣದಂಕಕಾರ್ತಿಯುಂ ಕವಿವರಕಾಮಧೇನುವುಂ ಕಟಕಪತಿವ್ರತೆಯುಂ ಜಿನಧರ್ಮ ಪತಾಕೆಯುಂಮೆನಿಸಿದ ಮಹಾಪ್ರಭಾವಮೇ ದೊರೆಂತೆನೆ ॥ವೃ॥

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತೆ ಪೋಗಿ ಕಾ
ಣ್ಬನ್ನೆಗಮನ್ನಮಂ ತೊಱೆದು ಪರ್ವ್ವತಮಂ ಮುದದೇಱೆ ತಜ್ಜಿನಾ
ಸನ್ನದೊಳತ್ತಿಯಬ್ಬೆಗೆ ಪಥಶ್ರಮಮಾದೊಡಕಾಳವೃಷ್ಟಿಯಾ
ಯ್ತಿನ್ನವು ದೇವಭಕ್ತಿಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್ ॥೮॥
॥ಕಂ॥

ನರಪನ ಬೆಸದಿಂ ಜಿನನಂ
ಶಿರದೊಳ್ಸಲೆ ತಾಳ್ದಿ ದಾನಚಿಂತಾಮಣಿ ನಿ
ರ್ಭರ ಗೋದಾವರಿಯಂ ಪುಗೆ
ಪರಿಯುಡುಗಿದುದೆಂದೊಡೊಳ್ಪನದನೇ ವೇಳ್ವೆಂ ॥೯॥

ಮದವತ್ಕರಿ ಸೆಱೆಯಂ ಪಱೆ
ದೊದವಿದ ಮುಳಿಸಿಂದೆ ಭೋರನೆಯ್ತಂದೊಡದ
ರ್ಕ್ಕದಿರದಿರೆ ಭಕ್ತಿಯಿಂದದು
ಪದಯುಗಕೆಱಗಿದುದು ದಾನಚಿಂತಾಮಣಿಯಾ ॥೧೦॥

ಮುದದರ್ಚ್ಚಿಪ ಜಿನಬಿಂಬಂ
ನದಿಯೊಳ್ಕಯ್ದ(ಬ್ದು)ಕಿ ಬಿಳ್ದೊಡದು ಬಪ್ಪಿನಮು
ಣ್ದುದನುಳಿದಿರಲೆಂಟು ದಿನ
ಕ್ಕದು ಬಂದುದು ಕಯ್ಗೆ ದಾನಚಿಂತಾಮಣಿಯಾ ॥೧೧॥

ಪ್ರಳಯಾಗ್ನಿಯಂತೆ ಕಟಕಮ
ನೊಳಕೊಣ್ಡುಳುರ್ವ್ವಗ್ನಿ ದಾನಚಿನ್ತಾಮಣಿ ನಿ
ರ್ಮ್ಮಳ ಜಿನ ಗನ್ಧೋದಕಮಂ
ತಳಿಯಲ್ಕುಪಶಮಿಸಿತೆನ್ದೊಡೇ ವಣ್ಣಿಸುವೇ ॥೧೨॥

ಒಡನೇರಿ ಸವತಿ ನೊಂಕ
ಲ್ದೊಡರಿಸೆ ತೊಱೆಯೊಳಗೆ ಪಱುಗಲತ್ತಿತ್ತಲಣಂ
ಮಿಡುಕದೆ ತಿರಿಯುತ್ತಿರೆ ಕ
ಣ್ಡಿಡಿಗೆಱಗಿದಳತ್ತಿಯಬ್ಬೆ(ಗ)ತಿಭಯಯವಶದಿಂ ॥೧೩॥

ಜಿನಧರ್ಮ್ಮ ಪತಾಕೆಗೆ ವಿಮ
ಳ ನರ್ಮ್ಮದಾ ನದಿಯ (ಕು)ರುಳ ಪಾವೆಯ ಜಿನನಂ
ವಿನುತಂ ಕಾಣ್ಬನೆಗಂ ಕೂ
ಳನೆ ತೊಱೆದುದು ಸನ್ದುದನ್ತದಾ ಜನ್ಮಾನ್ತಂ ॥೧೪॥

॥ವೃ॥

ಜಿನಪದ ಪಂಕಜಭ್ರಮರನೆಂಬ ನೆಗ(ಟ್ತೆ)ಯನಾಳ್ದ ಮಲ್ಲಪ
ಯ್ಯನ ನೆಗಟ್ದಿಪ್ಪಕಬ್ಬೆಯ ಮಗಳ್ (ಸ)ಚಿವೋತ್ತಮನಪ್ಪ ಧಲ್ಲಪ
ಯ್ಯನ ಸೊಸೆ ನಾಗದೇವನ ಕುಳಾಂಗನೆ ತೈಲನತಾಯ್ಜಸಕ್ಕೆ ಭಾ
ಜನಮೆನಿಪ್ಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತಮಿಳ್ದಿಪಳ್ ॥೧೫॥

ಕೃಪೆ : ಶಾಸನ ಸರಸ್ವತಿ (ಸಂ) ಕೈದಾಳ ರಾಮಸ್ವಾಮಿ ಗಣೇಶ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ ೨೦೦೭–೦೮

❖

# ಕಂತಿ ಹಂಪರ ಸಮಸ್ಯೆಗಳು

ಕಂತಿ ೧೧೦೦ರಲ್ಲಿದ್ದ ಕವಯಿತ್ರಿ ಎನ್ನುವುದಕ್ಕೆ ನಮಗೆ ಅನೇಕ ಆಧಾರಗಳು ಸಿಗುತ್ತದರೂ, ಈಕೆಯ ಪ್ರತ್ಯೇಕ ಕೃತಿಗಳು ಲಭ್ಯವಾಗಿಲ್ಲ. ಬಾಹುಬಲಿಯ ನಾಗಕುಮಾರ ಚರಿತೆ, ದೇವಚಂದ್ರನ ರಾಜಾವಳೀ ಕಥೆಯ ಒಂದು ಹೇಳಿಕೆ ಮತ್ತು ಕಂತಿ ಹಂಪನ ಸಮಸ್ಯೆಗಳು ಎನ್ನುವ ಪದ್ಯ ಸಂಕಲನ ಈಕೆಯ ಇರುವಿಕೆಯ ಬಗ್ಗೆ ಗಾಢವಾದ ನಂಬಿಕೆಯನ್ನು ಮೂಡಿಸುತ್ತದೆ. ಈಕೆಯ ಬಗ್ಗೆ ನಾಗಕುಮಾರ ಚರಿತೆಯಲ್ಲಿ ಬಾಹುಬಲಿಯು ದೋರರಾಯನ ಆಸ್ಥಾನದ ಮಂಗಳ ಲಕ್ಷ್ಮೀ, ಅಭಿನವ ವಾಗ್ದೇವಿ, ರಾಜಸನ್ಮಾನಿತೆ, ಪಂಡಿತೆ ಎಂದೆಲ್ಲಾ ಗೌರವದಿಂದ ಹೇಳುತ್ತಾನೆ. ದೇವಚಂದ್ರನ ರಾಜಾವಳಿ ಕಥೆಯೂ ಕೂಡಾ ಇಂಥದ್ದೇ ವಿವರಗಳನ್ನು ಕೊಡುತ್ತದೆ. ಇದರ ಜೊತೆಗೆ ದೋರರಾಯನ ಆಸ್ಥಾನದಿಂದ ಬಂದ ಕನ್ನಡದ ಸಂಸ್ಕೃತ ಮಹಾಕವಿ ಪಂಪಕವಿಯ ಜೊತೆ ಆತನ ಸಾವಿರ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿ, ಆಕೆಯನ್ನು ರಾಜಸಭೆಯ ವಿದ್ವತ್ ಸಮೂಹದಲ್ಲಿ ಕವೀಶ್ವರಿಯಾಗಿ ಉಳಿಸಿಕೊಳ್ಳಲಾಯಿತು ಎನ್ನುವ ವಿವರಗಳು ಬರುತ್ತವೆ. ಇನ್ನು ಕಂತಿ–ಹಂಪನ ಸಮಸ್ಯೆಗಳು ಎನ್ನುವ ಸಂಕಲನ ಪ್ರಶ್ನೋತ್ತರ ರೂಪದಲ್ಲಿದೆ. ಹಂಪನೆಂಬುವವನು ಹಾಕಿದ ಸವಾಲಿಗೆ ಕಂತಿ ಜವಾಬು ನೀಡುತ್ತಾಳೆ. ಇದಲ್ಲದೆ 'ನೀತಿ ಸಾರ' ಎನ್ನುವ ಅಜ್ಞಾತ ಕಾಲಕರ್ತೃಕವಾದ ಒಂದು ಗ್ರಂಥದಲ್ಲಿ ಪೂರ್ವಕವಿಗಳ ಪಟ್ಟಿಯಲ್ಲಿ ತುರುಗ, ಮಯೂರ, ಹಂಪುಗನು, ಕುಂತಿ ಚವಿಂಡಿಯರೇ ಕವೀಂದ್ರರ್ ಎಂದು ಪಟ್ಟಿಯನ್ನು ಕೊಡುತ್ತದೆ. ಕಂತಿ ಎಂದರೆ ಜೈನ ಸನ್ಯಾಸಿನಿಗೆ ಇರುವ ಹೆಸರಾಗಿದ್ದು ಈ ಪದ್ಯಗಳಿಗೆ ಅಂಕಿತ ಇಲ್ಲದಿರುವುದು ಕಂತಿ ಎನ್ನುವವಳು ಇರಲೇ ಇಲ್ಲ ಎನ್ನುವ ವಾದವೂ ಇದೆ. ಆದರೆ ಅವಳ ಉತ್ತರ ಹೆಣ್ಣೊಬ್ಬಳು ಕೊಡುವ ಉತ್ತರ ಮಾತ್ರ. ಹೆಣ್ಣೊಬ್ಬಳ ಆತ್ಮ ಸಮರ್ಥನೆಯೇ ಎಂದು ಸರೋಜಿನಿ ಮಹಿಷಿ ಅಭಿಪ್ರಾಯ ಪಡುತ್ತಾರೆ. ರಂ. ಶ್ರೀ. ಮುಗಳಿಯವರು ಅವಳ ಇರುವಿಕೆಯನ್ನು ಮೊದಲು ಅನುಮಾನಿಸಿದರೂ 'ಅವಳಿದ್ದುದೇ ನಿಜವಾದರೆ ಕನ್ನಡ ಕವಿಯಿತ್ರಿ ಇಲ್ಲವೇ ಪದ್ಯಲೇಖಕಿಯರಲ್ಲಿ ಅವಳು ಮೊದಲಗಿತ್ತಿಯಾಗುತ್ತಾಳೆ' ಎಂದಿದ್ದಾರೆ.

ಚಮತ್ಕಾರವನ್ನೇ ಜೀವಾಳವಾಗಿಸಿಕೊಂಡ ಈ ಪದ್ಯಗಳಲ್ಲಿ ಒಡಪನ್ನು ಬಿಡಿಸುವ ಕಂತಿ ಒಬ್ಬ ನುರಿತ ಕವಯತ್ರಿಯಂತೆ ಕಾಣುತ್ತಾಳೆ. ಅವಳಿಗೆ ಕವಿತೆ ಕಟ್ಟುವ ಕಲೆ ಸಹಜವಾಗೇ ಸಿದ್ಧಿಸಿದೆ. ಒಗಟನ್ನು ಬಿಡಿಸುವ ರೀತಿಯಲ್ಲಿ ಈ ಪದ್ಯಗಳು ಪ್ರಶ್ನೆಗೊಂದು ಉತ್ತರವಾಗಿದೆ. ಆ ಸಂವಾದದ ಒಂದು ಭಾಗವನ್ನು ಇಲ್ಲಿ ಕೊಡಲಾಗಿದೆ.

ದನಮಂ ಕೊಯ್ಕೊಯ್ದು ಬಸದಿಗೊಯ್ಯುತಿರ್ಪರ್

ವನದೊಳಗೆ ಪುಟ್ಟಿ ಕಂಪಿನ
ತನಿರಸಮಂ ಪತ್ತುದೆಸೆಗೆ ಬೀರುತ್ತಿರುವಾ
ಘನತರ ಸುರಚಿರ ಸಚ್ಚಂ
ದನಮಂ ಕೊಯ್ಕೊಯ್ದು ಬಸದಿಗೊಯ್ಯುತಿರ್ಪರ್ ॥ (ಪ. ೬)

ಸತ್ತವಳೆದ್ದೋಡಿಪೋದಳೇನಿದು ಚಿತ್ರಂ

ಅತ್ತೆಯ ಬೈಗುಳ ಮಾತಿಂ
ದತ್ತಿಗೆ ದೌರ್ಜನ್ಯದಿಂದ ಗಂಡನ ಪೆಟ್ಟಿಂ
ಮತ್ತೆ ಮುದಿಮಾವನಿಂ ಬೇ
ಸತ್ತವಳೆದ್ದೋಡಿಪೋದಳೇನಿದು ಚಿತ್ರಂ ॥ (ಪ. ೧೪)

ತಲೆಯೊಳ್ ಜಾರೆಯರು ಬಂದು ರಮಿಸುತ್ತಿರ್ಪರ್

ಮಲಗಲು ನಿದ್ರೆಯು ಬಾರದೆ
ಯಲರಂಬಿನ ದಾಳಿ ಮುಸುಕಿ ಪತಿಯಂ ವಂಚಿಸಿ
ಗಲಗುಗಳಂ ತೋರದೆ ಕ
ತ್ತಲೆಯೊಳ್ ಜಾರೆಯರು ಬಂದು ರಮಿಸುತ್ತಿರ್ಪರ್ ॥ (ಪ. ೨೧)

ನರಚರಿತದಿಂ ಮೋಕ್ಷ ಸೌಖ್ಯಮಪ್ಪುದು ಸಿದ್ಧಂ

ಪರಮದಯಾರಸಪೂರಿತ
ಶರಧಿಗೆ ಶುಭ್ರಾಂಶುವಾದ ದೋಷವಿಹೀನರ
ನಿರುಪಮವೆನಿಸುವ ವರ ಜೈ
ನರ ಚರಿತದಿಂ ಮೋಕ್ಷ ಸೌಖ್ಯಮಪ್ಪುದು ಸಿದ್ಧಂ ॥ (ಪ. ೩೭)

**ಕೃಪೆ:** ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೩, ಸಂಪಾದಕರು ಟಿವಿ ವೆಂಕಟಾಚಲಶಾಸ್ತ್ರೀ, ಮೈಸೂರು ವಿವಿ, ೧೯೭೬

❖

# ವಚನಕಾರ್ತಿಯರು

**ಟಿಪ್ಪಣಿ:** ಹನ್ನೆರಡನೇ ಶತಮಾನ ಕನ್ನಡದ ಚರಿತ್ರೆಯಲ್ಲಿ ಬಹುಮುಖ್ಯಘಟ್ಟ, ಸಾಮಾಜಿಕ ಕ್ರಾಂತಿಯ ಹರಿಕಾರರಾಗಿ ಕಾವ್ಯವನ್ನು ಜನರ ಹತ್ತಿರಕ್ಕೆ ತಂದರು. ಅಲ್ಲಿಯವರೆಗೂ ಸಮಾಜದಲ್ಲಿ ಲೆಕ್ಕಕ್ಕೆ ಇಲ್ಲದ ಅನೇಕ ಸ್ತರಗಳ ದನಿ ಇಲ್ಲಿ ದಾಖಲಾಯಿತು. ಕೆಳವರ್ಗ, ಜಾತಿಯಂತೆ ಸಮಾಜದ ಎರಡನೇ ಸ್ತರದಲ್ಲಿರುವ ಸ್ತ್ರೀಯರೂ ಮಾತಾಡಲು, ಕಾವ್ಯದಲ್ಲಿ ತೊಡಗಿಸಿಕೊಳ್ಳಲು ಆರಂಭಿಸಿದರು. ತಮ್ಮ ಇರಿವಿನ ಅರಿವ ವಿಸ್ತರಿಸಿಕೊಳ್ಳುವತ್ತ, ಅದನ್ನು ಮತ್ತೆ ಮತ್ತೆ ಸ್ಥಾಪಿಸುವತ್ತ ತುಡಿದವರು ವಚನಕಾರ್ತಿಯರು. ಅವರೆಲ್ಲೂ ಸಮಾನಸ್ಥಾನವನ್ನು ಕೊಡಿ ಎಂದು ಕೇಳಲಿಲ್ಲ, ಅದಕ್ಕೆ ಬದಲಾಗಿ ಜ್ಞಾನದ ಅನ್ವೇಷಣೆಗೆ ಇಳಿದವರು. ಕನ್ನಡದಲ್ಲಿ ಮೊದಲ ಬಾರಿಗೆ ಗ್ರಾಹಕ ಎನ್ನುವ ಪದವನ್ನು ಅಕ್ಕಮ್ಮ ಬಳಸುತ್ತಾಳೆ. ತನ್ನ ಸಮಶೀಲಕರಲ್ಲದವರು ಅದು ಹೆಣ್ಣಾಗಲೀ ಗಂಡಾಗಲಿ ಅವರನ್ನು ನಾನು ನೋಡಲಾರೆ ಎನ್ನುತ್ತಾಳೆ ಅಕ್ಕಮ್ಮ. ಇದು ಅಹಂ ಅಲ್ಲದ ಆತ್ಮ ಸಮ್ಮಾನದ ರೀತಿ. ಸ್ವಾದ ಅರಿವಿಂದ ಸಮಾಜಕ್ಕೆ ನೈತಿಕತೆಯ ಬಗ್ಗೆ ಪ್ರಧಾನವಾದ ಪ್ರಶ್ನೆಗಳನ್ನು ಅಕ್ಕಮಹಾದೇವಿ ಮುಂದಿಟ್ಟರೆ, ಮುಕ್ತಾಯಕ್ಕ ಅಲ್ಲಮನ ಹಾದಿ ಹಿಡಿದು ಒಡಪಿಂದಲೇ ಜಗತ್ತಿನ ಸತ್ಯಗಳನ್ನು ಬಿಡಿಸಲು ನೋಡುತ್ತಾಳೆ. ಧೂಪದ ಗೊಗ್ಗವ್ವೆ ಹೆಣ್ಣು ವಡವೆ(ಆಸ್ತಿ)ಯೆಂದೇ ಭಾವಿಸುವ ಪುರುಷ ಸಮಾಜಕ್ಕೆ ಎಸೆವ ನೇರವಾದ ಪ್ರಶ್ನೆ ಮಹಿಳಾ ಕಾವ್ಯಕ್ಕೆ ಬೀಜರೂಪಿಯಾದ ಇಂಥಾ ಸಂಗತಿಗಳ ಜೊತೆ ಮಾತನಾಡಿದರೆ, ನಿರಾಕರಿಸಲಾಗದ ದೇಹಸತ್ಯದ ಸಂಗತಿಗಳನ್ನು ದೊರೆತಿರುವ ತನ್ನೊಂದೇ ವಚನದ ಮೂಲಕ ಸೂಳೆಸಂಕವ್ವೆ ಮಾತನಾಡುತ್ತಾಳೆ. ಅರಿವಿನ ಬೆರಗನ್ನು ಹಿಡಿಯ ಹೊರಟ ಎಲ್ಲ ವರ್ಗದ ಹೆಣ್ಣುಮಕ್ಕಳನ್ನು ನಾವಿಲ್ಲಿ ಕಾಣುತ್ತೇವೆ. 'ಸ್ವ' ದ ಘನತೆಗೆ ಕುಂದು ಬರದೆ, ಅರಿವಿನ ದಾರಿಗಳನ್ನು ತಮತಮಗೆ ತೋಚಿದಂತೆ ಕಂಡುಕೊಂಡ ಇವರು, ತಮ್ಮ ದೇಹದ ಇರುವಿನ ಸತ್ಯವನ್ನೂ, ಅದರ ಸ್ವರೂಪವನ್ನು ಅರಿತೂ ಅದನ್ನು ದಾಟುವ ಯತ್ನ ಮಾಡಿದರು. ದೇಹವಿದೆ ದೇಹಕ್ಕೆ ಬೇಕಾಗುವ ಎಲ್ಲವನ್ನು ಕೊಟ್ಟಿದ್ದೀಯ, ನೀನು ಆಡಿಸಿದಂತೆ ಆಡುವವಳು ಮಾತ್ರ ನಾನು ಇದರಲ್ಲಿ ನನ್ನದೇನಿದೆ ಎಂದು ದೇವರಿಗೆ ಪ್ರಶ್ನೆ ಹಾಕುವುದರ ಮೂಲಕ ಸಮಾಜ ಹೆಣ್ಣನ್ನು ನೋಡುವ ಕ್ರಮದಲ್ಲಿನ ಮಿತಿಗಳನ್ನು ಎತ್ತಿಹಿಡಿಯುತ್ತಾರೆ. ಇಷ್ಟಲಿಂಗ ಕೂಡಾ ಸ್ವಯಮಾನುಭವದಿಂದ ಸಿದ್ಧಿಸಿಕೊಂಡಿರುವುದೇ ಆಗಿದೆ ಹೊರತು ಅದೊಂದು ಪ್ರತಿರೂಪ ಮಾತ್ರವಲ್ಲ ಎನ್ನುವುದನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಈ ಎಲ್ಲಾ ಸಂಗತಿಗಳನ್ನು ಇಟ್ಟುಕೊಂಡು ಪ್ರಾತಿನಿಧಿಕವಾಗಿ ಕೆಲ ವಚನಗಳನ್ನು ಇಲ್ಲಿ ಕೊಡಲಾಗಿದೆ.

**ಸೂಳೆ ಸಂಕವ್ವೆ**

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ,
ಹಿಡಿದಡೆ
ಬತ್ತಲೆ ನಿಲಿಸಿ ಕೊಲುವರಯ್ಯಾ,
ವ್ರತಹೀನನನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

**ಅಕ್ಕಮ್ಮ**

ಎನ್ನ ಸಮಗ್ರಾಹಕ ಶೀಲಸಂಪಾದಕರನಲ್ಲದೆ
ಎನ್ನ ಕಣ್ಣಿನಲ್ಲಿ ನೋಡೆ, ಜಿಹ್ವೆಯಲ್ಲಿ ನೆನೆಯೆ,
ಮಿಕ್ಕಾದ ತಟ್ಟುವ ಮುಟ್ಟುವ ತಾಗುವ ಸೋಂಕುವ
ನಾನಾ ಗುಣಂಗಳಲ್ಲಿ ಶೋಧಿಸಿಯಲ್ಲದೆ ಬೆರೆಯೆ.
ಕೊಂಬಲ್ಲಿ ಕೊಡುವಲ್ಲಿ
ಎನ್ನ ವ್ರತಾಚಾರವ ಅಂಗೀಕರಿಸಿದವರಲ್ಲಿಗಲ್ಲದೆ ಹೋಗೆ.
ಇದಕ್ಕೆ ದೃಷ್ಟವ ನೋಡಿಹೆನೆಂದಡೆ ತೋರುವೆ.
ಶ್ರುತದಲ್ಲಿ ಕೇಳಿಹೆನೆಂದಡೆ ಹೇಳುವೆ.
ಅನುಮಾನದಲ್ಲಿ ಅಂದಿಹೆನೆಂದಡೆ
ಎನ್ನ ಆಚಾರವ ಆತ್ಮನ ಎನ್ನ ಕೈಯಲ್ಲಿ ಹಿಡಿದು
ನಿಮ್ಮ ಕೈಯಲಿ ಕೊಡುವೆ.
ಈ ಭಾಷೆಗೆ ತಪ್ಪೆನೆಂದು ಕಟ್ಟಿದೆ ತೊಡರುವ,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗಾ,
ಎನಗೆ ಸರಿ ಇಲ್ಲ ಎಂದು ಎಲೆದೊಟ್ಟು ನುಂಗಿದೆ.

**ಅಕ್ಕಮಹಾದೇವಿ**

ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದರೆದೊಡೆ
ಬೆಂದು ಕಳಂಕವ ಹಿಡಿಯಿತ್ತೆ?
ಸಂದುಸಂದ ಕಡಿದ ಕಬ್ಬನು ತಂದು ಗಾಣಕಿಕ್ಕಿ ಅರೆದಡೆ,
ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೇ ಹಾನಿ,
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯ,
ನೀ ಕೊಂದಡೆಯೂ ಶರಣೆಂಬುದ ಮಾಣೆ.

**ಗೊಗ್ಗವ್ವೆ (ಧೂಪದ ಗೊಗ್ಗವ್ವೆ)**
ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು,
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

**ಮುಕ್ತಾಯಕ್ಕ**
ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ,
ಬಯಲಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ.
ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ,
ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ,
ಎನ್ನ ಅಜಗಣ್ಣನ ಯೋಗಕ್ಕೆ

**ಮೋಳಿಗೆಯ ಮಹಾದೇವಿ**
ಕ್ರಿಯಾಲಿಂಗ ಜ್ಞಾನಲಿಂಗಗಳೆಂಬಲ್ಲಿ,
ಉಭಯವೆರಡು ಲಿಂಗವೆಂದು ಕಲ್ಪಿಸುವಲ್ಲಿ
ಅದಕ್ಕೆ ಭಿನ್ನ ಭಾವವಾವುದು?
ಕುಂಭಂಗಳೊಳಗೆ ಹುದುಗಿಕ್ಕಿದ ಕಿಚ್ಚು,
ಆ ಕುಂಭಂಗಳಿಗೆ ಒಳಗೆ ಮುಟ್ಟಿದಡೂ ಹೊರಗೆ ಮುಟ್ಟಿದಡೂ
ಪಾಕಪ್ರಯತ್ನ ತಪ್ಪದಾಗಿ,
ಇಂತೀ ದೃಷ್ಟದ ಲಕ್ಷಿತದಂತೆ ಹೊರಗಣ ಕ್ರಿಯಾಸಂಬಂಧ,
ಒಳಗಣ ಜ್ಞಾನಸಂಬಂಧವು; ಉಭಯದ ತತ್ತಿಲ್ಲ.
ಸಕ್ಕರೆಯ ರಾಶಿಗೆ ಕಿಸೆಯ ಕೆಲನುಂಟೆ?
ನಿಶ್ಚಯದ ಲಿಂಗಾಂಗಿಗೆ ಉಭಯದ ತಟ್ಟುಮುಟ್ಟೆಂಬ ಗುಟ್ಟಿನ ಕುಲವಿಲ್ಲ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಲಿಂಗವು
ಸ್ವಯಾನುಭಾವಸಿದ್ಧವಾದ ಕಾರಣ.

# ಹದಿಬದೆಯ ಧರ್ಮ

- ಸಂಚಿ ಹೊನ್ನಮ್ಮ

ಹದಿಬದೆಯ ಧರ್ಮ ಕನ್ನಡ ಸಾಹಿತ್ಯದ ವಿಶಿಷ್ಟ ಕೃತಿ. ಇದರ ಕೃತಿಕಾರಳಾದ ಸಂಚಿಯ ಹೊನ್ನಮ್ಮಾ ಮೂಲತಃ ಎಳಂದೂರಿನವಳು. ೧೬೭೨ರಿಂದ ೧೭೦೪ರವರೆಗೆ ಆಳಿದ ಮೈಸೂರಿನ ಅರಸ ಚಿಕ್ಕದೇವರಾಜರ ಕಾಲದಲ್ಲಿದ್ದವಳು. ರಾಜರ ಪಟ್ಟಮಹಿಷಿಯಾದ ದೇವರಾಜಮ್ಮಣ್ಣಿಯವರ ಪ್ರೀತಿಗೆ ಪಾತ್ರಳಾಗಿ ರಾಜರ ಸಂಚಿಯ ಊಳಿಗದವಳಾಗಿ ಅರಮನೆಯನ್ನು ಸೇರುತ್ತಾಳೆ. ಆಕೆಯಲ್ಲಿ ಜನ್ಮತಃ ಹುದುಗಿದ್ದ ಪ್ರತಿಭೆ; ಕಲಿತ ವಿದ್ಯೆಗಳಿಂದ ಅವಳ ಕಾವ್ಯ ಉಜ್ವಲಿಸಿತು. ಅವಳಲ್ಲಿನ ಈ ಗುಣ ಲಕ್ಷಣಗಳನ್ನು ಗಮನಿಸಿದ ರಾಜದಂಪತಿ, ಆಕೆಗೆ ಕಾವ್ಯ ರಚನೆಗೆ ಒತ್ತಾಸೆಯನ್ನು ನೀಡುತ್ತಾರೆ. ಅವಳಲ್ಲಿನ ಅಳುಕು ಪುರುಷ ಕಾವ್ಯ ಜಗತ್ತು ತನ್ನನ್ನು ಒಪ್ಪಿಕೊಳ್ಳುವುದೇ ಎನ್ನುವುದಾಗಿತ್ತು. ಪುರುಷ ಜಗತ್ತು ಬರೆವ ಕಾವ್ಯ ಬರೆದಾಗ ಈ ಸಮಸ್ಯೆ. ಹೆಣ್ಣಿನ ಜಗತ್ತನ್ನೇ ಕಾವ್ಯವಾಗಿಸಿದರೆ ಈ ಸಮಸ್ಯೆಯೇ ಇರುವುದಿಲ್ಲ ಎನ್ನುವ ಹಲವು ಸಲಹೆಯ ಮೇರೆಗೆ, ಸ್ತ್ರೀಜಗತ್ತು ಕುರಿತಾದ ಕಾವ್ಯವನ್ನು ಬರೆವ ಉದ್ದೇಶದಿಂದ ಹದಿಬದೆಯ ಧರ್ಮವನ್ನು ಬರೆದೆ ಎಂದು ತಾನೇ ಹೇಳಿಕೊಂಡಿದ್ದಾಳೆ. ಕನ್ನಡದ ಮೊದಲ ನಾಟಕ ಎಂಬ ಹೆಮ್ಮೆಗೆ ಪಾತ್ರವಾಗಿರುವ ಮಿತ್ರವಿಂದಾಗೋವಿಂದದಕರ್ತೃ ಅಳಸಿಂಗರಾರ್ಯ ಇವಳ ಗುರುಗಳು. ಹೊನ್ನಮ್ಮಳನ್ನು ಕುರಿತಂತೆ ಸರಸ ಸಾಹಿತ್ಯದ ವರದೇವತೆ, ಕಾವ್ಯಾಲಂಕಾರ ನಾಟಕಗಳ ಪಾವಣಿಗೆಯ ಬಲ್ಲವಳು ಎಂದು ರಾಜರ ಮುಂದೆ ಹೊಗಳಿದ್ದರಂತೆ. ಕನ್ನಡ ಸಂಸ್ಕೃತವನ್ನು ಬಲ್ಲ ಸಂಚಿಯ ಹೊನ್ನಮ್ಮ ಹೆಣ್ಣು ಇರಬೇಕಾದ ರೀತಿಯನ್ನು ರಾಮಾಯಣ, ಮಹಾಭಾರತ, ಮನುಧರ್ಮಗಳಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಹೇಳುವೆ ಎಂದು ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾಳಾದರೂ ಶಾಸಗಳನ್ನು ಬಿಟ್ಟೂ ಸ್ತ್ರೀ ಗೀತವೊಂದಕ್ಕೆ ಮುನ್ನುಡಿಯನ್ನು ತನ್ನ ಸ್ವಯೇಮಾನುಭವದಿಂದ ಬರೆಯುತ್ತಾಳೆ. ಅಲ್ಲಿ ಬರುವ ಸುಖೀ ದಾಂಪತ್ಯದ ಕಥೆಗಳನ್ನು ನೆಪಮಾಡಿಕೊಂಡು ಪ್ರತಿ ಸಂಧಿಯಲ್ಲೂ ಹೆಣ್ಣು ಧ್ವನಿಯನ್ನು ಸೇರಿಸಿ ಬರೆಯುತ್ತಾಳೆ. ಒಂದೊಂದು ಕಥೆಯೂ ಅವಳಿಗೆ ಆದರ್ಶದ ಸ್ಥಿತಿ. ಹೆಣ್ತನಕ್ಕಿರುವ ಹೆಮ್ಮೆ, ಎಲ್ಲವೂ ಒಂದು ಚೌಕಟ್ಟಿಗೆ ಸಿಗುತ್ತಿದೆ ಎನ್ನುವಾಗ ಸತೀತ್ವದ ಪರಮ ಪಾವಿತ್ರ್ಯದ ಬಗ್ಗೆ ಅವಳಿಗೆ ಅಪಾರವಾದ ಶ್ರದ್ಧೆಯಾದರೂ, ಸಮಾಜವನ್ನು ತನ್ನ ಕಾವ್ಯದಲ್ಲಿ ಪ್ರಶ್ನಿಸುವುದನ್ನು ಮರೆತಿಲ್ಲ. ಹುಟ್ಟಿದ ಮೆಟ್ಟಿದ ಮನೆಯ ಆನಂದಕ್ಕೆ ಕಾರಣವಾಗುವ ಹೆಣ್ಣನ್ನು ಈ ಸಮಾಜ ಅನಾದರದಿಂದ ನೋಡುವುದನ್ನು ಅವಳು ಕುರುಡುತನವೆಂದು ಕರೆದಿದ್ದಾಳೆ. ಸಮಾಜದ ಎಲ್ಲಾ ಆಗುಗಳಿಗೆ ಅವಳೇ ಕಾರಣ. ಅಂಥಾ ಹೆಣ್ಣನ್ನು ಕ್ಷುಲ್ಲಕವಾಗಿ ಕಾಣದಿರಿ ಎನ್ನುತ್ತಾಳೆ. ಅವಳು ಹೇಳುವುದು ಹೆಣ್ಣಿನ ಬಗ್ಗೆ ಎಂದು ಘಂಟಾಘೋಷವಾಗಿ ಸಾರಿದರೂ, ಹಾಗೇ ಗಂಡಸು ಅನುಸರಿಸಬೇಕಾದ ಕೆಲ ನಿಯಮಗಳೂ ಇವೆ; ಅವು ಹೇಗಿರುತ್ತೆ ಎನ್ನುವುದನ್ನು ಯಾರೂ ಹೇಳಿರಲಾರರು. ಯಾಕೆಂದರೆ ಇಷ್ಟು ವರ್ಷಗಳೂ ಹೆಣ್ಣು ಹೀಗಿರಬೇಕು ಎಂದು ಗಂಡಸು ತನ್ನ ದೃಷ್ಟಿಯಿಂದ ಮಾತ್ರಾ ಹೇಳುತ್ತಾ ಬಂದಿದ್ದಾನೆ. ಆ ನಿಟ್ಟಿನಲ್ಲಿ ಗಂಡು ಹೇಗಿರಬೇಕು

ಎಂದು ಮೊದಲು ಹೇಳಿದ ಸ್ತ್ರೀ ಹೊನ್ನಮ್ಮ. ಸಾಂಪ್ರದಾಯಿಕ ಆವರಣವನ್ನು ಬಿಡದೆ, ಅದರಲ್ಲೇ ಸುಧಾರಣೆಗೊಳಿಸುವ ಕಡೆಗೆ ಅವಳು ತನ್ನ ಗಮನ ಹರಿಸುತ್ತಾಳೆ.

ಅರಮನೆಯಲ್ಲಿರುವ ಕಲಾಸ್ತ್ರೀಯರನ್ನು ನೋಡಿ ಸ್ತ್ರೀತನಕ್ಕೆ ಒಂದು ಅಪರೂಪದ ಭಾಷ್ಯವನ್ನು ಬರೆಯುತ್ತಾಳೆ. 'ಅರವತ್ತನಾಲ್ಕು ಕಲೆಗಳೂ ಪುಣ್ಯ ಮಾಡಿ ಸ್ತ್ರೀರೂಪವನ್ನು ಧರಿಸಿವೆಯೋ ಎಂಬಂತೆ' ಎನ್ನುವ ಮಾತುಗಳು ಇಲ್ಲಿವೆ. ಅಷ್ಟಾದಶ ವರ್ಣನೆಗಳಿರಬೇಕೆಂದು ಬವಣೆಗೆ ಸಿಕ್ಕು ದಾರಿತಪ್ಪಿ ಬಣ್ಣಿಸಲಾರೆ. ಇಹಕ್ಕೂ ಪರಕ್ಕೂ ಉಪಯುಕ್ತವಾದ ಧರ್ಮವನ್ನು ಮಾತ್ರ ನಾನು ಹೇಳುತ್ತೇನೆ ಎಂದು ತನ್ನ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತಾ, ತನ್ನದೇ ಕಾವ್ಯ ಕಲ್ಪನೆಯನ್ನು, ಮೀಮಾಂಸೆಯನ್ನೂ ತಾನೇ ಕಟ್ಟಿಕೊಳ್ಳುತ್ತಾಳೆ. ಆರನೇ ಸಂಧಿಯ ಆಯ್ದಪದ್ಯಗಳನ್ನು ಇಲ್ಲಿ ನೀಡಲಾಗಿದೆ

ಆರನೆಯ ಸಂಧಿ

ಆವನಿಗಿಳೆಯುಮಾಗಸಮುಮಳತೆಗೊಳು
ವಾವೇಳೆಯೊಳಡಿಗಳಿಗೆ
ಪಾವುಗೆಯಂತಳವಟ್ಟು ತೋರಿದುವಾ
ದೇವನಿಗಾನು ವಂದಿಪೆನು ೧

ಕಡಲೆಡೆಯೊಳು ಮಲಗಿದವನಾವಳಿಗಾಗಿ
ಕಡಲ ಕಡೆದು ಬಳಲಿದನು
ಕಡಲೊಳು ದಾರಿಗ್ರೈದನು ಶೌರಿಯಾ ಸಿರಿ
ಮಡದಿಯರಿಗೆ ವಂದಿಪೆನು ೨

ಎರವೆಳ್ಳನಿತಿಲ್ಲದೊರ್ವರೊರ್ವಳೊಡ
ವೆರೆದಿರ್ಪ ಸತಿಪತಿಗಳಿಗೆ
ದೊರೆಕೊಂಬುದು ಸಂಸಾರ ಸುಖದ ಸುಗ್ಗಿ
ಪರದೊಳಾನಂದ ಪರ್ಬುವುದು ೪

ಒಲುಮೆಯನೊಳಕೊಂಡು ನಾಣ್ಚಿಯೊಲಿದಂತೆ
ಚಲಪೋರುವೆಳಜವ್ವನದ
ಕುಲಸತಿಯೊಳು ಕೋಪಿಸದೆ ಕೋಟಲೆಗೊಳ
ದಲಸದೆಯನುಸರಿಸುವುದು ೧೨

ನಿಟ್ಟಿಸೆ ತಳಕೆಳಕಾಗುವ ನೇಹದೊಳು ಮನ
ಮುಟ್ಟಿ ಮರಳಿ ನಿಟ್ಟಿಸುವ
ದಿಟ್ಟಿದಿಟ್ಟಿಗಳೊಡವೆರೆಯೆ ನಾಣ್ಚುವರೊಳ
ಗುಟ್ಟರಿತುಪಚರಿಸುವುದು ೧೫

ಕೊಂಕುಗಲಿವ ನೋಟ ಕುಣಿಯಲೆಳಸುವ ಪು
ರ್ಬಂಕೆಗೆ ನಿಲದಭಿಲಾಷೆ
ಬಿಂಕವಡೆದ ನಡೆವೆತ್ತೆಳೆವೆಂಡಿರ
ಸೋಂಕುವುದವರೊಲವರಿತು ೧೮

ಪೊದೆಯಲೆಳಸುವೆರ್ದೆ ಪುಸಿಯೆನಿಸುವ ನಡು
ಮದವೇರುವ ಮನದಿರವು
ಪದುಳಗೊಳುವ ನಡೆ ಬಗೆಗೊಂಬ ಬಾಲೆಯ
ಬೆದರಿಸದೊಡಬಡಿಸುವುದು ೨೦

ಇಂಗಿತಗಳನಿದಿರಿಡಲೆಳಸುವ ನೋಟ
ವಂಗಹಾರದೊಳೆಸೆವಂಗ
ವ್ಯಂಗ್ಯವ ಕಲಿವ ಒಳ್ನುಡಿ ಬಗೆಗೊಳೆ ಕೋಮ
ಲಾಂಗಿಯ ಕೂರ್ತೆರಗಿಪುದು ೨೨

ಗಲಗೆಸಗದೆ ಗಾಬರಿಗೊಳಿಸದೆ ಮಿಗೆ
ಕಲಹವ ಗಂಟುವಡಿಸದೆ
ಬಲುಮೆಗ್ಗೆಯದೆ ಬಾಲೆಯ ಬಣ್ಣವಾತಿನಿಂ
ದೊಲಿಸಿಯೊತ್ತಿಗೆ ಬರಿಸುವುದು ೨೩

ಮುಗಿದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ
ಪಗೆ ಸಾಧಿಸಿ ಬಲ್ಪೆದೋರೆ
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ ೨೭

ನಿನ್ನದೆನ್ನದು ನೀ ನಾನು ನಿನ್ನವರಿದ
ರೆನ್ನವರಿವರುಗಳೆಂದು
ತನ್ನಿನಿಯಳ ತನ್ನೊಡವೆಯ ಮೈ ಬಳಗವ
ಭಿನ್ನಗೈಯದೆ ಬೆರೆಸುವುದು ೪೬

ಮನದೊಳು ಮನ ನೆನಹಿನೊಳು ನೆನಹು ಮತ್ತೆ
ತನು ತನುವಿನೊಳೊಡವೆರೆಸಿ
ಅನುಗೊಳೆ ಪಾಲುನೀರುಗಳಂತಿನಿಯನು
ಮಿನಿಯಳುಮೇಕವೆನಿಪುದು ೪೭

ಎರವಿಲ್ಲದೇಕವೆನಿಸಿ ಧರ್ಮದೊಳು ಸಂ
ಸರಿವ ಸತಿಪತಿಗಳಿಗೆ
ಪುರುಷೋತ್ತಮನಡಿಗಳ ಪೂಜೆಯಿಂದಿಹ
ಪರಸುಖ ಪದುಳಗೊಳುವುದು ೫೦

ಚೆನ್ನಿಗ ಚಿಕದೇವರಾಯನ ಸಂಚಿಯ
ಹೊನ್ನಮ್ಮನುಸುರ್ದ ಕಬ್ಬದೊಳು
ಉನ್ನತಿವಡೆದೊಪ್ಪಿದುದಾರನೆಯ ಸಂಧಿ
ಸನ್ನುತ ಗುಣಸಂಬಂಧಿ. ೫೧

ಕೃಪೆ: ಹದಿಬದಿಯ ಧರ್ಮ– ವಿದ್ವಾನ್ ರಂಗನಾಥ ಶರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೧೩

# ತೋರಬಾರದೆ ನಿಮ್ಮ ಚರಿತೆಯನು

**- ಹೆಳವನಕಟ್ಟೆ ಗಿರಿಯಮ್ಮ**

ಈಕೆಯ ಜನ್ಮಸ್ಥಳ ಧಾರವಾಡ ಜಿಲ್ಲೆಯ ರಾಣಿಬೆನ್ನೂರು. ಹರಿದಾಸ ಪರಂಪರೆಯ ಗೋಪಾಲದಾಸರ ಸಮಕಾಲೀನಳು. ಹೆಳವನ ಕಟ್ಟೆರಂಗ ಈಕೆಯ ಅಂಕಿತನಾಮ. ಈಕೆ ಮಹಾಕಾವ್ಯಗಳನ್ನು ಕೀರ್ತನಾ ಪದ್ಯಗಳನ್ನೂ ಬರೆದಿದ್ದಾಳೆ ಎಲ್ಲ ಹರಿದಾಸರಂತೆ ಈಕೆಯ ಜೊತೆಗೂ ಕೂಡಾ ಪವಾಡಗಳ ಸರಮಾಲೆಯೇ ಇದೆ. ಸಂಸಾರದಲ್ಲಿದ್ದೂ ಸಂನ್ಯಾಸಿಯಾಗಿದ್ದ ಮಹಾ ಭಕ್ತೆಯಾಗಿ ಸಮಾಜವನ್ನು ತಿದ್ದುವ ಕೆಲಸದಲ್ಲಿ ತೊಡಗಿದ್ದಳೆಂದೂ ತಿಳಿದು ಬರುತ್ತದೆ. ೧೮ ನುಡಿಗಳ 'ಪಾರಿಜಾತ' ಮತ್ತು ೧೫ ನುಡಿಗಳ 'ಅಜಾಮಿಳನ ಮೋಕ್ಷ' ಸಣ್ಣ ಹಾಡುಗಳಾದರೆ; 'ಉದ್ದಾಲಕನ ಕಥೆ' 'ಶಂಕರಗಂಡನ ಹಾಡು', 'ಸೀತಾ ಕಲ್ಯಾಣ', 'ಚಂದ್ರಹಾಸನ ಕಥೆ',' ಬ್ರಹ್ಮಕೊರವಂಜಿ', 'ಲವಕುಶ ಕಾಳಗ' ಹೀಗೆ ಅನೇಕ ದೀರ್ಘಕಾವ್ಯಗಳನ್ನೂ ತನಗೆ ಸಹಜವಾದ ಸರಳವಾದ ಭಾಷೆಯಲ್ಲಿ ಬರೆದಿದ್ದಾಳೆ. ಭಕ್ತಿಯ ಉತ್ಕಟತೆ, ಲಾಲಿತ್ಯಗಳೊಂದಿಗೆ ಕಥನ ಗುಣ ಹೆಳವನಕಟ್ಟೆ ಗಿರಿಯಮ್ಮನ ಬರವಣಿಗೆಯ ಶೈಲಿಯಾಗಿದೆ. ಸಹಜವಾಗಿಯೇ ಆಕೆಯ ಕಾವ್ಯದಲ್ಲಿ ಪುರಾಣದ ಕೆಲ ಸಂಗತಿಗಳನ್ನಿಟ್ಟುಕೊಂಡು ದೇವರಿಗೇ ಸವಾಲನ್ನು ಹಾಕುವ ಕ್ರಮ ಎದ್ದು ಕಾಣುತ್ತದೆ. 'ಎಲ್ಲೆಲ್ಲೋ ಪವಾಡ ಮಾಡಿರಬಹುದು ಆದರೆ ನನ್ನೆದುರು ಮಾಡಿ ತೋರು ಆಗ ನಿನ್ನ ನಾನು ಒಪ್ಪಿಕೊಳ್ಳುವೆ' ಎನ್ನುವ ಅರ್ಥದ ಒಂದು ಪುಟ್ಟ ಕೀರ್ತನೆ ತೋರಬಾರದೆ ನಿಮ್ಮ ಚರಿತೆಯನು.

ತೋರಬಾರದೆ ನಿಮ್ಮ ಚರಿತವನು
ನರರೊಳು ನಗೆಗೀಡು ಮಾಡದ ಹಾಗೆ ॥ಪ॥

ಕಲ್ಲೊಳು ಕಾಂತೆಯ ಮಾಡಿದೆನೆಂ
ದೆಲ್ಲರು ಜಗದೊಳು ಪೇಳುವರು
ಅಲ್ಲಿ ಮಾಡಿದ ಹಾಗೆ ಇಲ್ಲಿ ತೋರಿದರೆ
ಬಲ್ಲಿದೆನೆನ್ನೊಡೆಯ ದೊಡ್ಡವನೆಂದು ಸಾರುವೆ ೧

ಅಹಹ ಕುಬುಜೆಯಳ ತನುವನೆತ್ತಿ
ಮಹಿಯೊಳು ಯುವತಿಯ ಮಾಡಿದೆಯೆಂಬರು
ಬಹು ಪರಾಕ್ರಮವನ್ನು ಈಗ ತೋರಿಸಿದರೆ
ಅಹುದೋ ಎನ್ನೊಡೆಯ ದೊಡ್ಡವನೆಂದು ಸಾರುವೆ ೨

ನೀನೆ ಗತಿಯೆಂದು ಬಂದ ಭಕ್ತನ ಕ
ಣ್ಣೂನವ ತಿದ್ದಿ ನಿಜವ ತೋರಿಸಯ್ಯ
ದೀನದಯಾಳು ಹೆಳವನಕಟ್ಟೆ ರಂಗಯ್ಯ
ದಾನಿ ಎನ್ನೊಡಯ ದೊಡ್ಡವನೆಂದು ಹೊಗಳುವೆ. ៣

**ಕೃಪೆ :** ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಸಂಪಾದಕರು ಟಿ. ಕೆ. ಇಂದು ಬಾಯಿ, ಮೈಸೂರು ವಿವಿ(ಪ್ರ) ೧೯೮೭

# ಪತಿದಾನ ಕೊಟ್ಟ ಹಾಡು

**- ಹರಪನಹಳ್ಳಿ ಭೀಮವ್ವ**

ದಾಸಪರಂಪರೆಯ ಅಪರೂಪದ ಕೀರ್ತನಕಾರ್ತಿಯರಲ್ಲಿ ಹರಪನಹಳ್ಳಿ ಭೀಮವ್ವ ಮುಖ್ಯವಾದ ಹೆಸರು. ಹುಟ್ಟಿದ್ದು ೧೮೭೩ರಲ್ಲಿ ಬಳ್ಳಾರಿ ಜಿಲ್ಲೆ ಹೊಸಪೇಟೆಯ ನಾರಾಯಣ ದೇವರಕೆರೆ ಎನ್ನುವ ಹಳ್ಳಿಯಲ್ಲಿ. ಹುಟ್ಟು ಹೆಸರು ಕಮಲಾಕ್ಷಿ. ನಂತರ ಭೀಮಾಬಾಯಿ ಎಂದು ಕರೆಯಲಾರಂಭಿಸಿ ನಂತರ ಭೀಮವ್ವನೇ ಆದಳು. ಹನ್ನೊಂದನೆ ವರ್ಷಕ್ಕೆ ಮುನಿಯಪ್ಪ ಎನ್ನುವ ವರನಿಗೆ ಮೂರನೆ ಹೆಂಡತಿಯಾಗಿ ಹೋದ ಭೀಮವ್ವ, ಇಬ್ಬರು ಮಕ್ಕಳನ್ನು ಪಡೆದು ಅಷ್ಟಕಷ್ಟಗಳ ನಂತರ ಹದಿನೈದು ವರ್ಷ ದಾಂಪತ್ಯದ ನಡೆಸಿ, ಗಂಡನನ್ನು ಕಳೆದುಕೊಂಡು ತನ್ನ ಜೀವನವನ್ನು ಭಕ್ತಿ ಸಾಧನೆಗೆ ಮುಡಿಪಾಗಿಟ್ಟಳು. ಮುಯ್ಯದ ಹಾಡು, ಸುಭದ್ರಾ ಕಲ್ಯಾಣ, ರತಿ ಕಲ್ಯಾಣ, ನಳ ಚರಿತ್ರೆ, ಪತಿದಾನ ಕೊಟ್ಟ ಹಾಡು, ಶಕುಂತಲ – ದುಷ್ಯಂತ ಮಹಾರಾಜನ ಹಾಡು, ಇವೇ ಆರು ದೊಡ್ಡ ಹಾಡುಗಳೊಂದಿಗೆ ಅನೇಕ ಸಣ್ಣ ಹಾಡುಗಳನ್ನು ಬರೆದಿದ್ದಾಳೆ. ಕೀರ್ತನೆಯನ್ನು ಹೋಲುವ ಈ ಹಾಡುಗಳಲ್ಲಿ ಉಗಾಭೋಗ ಸುಳಾದಿಗಳೂ ದೊರೆತಿವೆ. ವರ್ಣನಾ ಕೌಶಲ್ಯ ಈಕೆಯ ಸಹಜ ಪ್ರವೃತ್ತಿ. ವಿವರಣೆಗಳ ಜೊತೆ ಭಾವದ ಮೇಲಾಟಕ್ಕೆ ಭಕ್ತಿಯ ಮೆರಗನ್ನು ಹೊದಿಸುವ ಈಕೆಗೆ ಮಾತು ಬೆಣ್ಣೆ. ಈಕೆ ತನಗೆ ದಕ್ಕಿವ ವಿಷಯ ವಸ್ತುಗಳೊಂದಿಗೆ ಸಾಕಷ್ಟು ಪ್ರಯೋಗಗಳನ್ನೂ ಮಾಡಿದ್ದಾಳೆ. ನವರಸಗಳನ್ನೂ ಒಳಗೊಂಡ ಕಾವ್ಯಗಳನ್ನು ಕೊಟ್ಟಿದ್ದಾಳೆ. ಸಾಂಪ್ರದಾಯಿಕವಾದ ಆಚರಣೆಗಳಿಗೆ ಬರೆದ ಹಾಡುಗಳು ಈಗಲೂ ಉಳಿದು ಬಂದಿದೆ ಎನ್ನುವುದೇ ಈಕೆಯ ಹೆಗ್ಗಳಿಕೆ. ಭೀಮೇಶಕೃಷ್ಣ ಈಕೆಯ ಅಂಕಿತ.

ಪ್ರಸ್ತುತ ಭಾಗವನ್ನು ಹರಿವಂಶ ಪುರಾಣದಲ್ಲಿ ಬರುವ ಸತ್ಯಭಾಮೆ ಅಹಂಕಾರದಿಂದಲೂ ಮತ್ತು ರುಕ್ಮಿಣಿ ತುಳಸಿಯ ಅರ್ಪಣೆಯಿಂದಲೂ ನಾರದನಿಗೆ ಕೃಷ್ಣನನ್ನು ವ್ರತದ ಅಂಗವಾಗಿ ದಾನವಿತ್ತು ಮತ್ತೆ ಪಡೆದುಕೊಂಡ ಕತೆಯನ್ನು ೭೨ ನುಡಿಗಳ ಧ್ವನಿ ವಚನಗಳಿಂದ ಕೂಡಿದ ದೀರ್ಘವಾದ ಹಾಡನ್ನಾಗಿ ಮಾಡಿದ್ದಾಳೆ. ಅದರ ಒಂದು ಧ್ವನಿಯನ್ನು ಇಲ್ಲಿ ಆರಿಸಿ ಕೊಡಲಾಗಿದೆ

**ಪತಿದಾನ ಕೊಟ್ಟ ಹಾಡು ಧ್ವನಿ–೮**

ಸತ್ಯ ಭಾಮೆ ಶೃಂಗಾರವಾದಳು ತಾನಲಂಕಾರ
ಸತ್ಯಭಾಮೆ ಶೃಂಗಾರ
ಉಟ್ಟಳು ಕೋಟಿ ವರ(ಹ?)ದ ಪೀತಾಂಬರ

ತೊಟ್ಟಳು ನವರತ್ನದ ಕುಪ್ಪಸ ಜರ
ಕಟ್ಟಿ ದಡ್ಡಿಕೆ ಕಟ್ಟಾಣಿ ಮುತ್ತಿನ ಸರ
ಶ್ರೇಷ್ಠವಾದ ಸರಿಗೆಯ ನಾಗಮುರಿಗೆ
ಪಟ್ಟಿ ನಡುವಿನಲ್ಲಿಟ್ಟಳೊಡ್ಯಾಣ

ಕಾಲ ಪೈಜಲ ರುಳಿ ಗೆಜ್ಜೆ ಪೆಂಡ್ಯಗಳು
ತೋಳಿಗ್ವಂಕಿ ಬಾಜುಬಂದು ಗೊಂಡ್ಯಗಳು
ದ್ವಾರ್ಯ ಕಂಕಣ ಹಸ್ತ ಕಡಗ ದುಂಡುಗಳು
ನೀಲ ಮಾಣಿಕ್ಯದ್ಹರಳುಂಗುರ ಮುಂಗ್ಯೆ –
ಮ್ಯಾಲೆ ಹರಡಿ ಹವಳದ ಕೈಕಟ್ಟು

ಚಂದ್ರ ಚೌರಿ ರಾಗಟೆಯ ಶೃಂಗಾರ
ರಂಗು ಮಾಣಿಕ್ಯದ ಹೆರಳು ಬಂಗಾರ
ದುಂಡು ಮುತ್ತಿನ ಗೊಂಡ್ಯ ಗೊಂಚಲು ಭಾರ
ಮುಂದೆ ಮಲ್ಲಿಗೆ ಮೊಗ್ಗು ಮುಡಿದ ಶಾವಂತಿಗೆ
ಚೆಂದವಾದ ತಳುಪಿಕ್ಕಿದ್ವೊಯ್ಯಾರ

ಹರಳು ವಜ್ರದ್ವಾಲೆ ಬುಗುಡಿಯ ತಳಕು
ಗಿರಿ ಬಾವುಲಿ ಚಂದ್ರ ಬಾಳ್ಯದ ಬೆಳಕು
ಝುಳಿಝುಳಿಸುವ ದ್ರಾಕ್ಷಿ ಬಳ್ಳಿಯ ಮಲಕು
ಝುಳಕು ಮಿಂಚಿನಂದದಿ ಮುಖ ಪದ್ಮಕೆ
ಹೊಳೆವೊ ಜ್ಯೋತಿ ಮುತ್ತು ಮುಕುರ್ಯ ಬುಲಕು

ಬೆರಳ ಮುದ್ರೆ ಕಾಲುಂಗುರಿಟ್ಟಿಹಳು
ಹರಳು ಮಾಣಿಕ್ಯದ್ಹಾವಿಗೆಯ ಮೆಟ್ಟಿಹಳು
ಬಿಳಿಯೆಲೆ ಅಡಿಕೆ ಬಾಯಲೊತ್ತಿಹಳು
ಪರಿಮಳ ಗಂಧ ಕೇಸರಿ ಬುಕ್ಕಿಟ್ಟು
ಪಣೆಯಲಿಟ್ಟು ಕಸ್ತೂರಿ ಕುಂಕುಮವ

ಉಗುರು ಮುಂಗುರುಳು ತಿದ್ದುತಲಿ
ನಗೆಮುಖ ಕಿರುಬೆವರುಗಳ್ವೊರೆಸುತಲಿ
ಝುಗಝುಗಿಸುತ ಜಗಜ್ಯೋತಿಯಂದದಲಿ
ಈ ಬಗೆ ಪುತ್ಥಳಿ ಚಂದ್ರ ಸರ ಜಾ(ರ?)ತಾರಿ
ನಿರಿಯ ಮ್ಯಾಲೆ ನಲಿದಾಡುತಲಿರಲು

ಬಾಗಿ ಬಳುಕಿ ಬಾಳೆಯ ಸುಳಿಯಂತೆ
ಸೋಗೆ ನವಿಲು ಸರಸದ ಗಿಳಿಯಂತೆ
ಸೋಗು ಮಾಡುತ ಸುವರ್ಣದ ಬಳ್ಳ್ಯಂತೆ
ಬ್ಯಾಗ ಬಂದಳು ಭೀಮೇಶ ಕೃಷ್ಣನ ಕರೆ–
ತಾವೇನೆನುತ ತಾರಾಪತಿಯಂದದಿ

ವಚನ ೯
ನಡೆದು ಬರುವಂಥಾ ಭಾಮೆಯ ನೋಡಿ ಶ್ರೀಕೃಷ್ಣ
ನಡುಗುತಿದೆ ಎನ್ನದೆ ಒಡೆದು ಭುಗಿಲೆನ್ನುತದೆ
ಮಡದಿ ಮತ್ತ್ಯಾಗೆ ಮಾಡಲಿಯೆಂದು ಸತಿ
ಯೊಡನೆ ನುಡಿದು ತೋರಿಸುವುದು ಮತ್ತ್ಯಾಗೆಂದರೆ –

ಕೃಪೆ: ಹರಪನಹಳ್ಳಿ ಭೀಮವ್ವನ ಹಾಡುಗಳು, ಟಿ ಎನ್ ನಾಗರತ್ನಮ್ಮ (ಸಂಪಾದಕರು)
ಮೈಸೂರು ವಿವಿ ೧೯೮೪

❖

# ತಾಯಿ ಮಗನ ಸಂತಾಪ

- ದರೋಜಿ ಈರಮ್ಮ

ದರೋಜಿ ಈರಮ್ಮ ಬುರ್ರಕಥಾ ಕಾವ್ಯಗಾರ್ತಿ. ಬಳ್ಳಾರಿ ಜಿಲ್ಲೆಯ ಸಂಡೂರಿನ ಹಳೇ ದರೋಜಿ ಈಕೆಯ ಹುಟ್ಟೂರು. ಮದುವೆಯಾಗಿದ್ದು ಬಳ್ಳಾರಿಯ ಸಿರಗುಪ್ಪ ತಾಲೂಕಿನ ಹೊಸಹಳ್ಳಿಗೆ. ಚಿಕ್ಕ ವಯಸ್ಸಿನಿಂದಲೇ ದನ ಕಾಯುತ್ತಾ ಹಾಡುವುದನ್ನು ಅಭ್ಯಾಸ ಮಾಡಿಕೊಂಡ ಈಕೆ ಕನ್ನಡ ಮತ್ತು ತೆಲುಗಿನಲ್ಲಿ ಬುರ್ರಕಥಾವನ್ನು ಹಾಡಬಲ್ಲವಳಾಗಿದ್ದಳು. ಊರೂರು ಸುತ್ತುತ್ತಾ ಕರೆದ ಕಡೆ ಕಲಾಸೇವೆಯನ್ನು ಮಾಡುತ್ತ ಜೀವನ ನಡೆಸಿದ ಈರಮ್ಮ ಬುಡಕಟ್ಟಿನ ಕಾವ್ಯವನ್ನು ಮುನ್ನೆಲೆಗೆ ತಂದ ಹಿರಿಮೆಗೆ ಪಾತ್ರಳಾಗಿದ್ದಾಳೆ. ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ ಈಕೆ ಹಾಡುತ್ತಿರುವ ಬುಡಕಟ್ಟು ಮಹಾಕಾವ್ಯಗಳು.

ಪ್ರಸ್ತುತ ಭಾಗವನ್ನು ಕೃಷ್ಣ ಗೊಲ್ಲರ ಕಾವ್ಯದಿಂದ ಆರಿಸಿಕೊಂಡಿದ್ದು ಚಾಮರಾಜನ ಮಗ ಕಾಂಭೋಜರಾಜನ ಬೆನ್ನು ಹುಣ್ಣನ್ನು ಮಾಯಿಸುವ ಔಷಧಿಗಾಗಿ ಏಳು ಸಮುದ್ರ ದಾಟಿ ಹಲವು ಅಡ್ಡಿ ಆತಂಕಗಳನ್ನು ಎದುರಿಸಿ ಔಷಧಿಯ ಜೊತೆ ಹಲವು ಹೆಂಡಂದಿರನ್ನು ಕರೆತರುವ ಶರಬಂಧರಾಜನ ಸಾಹಸ ಕಥಾನಕವೇ ಇದರ ವಸ್ತು.

**ಪ್ರಾರ್ಥನೆ**

ಅಮ್ಮಾ ಭೂದೇವಿಯಮ್ಮಾ ನಾವು ಹುಟ್ಟೇವೀ
ನಿನ ಮ್ಯಾಲಿ ನಾವುವಾಗಿ ಇನ್ನು ಬೆಳೆದಿವೀ
ಕಾಪಾಡೇ ನಮ್ಮತಾಯೆ ಭೂಮಿ ತಾಯಿ ನೀ
ಸರಸ್ವತಿ ಶಾರದಾಂಬ ಜಗದಾಂಬ ನೀ
ನಮ್ಮಾ ಗುಣಾ ನೋಡಿ ನಮಗೆ ಬಾರಮ್ಮಾ
ಆದೀ ಬೂದೀಶಕ್ತಿ ನಿನಗೆ ಶರಣು ಬಾ
ಕಾಪಾಡೇ ನನ್ನ ದೇವಿ ನಿನಗೆ ಶರಣಮ್ಮಾ
ಕಾಪಾಡೋ ಇನ್ನುವಾಗಿ ಕುಮಾರಸ್ವಾಮಿ ನೀ
ಕೃಷ್ಣಗೋಪಾಲ ಗೊಲ್ರಿ ನಿಮಗೆ ಶರಣು ಬಾ

**ತಾಯಿ ಮಗನ ಸಂತಾಪ**

ಸುಡಗಾಡು ರುದ್ರ ಭೂಮಿ ತಾಯಿ ಮನೆಗೆ ಬರತಾನ ಮಗ ॥ತಂದಾನ॥

ತಾಯಿ ಮನಿಗೆ ಬರೊವೊತ್ಗೆ ನೀರು ತಂದ್ಯು
ಯಪ್ಪಾ ಈಗ ಕಾಲು ಮಕ ತೊಳಕೊ ಮಗ್ನೆ ಅಂದ್ರೆ
ಆ ಮಗ ಇನ್ನ ಎಡ್ರ್ಯು ಪುಟ್ಟಿ ಕೆಳಗಿಟ್ಟು
ತಾಯ ಪಾದವಿಡಕಂಡು
ಆ ಮಗ ಏನಂತ ದುಃಖ ಪಡತನ
ಆಗ ನೋಡಿ ಬಂದು
ತಂದಿ ಕೊಟ ಮಾತಾಡಿ ಬಂದವನು
ಆಗ ತಾಯೀಗೆ ನೋಡಾಕಿಲ್ಲಲ್ಲ
ಆಗ ಮಗ ಏನಂತಾನ

ಯಾಮ್ಮಾ ತಂದಿ ಕಷ್ಟ ನಾನು ನೋಡಲಾರೇ
ಯಮ್ಮಾ ತಂದಿ ವನವಾಸ ನಾನು ಕಂಡೀನಮ್ಮಾ
ಅಮ್ಮಾ ತಂದೆ ವನವಾಸ ನೋಡಲಾರೆ ದೇವಿ ॥ತಂದಾನ॥

ಅಮ್ಮಾ ತಂದೆ ವನವಾಸ ನೋಡಲಾರೆ ದೇವಿ
ಈಗ ಬೆನ್ನಗಲಾಗ ಹುಣ್ಣು
ಈಗ ಹುಣ್ಣವಳಿಗೇ
ಯಮ್ಮಾ ಶನಿಮಾತ್ಮ ಸೇರಿ ಬಿಟ್ಟನೇ
ಈಗ ಹೊಟ್ಟ್ಯಾನ ಕಳ್ಳು ಕಿತ್ತು ಬರ್ತವೇ
ಗಲೀಜು ನಾತು
ಅಂದ್ರೇ ತಾಯಿ ಏನಂತಾಳ
ಮಗನ ನನ್ನ ಪಾದ ಹಿಡ್ಕಂಡು ದುಃಖ ಮಾಡ್ತೀ

ಯಪ್ಪಾ ನಿಮ್ಮಪ್ಪ ನನಿಗ್ಯಪ್ಪಾ ದೇವ್ರಾಗಿ ಕಲಿಸಿಲ್ಲ
ಋಣ ಇಲ್ದ ನೀನೂನು
ನನ್ನ ಪಾದ ಹಿಡ್ದಪ್ಪ
ದುಃಖ ಮಾಡ್ತೀ ನನ್ನ ಮಗನೇ ॥ತಂದಾನ॥

ಮಗನಾ ನಿನ್ನಪ್ಪಂಗೆ ನನ್ಗೆ
ಋಣವಿಲ್ಲದೆ ಯಾಕ ಪಾದ ಹಿಡ್ಕೊಂಡು
ದುಃಖ ಮಾಡ್ತೀ ಮಗನಾ

ನಾನೇನು ಮಾಡ್ಲ್ಯೋ ಮಗನೇ
ಹತ್ರ ಇದ್ರೆ ನೋಡ್ತಿದ್ದೆ
ಋಣ ಇಲ್ಲಾ ನಾನೇನು ಮಾಡ್ಲಿ
ಅಮ್ಮ ಈಗ ಏನು ಇಲ್ಲ ತಾಯಿ
ನಿನ ಪಾದುಗೆ ಶರಣು
ಈಗ ತಂದಿಗಿ ಮಗ ಹುಟ್ಟನಿ
ಮಗ್ಹುಟ್ಟಿ ಕುಲುದ್ಧಾರ ಮಾಡ್ಬೇಕು
ಮಗುಳ್ಹುಟ್ಟಿ ಕೀರ್ತಿ
ತರಬೇಕಂತ ಭೂಮಿ ಮೇಲ್ಹೇಳ್ತಾರ
ಇಗೋ ಈಗ ನಮ್ಮಪ್ಪಂಗೆ
ಏಳು ಸಮುದ್ರ ಆ ಕಡಿಗೆ
ಮೇಟೌಷದ್ದ ತರ್ತೀನಿ ನಾನು
ಅಯ್ಯೋ ಮಗನ

ಏಳು ಸಮುದ್ರದ್ಹಾಗ ಹೋಗಿ ಬಿಡ್ತಿ ಮಗನಾ
ಬ್ಯಾಡಪ್ಪಾನೀನು ಹೋಗಬ್ಯಾಡ ಮಗನಾ
ನಾನು ಒಬ್ಬಳು ಹೆಂಗ ಇರ್ಲಿ ಮಗನಾ
ಸುಡಗಾಡು ರುದ್ರ ಭೂಮಿ ನಾನು ಹೆಂಗ ಇರ್ಲಿ ನನ್ನ ಮಗಾ ॥ತಂದಾನ॥

ಮಗನಾ ನಾನ್ಹೆಂಗಾ ಇರಬೇಕಪ್ಪಾ
ಆರು ಮಂದಿ ನಮ್ಮಕ್ನೋರು
ಆರು ಮಂದಿ ನಮ್ಮಣ್ಣೋರು ಇದಾರ
ಅವ್ರು ಹೋಗಿ ತರ್ತಾರ
ಯಮ್ಮಾ ಅವ್ರ ಕೈಲಾಗೋದಿಲ್ಲ
ನಾನು ಹುಟ್ಟಿದಾಗ ಹುಣ್ಣಿ ಹುಟ್ಟೈತೆ
ನಾನೇ ಹೋಗಿ ತರಬೇಕು ಅಂತ
ಮಗನಾ ಊಟ ಮಾಡು ಬಾ ಅಂದ್ರೆ
ಹಾಲು ಸಕ್ರ್ಯನ್ನ ಊಟ ಮಾಡ್ತಾನ
ಈ ಮಗ ಊಟ ಮಾಡಾಕ ಕುಂತಾನ
ಈ ಮಗನ ಕಥೆ ಹಂಗಿರ್ಲಿ

ಕೃಪೆ: ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ಡಾ ಕೆ ಎಂ ಮೇತ್ರಿ (ಸಂಪಾದಕ) ಕನ್ನಡ ವಿವಿ ಹಂಪಿ ೧೯೯೭

# ಕುಟುಂಬ ಯೋಜನೆ ಲಾವಣಿ

- ತಂಬೂರಿ ರಾಜಮ್ಮ

ಜನಪದ ಗೀತೆ–ಕಾವ್ಯಗಳನ್ನು ಹಾಡುವುದೇ ತನ್ನ ಜೀವನವನ್ನಾಗಿಸಿಕೊಂಡ ಹೆಣ್ಣುಮಗಳು ತಂಬೂರಿ ರಾಜಮ್ಮ, ಅಪ್ರತಿಮ ಕಲಾವಿದೆ. ಹಾಡು ತನ್ನದೋ ಅಲ್ಲವೋ ಗೊತ್ತಿರುವುದಿಲ್ಲ, ತನ್ನ ಹಿರಿಯರು ತಲೆಮಾರಿಂದ ದಾಟಿಸುತ್ತಾ ಬಂದ ಹಾಡುಗಳಲ್ಲಿ ಕೂಡಾ ತನ್ನದನ್ನು ಹೇಳಲು ಜಾಗಗಳನ್ನು ಹುಡುಕಿಕೊಳ್ಳುವ ಇಂಥಾ ಕಲಾವಿದೆಯರು ತಾವು ಕವಿತೆಗಳನ್ನು ಕಟ್ಟುತ್ತಿದ್ದೇವೆ ಎಂತಲೋ, ಹಾಡುತ್ತಿದ್ದೇವೆ ಎಂತಲೋ ಪ್ರಜ್ಞಾಪೂರ್ವಕವಾಗಿ ಅಂದುಕೊಂಡವರಲ್ಲ. ತಮ್ಮ ಹಾಡಿನ ಭಾಗವಾಗಿ ತಮ್ಮ ಮನಸ್ಸಿಗೆ ಹೊಳೆದದ್ದನ್ನು ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ ಹಾಡುವವರು. ಅವರ ಒಳಗಿನ ಸಿಟ್ಟು, ನೋವು ಅಸಹನೆ, ಸಮಾಜವನ್ನು ತಿದ್ದಲೇಬೇಕಾದ ಗುರುತರ ಜವಾಬ್ದಾರಿ ಎಲ್ಲವೂ ಸೇರಿ ಹಾಡುಗಳು ಹುಟ್ಟಿರುವುದೂ ಇದೆ. ಈಕೆಯೆ ಕಟ್ಟಿರುವ ಹಾಡು ಎಂದು ಗೊತ್ತಾಗುವ ಲಾವಣಿ ಇದು.

ಬುದ್ಧಿಮಾತ ಹೇಳಿದರೆ ಕೇಳಬೇಕಮ್ಮಾ
ಈ ಸುದ್ದಿಯನ್ನು ಎಲ್ಲಾರಿಗೂ ತಿಳಿಸಬೇಕಮ್ಮ ॥

ಡಾಕ್ಟ್ರುಮಾತ ನರ್ಸುಮಾತ ಕೇಳಬೇಕಮ್ಮ
ಲೋಕದೊಳಗೆ ರೀತಿ ತಿಳಿದು ಬಾಳಬೇಕಮ್ಮ ॥

ಒಂದು ಎರಡು ಮಕ್ಕಳು ನಮಗೆ ಸಾಕು ಕಣಮ್ಮ
ಸಣ್ಣದಾಗಿ ಕುಟುಂಬ ಬಾಳಬೇಕಮ್ಮ ॥

ಆರುತಿಗೆ ಒಬ್ಬ ಮಗಳು ಸಾಕು ಕಣಮ್ಮ
ಕೀರುತಿಗೆ ಒಬ್ಬ ಮಗನು ಬೇಕು ಕಣಮ್ಮ ॥

ಹೆಚ್ಚು ಮಕ್ಕಳಿಂದ ನಮಗೆ ಫಲವೇನಮ್ಮ
ಈ ವೈದ್ಯರು ಹೇಳಿದಂಗೆ ನಡಿಯ ಬೇಕಮ್ಮ ॥

**ಕೃಪೆ:** ಹಾಡುವ ಹಕ್ಕಿಯ ಶೋಕಗೀತೆ (ತಂಬೂರಿ ರಾಜಮ್ಮನವರ ಆತ್ಮಕಥನ) ಅಪ್ಪಗೆರೆ ಸೋಮಶೇಖರ್(ಲೇ) ದೇಸೀ ಪುಸ್ತಕ ೨೦೧೪

# ಏಳು ಸಮುದ್ರ ಅಳೆವ ನಾರಿ

- ತಿಮ್ಮಕ್ಕನ ಪದ

ಹೊನ್ನಾವರ ತಾಲ್ಲೂಕಿನ ವಂದೂರಿನವರು. ಅಕ್ಷರವೇ ಗೊತ್ತಿಲ್ಲದ ಈಕೆ ಹಾಡು ಕಥೆಗಳನ್ನು ಚಿಕ್ಕಂದಿನಲ್ಲೇ ಕಲಿತವರು. ನೆನಪಿನ ಶಕ್ತಿ ಅಗಾಧವಲ್ಲದಿದ್ದರೆ ಇವುಗಳನ್ನು ಹಾಡುವುದು ಕಷ್ಟದ ಕೆಲಸ. ಕಂಠ ಶುದ್ಧಿಯ ಜೊತೆ ಭಾವಶುದ್ಧಿಯನ್ನು ಬೆರೆಸಿ ಹಾಡುವಾಗ ತಾವು ಮಾಡುವ ಕೆಲಸದ ಜೊತೆ ಸಂಬಂಧವನ್ನೂ ಕಲ್ಪಿಸಿಕೊಳ್ಳುವುದು ತುಂಬಾ ಸಹಜವಾದ ಕ್ರಿಯೆ. ಹಾಲಕ್ಕಿ ಒಕ್ಕಲಿಗ ಬುಡಕಟ್ಟಿಗೆ ಸೇರಿದ ಈಕೆಯ ಹಾಡುಗಳು ಭಾಷೆ ಮತ್ತು ಆಚರಣೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ.

ಈಕೆ ಹಾಡಿರುವ ಎಲ್ಲಾ ಹಾಡುಗಳು ಹೆಣ್ತನದ ಮೇಲಿದೆ ಎನ್ನುವುದು ಗಮನಿಸಬೇಕಾದ ಸಂಗತಿ. ಉತ್ತರದೇವಿ, ಬಾವಿಗಾಗಿ ಸೊಸೆ ಬಲಿ, ಮಾರಕ್ಕದೇವಿಯ ಮದುವೆ, ಹೆಂಗುಸಿನ ಧೈರ್ಯ, ಕೇದಿಗೆಯೆಂಬ ಸೊಸೆ ಹೀಗೆ ಹತ್ತು ಹಲವು. ಸದ್ಯ ಆರಿಸಿಕೊಂಡಿರುವ ಏಳು ಸಮುದ್ರ ಅಳೆದ ನಾರಿ ಒಂದು ವಿಶಿಷ್ಟ ಜನಪದ ಕಥನ. ಹೆಣ್ಣೊಬ್ಬಳು ಪಾಪ ನಿವಾರಣೆಗಾಗಿ ಗಂಡ ಹೇಳಿದಂತೆ ನಾಗರ ಪೂಜೆ ಮಾಡುತ್ತಾಳೆ. ಆದರೆ ಪಾಪ ತೊಳೆಯಲ್ಲ. ಆಗ ಗಂಡ ಏಳು ಸಮುದ್ರವನ್ನು ಅಳೆಯುವಂತೆ ಹೇಳುತ್ತಾನೆ. ಹಿಂದೆ ಮುಂದೆ ನೋಡದೆ ಹಾಗೆ ಸಮುದ್ರವನ್ನು ಅಳೆಯಲು ತವರಿಗೆ ಬಂದು ತಾಯಿಯನ್ನು 'ಏನು ಮಾಡಲಿ?' ಎಂದು ಕೇಳುತ್ತಾಳೆ. ಆಗ ತಾಯಿ ಚಿನ್ನದ ಕೊಳಗವನ್ನೂ, ಬೆಳ್ಳಿಯ ಮಣೆಯನ್ನು ಕೊಡುತ್ತಾಳೆ. ಅದನ್ನು ಹಿಡಿದ ಹೆಣ್ಣು ಸಮುದ್ರದ ತಡಕ್ಕೆ ಬಂದು ಸಮುದ್ರವನ್ನೇ ಅಳೆಯಲು ಆರಂಭಿಸುತ್ತಾಳೆ. ಅವಳನ್ನ ನೋಡಿ ನಾರಾಯಣಸ್ವಾಮಿಯು ಮನೆಗೆ ಬಂದು ತನ್ನ ಮಡದಿಯ ಜೊತೆ ಅಚ್ಚರಿಯಿಂದ 'ಇವಳಾರ ಮಗಳು?' ಎಂದು ಪ್ರಶ್ನಿಸುತ್ತಾನೆ. ಅವನಿಗೆ ಸಿಗುವ ಉತ್ತರ 'ನಮ್ಮ ಮನೆಯ ಮಗಳು' ಎನ್ನುವುದು. ಇದು ಆಶಯವೂ ಸತ್ಯವೂ ಹೌದು. ಧೈರ್ಯಸ್ಥ ಹೆಣ್ಣುಗಳು ನಮ್ಮಮನೆಯ ಮಕ್ಕಳಾಗಲಿ ಎನ್ನುವುದೇ ಆ ಮಾತಿನ ಅರ್ಥ. ಮಾರನೆಯ ದಿನ ಮತ್ತೆ ಅವನು ಬಂದು ನೋಡುವಾಗ ಸಮುದ್ರ ಬರಿದಾಗಿ ಆ ಹೆಣ್ಣು ನೀರಲ್ಲಿ ನೀರಾಗಿ ಹರಿಯುತ್ತಿರುತ್ತಾಳೆ. ಆಗ ನಾರಾಯಣ ಸ್ವಾಮಿ ನೀಲಿ ಕುಂಚ ಹಿಡಿದು ತಿರುಗಿಸಿ ಮತ್ತೆ ಅವಳನ್ನು ಹೆಣ್ಣಾಗಿ ಮಾಡುತ್ತಾನೆ. ಹೆಣ್ಣಿನ ಅಗಾಧವಾದ ಶಕ್ತಿಯನ್ನು ಹೇಳುವ ಈ ಕಥೆ ಯಾವ ಪುರಾಣವನ್ನೂ ನೆನಪಿಸದೆ ಹೆಣ್ಣು ಪಟ್ಟು ಬಿಡದ, ಮಾಡಿಯೇ ತೀರುವ ಇಚ್ಛಾ ಶಕ್ತಿಯನ್ನು ಮಾತ್ರ ಹೇಳುತ್ತದೆ.

ಸಮುದ್ರವನ್ನು ಅಳೆಯಲು ತಾಯಿ ಮಗಳ ಕೈಗೆ ಚಿನ್ನದ ಕೊಳುಗ ಮತ್ತು ಬೆಳ್ಳಿಯ ಹರಿವಾಣವನ್ನು ಕೊಟ್ಟು ಕಳಿಸಿದ್ದಾಳೆ. ಅದನ್ನು ತಡಿಯ ಮೇಲೆ ಇಟ್ಟಲ್ಲಿಂದ ಪದ್ಯವನ್ನು ಇಲ್ಲಿ ಕೊಡಲಾಗಿದೆ.

ಚಿನ್ನದ್ದೊಂದ್ ಕೊಲುಗ ಹಿಡದಿಲು ತಾಯವ್ವಿಯೇ
ಹಿಂದಿರುಗೆ ಮನೆಗೇಽ ಬರುತೀಲಽ
ಚಿನ್ನದೊಂದ್ ಕೊಲುಗ ಹಿಡಿದು ತಾಯವ್ವಿಯೇಽ
ತನ್ನ ಮಗುಲ ಕೈಯ್ಯಲ್ಲೇಽ ಕೊಡುತೀಲುಽ

ಮಗುಲ ಕೈಯ್ಯಲ್ಲೆ ಏನೆಂದು ಕೊಡುತೀಲುಽ
'ಯಕ್ಕೇಲು ಸಂದ್ರಾವಲಲ್ಲು ಬಾರೇಽ'
ಚಿನ್ನದ ಕೊಲುಗಽ ಕೈಯ್ಯಲ್ಲಿ ಹಿಡಕಂಡೀಽ
ಬೆಲ್ಲಿಯ ಮಣೆಯಽ ಹಿಡುದೀಲುಽ

ಬೆಲ್ಲಿಯರು ಮಣೆಯಽ ಕೈಯ್ಯಲ್ಲಿ ಹಿಡಕಂಡೀಽ
ಯಕ್ಕೇಲು ಸಂದ್ರಾಕೇಽ ನಡೆದೀಲುಽ
ಯಕ್ಕೇಲು ಸಂದ್ರಾಕೂ ನಡೆದೀಲು ಮಡದೀಯೇಽ
ಸಮುದ್ರರು ದಡುಮೇನೇಽ ನಿಲ್ತೀಲುಽ

ಸಮುದ್ರರು ದಡಿಮೇನೇಽ ನಿಲುತೀಲು ಮಡದೀಯೇಽ
ಬೆಲ್ಲಿ ಹರಿವಾಣುವೇಽ ಮಡುಗೀಯೇಽ
ಬೆಲ್ಲಿ ಹರಿವಾಣಾವೇಽ ಮಡುಗೀಲು ಮಡದೀಯೇಽ
ಸಮುದ್ರದಽ ನೀರಽ ಅಲೆತೀಲುಽ

ಸಮುದ್ರದೂ ನೀರಽ ಅಲೆವ ವ್ಯಾಲ್ಯಾದಲ್ಲೀಽ
ನಾರಣುಸ್ವಾಮಿಯಪ್ಪಽ ಬರುತೀನಽ
ನಾರಣುಸ್ವಾಮಿಯಪ್ಪಽ ಬರುವ ವ್ಯಾಲ್ಯಾದಲ್ಲೀಽ
ಸಂದ್ರುಽದಽ ನೀರಽ ಅಲೆತೀಲುಽ

'ಯಾವ ತಾಯ್ ಹಡುದಽ ಮಗುಲಪ್ಪ ಇವಲ್ಹೆಣ್ಣೇಽ
ಅವ್ವ ಇವಲೆಟ್ಟು ಗಟುಬಿಯೇಽ
ಅವ್ವ ಇವಲೆಟ್ಟು ಗಟುಬೀಯೇ ಈ ಹೆಣ್ಣೇಽ
ಯಕ್ಕೇಲುಽ ಸಮುದ್ರಫ ಅಲೆತೀಲುಽ

ಯಕ್ಕೇಲು ಸಮುದ್ರವಽ ಕಂಡೇಲಂದವರಿಲ್ಲಽ
ಯಾವ ತಾಯ್ ಹಡುಽದಽ ಮಗಲೇಽನಽ?'
ಲಟ್ಟೆಂದು ಮಾತೂಽ ಹೇಳಿರು ನಾರಣಸ್ವಾಮೀಽ
ಹಿಂತಿರುಗಿ ಮನೆಗೇಽ ಬರುತೀರುಽ

ಲಿಂತಿರುಗೆ ಮನಿಗೇಽ ಬರುವ ಯಾಲ್ಯಾದಲ್ಲಿಽ
ನೀರಿಗೂ ನೀರಾಗೇಽ ಲರುತಿತ್ತುಽ
ನೀರಿಗು ನೀರಾಗೇಽ ಲರುತಿತ್ತು ನಾರಣಸ್ವಾಮೀಽ
ಹಿಂದಿರುಗಿ ಮನೆಗೇಽ ಬಂದೀರಽ

ಹಿಂದಿರುಗಿ ಮನೆಗೇಽ ಬಂದಿರು ನಾರಣಸ್ವಾಮೀಽ
ಮಡದಿರು ಕೂಡೇಽನಽ ನುಡಿದಾಽನುಽ
ಮಡುದಿ ಕೂಡೇನಽ ನುಡಿದಾನು ನಾರಣಸ್ವಾಮೀಽ
'ಯಾವ ತಾಯ್ ಹಡೆದಽ ಮಗುಲೇನಽ

ಯಾವ ತಾಯ್ ಹಡುದಽ ಮಗುಲೇನ ಮಡದಿ ಕೇಲುಽ
ಸಂದ್ರಾದ ನೀರಽ ಅಲೆತೀಲಽ'
'ಯಾವ ತಾಯ್ ಹಡುದಽ ಮಗಳಲ್ಲ ಪತಿಯೇ ಕೇಲುಽ
ನಮ್ಮವ ಮಗಲೇಽ ಅದೇ ಸೈಯೀಽ

ನಮ್ಮವಽ ಮಗಲೇಽ ಅದೇ ಸೈಯು ಪತಿಯೇ ಕೇಲುಽ
ನಲ್ಲನುಽ ಕೂಡೇಽ ಶರುತಾವಽ
ನಲ್ಲ ಹೇಲಿದುಕೇಽ ಪಾಶಪಂಥದ ಮೇನೇಽ
ಯಕ್ಕೇಲು ಸಂದ್ರಾವಽ ಅಲೆತೀಲುಽ'

ಲಟ್ಟೆಂಬೊ ಮಾತೂಽ ಕೇಲಿರು ನಾರಣಸ್ವಾಮೀಽ
ನೀಲಿ ಅರುಕುಂಚಽ ಹಿಡುದಿರುಽ
ನೀಲಿಯರು ಕುಂಚಽ ಹಿಡುದಿರು ನಾರಣಸ್ವಾಮೀಽ
ಯಕ್ಕೇಲು ಸಂದ್ರುಕ್ಕೇಽ ನಡೆದೀರುಽ

ಯಕ್ಕೇಲ ಸಂದ್ರಕ್ಕೂಽ ಹೋಗುವ ವ್ಯಾಲ್ಯಾದಲ್ಲೀಽ
ನೀರೀಗೆ ನೀರಾಗೇಽ ಹರಿತೀದುಽ
ನೀರೀಗು ನೀರಾಗೇಽ ಹರಿವ ಯಾಲ್ಯಾದಲ್ಲೀಽ
ನೀಲಿ ಅರುಕುಂಚಽ ಯಲುದಿಽರಽ

ನೀಲಿಯಽ ಕುಂಚಽ ಯಲೆವ ಯಾಲ್ಯಾಽದಲ್ಲೀಽ
ಹೆಣ್ಣಿಗ್ಹೆ ಹೆಣ್ಣಾಗೇಽ ಕುಂತೀಽದುಽ
ಹೆಣ್ಣಿಗ್ಹೆಣ್ಣಾಗೇಽ ಕುಲುವ ಹೊತ್ತಿನಲ್ಲೀಽ
ಮಗುಲ ಕೂಡ್ಯೇನಽ ನುಡಿದಾನಽ

'ಕೇಲಲೆ ಕೇಲಲೇಽ ಮಗುಲೇ ನೀ ಕೇಲೇಽ
ಮೂರೊಂದು ಕೊಲುಗಽ ಅಲುದ್ಹೊಯ್ಯುಽ
ಮೂರೊಂದು ಕೊಲುಗಽ ಅಲುದ್ಹೊಯ್ಯುಽ ಮಗಲೇ ಕೇಲುಽ
ಸಂದ್ರಽದಽ ನೀರು ಬರಿಯಾದೋಽ'

ಬೆಲ್ಲಿ ಹರುಮಣೆಯೇಽ ಚಿನ್ನಾದ ಕೊಲುಗಾವೇಽ
ಚಿನ್ನದಲೂಽ ಕೊಲುಗಾಽ ಬಿಡುಕಂಡೀಽ
ಚಿನ್ನದಲೂ ಕೊಲುಗಾಽ ಕಯ್ಯಲ್ಲಿ ಹಿಡಕಂಡೀಽ
ಮೂರೊಂದು ಕೊಲುಗಽ ಅಲುದಾಲಽ

ಮೂರೊಂದು ಕೊಲುಗಾಽ ಅಲುದ್ಹೊಯ್ದಿಽ ಬೂಮಿಗೇಽ
ಲಿಂತಿರುಗಿಽ ಮನೆಗೇಽ ಬರುತೀಲುಽ
ಲಿಂತಿರುಗಿ ಮನೆಗೇಽ ಬರುತಿರಲು ಲಪ್ಪಾರುಽ
ನಾರಣುಸ್ವಾಮಿಯಪ್ಪಽ ಮಗುಲುನುಽ

ನಾರಣುಸ್ವಾಮಿಯಪ್ಪ ಮಗುಲನುಽ ಕರುಕಂಡೀಽ
ಹಿಂದಿರುಗಿ ಮನೆಗೇಽ ಬರುತಾನೇಽ
ಹಿಂದಿರುಗೇಽ ಮನೆಗೇಽ ಬರುತಾನೇ ನಾರಣಸ್ವಾಮಿಽ
ಮಂಚದ ಮೇಗೇಽ ಕುಳಿತೀರೇಽ

ಮಂಚದ ಮೇನೆ ಬಂದೇಽ ಕುಲುತಿರೆ ನಾರಣಸ್ವಾಮೀಽ
ಲಲಿಯನ ಕೂಡೇಽನಽ ನುಡಿದಾನಽ
'ನಾಗರಽ ಪೂಜೇಽ ಮಾಡಿಬಂದ್ಲು ನನ್ ಮಗಲುಽ
ಯಕ್ಕೇಲು ಸಂದ್ರಾವಽ ಅಲೆದೀಲುಽ

ಯಕ್ಕೇಲು ಸಂದ್ರಾವಽ ಅಲ್ದಿ ಬಂತು ನನ್ನಾ ಮಗಲುಽ
ಮಾಡಿಬಂದಽ ಪಾಪಽ ತೊಲುದೀಲುಽ
ಮಾಡಿಬಂದ ಪಾಪಽ ತೊಲ್ದಿಬಂತು ನನ್ನಾ ಮಗುವುಽ
ಪಿರುತಿಂದೇಽ ನೀವು ವಲೀಬೇಕುಽ'

ಕೃಪೆ: ತಿಮ್ಮಕ್ಕನ ಪದ –ಏಳು ಸಮುದ್ರ ಅಳೆದ ನಾರಿ– ಸಂ. ಎಲ್ ಆರ್ ಹೆಗಡೆ, ಪ್ರಕಟಣೆ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿವಿ –೧೯೬೬

# ಗಿರಿಜಾ ಕಲ್ಯಾಣ (ಸಂಕ್ಷಿಪ್ತ ರೂಪ)

- ಸಿರಿಯಜ್ಜಿ

ಚಿತ್ರದುರ್ಗದ ಬಯಲು ಸೀಮೆಯಲ್ಲೂ ದಕ್ಷಿಣ ಕನ್ನಡ ಉತ್ತರ ಕನ್ನಡ ಹಾಗೂ ಮೈಸೂರು ಚಾಮರಾಜ ನಗರಗಳ ಹಾಗೆ, ಬುಡಕಟ್ಟು ಜನಾಂಗಕ್ಕೆ ಸಂಬಂಧಿಸಿದಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳು ತಮ್ಮೆಲ್ಲ ನಂಬುಕೆಯನ್ನು ಸಂಪ್ರದಾಯ, ಆಚರಣೆಗಳನ್ನು ಮತ್ತು ದೈವದ ಪರಿಕಲ್ಪನೆಗಳನ್ನು ಹಾಡುಗಳ ಮೂಲಕ ಖಂಡಕಾವ್ಯ ಹಾಗೂ ದೀರ್ಘಕಾವ್ಯ ಹಾಗೂ ಲಾವಣಿ, ತ್ರಿಪದಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಎಲ್ಲ ಬುಡಕಟ್ಟು ಸಮುದಾಯಗಳಲ್ಲಿ ದೈವವನ್ನು ಕುರಿತು ಹಾಡುವವರು ಹೆಣ್ಣುಮಕ್ಕಳೇ. ಪುರುಷರೇನಿದ್ದರೂ ದೇವರನ್ನು ಮೆರವಣಿಗೆಗೆ ಕರೆದೊಯ್ಯುವ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಸಿರಿಯಜ್ಜಿ ಕಾಡುಗೊಲ್ಲ ಸಂಪ್ರದಾಯದ ಹೆಣ್ಣುಮಗಳು. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳಕೊಂಡರೂ ಕೈಯ್ಯ ಬಳೆ ಕಡಗ ಕತ್ತಿನ ತಾಳಿಯೊಂದಿಗೆ ಬದುಕಿದ್ದ ಈಕೆಯ ಹಾಡುಗಳಲ್ಲಿ ಸ್ತ್ರೀ ಸಮುದಾಯದ ಸ್ವಾತಂತ್ರ್ಯದ ಎಳೆಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ಸಿರಿಯಜ್ಜಿ ಹಾಡಿದ ಎಲ್ಲ ತ್ರಿಪದಿಗಳ ಕೊನೆಯಲ್ಲಿ ನಿಸ್ತ್ರೀ ಎಂದು ಪ್ರಯೋಗವಾಗಿದೆ. ಅದು ಸ್ತ್ರೀ ಎನ್ನುವುದನ್ನು ತ್ರಿಪದಿಗೆ ಹೊಂದಿಸಿದ ರೂಪವಾಗಿದೆ. ಎಷ್ಟು ಹಾಡಿದರೂ ಖಾಲಿಯಾಗದ ಹಾಡಿನ ಗೂಡೆ ಈ ಸಿರಿಯಜ್ಜಿ. ಸಿರಿಯಜ್ಜಿ ಹೇಳುವ 'ಗಿರಿಜ ಕಲ್ಯಾಣ' ಕರ್ನಾಟಕದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಸಿಗುವ 'ಗಿರಿಜಾ ಕಲ್ಯಾಣ'ಕ್ಕಿಂತ ಭಿನ್ನವಾಗಿದ್ದು ತಾನು ಹೇಳುವ ಸೋಬಾನೆ ಪದಗಳಿಗೆ ಶಿವ ಪಾರ್ವತಿಯರ ಹೆಸರನ್ನು ಸೇರಿಸಿದಂತಿದೆ. ಇದರಲ್ಲಿ ಕಥನ ಭಾಗ ಸ್ವಲ್ಪವಿದ್ದರೂ ಇದು ಸಿರಿಯಜ್ಜಿಯ ಸೃಜನಶೀಲತೆಯನ್ನು ಎತ್ತಿಹಿಡಿಯುವಂಥದ್ದು.

ಮಗಿ ಮಾವಿನ ಹಣ್ಣು ಅರಗಿಣಿ ಕಚ್ಚಿದಂಗೆ
ಮಳೆಗಾಲಕ ಮ್ವಾಡಕವುದಂಗೆ
ಮಳೆಗಾಲಕ ಮ್ವಾಡಕವುದಂಗೆ ಗೌರಿಕತೆಯ
ಗ್ಯಾನವಿಟ್ಟು ಕೇಳಿರಿ ಇರಿಯೋರು

ಅಚ್ಚ ಮಾವಿನ ಹಣ್ಣು ಅರಗಿಳಿ ಕಚ್ಚಿದಂಗೆ
ಚಿತ್ತೆ ಮಳಿಗೆ ಮ್ವಾಡಕವುದಂಗೆ
ಚಿತ್ತೆ ಮಳಿಗೆ ಮ್ವಾಡಕವುದಂಗೆ ಗೌರಿಕತೆಯ
ಚಿತ್ತವಿಟ್ಟು ಕೇಳಿರಿ ಇರಿಯೋರು

ರನ್ನಾದಂತೋಳು ಚಿನ್ನಾದ ಕೊಡನೊತ್ತು
ವೊಳೆಯಲ್ಲಗ್ಗಣೆಯಮಗಿವೋಳು
ವೊಲೆಯಲ್ಲಗ್ಗಣೆಯ ಮಗಿವೋಳು ಬಾಲೆಯ ಕಂಡು
ಶಿವ ತನ್ನ ಜಪವ ಮರೆತಾರು

ವೊಲೆಯಲ್ಲಗ್ಗಣೆಯ ಮಗಿವೊ ಬಾಲೆಯ ಕಂಡು
ಶಿವ ತನ್ನ ಜಪವ ಮರೆತಾರು
ಸಿವ ತನ್ನ ಜಪವ ಮರೆತಾರು ಏನೆಂದಾರೆ
ಸಿವಸರಣೆ ನಿನ್ನ ಹೆಸರೇಳೆ

ನನ್ನೆಸರು ಗೌರಮ್ಮ ನನ್ನೆಸರು ಪಾರ್ವಾತಿ
ಗಿರಿರಾಜರ ಮಗಳು ಗಿರಿಜಮ್ಮ
ಗಿರಿರಾಜರ ಮಗಳು ಗಿರಿಜಮ್ಮ ಸರಣಾರು
ನೀವು ನಮ್ಮ ಮಟಕೆ ದಯಮಾಡಿ

... ... ...
ಸಣ್ಣ ಆವಿಗೆ ಮೆಟ್ಟಿ ಚಿನ್ನ ಬೆತ್ತವ ಪಿಡಿದು
ಚಿನ್ನದ ಕೆಂಜಡೆಯ ಒಲವೂತ
ಚಿನ್ನದ ಕೆಂಜಡೆಯ ಒಲವೂತ ಸಿವತಾನು
ವೋದಾರು ಗಿರಿರಾಜರ ಅರಮನೆಗೆ

ವೊಕ್ಕಲಿಗ ಕೇರಿಗೆ ವೋದಾರು ಸಿವತಾನು
ವೊಕ್ಕಲಿಗ ಕೇರಿವಳಗೆಲ್ಲ
ವೊಕ್ಕಲಿಗ ಕೇರಿವಳಗೆಲ್ಲ ಬಿಕ್ಸವ
ಮಾಡಿಬಂದಾರು ಗಿರಿರಾಜರರಮನೆಗೆ
... ... ...
ಸಾಲ್ಯಾದ ಸೀರೆ ಸೂಡಿಕಂಡಳು ಗೌರಮ್ಮ
ಗಾಜಿನ ಕಂಬಾದ ಎಡೆನಡುವೆ
ಗಾಜೀನ ಕಂಬಾದ ಎಡೆನಡುವೆ ಗೌರಮ್ಮ
ದಾನ್ಯ ತಂದವಳೆ ಸರಣರಿಗೆ
... ... ...
ನೀಡಿದ ಬಿಕ್ಸವ ಪಾತ್ರಿಗಿ ನೀಡಿಸಿಕೊಂಡು
ವೋದಾರು ಬಸವಯ್ನ ಬಳಿಗಾಗ

ಎಲ್ಲಿಗೋದಿರಯ್ಯ ಎಲ್ಲಿ ಬಂದಿರಯ್ಯ
ಎಲ್ಲೆಲ್ಲಿಗಯ್ಯ
ನಿಮ ಮನ ಚಿತ್ತ
... ... ...
ಎತ್ತೋದರೇನು ನಮಗೆ ವನವಾಸ ಬಸವಯ್ಯ
ನಿಸ್ತ್ರೆಂಬ ಗ್ರೇನಿ ನಮಗಿಲ್ಲ
... ... ...
ರಾಗಿ ಬಿಕ್ಷಕೊಗಿ ಆ ಎಣ್ಣು ನಾ ಕಂಡೆ
ಆ ಎಣ್ಣು ನಮಗೆ ತರಬೇಕು
ಆ ಎಣ್ಣು ನಮಗೆ ತರಬೇಕು ಮ್ಯಾಗಾಳ
ರೂಡಿಗೀಸ್ವರರು ನುಡಿದಾರೆ

ಸಣ್ಣ ಸಣ್ಣ ಪಾದಾದ ಸಣ್ಣೋಳೆ ಸಿರಿಗೌರಿ
ಬಣ್ಣಾವನುಟ್ಟು ನಡೆದಾರೆ
ಬಣ್ಣಾವನುಟ್ಟು ನಡೆದಾರೆ ಕುಂದಾಳಾದ
ಸಿಸುವಂಬುತಿದ್ದೆ ಬಸವಯ್ಯ

ಕಂಬಳಿಕಂತ್ಯೋರು ನಿಂಬೆಕಾಯಿ ಜಡಿಯೋರು
ಮುಂದಲ ಮಂಟಪದ ಸರಣಾರು
ಮುಂದಲ ಮಂಟಪದ ಸರಣಾರು ವೋಗನುಬನ್ನಿ
ರಂಬೇ ಗೌರಮ್ನ ಕನ್ನೆ ನೋಡಲು
... ... ...
ಮೂಡಲಿಂದ ಬಂದಾರೆ ಮೂರುಸಾವಿರ ಮುನಿಗಳು
ಮೂಗಿನ ಮ್ಯಾಲೆ ಗರಿಗಾಳು
ಮೂಗಿನ ಮ್ಯಾಲೆ ಗರಿಗಾಳು ಸೂಡಿಕಂಡು
ಮೂಡಲಗಿರಿ ಪರ್ವತವ ಇಳುದಾರೆ

ಮೂಡಲಗಿರಿ ಪರ್ವತದ ಮ್ಯಾಲೆ ಮ್ವಾಡಾವಿಳಿದಂತೆ
ಮೂಡಲಿಂದ ಬಂದೋರು ವೋದಾರು ಗಿರಿರಾಜನರಮನೆಗೆ
... ... ...
ಕೊಟ್ಟೇನೆಂದಳವರಮ್ಮ ಕೊಡೆನಂದನವರಪ್ಪ
ಈಡುಪಾಡೆಂದ ಯಮನಕಾನ
ಈಡುಪಾಡೆಂದ ಯಮಕಾನ ಮ್ಯಾಲೆ
ಕೆಂಗಣ್ಣು ಬಿಟ್ಟಾರು ಸಿವತಾನು

... ... ...
ಇರಿಯಪ್ಪ ಇರಿಯಮ್ಮ ಇರಿಯ ಸ್ವಾದರಮಾವ
ಅಡುಗೆಮನೆಯಾಗ ವಳಮಾತು
ಅಡುಗೆ ಮನೆಯಾಗೆ ವಳಮಾತು ಮಾತನಾಡಿ
ಇರಿಯೋಳು ಗೌರನ ಕೊಡುತೀವಿ

... ... ...
ಆನೆಮ್ಯಾಲೆ ಜ್ವಾಣಜಂಗಮ ಬಂದ
ಪಾಲುಕಿಮ್ಯಾಲೆ ಸಿವಬಂದ
ಪಾಲುಕಿಮ್ಯಾಲೆ ಸಿವಬಂದ ಇಬ್ಬರಿಗೆ
ಜ್ಯಾವೊತ್ತಿಗೆ ದಾರೆಯೆರುದಾರೆ

... ... ...
ಅಂದಾರದಡಿಯಲಿ ಗಂದಾದ ಕೊರಡಾಕಿ
ಬಂದುಬಂದೋರು ಪಾದಪಿಡಿದಾರೆ
ಬಂದಬಂದೋರು ಪಾದಪಿಡಿದಾರೆ ಏನೆಂದಾರೆ
ನೀವು ನಿಮ್ಮ ಸತಿಯೋಳ ಎಸರೇಳಿ

ಪಟ್ವಾದ ಅರಸಿ ಪಾರ್ವತಿದೇವಿ
ಮೆಚ್ಚಿಬಂದೋಳು ಸಿರಿಗಂಗೀಯಲ್ಲವೇ

ಸಿವನಾಡಿದ ಮಾತೀಗೆ ಜನರೆಲ್ಲ ನಕ್ಕಾರು
ಆಕೆ ಗೌರಮ್ಮನ ಕರೆಸ್ಯಾರೆ
ಆಕೆ ಗೌರಮ್ಮನ ಕರಿಸಿ ಕೇಳ್ಯಾರೆ
ನೀವೇಳಿರಿ ನಿಮ್ಮ ಪುರುಸನೆಸರ

ಪಟ್ಟೇದ ವಸ್ತ್ರ ರಟ್ಟೇಲಿವರೆಸೋರು
ದೇವಾರಗೊಡವೆ ನಮಗ್ಯಾಕೆ
ದೇವಾರಗೊಡವೆ ನಮಗ್ಯಾಕೆ
ಮಾತೀಗೆ ಜನರೆಲ್ಲ ನಕ್ಕಾರು
ಗೌರಮ್ಮನೆಂದ ಮಾತಿಗೆ

... ... ...

(ಸಂಗ್ರಹ ರೂಪ)

ಕೃಪೆ: ಜನಪದ ಸಿರಿ– ಸಿರಿಯಜ್ಜಿ, ಸಂಪಾದನೆ: ಕೃಷ್ಣಮೂರ್ತಿ ಹನೂರು, ಪ್ರ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

# ಭಾರತೀ ದೇವಿಯ ಸ್ತೋತ್ರ

- ಕೋಲಾರ ಪದ್ಮಾಬಾಯಿ

ಕೋಲಾರ ಪದ್ಮಾಬಾಯಿ ಬಳ್ಳಾರಿಯ ಪ್ರಸಿದ್ಧ ವಕೀಲ ಶ್ರೀ ಕೋಲಾರ ರಾಮರಾಯರ ಧರ್ಮಪತ್ನಿ. ಉಪನಿಷತ್ತುಗಳ ವಿವರಗಳು, ಮಾಧ್ವ ಸಂಪ್ರದಾಯದ ಪ್ರಮೇಯಗಳು ಪುರಾಣಕಥನಗಳು ಇಕ್ಕಿರಿದ ಸಂಗತಿಗಳು ಇವರ ಸಾಂಪ್ರದಾಯಿಕ ಹಾಡುಗಳಲ್ಲಿ ಸೇರಿಹೋಗಿವೆ. ಲಲಿತವಾಗಿಯೂ, ಸುಂದರವಾಗಿಯೂ ಇರುವ ಈ ಪದ್ಯಗಳನ್ನು ಹಾಡಿನ ಮಟ್ಟಿಗೆ ತಕ್ಕನಾಗಿ ರಚಿಸಲಾಗಿದೆ. ರಾಗ ಮತ್ತು ತಾಳಗಳ ವಿವರಗಳನ್ನು ಆರಂಭದಲ್ಲೇ ಸೂಚಿಸಿರುವುದು ಸಂಗೀತ ಜ್ಞಾನದ ಅರಿವು ಕವಯಿತ್ರಿಗಿದೆ ಎನ್ನುವುದನ್ನು ಸೂಚಿಸುತ್ತದೆ.

ಶ್ರೀ ಭಾರತೀ ದೇವಿಯ ಸ್ತೋತ್ರ: ಸುಗಂಧರಾಜ
ರಾಗ: ಆರಭಿ, ತಾಳ: ಆದಿತಾಳ

ಭಾರತಿ ಭರತನರ್ಧಾಂ। ಕೃಪಾಂಗಿ।
ಸಾರಿದೆ ನಿಮ್ಮ ಚರಣ॥
ಘೋರ ದುರಿತಗಳ। ತೂರಿ ದುರಿತ ಮತಿ।
ತೋರಿ ಹರಿಯ ಮನೆ ।ದಾರಿಯ ತೋರೆ ॥

ಪ್ರದ್ಯುಮ್ನ ಜಠರಸಂ। ಭೂತೆ ಮರುತ ಪ್ರೀತೆ।
ವಿದ್ಯಾಭಿಮಾನಿ। ಖ್ಯಾತೆ॥
ವಿದ್ಯುನ್ನಾಮಕೆ। ವಾಗ್ದೇವಿ ಎನ್ನ, ಅ
ವಿದ್ಯೆಯ ಕಳೆದು ಹೃ। ಶ್ಯುದ್ಧಿಯ ಮಾಡೆ॥

ಕಲಿ ಕಲ್ಮಶಗಳು । ಕಲೆತು ಬಾಧಿಪುದು।
ಜಲಜಾಕ್ಷಿಯೆ ಕೇಳೆ ॥
ಕಳವಳ ಕಳೆದೆನ್ನ । ಕಾಪಾಡೆಂದು
ಕಲಿಕುಲ ದಮನ ಕ। ಪೀಂದ್ರಗೆ ಪೇಳೆ॥

ಯಜ್ಞಕುಂಡದಿಂ। ದುದ್ಭವಿಸಿಹಳೆ, ಎ।
ನ್ನಜ್ಞಾನವ ಹರಿಸೆ ॥
ಪ್ರಜ್ಞಾತೇಜನಿಧಿ । ಭೀಮಗೆ ಪೇಳಿ।
ಸುಜ್ಞಾನ ಮತಿಯ। ಕೊಡಿಸೌ ತಾಯೆ ॥

ಆನಂದತೀರ್ಥರ। ಆನಂದ ಮತವನು ।
ಏನೆಂದು ವರ್ಣಿಸಲಿ॥
ಸಾನಂದದಿಂದೀ। ಮತದ ತತ್ವವನು।
ಮಾನವಿಲ್ಲದಲೆ । ಪೊಂದಿಸು ತಾಯೆ ॥

ಕಾಳಾಹಿವೇಣಿ ಶ್ರೀನಳ ನಂದಿನಿ।
ಕಾಳಿ ಇಂದ್ರಸೇನಿ ॥
ಶೈಲಜೆ ಶ್ಯಾಮಲೆ ।ಪೌಲೋಮಿ, ಉಷೆಯರ ।
ಪಾಲಿಸಬೇಕೆಂದು ಪಾಂಚಾಲಿಯಾದೆ॥

ವೇದಾಭಿಮಾನಿಯೆ। ವೇದಗಳಿಗೆ ಅಪ।
ವಾದವ ರಚಿಸುವವರ॥
ಭಾದಿಪ ನಿರಯ ದಿ। ಭೇದಿಸಿ ಕೆಡಹುತ।
ಸಾಧುಜನಕೆ ಪಂಚ । ಭೇದವತೋರೆ॥

ನಾಗೇಶ ಶಯನನ । ಬಾಗಿ ಭಜಿಸುವಂಥಾ
ಯೋಗವ ಕೊಡು ಜನನಿ॥
ಭಾಗವತರ ಸಹ । ಸಂಗ ಕೊಡಿಸಿ ಭವ
ನೀಗಿ ಸುಪಥ ।ಚೆನ್ನಾಗಿ ತೋರಮ್ಮ॥

ಕೃಪೆ: ಸಂಪ್ರದಾಯದ ಹಾಡುಗಳು (ಸಂ) ಶ್ರೀ ಕೋಲಾರ ರಾಮರಾಯರು (ಪ್ರಕಾಶಕರು) ೧೯೮೨

# ಭಾಗ – ೨

# ಕೀರ್ತಿಶೇಷರಾದ ಲೋಕಮಾನ್ಯ ಬಾಲಗಂಗಾಧರ ತಿಲಕ ಸ್ಮರಣಂ

- ನಂಜನಗೂಡು ತಿರುಮಲಾಂಬ

॥ಕಂದ॥ ಗಂಗಾಧರ ವರಪುತ್ರಬೆ।
ಅಂಗನೆ ಪಾರ್ವತಿಯಣುಗನೆ ಬಲವಂತನೆ ಸ।
ನ್ಮಂಗಳ ಗುಣಯುತ ತಿಲಕನೆ
ಕಂಗೊಳಿಸು ಯಶಶ್ಶರೀರದಿಂ ಚಿರಕಾಲಂ॥

ಶ್ರೀ ಕಟಾಕ್ಷದಿಂ ನೀಂ ಕಟಾಕ್ಷಿಸು, ಲೋಕಸನ್ಮಾನ್ಯನೆ ಸ।
ಕಲಕಲಾಪದಿ ಸಾಕುಮಾಳ್ಪರ ನಿಂದೆಯಿಂ ಕಳೆಗುಂದದಾ॥
ಲೋಕಬಾಂಧವರ್ರೈಕಮತ್ಯ ಮನೇಕ ವಾಕ್ಯದಿ ಸಾರಿದಾ।
ಈ ಕುಮಾರರ ಜೋಕೆಯಿಂ ಪೊರೆ ಲೋಕ ಸೇವೆಗೆ ನಿಲ್ಲುವಾ ॥ಶ್ರೀ॥ ೧

ನ್ಯಾಯಮಾರ್ಗದಿ ದಾಯತಪ್ಪದ ಪಾಯಕೀಡಿನಿತಾಗದೆ।
ಕಾಯಜ್ಞಯದಿಂದ ಭಾರತ ಸೇವೆಯೊಂದನೆ ಮಾಡುತೇ॥
ಧ್ಯೇಯಕಾರ್ಯದಿ ಶ್ರೇಯಮಂ, ಜಯಶ್ರೇಯಮಂ ಕೃಪೆಗೈಯುತ।
ಜೀಯಪಾಲಿಪುದೆಮ್ಮನಾವಗಮೆಂದು ಬೇಡುವೆ ಲಾಲಿಸೈ॥ ೨

ಭಾರತೀಯರ ಭಾಗ್ಯದಾತನೆ ಭವ್ಯ ಮಂಗಳ ರೂಪನೆ।
ಸಾರವೆನ್ನಿಪ ಸೂಕ್ತಿಯಂ ಮನವಾರೆಸಾರಿದದೇವನೆ॥
ಘೋರ ದುಃಖದಪಾರಚಿಂತನೆಯ ಪಾರತಂತ್ರ್ಯವ ನೀಗಿಸಿ।
ಭೂರಿಸೌಖ್ಯಾವ ಬೀರುವಾ ಘನ ಮಂತ್ರಮಂ ದಯಗೈದನೆ॥ ೩

ಜೀವಮಂ ನರದೇಹಮಂ ನಿಜ ಭೋಗಭಾಗ್ಯಮನೆಲ್ಲಮಂ।
ಭಾವಶುದ್ಧಿಯೊಳಿತ್ತು ಭಾರತ ಮಾತೃಸೇವೆಗೆ ನೋಂತನಂ॥
ದೇವಲೋಕದೊಳಿದ್ದು ಭಕ್ತರ ಜೀವಕ್ಕನುಗೈವನಂ।
ಈ ವಸುಂಧರೆಯಲ್ಲಿ ನಿನ್ನವೋಲಾವನಿರ್ಪನೊ ಕಾಣೆವೈ॥ ೪

ದೇಶಸೇವೆಯೊಳಾಸೆಯಿಂದಿಹ ದಾಸರಂ ಪರಿಭಾವಿಸು।
ದೇಶಭಕ್ತರ ಮಾಡಿ ನೀಂ ಮನದಾಶೆಯಂ ದಯಪಾಲಿಸು॥
ದೋಷದೂರನೆ ಭಾಷ್ಯಕಾರನೆ ವಾಸವಾಗಿಹುದೆಮ್ಮೊಳು
ಶೈಲಶೈಲನಿವಾಸನೆಮ್ಮೊಳು ಲೇಸಪಾಲಿಸುವಂದದೊಳ್॥೫॥

**ಕೃಪೆ:** ಸನ್ಮಾರ್ಗದರ್ಶಿ. ಹಿತೈಷಿಣಿಯ ಹೆಜ್ಜೆಗಳು – ಸಂ. ವಿಜಯಾ ದಬ್ಬೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ೧೯೯೨

❖

# ಸಮದರ್ಶನ ಧ್ವಜ

- ಭಾರತಿ (ತಿರುಮಲೆ ರಾಜಮ್ಮ)

ಸಮರ ದಾಹವೆಂದೆಂದು ಸಂಪ್ರಾಪ್ತವಾಗದ
ಅಮರ ವರವ ನಮಗೆ ಕರುಣಿಸೈ ದೇವಾ ॥ಪ॥
ಕ್ಷಮಾಗುಣವ ನೋವಿ ಪ್ರೇಮ ದೀಪನುರಿಸಿ
ಸಮದರ್ಶನ ಧ್ವಜಸ್ತಂಭವನು ನಿಲಿಸಿ ॥ಅ.ಪ॥

ಸಮಗ್ರ ಭಾರತದ ಸತ್ಯ ಪ್ರಿಯತೆಯ
ವಿಮಲ ಸಂದೇಶವನು ವಿಶ್ವ ವಿಶ್ವಾಸಿಸೆ
ಪ್ರಮಾದರಹಿತದ ವಿಹಿತ ಪ್ರಮೋದದ
ಕ್ಷೇಮವನು ಹಾರೈಸು ಸಕಲ ಜೀವಿಗಳಲಿ ೧

ಕ್ಷಾಮ ದೇವತೆಗೊಂದು ಕ್ರೂರ ಶಾಪವ ಸಲಿಸಿ
ಸಾಮದಾನೋಪಾಯಗಳ ನಿಯಮ ವಿಧಿಸಿ
ಈ ಮಾನವ ಕುಲವೇ ವಿಜಯಗೀತವ ಪಾಡಿ
ರಾಮರಾಜ್ಯದಿ ರಮಿಸುವಂತೆ ಬಿಜಮಾಡಿ ೨

ಶಾಂತಿ ಸಂಸ್ಥಾಪನಕೆ ಸ್ಥೈರ್ಯದುತ್ಥಾಪನಕೆ
ಸಂತತ ಶ್ರೇಯದ ಸರ್ವ ಸಮತಿಷ್ಟಿಗೆ
ಅಂತರಂಗಗಳ ಸಂತೈಸಿ ಕ್ರಾಂತಿಯ ಕಳೆದ
ಕಾಂತಿಯನು ಬರಿಸಿ ಜ್ಞಾನದ ಕಂಗಳ ಬಿಡಿಸಿ ೩

ವಸ್ತ್ರಾಭರಣ ಸಿಂಗಾರ ವಾದ್ಯಸಮೇತ
ಮಸ್ತಕವ ನೆಲಕೆ ತಾಗಿಸಿ ವಿಶ್ವವೆಲ್ಲ
ಶಸ್ತ್ರ ಸನ್ಯಾಸವನು ಸ್ವೀಕರಿಪ ಶಪಥಕೆ
ಅಸ್ತುಯೆಂದನು ಲೋಕ ಮಂಗಳದ ಘೋಷಕೆ ೪

**ಟಿಪ್ಪಣಿ:** ಯುದ್ಧಾನಂತರ ಸ್ಯಾನ್ ಫ್ರಾನ್ಸಿಸ್ಕೋ ಸಮ್ಮೇಳನ ನಡೆಯಿತು. ಅಲ್ಲಿ ಶಸ್ತ್ರ ಸನ್ಯಾಸವಿಲ್ಲದೆ ಜಗಕ್ಕೆ ಶಾಂತಿಯಿಲ್ಲವೆಂಬ ನಿರ್ಣಯವಾಯಿತು. ಆ ತತ್ವ ಸಮರ್ಥನವಿದು.

**ಕೃಪೆ:** ಭಾರತಸ್ವಾತಂತ್ರ್ಯದ ಗಾಯತ್ರಿ(ಸಂ) ಸನದಿ– ೨೦೧೦ ಸಾಹಿತ್ಯ ಅಕಾಡೆಮಿ

# ಹುಡುಕು–ಅಡಗು

- ಜಯದೇವಿತಾಯಿ ಲಿಗಾಡೆ

ಇರುಳೆಲ್ಲ ಮನದಲ್ಲಿ ನಿಂದು ಬೆಳ್ಳಗೆ ಬೆಳಕಾಗುತಲೆ
ಮಾಯವಾಗುವಿ, ಏನೋ ಹೇಳುತ್ತೇಳುತ
ಬೆರಗುಗೊಳಿಸುವಿ ಹಾ! ಅರೆಮರುಳು ನಾನು
ಎದ್ದು ಕುಳಿತೊಮ್ಮೆ ನಚ್ಚಿ ನಗುವೆ ನೋಡಿ ನನ್ನ ನಾನೇ.

ಹಾ! ಹುಚ್ಚಿ ಎನುತ ಬೆಚ್ಚಿ ಬೀಳುತ ನೋಡುವೆನು
ಎಚ್ಚರಾಗಿ, ನುಡಿಯಿಲ್ಲ ಎನ್ನ ನುಡಿಗಾರನಿಲ್ಲ, ನಡೆದಿಹುದು
ಏನೋ ಎಂತು: ಮಗಳಾಗಿ ಆಡುವೆನು ಇಂದು
ಹುಡುಕು ಅಡಗು, ಇದು ಏನು ನನ್ನ ಬದುಕು ಬೆಡಗು!

**ಕೃಪೆ:** ಜಯಗೀತ. ಕನ್ನಡ ಕೋಟೆ ಪ್ರಕಾಶನ, ಸೊಲ್ಲಾಪುರ. ೧೯೫೨

❖

# ನರಸಿಯ ಪರಿಸೆ

- ಬೆಳಗೆರೆ ಜಾನಕಮ್ಮ

ಹದಿನಲ್ಕು ಹರೆಯದ ನರಸಿ ಬಲು ಚಲುವೆ
ಮುದವಾಗುತಿದೆ ಇವಳ ನಡೆ ನುಡಿಯ ನೋಡೆ
ಹರುಕು ಕಂಚುಕ ತೊಟ್ಟು ಮಲಿನಾಂಬರವುಟ್ಟು
ಉಡುಗುವಳು ವರ್ತನೆಯ ಮನೆಗಳೊಳು ಕಸವ
ಮುಕುರವೇತಕೆ ಇವಳ ಮೂಗೆ ಸಂಪಿಗೆ ಮೊಗ್ಗು
ಪೊಳೆವ ಕಂಗಳ ತುಂಬಿ ತುಳುಕುತಿದೆ ಹಿಗ್ಗು
ಚೆಲ್ವ ಪಣೆಯಲಿ ಬಿದ್ದು ಅಲುಗಾಡುತಿವೆ ಕುರುಳು
ರಸಿಕತೆಯು ಚಿಮ್ಮುತಿದೆ ಇವಳ ಮಾತಿನೊಳು
ತೊಳೆಯುವಳು ಮುಸುರೆಗಳ ಥಳಥಳನೆ ಕ್ಷಣದಿ
ಓಡುವಳು ಮತ್ತೊಂದು ಮನೆಗಿವಳು ಮುದದಿ
ಬೆಳೆಸುವಳು ಗೆಳೆತನವ ಹುಡುಗರೊಳು ಬೆರೆತು
ದುಡಿತದೊಳಗಿದ್ದರೂ ದುಗುಡವನು ಮರೆತು
ಬಾರದಿರಲೊಂದು ದಿನ ಮನೆಗೆಲಸಕಿವಳು
ಮೀರಿದಳೆ? ಆಜ್ಞೆಯನು ಎನುತ ದುಡುಕಿದೆನು
ಬರಲಿಲ್ಲವಿಂದೇಕೆ ಮನೆಗೆಲಸಕೆಲೆ ನರಸಿ,
ತಿರಿದು ತಿಂಬುವ ನಿನಗೆ ಜಂಬವೇ ಮೂಳಿ!
ಹಿಡಿಯುವೆನು ನಾನಿನ್ನ ಕೂಲಿಯೊಳಗೊಂದಣೆ
ಬಿಡಿಸುವೆನು ನೀನಿನ್ನು ಬೇಕಿಲ್ಲ ನಡೆ ಎಂದೆ
ಸಿಟ್ಟಾಗ ಬೇಡಮ್ಮ ತಾಸು ತಡವಾಯ್ತು
ಹಿಟ್ಟಿನಾರತಿ ಹಿಡಿದು ಗುಡಿಗೆ ಹೋಗಿದ್ದೆ
ಬೀರಪ್ಪ ಹೊರಟಿದ್ದ ತೇರು ನೋಡಲು ಹೋದೆ
ಎಲೆ ಪೂಜೆ ಕಟ್ಟಿದರು ತಡವಾಯಿತಲ್ಲಿ
ಎಡೆಯನಿಟ್ಟೆವು ಎಲ್ಲ ಸ್ವಾಮಿಗೊಂದೊಂದಾಗಿ
ನೆನೆಯಕ್ಕಿ ತಂಬಿಟ್ಟು ಕಾಯಿ ಬಾಳೇಹಣ್ಣು
ಉಡಿಯೊಳಗೆ ಮಡಗಿದ್ದ ಚೂರು ಕೊಬ್ಬರಿಯೊಂದು
ತೆಗೆದುಕೊಟ್ಟಳು ನನಗೆ ಪರಸಾದವೆಂದು
ತೇರಿನೊಳು ಬೀರಪ್ಪಗಾರತಿಯ ಬೆಳಗಿದರು
ಹೊಂಬಾಳೆ ದವನಗಳ ನಾವು ಸೂರಿದೆವು

ತೇರು ಕದಲಿಸುವಾಗ ಭೋರೆಂದು ವುರಿಮೆಗಳು
ಕುಣಿಕುಣಿದು ಜನರೆಲ್ಲ ಕೇಕೆ ಹಾಕಿದರು
ನಾಗಮ್ಮ ಕರಿಯಮ್ಮ ಸಿತ್ತಮ್ಮ ಸಿರಿಯಮ್ಮ
ಪದಗಳನು ಹಾಡಿದರು ಏನೇಳಲಮ್ಮ!
ಹೊರಟಿಲ್ಲವೇನಮ್ಮಾ ನೀನಿನ್ನು ಪರಿಸೆಗೆ
ತರಿಸಮ್ಮ ಕಾಯೊಂದು ಇರಲಿ ದಿನಗೆಲಸ
ಬಾರಮ್ಮ ಸ್ವಾಮಿಯ ತೇರು ನೋಡಮ್ಮ
ಊರೂರೆ ಬಂದಿಹುದು ನೀನಿಲ್ಲೆ ಇರುವೆ
ತೊಡಿಸಾಮ್ಮ ಪರಿಸೆಯೊಳು ನನ ಕೈಗೆ ಬಳೆಗಳನು
ಕೊಡಿಸಮ್ಮ ಮಕ್ಕಳಿಗೆ ಗೊಂಬೆಗಳನೆಂದಳು
ಆಗಲಿಲ್ಲವೇ ನರಸಿ ಮದುವೆ ನಿನಗೆಂದರೆ
ಸೆರಗ ಬಾಯಿಗೆ ಮುಚ್ಚಿ ಸಿರಬಾಗಿ ನಗುವಳು
ಮದಿವೆಯೊಳಗಿನ ತತ್ವ ಗೊತ್ತಿಲ್ಲ ಪಸುಳೆಗೆ
ನಿಸ್ಪೃಹದ ಮನಸಿನೊಳು ನಲಿದಾಡುತಿಹಳು
ಇರಲಿರಲಿ ನರಸೀ ಮದುವೆಯಂತಿರಲಿ
ಬೀರಪ್ಪನಾ ಪರಿಸೆ ಬಂಗಾರವಾದೀತು
ನಿನ್ನ ಜೀವನ ಬೆಳಸು ಬೆಳೆಯುತಿರಲಿಂತೆ
ನಿನ್ನ ರಸಿಕತೆ ಬೆಳಗಿ ಬೆಳಗುತಿರಲಿಂತೆ
ನಿನ್ನ ದುಡಿತವು ಜನಕೆ ಸಲ್ಲುತಿರಲಿಂತೆ
ನಿನ್ನ ಪರಿಸೆಯ ಕುಣಿತ ಕುಣಿಯುತಿರಲಿಂತೆ
ಬಂಧನಕೆ ಸಿಲುಕಿದಾ ಬಾಳಿನನುಭವಕಿಂತ
ಎಳೆತನದ ಕುಣಿತವೇ ಜನಕಜೆಗೆ ಹಿತವು.

ಕೃಪೆ: ಕಲ್ಯಾಣ(೧೯೪೮) ಶರತ್ ಏಜೆನ್ಸಿ, ಬೆಂಗಳೂರು.

# ಹೊಲೆಯರ ಹೆಣ್ಣು

- ಎಲ್. ವಿ. ಕಾವೇರಮ್ಮ

೧

ಅಲ್ಲಿ ಬಾನ ಬಯಲ ತುಂಬಾ ತರುಣಕಿರಣ ತುರುಗಿದೆ,
ಇಲ್ಲಿ ಬುವಿಯ ತಟ್ಟೆಯೊಳಗೆ ಅದರ ಭಯ ಹರಿದಿದೆ;
ಕಣ್ಣ ಮನವ ಸೆಳೆಯುವಂಥ ವಿವಿಧ ಪುಷ್ಪ ಬಿರಿದಿದೆ,
ತೆಂಗು–ನಿಂಬೆಯಿಂದ ತೋಟ ತುಂಬಿ ಬೆಳೆದು ನಿಂತಿದೆ!

೨

ಹಸಿರು ಕುಡಿಯನು ಮಂಜುಮಣಿಯ ಕುಣಿತದಿಂದ ನಗುತಿದೆ,
ಮಂದವಾತ ಕುಸುಮವಿಸರದೊಡನೆ ಸರಸವೆಸಗಿದೆ:
ದೂರದಲ್ಲಿ ಹಕ್ಕಿಯೊಂದು ಹಾಡಿ ಹೊನಲ ಹರಿಸಿದೆ,
ಪ್ರಕೃತಿ ರಮ್ಯವಾಗಿ ಬೀಗಿ ಸುತ್ತುಮುತ್ತು ಬೆಳಗಿದೆ!

೩

ಇಂಥ ವಿಮಲ ಭಾವ–ಭಂಗಿ ಬೆರೆತು ನಲಿವ ತಿರೆಯೊಳು
ತಾಣವಿಲ್ಲ, ಮಾನವಿಲ್ಲ, ಉಣಲು ಇಲ್ಲ ಅನ್ನವು!
ಒಂದೆ ಜೀವ ಮಿಡಿದು ಸಿಡಿವ ಸುಖವು ಸಾಲದೆಂದು ಒಂದು
ಕಣ್ಣ ಮಣಿಯನೆದೆಗೆ ಜಿಗಿದು ಸಾಗುತಿರುವಳೊರ್ವಳು!

೪

ಉಟ್ಟ ತುಂಡು ದೇಹದರ್ಧ ಮಾತ್ರ ಬಳಸಿ ಮುಚ್ಚಿದೆ:
ಬಿಟ್ಟ ಭಾಗವದಕೆ ಕೂಸೆ ವಸನವಾಗಿ ನಿಂತಿದೆ.
ದಿಟ್ಟಿಯಲ್ಲಿ ಬಹಳ ದಿನದ ರುದ್ರ ಹಸಿವು ಮೂಡಿದೆ;
ಒಡಲಬಾಧೆಯಿಂದ ಮುಖವು ಸಾವ ಕಳೆಯ ತಳೆದಿದೆ!

೫

ಆರುಮಾರು ನಡೆದು ಮುಂದೆ ಕಣ್ಣುಸುತ್ತಿ ಬೀಳಲು,
ಮುಂದೆ ಸಾಗಲಾರದವಳು ಮಡಕೆ ಬೀಸಿ ಕುಳಿತಳು
ಒಡನೆ ಕೂಸ ಕಣ್ಣದಿಟ್ಟಿಯವಳ ಬಡಿದು ಕುಲುಕಿತು
'ಹೊರಡು ಬೇಗ' ಎಂದು ಮುದುಡಿ ಬಿದ್ದ ಮನವ ದೂಡಿತು!

೬

ಬೆಚ್ಚಿ ಎದ್ದು ಕೂಸನಪ್ಪಿ ಬಿಗಿದು ಕಣ್ಣನೀರ ಮಿಡಿದು,
ಒಡನೆ ಮುತ್ತನೊಂದನಿತ್ತು ಬಿದ್ದ ಮಡಿಕೆಯೆತ್ತಿ ಹಿಡಿದು

'ಗುಡ್ಡದಷ್ಟು ಕಷ್ಟಬರಲಿ, ಕಂದ ನಿನ್ನ ಬಾಳ ಬೆಳಕು
ನನ್ನ ಹೃದಯ ತುಂಬಿ ಇರಲಿ' ಎಂದು ನಗುತ ನಡೆದಳು.

೭

ಹೊಲೆಯ ಹಟ್ಟಿಯಲ್ಲಿ ಹುಟ್ಟಿ ಬೆಳೆದು ಬಂದ ಫಲವೆ ಇಂದು
ಇಳೆಯ ತುಳಿತಗಳಿಗೆ ಮೇಯ್ಯನೊಡ್ಡುವಂತೆ ಮಾಡಿತೆಂದು,
ಹಳಿದು ವಿಧಿಯ, ಜರಿದು ತನ್ನ, ಮುಂದೆ ಸಾಗಲೊಡನೆ ತಾನು
ಕಂಡಳೊಂದು ಹರ್ಮ್ಯವೊಂದು, ಒಡನೆ ಜೀವ ಚಿಗಿತಿತು!

೮

ಕವಳ ತಾಯಿ ಎಂದು ಅಂಜಿ ಅಂಜಿ ನುಡಿಯೆ ಸುತ್ತಲೂ
'ಹೊರಡು ಆಚೆ' ಎಂಬ ನುಡಿ, ಗುಡುಗಿ ಗುಡುಗಿ ಮೊಳಗಿತು.
ಹಿಡಿದ ಮಡಿಕೆ ನಾಚಿ ನೆಲದ ಕಡೆಗೆ ಇಳಿಯತೊಡಗಿತು
ದಿಟ್ಟಿಯೊಡನೆ ಸುತ್ತಲಿರುವ ಮಣ್ಣ ಹುಡುಕ ತೊಡಗಿತು

೯

ಒಡನೆ ಓಡಿಹೋಗಿ, ಬಿದ್ದ ಅನ್ನದುಂಡೆಯೊಂದನೆತ್ತಿ,
ಕೊಡವಿ ನೀರಿನೊಳಗೆ ಕಲಸಿ, ಮುದ್ದುಮಗುವಿಗದನು ತಿನಿಸಿ,
ತಾನು ತಿಂದು ತೃಪ್ತಿ ತಳೆದು ಸತ್ತ ನಗೆಯನೊಂದ ಬೀರಿ,
ನಡೆದಳಾಕೆ ಬೆರಗನಾಂತು ಜಗದ ನೀತಿ–ನಡತೆಗೆ.

೧೦

ಮೂರು ದಿವಸವಳಿದ ಬಳಿಕ ಕೂಸಬಿಗಿದ ಶವವದೊಂದು
ಮರದ ಬುಡವನಪ್ಪಿ ಮಲಗಿ, ಹಸಿದು ಎಲೆಯ ಹೊದ್ದಿದೆ.
ಒಡಕು ಮಡಿಕೆ, ಹರಿದ ಚಾಪೆ ಇವೇ ಅವಳ ನಂಟರು;
ಬರಿಯ ನಾಯಿ–ಕಾಗೆ–ಹದ್ದೇ ಅವಳ ಕಾವ ಬಂಟರು!

೧೧

ತಿಮಿರವಡಗಿ ನಿಂತ ಮುಗಿಲ ಕೆಲವು ತಾರೆ ಬೆಳಗಿರೆ
ಕಿವಿಯ ಕೊರೆವ ಮಿಡತೆ ಕೂಗು 'ಚೀರ್' ಎಂದು ಮೊಳಗಿರೆ
ಚಂದ್ರನಂದು ದುಃಖ ತುಂಬಿ ಮುಗಿಲಮರೆಗೆ ನಿಂತನು;
ಬಾಲ ತಾಯಿ ಮುಚ್ಚಿ ಮೊಗವ ಕಂಬನಿ ಮಳೆಗರೆದಳು.

ಕೃಪೆ: ಜಯಂತಿ ಪತ್ರಿಕೆ, ಧಾರವಾಡ. (೧೯೪೭) ಆಧುನಿಕ ಮಹಿಳಾ ಸಾಹಿತ್ಯ ಪ್ರಸಾರಾಂಗ ಕನ್ನಡ ವಿವಿ ಹಂಪಿ, ಸಂ. ಡಾ ಎಂ ಉಷಾ ೨೦೦೭

# ಕಾಲವೂ ಒಂದಿತ್ತು

- ಶಾರದಾ ಜಡೆ

ಕಾಲವೂ ಒಂದಿತ್ತು!
'ಗುರುಕುಲ'ವೆ ನೆಲೆಯಾಗಿ
ಗುರುಪತ್ನಿ ತಾಯಾಗಿ
ಅರಿವೊಂದೆ ಗುರಿ ಎಂಬ .... ।

ಗೋವುಗಳ ಮೈ ತೊಳಸಿ,
ಮೇವುಣಿಸಿ, ನೀರ್ಕುಡಿಸಿ,
'ಗೋಮಾತೆ! ಸಲಹೆ'ಂಬ .... ।

ಉತ್ತು ಬಿತ್ತನೆ ಮಾಡಿ
ಸುತ್ತ ನೀರನು ಹರಿಸಿ
'ನೆಲದಾಯೆ! ಕಾಯೆ'ಂಬ.... ।

ರಣವಿದ್ಯೆಯನು ಕಲಿತು,
ಪ್ರಾಣವನು ಪಣಕಿಟ್ಟು,
'ಜೈದುರ್ಗೆ! ಉಘೇ!' ಎಂಬ .... ।

ಕಾಲ ಬದಲಾಯಿಸಿತು;
ಕಾಯಕವು ಮರೆಯಾಯ್ತು,
ಪೂಜೆ ಏನಳಿಯಿತೇ?

ಮನೆಯಲ್ಲಿ, ಮಠದಲ್ಲಿ,
ರಣದಲ್ಲಿ, ಕಣದಲ್ಲಿ,
ನೇಮಗಳು ನಡೆಯುತಿವೆ ।

ಅಸುವಳಿದ ದೇಹಗಳು
ಅಸ್ತಿಪಂಜರವಾಗಿ,
ತೂಗುವೊಲು ತೂಗುತಿದೆ ।

ಕೃಪೆ: ಸಾಗರದೀಪ, ಲಂಬೋದರ ಪ್ರಕಾಶನ, ೧೯೭೭.

# ಶಬ್ದ ದರಿದ್ರ

- ಶೈಲಜಾ ಉಡುಚಣ

ನಿನ್ನ ಬೆಳಕಿನ ಹಾದಿಯಲಿ
ನನ್ನ ಕಣ್ಣು ಸಾಸಿರ,
ನಿನ್ನ ನಡೆನುಡಿಯ ಅಡಿಯಲಿ
ನನ್ನ ರೋಮ ರೋಮ ಪುಳಕ ದುರ್ಭರ,
ತಾಯೆ, ಅನುದಿನದ ನಿನ್ನ ಚಿಂತನೆಯಲಿ
ಮನ ಸವೆದು ಸವೆದು ಆಗಲಿದೆ
ಕಡಿಯಾಣ ಕಬ್ಬಿಣ ಪರುಷ ಸ್ಪರ್ಷ,
ನೀ ಬಂದೆ ನನ್ನ ಮನೋನ್ಮಾದದ ರಂಗದಲಿ
ನಾನಾದೆ ಅಪರಿಮಿತ ಹರುಷ,
ಕಿರಣ ಕಿರಣಗಳ ಚುಂಬನದಲಿ
ತಪತಪದ ಕಂಪನದಲಿ
ನಾ ಒಲಿದು ಬರೆ ಒಲವ ತುಂಬಿ
ನಿನ್ನ ಕಾವ್ಯ ಕಿರಣ ಜೇನಹನಿ
ನಾಲಗೆಗೆ ಬೀಳುವುದೇ ತಡ ನೀ ಮಾಯವಾಗಬೇಕೆ?
ನಿನ್ನ ಹಾದಿ ಅರಿವು ಅರಿಯದ
ಅನಂತ ನಿರೀಕ್ಷೆ,
ನೀ ಬಂದು ಒಂದೇ ಗಳಿಗೆಯಲಿ
ತೆಗೆದುಕೊಳ್ಳುವಿ ನಿನ್ನ ಪರೀಕ್ಷೆ.
ಛೀಃ! ಶಬ್ದದರಿದ್ರದ ಮನೆ ಬೇಡ ತಪವು ಸಾಲದ ನಾಡು ಕಾಡು
ಎಂದು ಗಕ್ಕನೆ ಹೊರಟುಹೋದೆಯ್ಯೆ !
ಮತ್ತೊಮ್ಮೆ ಬರುವೆಯೆಂದು ಜನನಿ ಮಗುವ ಮುದ್ದಿಡುವೆಯೆಂದು
ಓ ನನ್ನ ಕಾವ್ಯ ಕಾತ್ಯಾಯಿನಿ!!

ಕೃಪೆ: ಶೈಲಶ್ರೀ–ಸಮಹೆಜ್ಜೆ–ಸಾಮರಸ್ಯ (ಅಭಿನಂದನಾ ಗ್ರಂಥ) ಸಂ. ವಿಜಯಶ್ರೀ ಸಬರದ, ಚೇತನಾ ಪ್ರಕಾಶನ, ಗುಲ್ಬರ್ಗಾ, ೨೦೦೫

# ವಚನ

- ಕಮಲಾ ಹಂಪನಾ

ನಾನು ಅಮೃತಮತಿಯಲ್ಲ
ನನಗೆ ಬೇಕಿಲ್ಲ ಅಪ್ಪವಂಕ
ತಿನ್ನಿಸಲಾರೆ ವಿಷದ ಲಡ್ಡುಗೆ;
ನಾನು ಸುನಂದೆಯಲ್ಲ
ಗಂಡನ ಅಳಿವಿನಲ್ಲಿ ನನ್ನ ಸಾವ ಕಾಣಲು:
ನಾನು ಸೀತೆಯೂ ಅಲ್ಲ
ಅವನೊಡ್ಡಿದ ಅಗ್ನಿಕುಂಡ ಹಾಯಲು;
ನಾನು ಊರ್ಮಿಳೆಯೂ ಆಗಲಾರೆ
ಅವ ದೂರ ಸರಿಯೆ ಸನ್ಯಾಸಿಯಾಗಲು;
ನಾನು ಅಪರ್ಣೆಯೂ ಅಲ್ಲ
ತಪಸ್ವಿಯಾಗಿ ಅವನ ಪಡೆಯಲು;
ನಾನು ಸಾವಿತ್ರಿ ಮೊದಲೇ ಅಲ್ಲ
ಕೆಳಗೆ ಬಿದ್ದ ಅವನ ಮೇಲೆತ್ತಲು;
ನಿನ್ನಂತೆಯೇ ನಾನು ಎಂದು
ಅವನು ನನ್ನನ್ನು ಕಂಡಾಗ
ನಾನೊಬ್ಬ ಮಾನವಳು!
ನಾನು ನಾನಾಗಿಯೇ ಉಳಿಯುವೆ ಕಮಲಾಪ್ರಿಯಾ

ಕೃಪೆ: ಬಯಲು (ಆಧುನಿಕ ವಚನಗಳ ಸಂಕಲನ – ೧೯೯೩) ಸಪ್ನಾ ಬುಕ್ ಹೌಸ್, ಬೆಂಗಳೂರು.

❖

# ಪುನರ್ಜನ್ಮ

- ಕುಲಶೇಖರಿ

ಪರಿಸರ ಸಹಜ ವಾತಾವರಣದ ಕೈಗೂಸಾಗಿ
ನೆಲಕ್ಕೆ ಬಿದ್ದ ಬೀಜ
ಬಿಸಿಲಲ್ಲಿ ಬೆಂದು ಮಳೆಯಲ್ಲಿ ನೆಂದು ನೆರಳಲ್ಲಿ ಮಿಂದು
ಬಾಯಿಬಿಟ್ಟಾಗ ಜಡಕೆ ಜೀವ ಸಂಚಾರ
ತಟಸ್ಥವಾಗಿ ಧ್ಯಾನದಾಳಕ್ಕಿಳಿದ ಧಾನ್ಯಕ್ಕೆ ಮರುಜನ್ಮ
ಚೇತನದ ಭಾವೀ ಭವಿಷ್ಯದ ಬೀಜಾಂಕುರ
ಹೊಸಬದುಕಿಗೆ ಕಣ್ತೆರೆದು ಕೈಮುಗಿದು ಕುಡಿಯೊಡೆವ
ಪ್ರಶ್ನಾಕಾರದ ಮೊಳಕೆ ಚಿಗುರೆಲೆ ಮೂಡಿಸಿ
ಬೆನ್ನ ಮೇಲಿನ ಬುತ್ತಿಗಂಟ ಮೇಯುತ್ತ ಹಸಿರಾಗಿ
ಬೆಳೆಬೆಳೆಯುತ ಮಣ್ಣು ನೀರು ಗೊಬ್ಬರಗಳನುಂಡು
ಸ್ವಾವಲಂಬನದ ಕಿರೀಟದ ಸಂಭ್ರಮದಲ್ಲಿರುವಾಗ
ಋತುಮಾನದ ಚಕ್ರಕ್ಕೆ ಹೊಸತಿರುವು ಸತ್ವಯುತ
ಹಸಿರಿಗೆ ವಸಂತದ ಬಣ್ಣದ ಹೂಗಳ ಸಡಗರ
ವರ್ಣರಂಜಿತ ಕನಸಿನ ಸಾಮ್ರಾಜ್ಯದ ಬೆಡಗು
ಜೀವನದ ನವೋಲ್ಲಾಸದ ಆಕರ್ಷಣೆ
ಪರಿಮಳಕ್ಕೆ ಮರುಳಾದ ಮಧುಕರಿಗಳ ರಾಸಕ್ರೀಡೆ
ಮುತ್ತಿನ ತೆನೆಗಳು ಬಾಗಿ ತೂಗಿ ತೊನೆದಾಡಿದಾಗ
ಜಗದ ಜೀವಿಗಳ ಹಸಿವಿಗೆ ಅನ್ನದ ಕೊಡುಗೆ
ಮಿಡಿಗಾಯಿ ಬೀಜ ಸಹಿತ ಪಕ್ವ ಫಲಗಳಾದಾಗ
ಸವಿ ರಸಪೂರಿತ ಹಣ್ಣುಗಳಿಂದಲೇ ಮತ್ತೆ ಬೀಜಪ್ರಸಾರ
ಜನನ ಮರಣಗಳ ನಡುವಿನ ಜಂಜಾಟದಲಿ
ಜೀವಿಗಳ ಸಾರ್ಥಕತೆ ಸೃಷ್ಟಿ ಸಹಜಕ್ರಿಯೆ
ಭೂತದಿಂದ ಬಿಡಿಸಿಕೊಂಡ ಭವಿಷ್ಯದತ್ತ ಪಯಣ
ಕಾಲಚಕ್ರದ ಪುನರಾವರ್ತನೆಗೆ ಪುನರ್ಜನ್ಮ ಸಾಕ್ಷಿ.

(ಅಪ್ರಕಟಿತ)

# ಕೌದಿ

- ಸರಸ್ವತಿ ಚಿಮ್ಮಲಗಿ

ಚಿಂದಿಗಳ ಹೊಂದಿಸಿದ ಬಣ್ಣ ಬಣ್ಣದ ಕೌದಿ
ಬಡಬಾಳಿಗೆ ಆಧಾರವಾದ ಬಂಗಾರದಂಥಾ ಕೌದಿ

ಹಳೆಬಟ್ಟೆಗಳ ಹೊಂದಿಸಿದ ಬಣ್ಣಬಣ್ಣದ ಕೌದಿ
ಬಿಸಿಲ ಶಾಖಕ್ಕೆ ತಂಪನೆರಚುವ ಪಗಡಿ ಹಚ್ಚಿದ ಕೌದಿ
ಬಾಳಗೋಳಿಗೆ ಬೆಚ್ಚನೆ ಕಾವು ಕೊಡುವುದು ಕೌದಿ
ತೇಪೆಗಳ ತಾರಾಲೋಕ ಧರೆಗಿಳಿದು ತಂದ ಕೌದಿ

ಕಣ್ಣುಮುಚ್ಚಿದರೆ ಸಾಕು ಒಂದರ ಹೊಂದೊಂದು ಕುಕ್ಕಿಕುಕ್ಕಿ
ಕನಸುಗಳ ಒಡೆದೊಡೆದು ಹೊರಬರುವ ಮರಿಹಕ್ಕಿ
ಹಸಿದ ಹೊಟ್ಟೆಗಾಗಿ ಬಡಕೊಳ್ಳುವ ಪುಟ್ಟ ರೆಕ್ಕೆ ಹಕ್ಕಿ
ಬಡತನದ ಗೋಳಿಗೆ, ಹಿಂಗದ ಹಸಿವೆಗೆ ಜೋಳಿಗೆಯಾದ ಕೌದಿ

ಕೌದಿ ತುಂಬೆಲ್ಲಾ ನನ್ನ ಅಣಕಿಸುವ ಆಧುನಿಕ ರೇಖಾಚಿತ್ರಗಳು
ಬಾಸಿಂಗ, ಹಕ್ಕಿಕಾಲು, ಬಾರಂಗಭಾವಿ ಚಿತ್ರ ಚಿತ್ತಾರದ ಕೌದಿ
ಉಳ್ಳವರಿಗೆ ಅರ್ಥವಾಗದು, ಅಧೋಲೋಕದ ಕಳವಳಕಾರಿ ಕೌದಿ
ಕಷ್ಟದ ಕರಿನೆರಳು, ಕಲ್ಲುಮುಳ್ಳಿನ ದಾರಿಯಲಿ ಜೊತೆಯಾಗಿ ಬಂದ ಕೌದಿ

ಹೊದ್ದವನಿಗೆ ತೋರುವುದು ಅದ್ಭುತ ಕನಕನ ಕಿಂಡಿ ಕೌದಿ
ಎಲ್ಲಿಯವರೆಗೆ ಸಾಗುವುದು ಬಲ್ಲವರಾರು ಬಡಬಾಳ ಬಂಡಿ
ಸೂರಿಲ್ಲದೆ ಬಳಲಿದ ಬಾಳಿಗೆ ಆಸರೆ ಕೊಂಡಿ ಕೌದಿ
ಭೋರೆಂಬೋಮಳೆಗೆ ಸೋರುವ ಗುಡಿಸಲಿಗೆ ಮಾಳಿಗೆಯಾದ ಕೌದಿ

ನಿಡುಸುಯ್ದು ನಿಟ್ಟುಸಿರಿಗೆ ತೇಪೆ ಕಳಚಿದ ಚಿಂದಿ ಕೌದಿ
ಟಿಬ್ಬಿ ಹರಿದು ಪುಟ್ಟ ತೂತುಗಳೆಲ್ಲ ಅಗಸಿ ಬಾಗಿಲಂತೆ ಬಾಯ್ದೆರೆದು
ಕಣ್ಣು ಕಾಣದ, ಹಣ್ಣ ಹಣ್ಣಾದ ಮೈಮನ ಬೆತ್ತಲಾಗಿಸಿತು ಹರಿದ ಕೌದಿ
ಸೋತು ಸತ್ತವರ ಮಣ್‌ತನಕೆ ಜಾಳಿಯಾಗುವುದು ಈ ಹಳೇ ಕೌದಿ.

ಕೃಪೆ: ನೋವಾಮಿ(೨೦೧೧)ಶಿವಗಂಗಾ ಪ್ರಕಾಶನ.

# ರೆಸ್ಕ್ಯೂ ಹೋಂ

- ಎಲ್. ಜಿ. ಸುಮಿತ್ರ

ಕಳೆಯಿಲ್ಲದ ಮುಖದ
ನೆಲೆಯಿಲ್ಲದೊಂದವಸ್ಥೆಯಲ್ಲಿರುವ
ಸರ್ಕಾರದ ದೊಡ್ಡಿಯ
ಈ ಮಹಿಳೆಯರ ದೂರ್ವಾಸ ಶಾಪಕ್ಕೆ ಪರಿಹಾರವಿಲ್ಲ.
ಈ ಆಸರೆಗೂ
ಬಯಸಿ ಬಂದಿದ್ದಲ್ಲ,
ಇದನಿವರು ನಂಬಿಯೂ ಇಲ್ಲ.
ಜನಜನಾರ್ಧನರ ಹೃದಯ ಹೀನತೆಗೆ
ಕನ್ನಡಿಯಿವರು.
ಬಯಸಿದ್ದು ಸಿಗದೆಂಬ ಅನುಭವಕೆ
ಅನಿವಾರ್ಯಗಳು ತಂದ ಸೋಲಿಗೆ
ಕಸುವಿರದ, ಕಳೆಯಿಲ್ಲದ ಮುಖದಲ್ಲಿ
ನಿರಾದರದ
ಬೇಸರದ
ಕಾಯ್ದಟ್ಟಿರುವ
ಏನೂ ಅಲ್ಲದ ವಿಚಿತ್ರ ನೆಲೆ,
ಯಾವುದನೂ ಬಯಸದ
ಅರಸದ
ಅಣಕಿಸದ
ಉನ್ಮಾದ,
ಯಾರದೋ ಯವ್ವನದ ಮದಗಳ ಹಿಂಗದ ಬಯಕೆಗಳ
ಆಕ್ರಮಣದಲಿ ಅರೆಕೊರೆಯ ಸ್ಪಂದನದ
ಯಾತನೆಯಲಿ
ಅರಳುಳಿಯಲಾಗದ ಚೇತನದ
ಭೋರ್ಗರೆವ ಚೈತನ್ಯದಲ್ಲಿ
ನರನಾಡಿಗಳ ದುರ್ದಮ್ಯ ತುಡಿತಗಳಲ್ಲಿ
ಎಲ್ಲಿ ಮೊದಲಿಟ್ಟಿತೋ ಇವರ ಕತೆ,
ಅನಂತ ಯಾತನೆಯ

ಬಿಂಬಗಳನ್ನು ಕಣ್ಣೆದುರಾಗಿಸುವ
ಈ ರೆಸ್ಕ್ಯೂ ಹೋಂಗಳಲ್ಲಿ
ಹೆಣ್ಣುತನವನ್ನೇ ಗಾಬರಿಗೊಳಿಸುತ್ತಾರೆ
ಮನಸು ಸತ್ತ ಈ ಹೆಣ್ಣುಗಳು, ಈ ಜೀವಿಗಳು,
ಯಾರ ಮಗಳೋ ಯಾರ ಹೆಂಡತಿಯೋ
ಯಾರ ತಾಯೋ ಈ ಲಲನೆಯರು
ಯಾರ ನರನಾಡಿಗಳ ಮಿಡಿದ
ಯಾರ ಅಸಿವಿನುಸಿರನು ತಣಿಸಿದ
ಯಾರು ಯಾರೋ ಗರತಿಯರ ಗಂಡಂದಿರ
ಅತೃಪ್ತ ಕಾಮನೆಗಳ ಅಗ್ನಿಗೆ ಅಹುತಿಯೋ
ಈ ಬಾಲೆಯರು ಈ ದಗ್ಧ ಯೌವ್ವನೆಯರು
ಎಂದು ನೆನೆಸಿದಾಗ
ನಾಭಿಯಲಿ ನಡುಕ ಹುಟ್ಟುತ್ತದೆ.
ಈ ಹೆಣ್ಣುಗಳು
ಈ ಸಂಜೆ
ಈ ರೆಸ್ಕ್ಯೂ ಹೋಮಿನಲ್ಲಿ
ನಿರ್ವಿಕಾರವಾಗಿ
ಸೋಲು ಸೋಲಾಗಿ
ಪ್ರಾರ್ಥನಾಗೀತ ಹಾಡುತ್ತಿರುವ ಈ ದೃಶ್ಯ
ಜೀವನದ ವ್ಯಂಗ್ಯಚಿತ್ರದಂತೆ ತೋರುತ್ತಿದೆ.

ಕೃಪೆ : ಸ್ಪರ್ಷ ರೇಖೆಗಳು (ಸಂ) ಇಂಚರ ಸಮುಚ್ಚಯ (ಪ್ರ) ೧೯೯೨

# ಯಶೋಧರಾ ಮಲಗಿರಲಿಲ್ಲ

- ಮಾಲತಿ ಪಟ್ಟಣಶೆಟ್ಟಿ

೧

ಚರಿತ್ರೆ ಸಾರಿ ಹೇಳುತ್ತಿದೆ
ಯಶೋಧರೆ ಮಲಗಿದ್ದಳೆಂದು,
ಇಲ್ಲ ಯಶೋಧರೆ ಮಲಗಿರಲಿಲ್ಲ,
ಸತ್ಯ ತಿರುಚುವ ಎಂಥಾ ಚರಿತ್ರೆಯಿದು!

೨.

ಹದಿಹರೆಯದ ಆ ದೇಹ,
ಅವಳ ಆ ಹೃದಯದರಮನೆಗೆ
ಬೆನ್ನು ತೋರಿದ್ದ ಸಿದ್ಧಾರ್ಥ!
ಹೊರಳಿಯೂ ನೋಡದಂತೆ
ಹೊರಟೇ ಬಿಟ್ಟಿದ್ದ ಕತ್ತಲು ಕಡೆದಿಟ್ಟ
ಪೂರ್ಣ ಚಂದ್ರನ ಬೆಳದಿಂಗಳನೂ
ಭೇದಿಸಿದ ಅಗ್ನಿ ಬಾಣದಂತೆ!

೩.

ಬರಿದಾದ ಹಾಸಿಗೆ,
ಕಂಪಿಸುವ ಅಂಗಾಂಗ
ಪ್ರೇಮದುಮ್ಮಳಕೆ
ಮೈದುಂಬಿಗೊಂಡಿತ್ತೊಂದು ಪಿಪಾಸೆ,
ಬೇಡಿತ್ತು ಅವಳ ಮನ
ತಪ್ಪೊಪ್ಪಿಗೆಗಾದರೂ ಒಂದೇ ಒಂದು
ಕೊನೆಯ ಬಿಗಿದಪ್ಪುಗೆಯ!

೪.

ಬಂಧನದ ಒಂದೊಂದು ಕೊಂಡಿ
ಕಳಚುತ್ತ ಹೊರಟೇ ಬಿಟ್ಟಿದ್ದನವ
ಕಳಚಿದ ಪಕ್ವ ಹಣ್ಣಿಂತೆ,
ನಡೆದ ನಿಶ್ಚಲದ ದಿಕ್ಕಿಗೆ.
ಉಳಿದಿತ್ತೇನು ಹದಿನಾರರ ಅವಳ ಬಾಳಿಗೆ?
ಮುರಿದು ಬಿದ್ದ ದಾಂಪತ್ಯವು

ರಾಕ್ಷಸ ನಗೆ ನಕ್ಕಿತ್ತು,
ಬಾಳ ಕನಸು ಚೂರು ಚೂರಾಗಿ
ಸಹನೆಯ ಕಟ್ಟೆಯೊಡದದ್ದಕ್ಕೆ,
ನಕ್ಷತ್ರ ಲೋಕವೇ ನಡುಗಿತ್ತು,
ಬೆಳುದಿಂಗಳು ಮಿಡುಕಾಡಿತ್ತು,
ಯಶೋಧರೆ ಮೂರ್ಛೆ ಹೋಗಿದ್ದಳು.

೫.

ಎಚ್ಚೆತ್ತಾಗ ಮಗ್ಗುಲಲ್ಲಿದ್ದ ರಾಹುಲ,
ಎದೆಗವುಚಿಕೊಂಡೆದ್ದ ಅವಳೀಗ ಸುಭದ್ರೆ,
ಮುಂಡಾಡಿದಳು ಬಾಲ ಭದ್ರನ,
ಮುತ್ತಿಕ್ಕಿದಳು ತಿಳಿಬೆಳಗ ಬಾಲ ರವಿಯ,
ತುಳಿಯುತ್ತಾ ಕಾಲ್ತೊಡಕಿದ ಕತ್ತಲೆಯನ್ನು

೬.

'ಅವನಿಗಿರಲಿ ಮಾನವೀಯ ಚಿಂತೆ
ನನಗಿರಲಿ ಸೃಷ್ಟಿಯ ಒಡಲು ಅಂತೆಯೇ
ತಾಯ್ತನವು ತೆರೆದಿಟ್ಟಿದೆ
ಜಗದಗಲದ ನೆಲ ಮುಗಿಲು'
ಎಂದು ಸಿದ್ಧವಾದಳು ಯಶೋಧರೆ
ಘೋರ ತಪಸ್ಸಿಗೆ
ಮಾತೆಯಾಗಲು, ಗುರುವಾಗಲು
ಬಾಳಿನ ಮಾಯೆಯಾಗಲು.

ಕೃಪೆ: ಬಾಳೆಂಬ ವ್ರತ (ಸಂ) ಸ್ನೇಹ ಪ್ರಕಾಶನ (ಪ್ರಕಾಶನ) ೧೯೪೮

❖

# ಎಲ್ಲೋ ಜೋಗಪ್ಪ

- ಬಿ. ಟಿ. ಲಲಿತಾ ನಾಯಕ್

ಆತ ಎಂದೂ ಎಣಿಸಿರಲಿಲ್ಲ
ತನ್ನೊಡಲಲ್ಲಿ ತಾವಿತ್ತು ಸಲುಹಿದ
ಮಹಾನಗರಿಗೇ ಸೋಂಕು ಬಡಿದೀತೆಂದು
ಕೆಟ್ಟು ಪಟ್ಟಣ ಸೇರಿದ್ದವನ ಬದುಕೀಗ
ಮೂರಾಬಟ್ಟೆಯಾಗಿತ್ತು
ಕೊಳಚೆಗೇರಿಗೆ ವಿದಾಯ ಹೇಳಿ
ತೌರು ನೆಲೆಗೆ ಮರಳಿದ್ದಾನೆ
ಮಡದಿ ಮಕ್ಕಳ ಕೂಡ
ನೇಗಿಲಯೋಗಿಯ ಕನಸ ಹೊತ್ತು
ಹಳ್ಳಿ ದಾರಿಯಲಿ ನಿಂತು ಸುತ್ತ ನೋಡುತ್ತಾನೆ
ಊರೆಂಬೊ ಊರ ಸುಳಿವಿಲ್ಲ
ತನ್ನವರಿಲ್ಲ ತನ್ನ ತಳಮನೆ ಇಲ್ಲ
ಅಲ್ಲಿ ರಾರಾಜಿಸುತಿದೆ ರಂಗುರಂಗಿನ
ವಿದೇಶಿ ಕಂಪನಿಗಳ ಭಾರಿ ಫಲಕ
ವಾಹನಗಳ ಸದ್ದು ಗದ್ದಲ
ಸೂಟು ಬೂಟಿಗರ ಸಡಗರ ಸಂಭ್ರಮ
ಸಂತತಿಯ ಬೇರಿಗೆ ಕೊಳ್ಳಿ ಇಕ್ಕಿದ್ದಾರೆ–
ತನ್ನ ಗೈರಿನಲ್ಲಿ
ಆತ ಸಿಡಿದೆದ್ದು ಚೀರಿದ–ಈ ನೆಲ ನನ್ನದು
ನನ್ನಪ್ಪ ಕಟ್ಟಿದ ಗಾರೆ ಗಚ್ಚಿನ ಗಟ್ಟಿಮನೆ
ಪಾಳುಗೆಡವಿದವರ್ಯಾರು
ನನ್ನಜ್ಜ ಉತ್ತು ಬಿತ್ತಿದ ನೆಲವಿದು
ಹಟ್ಟಿಯಲಿ ಬಣವೆ ಕೊಟ್ಟಿಗೆಯ ರಾಸು
ಮನೆತುಂಬ ಅಳಗ ಬಳಗ
ಇದು ನನ್ನೂರು ನನ್ನ ಕೇರಿ
ಕನಿಕರಿಸಿದ
ಕಾವಲುಗಾರ ಮೆಲ್ಲನುಸಿರಿದ
ನನ್ನೂರು ನಿನ್ನೂರು ಇನ್ನೇಸೋ ಹಳ್ಳಿಯೂರು

ಸಮಾಧಿಯಾಗಿವೆ ಇಲ್ಲಿ
ಕಾಸು ಕೊಸರಿಗೆ ಮಾರಾಟವಾದೆವೋ ನಾವು
ಗುಲಾಮರು ಉಸಿರೆತ್ತುವಂತಿಲ್ಲ
ಮನುಷ್ಯ ಕುಲವಲ್ಲ ಇದು
ಕೊರೋನಾಗಿಂತಲೂ ಬಲು ಭೀಕರ ಈ ಮಂದಿ
ನೀನಿನ್ನು ಹೊರಟುಬಿಡು ನಿಲ್ಲಬೇಡ ಇಲ್ಲಿ
ಆತ ಮತ್ತೂ ಜೋರಾಗಿ ಚೀರಿದ –
ಇಲ್ಲ ಇಲ್ಲ ನಾನಿಲ್ಲಿಂದ ಕದಲುವುದಿಲ್ಲ
ನಾವು ಗುಲಾಮರಲ್ಲ
ಇದು ನನ್ನ ಹಿರಿಯರ ಭೂಮಿ–ನನ್ನ ಭೂಮಿ
ನನ್ನ ಭೂಮಿ ನನ್ನ ಹಕ್ಕು
ಆಕ್ರಂದನ ಮೊಳಗುತ್ತಲೇ ಇತ್ತು
ಅತ್ತ ಕೊರೋನ ನಗುತ್ತಿತ್ತು...

(ಅಪ್ರಕಟಿತ)

# ಯಾವ ನಾಳೆಯೂ ನಮ್ಮದಲ್ಲ

- ಉಷಾ ಪಿ. ರೈ.

ಒಬ್ಬನಿದ್ದಾನೆ ನಮ್ಮನ್ನಾಳುವವ
ನಮ್ಮ ಕತ್ತಿಗೆ ದಾರಹಾಕಿ ಕುಣಿಸುವವ–
ಅಗೋಚರ, ಅನಾಮಿಕ.

ನಮಗೋ ಅರಿವಿಲ್ಲದ ಮರೆವು
ನಮ್ಮ ಜೀವನದ ಹರಿಕಾರರು ನಾವೇ
ಎನ್ನುವ ಕುರುಡು ಬಿಗುಮಾನ.

ಪ್ರತಿಯೊಂದು ಕ್ಷಣವೂ ಅವನದ್ದೇ
ಅವನೆಳೆದಂತೆ ನಮ್ಮ ಹೆಜ್ಜೆ;
ಅವನಿಚ್ಛಿಸಿದಂತೆ ನಮ್ಮ ಏಳು ಬೀಳು.

ಹೆಜ್ಜೆಗಳಲ್ಲಿ ಲಯವಿದ್ದಾಗ ಮೈಮರೆವು!
ಲಯತಪ್ಪಿದಾಗ ಆತಂಕ ನೋವು–
ಬಿರುಕು ಬಿಡುವ ಸಂಬಂಧಗಳು
ಮನದೊಳಗೆ ದಾವಾನಲ.

ಅನಿರೀಕ್ಷಿತ ಅಪಘಾತಗಳು–
ಕಳಚಿಕೊಳ್ಳುವ ಸಂದುಗಳು,
ನುಚ್ಚು ನೂರಾಗುವ ದೇಹ, ಮನಸ್ಸು
ಅಸಾಧ್ಯ ನೋವು, ಯಮದರ್ಶನ
ಅವನ ದ್ವೇಶಿಸುವಷ್ಟು ಅಸಹಾಯಕತೆ.

ಬಿರುಕುಗಳಿಗೆ ಪತ್ತೆಹಾಕಿ,
ಕಳಚಿಕೊಂಡ ಸಂದುಗಳ
ಬೋಲ್ಟು ನಟ್ಟು ರಾಡು ಹಾಕಿ ಜೋಡಿಸಿ,
ನೋವು ನುಂಗಿ ಎಲ್ಲ ಮರೆತು

ಕಾಲದ ಜೊತೆಗೆ ಹೆಜ್ಜೆ ಹಾಕುತ್ತಾ
ನಾಳೆಯಾದರೂ ನಮ್ಮದೆನ್ನುವ
ಕನಸಲ್ಲಿ ಬದುಕುವಾಸೆ!

ಆಸೆಯ ಪರದೆಯಾಚೆಗಿನದೆಲ್ಲ ಕತ್ತಲೆ!
ಇದುವೆ ಜೀವನ
ಎಲ್ಲರೂ ಸೂತ್ರದ ಗೊಂಬೆಗಳು
ಅವನು ಆಡಿಸಿದಷ್ಟು ದಿನ
ಕುಣಿಯುತ್ತ ಕುಂಟುತ್ತ ಬದುಕು.

ಅವನ ತಾಳಕ್ಕೆ ನಮ್ಮ ಕುಣಿತ ಸೇರುವಾಗ
ಯಾವ ನಾಳೆಯೂ ನಮ್ಮದಲ್ಲ
ಎಲ್ಲ ನಾಳೆಗಳೂ ಅವನದ್ದೇ.

ಅವನೊಡ್ಡುವ ಸವಾಲುಗಳ
ಎದುರಿಸುತ್ತಾ ಬದುಕುವ
ಆತ್ಮವಿಶ್ವಾಸ ಮಾತ್ರ ನಮ್ಮದೇ!

**ಕೃಪೆ:** ಪಾರಿಜಾತ ಸಮಗ್ರ ಕಾವ್ಯ, ಪ್ರಿಯದರ್ಶಿನಿ ಪ್ರಕಾಶನ ೨೦೧೮

❖

# ದೇವೀ ಮಹಾತ್ಮೆ

- ಲಲಿತಾ ಸಿದ್ಧಬಸವಯ್ಯ

ಏನು ಬೇಕಾದರೂ ನುಂಗಿಕೊಂಡಾಳು ಹೆಂಡತಿಯೆಂಬುವಳು
ತೀರಾ ನಡೆಯಲ್ಲ ಎನ್ನುವಾಗ ಅತಿರಂಭೆಯಂಥಾ ಸವತಿಯನ್ನೂ

ಆದರೀ ಹೆಬ್ಬುಬ್ಬೆಗೆ ಬಿದ್ದ ಗಂಡ
ಎದ್ದಾಗಿನಿಂದ ಊರದನ ಕಾದು ತಾರಮ್ಮಯ್ಯನಾಡುತ್ತ ಬಂದರೆ ಬೈಗಿಗೆ
ದಿಣ್ಣೆ ಮೆಣಸಿನಕಾಯಿ ನುಣ್ಣಗೆ ರುಬ್ಬಿ ನೆತ್ತಿಗೆ ಮೆತ್ತಿಕೊಂಡಂಗೆ
ಉಂಗುಷ್ಠದ ಸಂದಿಯಿಂದ ಬ್ರಹ್ಮರಂಧ್ರದ ತನಕ ಉರಿ
ನಿಂತ ನಿಲುವಿಗೆ ಸೀಮೆಯೆಣ್ಣೆ ಸುರಿದು
ಒಂದೋ ಗೀರಿಕ್ಕಬೇಕು ಈ ಸೂರಾಧಿಸೂರನಿಗೆ
ಇಲ್ಲ ಗೀರಿಕ್ಕಿಕೊಳ್ಳಬೇಕು ತನಗೇ

ಅಷ್ಟಲ್ಲದೆ ಹಾರಿಕೊಂಡಳೆ ಆ ಹುಡುಗಿ ಅಗ್ನಿಗೊಂಡಕ್ಕೆ
ಅಪ್ಪ ಕರೆಯಲಿಲ್ಲ ಅಮ್ಮ ಇಳುಹಲಿಲ್ಲವೆಂಬುದೆಲ್ಲ ಸುಮ್ಮನೆ
ಕೇರಿಯ ಬಾಯ್ತುರಿಕೆಗೆ; ದೇವರಹಸ್ಯ ಸೋಸಿದವರಿಲ್ಲ
ಮೇಲೆನಿಸಿತ್ತೇನೋ ಮರ್ಯದಸ್ಥೆಗೆ ಗಂಡನೆಂಬ ಒಳಜ್ವರಕ್ಕಿಂತ
ಒಂದೇಟಿಗೆ ಬೂದಿಗುಟ್ಟಿಸುವ ಕೆಂಡ

ಊರವರಿಗೆಲ್ಲಾ ಬೇಡಾದದ್ದು ಇವನ ಹ್ಞೆ ಹ್ಞೆ ಹ್ಞೆ ಗೆ
ಬುದ ಬುದ ಗರಳವುಕ್ಕಿದರೆ ತಂದಿಳುಹಿರಿ ಇವನ ಗಂಟಲಿಗೆ
ಕೀಕಾರಣ್ಯದಲ್ಲಿ ಕೆಂಡ ಚುಟುಗುಟ್ಟಿದರೂ ಅದಿವನ ಮುಂಗಣ್ಣಿಗೆ
ಯಾವನೊ ಹಲ್ಲಂಡೆ ಊರಕೆರೆ ತೂಬೆತ್ತಿದರೆ ಇವನೆ ಆಗಬೇಕು
ಮಂಡೆಗೆದರಿಕೊಂಡು ಆತುಗೊಳ್ಳಕ್ಕೆ, ಕುಳವಿಳಿಯದ ಮಂಜುಗಡ್ಡೆ
ನೊಗವೆಳೆಯದ ಗೂಳಿ ಮುಫತ್ತು ಮನೆ ಬಾಗಿಲಿಗೇ
ಶುಭಕ್ಕೆ ಶೋಭನಕ್ಕೆ ಇವರ ಮನೆ ಮರೆತು ಜಾಣತನವಾಗಿ
ಸತ್ತ ಮನೆಗೆ ಸರುಹೊತ್ತಾದರೂ ಸರಿ, ಬಾ ಹೆಣ ಎತ್ತು
ನಾಲ್ಕೊಳ್ಳೆಯ ಮಾತಾಡಿ ತಲೆನೀವಿದರೆ ಉಟ್ಟ ಪಂಚೆ ಸುಲಕೊಟ್ಟು
ಕಟ್ಟಿಕೊಂಡ ಹೆಂಡತಿಯನ್ನೂ ತ್ಯಾಗಹಾಕು

ಪಾಪ, ಅದೆಷ್ಟು ಕುದ್ದಳೋ ಒಳಗೊಳಗೆ ಗೌರಮ್ಮ
ನೆಟ್ಟಗೆ ಹೋಗಿ ಹುಟ್ಟಿದಮನೆ ಒಲೆಗೆ ಸಮಿಧೆಯಾಗಿಬಿಟ್ಟಳು
ಏನೋ ದೇವನಾಗರಿಯಲ್ಲಿರುವುದರಿಂದ ದೇವಿ ಮಹಾತ್ಮೆಯೆಂಬ ದೊಡ್ಡ ಹೆಸರು

–೨–

ಈ ಹೆಬ್ಬುಬ್ಬಯ್ಯನಿಗೆ ಬೇಕಾಗಿದ್ದೂ ಅದೆ
ಎಲ್ಲ ಭಂಗೀಮಾಮ ಊರೂರ ಮೇಲೆ
ಜೊತೆಗಿತ್ತಲ್ಲ ಕರದ ಕಪ್ಪರ, ಚಪ್ಪನ್ನೈವತ್ತಾರು ದೇಶದ ಜಾಗೀರು
ಹೆಂಡತಿ ಶವದ ಮುಂದೆರಡುದಿನ ಜಂಘೆ ಝಣಗುಟ್ಟಿಸಿಕೊಂಡು ನಾಂಟ್ಯ
ಮಾಡಿದ ಅಣ್ಣೊಂಟಿಗಾರನಿಗೆ ಹಾಲು ತುಪ್ಪಕ್ಕಿರದಷ್ಟು ಅವಸರ
ಕ್ರಿಯಾಸಮಾಧಿ ಮೇಲೊಂದು ತುಂಬೆಗಿಡವೂರಲೂ ಮೈಭಾರ

ಇತ್ತ ಊರಿಗೂರೇ ಮುಲುಕಿತು
ಆಹಾ, ಕಳೆದುಹೋಯಿತು ಐನಾತಿ ಇಸುಮು
ಪುಗಸಟ್ಟೆಗೆ ಬಸಿರಾಗಲು ಕೈಯಿೀಚೆಗಿತ್ತು ತ್ಚು ತ್ಚು ತ್ಚು
ನಡುಮದ್ದ್ಯಾನ ಲಾಂಟೀನು ಹೊತ್ತಿಸಿಕೊಂಡು ತಲಾಷು ಮಾಡಿ
ಅಯ್ಯನ ತಲೆಗೇರಿದ್ದ ತಪಸ್ಸಿನ ಉಷ್ಣವಿಲಾಜು ಮಾಡಿ
ಕಟ್ಟಿದರು ನಿಸ್ಸೀಮನಿಗೆ ಎರಡನೆ ಕುಟುಂಬ
ಅವಳೇ ಮಾರಮ್ಮ
ಅವಳೇ ಮಾರಮ್ಮ

–೩–

ನೀವು ಶಕ್ತಿಯೆನ್ನಿ ಗಿಕ್ತಿಯೆನ್ನಿ
ಕಣ್ಣು ಮೂಗಿಗೊಂದೊಂದು ನಾಮ ಚೂಡಾಮಣಿ ರಚಿಸಿ
ನಮಗವಳು ಅಚ್ಚಗನ್ನಡದಲ್ಲಿ ಊರಮಾರಮ್ಮ
ಊರಮಾರಮ್ಮ

ಉಂಡು ತೇಗಿದ್ದೆ ಘರ್ಜನೆ ಹೊದ್ದು ಮಲಗಿದ್ದೆ ರಾಜ್ಯಭಾರ
ವೆಂದುಕೊಂಡಿದ್ದ ಹುಲಿರಾಯನ ಕುಂಡೆಗೆ ಬರೆಕಾಸಿದವಳು
ಹೆಬ್ಬುಟ್ಟೆ ಗಂಡೇಶ್ವರನನು ನುಣ್ಣಗೆ ಮಿದ್ದು ಹುದ್ದೆಗೆ ಗದುಮಿದವಳು
ಕದಲಿದ್ದ ಜಂತೆ ಕೈಯಾಡಿ ತೂತುಮಾಳಿಗೆಗೆ ಅತ್ತ ಮೆತ್ತಿದವಳು
ಕೊಂಡಾಡದೆ ಹೊಟ್ಟೆಮಕ್ಕಳ ದಿಡ್ಡಿಬಾಗಿಲಿಗೆ ಕೆಂಗಣ್ಣಿಟ್ಟು ಕಾದವಳು
ಮುಖಕ್ಕೆ ಸೆರಗಿಕ್ಕಿ ಸಿಂಬಳಹುಳ ಬುಸುಗುಟ್ಟಿಸುವ ಶಿರೋಮಣಿ
ಪಟ್ಟ ಖಿದ್ದು ವಾರಗೆ ಮಡಗಿ ಕೆಮ್ಮಣ್ಣಿನಖಾಡಕ್ಕೆ ಸಿಗ್ಗಿಲ್ಲದಿಳಿದವಳು

–೪–

ಇವಳೆ ಮಾರಮ್ಮ
ಇವಳೆ ಮಾರಮ್ಮ
ಎಲ್ಲೆಲ್ಲಿ ಗಂಡು ತಾರಾತಿಗಡಿ
ಅಲ್ಲೆಲ್ಲ ಹೆಣ್ಣು ಊರಮಾರಮ್ಮ

ಢಕ್ಕುಣಕುಣ ಕುಣಕುಣ ಢಕ್ಕುಣಕುಣ ಕುಣಕುಣ
ಉರ‍್ರ ಉರ‍್ರ ಉರ‍್ರ ಉರ‍್ರ ಉರ‍್ರ ಉರ‍್ರ ಉರ‍್ರ ಉರ‍್ರ ಉರ‍್ರ

**ಕೃಪೆ:** ದಾರಿನೆಂಟ (ಸಂ) ದೇವೀ ಮಹಾತ್ಮೆ ೨೦೦೯ ಚಿನ್ಮಯೀ ಪ್ರಕಾಶನ

❖

# ತಂದೆ ಮನೆ ಕಿಟಕಿ

- ವೈದೇಹಿ

ಈ
ಸಣ್ಣ ಕಿಟಕಿ ಯಾವ
ಪುರಾತನದ್ದೋ
ಮಣ್ಣ ಗೋಡೆಯ ಬಿಡದೆ
ಇನ್ನೂ ನಿಂತಿರುವುದು!

ಪಡಸಾಲೆ ಹೊರವೊಳಗೆ ಜಾಲಂದ್ರ ನೇತ್ರದಲಿ
ತನ್ನ ಮೂಲಕ ಚರಾಚರ ಚೂರು ಕಾಣಿಸುತ
ಪೂರ್ಣ ಹೇಗಿದೆ ಹೇಳು ಜಾಣೆ ಎನ್ನುವುದು!

ತುಣುಕು ಆಗಸದಲ್ಲಿ ಮೂರು ತಾರೆಯ ತೋರಿ
ಒಟ್ಟು ಸಂಖ್ಯೆಯ ಗೋಳ ಒಡಪಿಡಿವುದು

ರೆಂಬೆ ಟಿಸಿಲಿನ ಅಂಕುಡೊಂಕನ್ನಷ್ಟೇ ಗ್ರಹಿಸಿ
ಇಡೀ ಮರದ ಲೆಕ್ಕ ಒಪ್ಪಿಸೆನ್ನುವುದು

ಚಂದ್ರನಲ್ಲಿಗೆ ಮೊಲದ ದಾರಿ ಕೇಳುವುದು
ಬಿಸಿಲ ಕೋಲಲಿ ಸೂರ್ಯ ದೂರ ಅಳೆಯೆನ್ನುವುದು

ಮನೆಯ ಗಂಡಸರೆಲ್ಲ ಕಂಡೂ ಕಾಣದ ಕಿಟಕಿ
ಎಲ್ಲ ಮಕ್ಕಳನೆತ್ತಿ ಆಘ್ರಾಣಿಸಿದ ಕಿಟಕಿ
ಚಿಕ್ಕ ತಾಯಿಯ ಕಿಟಕಿ ಪುಟ್ಟತ್ತೆ ಕಿಟಕಿ
ಬೆಕ್ಕು ಬೈಠಕ್ಕಿಗೂ ತಕ್ಕ ಕಿಟಕಿ
ಮುತ್ತು ಮನಸಿನ ಸುಪ್ತಬಲ್ಲ ಕಿಟಕಿ
ಕನಸುಗಾತಿಯ ಕ್ರೋಶ ಟೀಚರ್ತಿ ಕಿಟಕಿ

ದೊಡ್ಡಮ್ಮನೂ ಜಾನಿಸುತ ನಿಂತು ಹಣಿಕಿದ ಕಿಟಕಿ
ಅಜ್ಜಿ ಸೂಜಿಗೆ ಬಾಲ ಜೋಡಿಸಿದ ಕಿಟಕಿ
ಸುಣ್ಣ ಬಣ್ಣಕ್ಕೆಲ್ಲಾ ಸಾಕ್ಷಿಯಾಗಿಸಿಯೂ ಸಾ
ಹೊಲಿದ ತುಟಿಗಳ ಸಣ್ಣ ಮರದ ಕಿಟಕಿ

ಹೊನ್ನ ಮನೆಗಳಲೂ ಭಿನ್ನವಿರದು
ಮುಪ್ಪಾದರೂ ಸತಾ ಜಪ್ಪಯ್ಯ ಎನದು
ತವರು ಮನೆಯನ್ನೂ ಮರೆತುಕೊಂಡು
ಮನೆಯವರಿಗಿಂತಲೂ ಮನೆಯದಾಗಿ
ಇಲ್ಲದಂತೆ ಸದಾ ಇರುವುದು!

ಅಲ್ಲಿಂದ ಹೊರಬರುವ ಪ್ರತಿಮೆಗಳ ಮನದಲ್ಲಿ
ಒಂದೊಂದು ಮನೆಯ ಮಾಡಿ
ಹೋದಲ್ಲಿ ವರೆಗೂ ಜೊತೆಗೇ ನೆಲೆಸುವುದು
ಮುಖ ಬಾಡಿದಾಗೆಲ್ಲ ಗೆಲ ಕರೆದು ಕುಳ್ಳಿರಿಸಿ
ತನ್ನ ಮೂಲಕ ಚಲನಚಿತ್ರ ತೋರುವುದು!

*

ಇಂದು ಸಹ ಕಿಟಕಿಯಲಿ ನಿಂತು ನೋಡಿದಳಾಕೆ
ಕಂಡದ್ದು ಅಷ್ಟೇ – ಬ್ರಹ್ಮಾಂಡ ತುಣುಕು!
ಮರದ ಜಂಘಿನ ಮೇಲೆ ಗೂಡಿನುಯ್ಯಾಲೆ
ಅಳಿಲು ಚುರುಕೊಂದು ಕೆಳಗೆ ಮೇಲೆ

ಗೂಡುಗಳು ಅರೆ ಅರೇ! ಇರುವವೇ ಹಾಗಾದರೆ!
ಪುಣ್ಯ! ಉಳಿದಿದೆ ಅಳಿಲು ಪುರಾಣ ಕಥೆಗೆ
ಓ! ಕಾಳಿದಾಸನ ಮುಗಿಲ ಮುಗಿಲ ಮರಿ ಮುಗಿಲು!
ಏನಂತೆ ಅವನ ಒಸಗೆ?
......... ಆಲಿಸುತ ಕಿಟಕಿಗೆ
ಕಣ್ಣಲ್ಲೆ ನಗೆ

*

ಆಪ್ತ ಬಂಧುವೀ
ತಂದೆ ಮನೆ ಕಿಟಕಿ
ಅಂಚಿನಲಿ ಕುಳ್ಳಿರಿಸಿ ತಲೆಬಾಚಿದಳು ಅಮ್ಮ
ಕಣ್ಣಂಚೊಂದು ನೆನೆಯುತಿಹುದು
..........

*

**ಕೃಪೆ:** ಪಾರಿಜಾತ (೧೯೯೯) ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

# ಮಲಗು ಬಾ

- ಉತ್ತನೂರು ರಾಜಮ್ಮ ವಿ. ಶೆಟ್ಟಿ

ಬೇಸಿಗೆಯ ಬಿಸಿ ಬೆವರ ನೀರನ್ನು
ಮೈಯ್ಯಲ್ಲಿ ಬಳಬಳನೆ ಸೋರುತ್ತ ನಿಂತ
ದುಂಡು ಕೆನ್ನೆಯ ತುಂಬು ಬಸಿರ ಹೆಣ್ಣೆ
ಬಾ ಬಳಿಗೆ ಕೂರಿಲ್ಲಿ ವಿರಮಿಸಿಕೋ ತಂಪಾಗಿ
ಕೆರೆಯ ಒಡ್ಡಿನ ಕಾನೆ ಪೈರ ಸೆರಗನು ಹಾಸಿ
ತೂಗಿ ಕರೆಯುತಿದೆ ತನ್ನ ತೆಕ್ಕೆಯ ದಿಂಡಿಗೆ

ನೋವುಗಳೇನೋ ಒಲವುಗಳೇನೋ ಮಾಗಿಸಿ
ಹೆರಬೇಕು ನೀನು ತುಂಬಿಕೋ ತಂಗಾಳಿ
ಕಣ್ತುಂಬ ಹಸಿರ ನೋಟ ದಿಟ್ಟಿಸಿಕೊಂಡು
ದೂರದಂಚಿನ ಚಿಗುರ ತೋಪು
ಒಡಲೆಲ್ಲ ಸಡಿಲಾಗಿ ಕೊಕ್ಕರೆಯ ತೋರಣ

ಅಳುಕೊಳಗೆ ಬಿಳಚಿಕೊಂಡ
ಕಣ್ಣ ಪಾಪೆಗಳನ್ನು ಹಿಗ್ಗಲಿಸಿನೋಡು
ತಂಪು ಸುರಿಯುವ ಕಪ್ಪು ಮೋಡದ ಹೊಂಡ
ಬವಳದೇ ಬೆದರದೇ ಹೀರಿಕೋ ಹಿತನೋಟ
ದಿಕ್ಕು ಮುಕ್ಕಿಸುವ ಸುಂಟರನ ಒಡಸು ಗಾಳಿ ಇಲ್ಲಿಲ್ಲ
ಕನಸ ಕಂಗಳ ಮುಚ್ಚಿ ಮುಗಿಲ ಆಲಿಂಗನದಲ್ಲಿ
ನಚ್ಚಗೆಯ ಮುಲುಗೊಳಗೆ ಬೆಚ್ಚಗೆ ಮಲಗು ಬಾ.

ಕೃಪೆ: ಅಕ್ಷರ ಹೊಸಕಾವ್ಯ (ಸಂಗ್ರಹ) ಲಂಕೇಶ ಪ್ರಕಾಶನ ೧೯೯೩

# ಅಮೀಬ

- ವಿಜಯ ಸುಬ್ಬರಾಜ್

ರಾತ್ರಿ ಹಗಲುಗಳೆಷ್ಟೋ
ಬೆನ್ನ ಹಿಂದೆ ಭೂಗತವಾದಾಗ
ಎದ್ದು ನೋಡುತ್ತೇನೆ
ಹಂದರದ ಆಧಾರ ಕಳೆದ ನಾನು
–ಅಮೀಬ

ನನ್ನ ಅಮೀಬತನಕ್ಕೆ
ನಾನೆಷ್ಟೋ ಖುಷಿಪಟ್ಟು
ಕಾಮಾಂಗಿಯಾಗಿ
ಪ್ರಪಂಚದ ಪ್ರಶ್ನೆಗಳಷ್ಟಕ್ಕೂ
ನನ್ನೆದೆಯ ಮಿಡಿದೆ.
ನನ್ನದೆಲ್ಲವ ನುಡಿದೆ
ಹಮ್ಮು ಬಿಮ್ಮುಗಳಿಲ್ಲದ
– ಗಾಂಧಾರಿಗಿಂತಲೂ
– ಮೀರಿದ
ಅಕ್ಷಯ ಶ್ರೀಮಾತೆ ನಾನು!!
'ಭಾರತ' ಕಲಹಗಳ ಹುಟ್ಟು ಹಾಕಿದ
ದುಷ್ಟ ದುರ್ಯೋಧನನಿಗಾಗಿ
ಹುಟ್ಟಿದನೊಬ್ಬನೇ ಕೃಷ್ಣ
'ಒಳ'ಗಿಲ್ಲದ ನನ್ನೊಳಗಿನ ಬಯಕೆ
ಬಳ್ಳಿ ಚಿಗುರೊಡೆದರೆ ಸಾಕು
ಕೋಟಿ ಕೃಷ್ಣರಾದರೂ
ಕೌರವರಾದರೂ
ಜಗಜಗಿಸಿ ಅರಳಿ ತೊನೆಯುತ್ತಾರೆ
ಒಮ್ಮೆ ಹೀಗೆ ಒಮ್ಮೆ ಹಾಗೆ
ಸೊಗವ–ನುಟ್ಟು
ಮೊಗವ ತೊಟ್ಟು
ಬುದ್ಧಿ ಬಲೆಗೆ ಸಿಲುಕದುಳಿದು

'ಕಾಪರೂಪಿ' ಕನಸನೇ
ನನಸುಗೊಳಿಸುವೆ
ನಾನೆ ಗಂಡು
ನಾನೇ ಹೆಣ್ಣು
ನನ್ನೊಳಗೇ ಗಂಡು ಹೆಣ್ಣು
ನಾನು ದ್ವೈತ
ನಾನದ್ವೈತ
ದ್ವೈತಾದ್ವೈತದ ವಾದಾಮೋದಕೆ
ನಾನೇ ದರ್ಶನವು
ದಿವ್ಯ–ದರ್ಶನವು

**ಕೃಪೆ:** ಮಾತು ಮೌನಗಳ ನಡುವೆ (ಸಮಗ್ರ ಕಾವ್ಯ) ಕಾಲ ಪ್ರಕಾಶನ ೨೦೧೪

❖

# ಆಲದ ನೆರಳು

- ಆರ್. ನಿರ್ಮಲಾ

ಹರಡಿ ನಿಂತ ಆಲದ ಮರ
ವಿಶಾಲ ವಿಸ್ತಾರ ಬಾಹು
ಎಲೆ ದಟ್ಟ ಹಸಿರು

ಟೊಂಗೆ ಟೊಂಗೆ ಹಕ್ಕಿಗೂಡು
ಕಾಗೆ ಗುಬ್ಬಿ ಪಾರಿವಾಳ ಮೈನಾ
ಕಿವಿ ತುಂಬ ಚಿಲಿಮಿಲಿ

ಸುತ್ತ ವರ್ತುಲ ವರ್ತುಲ
ಎಲೆ ಬಲೆ ಚಿತ್ತಾರ ನೆರಳು
ನೆಲದತ್ತ ಬೇರು ಬಿಳಲು

ಗಿಜಿಗುಟ್ಟಿ ಇರುವೆ ಕ್ರಿಮಿಕೀಟ
ಬೇರಿಂದ ತುದಿವರೆಗೂ ದುಡಿತ
ಜೀವ ಸಂಚಾರ

ಚಂದ್ರ ಚುಕ್ಕಿ ರಾತ್ರಿ ಕಿರಣ
ಸುರಿವ ಮಳೆಗೆ ನೆನೆ ನೆನೆದು
ಗಟ್ಟಿಗೊಂಡ ಕಾಂಡ

ಬಿಸಿಲ ಬೇಗೆಗೆ ಚಾಚಿದ ರೆಂಬೆ
ಅಲ್ಲಲ್ಲಿ ಟೊಳ್ಳು ಕ್ರಿಮಿ ಕೊರೆತ
ಬಿರುಗಾಳಿಗೂ ಆಹ್ವಾನ

ನನ್ನವನು ನನಗೆ ದೊಡ್ಡ ಆಲದಮರ
ಬಿಳುಲು ಬೇರು ಬದುಕು
ನೆಮ್ಮದಿಯ ಜೀಕು

ಆಲದ ತಂಪ ಉಸಿರಾಡುತ್ತ
ಆಗೀಗ ತಡಕುತ್ತೇನೆ
ಅಡಗಿದೆ ಇಲ್ಲೆಲ್ಲೊ ನನ್ನ ನೆರಳು

ಉರಿವ ಸೂರ್ಯನಿಗೆ ಬೆನ್ನಾಗಿ
ನೆಳಲ ಉದ್ದ ಅಳೆವ ಬಯಕೆ
ನನ್ನತನದ ನೀರಡಿಕೆ

ತಳಮಳ, ನನಗೆ
ಆಲದ ನೆರಳಲ್ಲಿ
ಆಕಾಶದ ಸೂರ್ಯ ಬೇಕು.

**ಕೃಪೆ:** ಉರಿವ ಒಲೆಗಳ ಮುಂದೆ(೨೦೦೬) ಲೋಹಿಯಾ ಪ್ರಕಾಶನ, ಬಳ್ಳಾರಿ

# ಬುದ್ಧ ಪೂರ್ಣಿಮೆ

- ನಳಿನಿ ಮಯ್ಯ

ಜಗವೆಲ್ಲ ಮಲಗಿರಲು ಅವನೊಬ್ಬನೆದ್ದ
ಎದ್ದು ನಡೆದೇ ಬಿಟ್ಟ ಪಕ್ಕ ಮಲಗಿದ
ಮಡದಿ ಮಗುವನು ತೊರೆದು!
ಬುದ್ಧನಾಗಬೇಕಿತ್ತು ಅವನಿಗೆ
ಸಿದ್ಧನಾಗಬೇಕಿತ್ತು, ಗೆದ್ದವನಾಗಬೇಕಿತ್ತು.
ಬುದ್ಧ ಪೂರ್ಣಿಮೆಯಂದು ಕಳಚಿ ಬಂಧನವೆಲ್ಲ
ಭವ ಸಾಗರವದಾಟಿಸುವ ಅಂಬಿಗನಾದ
ಸಂಸಾರಸಾಗರವ ದಾಟಿಸದೆ ನಡುನೀರಿನಲ್ಲಿ
ಮಡದಿ ಮಕ್ಕಳ ಕೈಬಿಟ್ಟರೇನಂತೆ!
ಪೂಜಿಸುತ್ತಿಲ್ಲವೆ ಜಗ ತಾನು ಅರಮನೆಯಲ್ಲಿದ್ದು
ಮಡದಿಯ ಕಾಡಿಗಟ್ಟಿದ ರಾಮನ!
ಪೂಜಿಸುತ್ತಿದೆ ಜಗ ಅರಮನೆಯಲ್ಲಿ ಮಡದಿ ಮಗುವ ಬಿಟ್ಟು
ತಾನು ಕಾಡಿಗೆ ನಡೆದ ಬುದ್ಧನ

ಮಾಡಬಲ್ಲಳೆ ಹೆಣ್ಣು ತಾನು ಹಾಗೆ?
ಬುದ್ಧಪೂರ್ಣಿಮೆಯಲ್ಲ ಅವಳದ್ದು
ಬದ್ಧ ಪೂರ್ಣಿಮೆ
ಬದ್ಧತೆಯೇ ಹೆಣ್ತನದ ಜೀವಾಳ
ಬದ್ಧಳು ಅಳುವಕಂದನ ಹಸಿವೆ ತಣಿಸಲು
ಬದ್ಧಳು ಕಾಲ ಕಾಲಕ್ಕೆ ಬೇಕುಬೇಕಾದ
ಅವಶ್ಯಕತೆಗಳ ಪೂರೈಸಲು
ಬುದ್ಧ ಪೂರ್ಣಿಮೆಯತ್ತ ನೋಟ ನೆಟ್ಟ ಜಗ
ಬದ್ಧ ಪೂರ್ಣಿಮೆಯ ಮರೆತೇ ಬಿಟ್ಟರು.
'ಚಿಂತಿಲ್ಲ' ಎಂದಳು ಹೆಣ್ಣು
ಸೇವೆಯಲ್ಲುಂಟು ಸಾರ್ಥಕತೆ
ಸಂದ ಅಭಿನಂದನೆಯಲ್ಲಲ್ಲ
ಬಂದ ಮನ್ನಣೆಯಲ್ಲಲ್ಲ!

ಯುಗಯುಗಗಳಿಂದ ಸಾಗುತ್ತಲೇ ಇದೆ ಬದ್ಧ ಪೂರ್ಣಿಮೆ
ನಿಲ್ಲಬಹುದು ಹೇಗೆ?
ನಿಂತರೆ ಉಸಿರು ಕಟ್ಟಿ ಸತ್ತೀತು ಇಡೀ ಪ್ರಪಂಚ

(ಅಪ್ರಕಟಿತ)

# ಸಂಸಾರ

- ಚ. ಸರ್ವಮಂಗಳ

ಮೀಸೆ ಹೊತ್ತವ ಬಾಗಿದರೇನು ಚಂದ ಮಗಳೇ?
ಹೆರಳ ತುಂಬಾ ಮಲ್ಲಿಗೆ ಮುಡಿದು ಬಾಗಿದ ಮುಡಿ
ಎಷ್ಟು ಸೊಗಸು ನನ್ನ ಕೂಸೆ?
ಮೊಗ್ಗಿನ ಜಡೆ ಹೆಣಿದು ಲಟಲಟ ನೆಟ್ಟಿಗೆ ಮುರಿದು
ದಿಟ್ಟಿ ನೀವಾಳಿಸುತ್ತಾ ಅಂದಳು ಅಜ್ಜಿ ಬೊಚ್ಚು ಬಾಯಲಿ
ಹಾಗೆ ಮುಂದೆ ನಿಲುಗನ್ನಡಿ; ಸಾಲಂಕೃತೆ ನಾನು ಅದರೊಳಗೆ
ನಾಚಿ ನಕ್ಕೆ ಅಜ್ಜಿ ಆಡಿದ ಮಾತಿಗೆ

ಏಳದೆ ನಾನು ನೀನೇನು ಕಡೀತೀಯ ಹಗ್ಗ?
ಕಟ್ಟೆ ಸುತ್ತಿದರೇನು? ದಂಡ ತೆತ್ತರೇನು? ಹೊರಟರೂ
ಯಾತ್ರೆ ದಂಡ ಅಲ್ಲವೇನೆ ಸೊಬಗಿ? ಮಿಟುಕಿಸಿ
ಕಣ್ಣು ಬಳಸುತ್ತ ನನ್ನ ಅಂದನು ಅವನು ಲಕ್ಷವರಹದ
ಸೀಮೆ ಗೆದ್ದ ಗತ್ತಿನಲ್ಲಿ. ಕೊಂಬೆ ಕೊಂಬೆಗೂ ಬೆಳ್ಳಗೆ
ಹೂತ ದೇವಕಣಿಗಲೆಯ ಮರವಾಗಿ ನಕ್ಕೆ ನಾನು ಬಾಗಿ.

ಅಕಾರಣ ಬಾಗುತ್ತಿದ್ದ ಬೋಳೆತನ; ಎದುರುತ್ತರ ಇಲ್ಲದೆ
ಬೀಗುತ್ತಿದ್ದ ಗತ್ತು; ಜಂಬದ ಅಂಚು ಮುಟ್ಟಿದ ಹುಂಬತನ
ಚಡಪಡಿಕೆ; ಒಬ್ಬರಿಗೊಬ್ಬರು ಸುಳ್ಳಾಗುವ ಸಂಚು ಹಟ
ಸೋಂಕಿದ ಕನ್ನಡಿಯಲ್ಲಿ ಮಲಿನ ಮುಖದರ್ಶನ

ಒತ್ತಿಗೆ ಹಾಕಿದ ಕಸಿಗಾಯಿ ಪಡೆಯುವುದಿಲ್ಲ
ಸಹಜ ಬಣ್ಣ ಸಹಜ ರುಚಿ ನೋಡಲಷ್ಟೇ ಭರ್ಜರಿ
ಹಣ್ಣು ಮಾಗುವುದಿಲ್ಲ ಕೊಳೆಯುತ್ತದೆ

ಬೀಗಿ ಬಾಗಬೇಕು ಬಾಗಿ ಬೀಗಬೇಕು ಇಬ್ಬರೂ
ಆಗ ಭದ್ರ ಬಂಡಿ ಬದುಕಿನ ಕಠಾಣಿ
ಸಹಜ ದಾರಿಯಲ್ಲಿ ಅದರ ಸಹಜ ಚಲನೆ

(ಅಪ್ರಕಟಿತ)

# ನನ್ನ ಉಯಿಲು

- ಶಶಿಕಲಾ ವೀರಯ್ಯ ಸ್ವಾಮಿ

1

ಉಳ್ಳವರು ಬರೆಯುವುದುಂಟು ಉಯಿಲು
ಆ ಮಗನಿಗೆ ಅಷ್ಟು, ಈ ಮಗನಿಗೆ ಇಷ್ಟು
ಇರಲಿ ಬಾಳಿಡೀ ಸೇವೆ ಮಾಡಿದ ಮಡದಿಗೊಂದಿಷ್ಟು...
ಹೀಗೆ ... ಹೀಗೆ... ಹೀಗೆ...
ಅರೆರೆ! ನಾನೂ ಬರೆಯಬಹುದೇ ಹಾಗೆ?
ಗಳಿಕೆ ಎಂದರೆ ಝಣಝಣ ಕಾಂಚಾಣ
ಫಳಫಳ ವಾಹನ ಮಿಣಿಮಿಣಿ ಬಂಗಾರ
ಗಗನಚುಂಬೀ ಮಹಲು ಇತ್ಯಾದಿ... ಇತ್ಯಾದಿ... ಅಲ್ಲವೇ?
ಛೀ, ಈ ಲೋಕದ ಲೆಕ್ಕಾಚಾರದಲಿ ಏನೊಂದನೂ ಗಳಿಸಲಿಲ್ಲ
ದಡ್ಡಿ... ಶತದಡ್ಡಿ... ಕೂಡಿ–ಕಳೆದು–ಭಾಗಿಸುವ ಗಣಿತದ ಲೆಕ್ಕದಲಿ
ಕಳೆದದ್ದೇ ಹೆಚ್ಚು, ವ್ಯವಹಾರದಲಿ ಸದಾ ಸೊನ್ನೆ
ಆದರೂ ಸಂಪಾದಿಸಿದ್ದೇನೆ ಅಷ್ಟೋ ಇಷ್ಟೋ ನಾ ಸಂಪನ್ನೆ.

2

ಏನೆಂದು ಕೇಳುವಿರಾ? ಮನವಿಟ್ಟು ಆಲಿಸಿ
ಅಕ್ಷರಲೋಕದ ಅಕ್ಷಯ ದೀಪಗಳು ನನ್ನ ಸಂಗ್ರಹದ ಹೊತ್ತಿಗೆಗಳು
ಎದೆಸೂರೆಗೊಳ್ಳುವ ಬಣ್ಣಬಣ್ಣದ ಭಿತ್ತಿ ಚಿತ್ರಗಳು
ಸದಾ ಚೈತನ್ಯದ ಚಿಲುಮೆಯನು ಕಾಪಿಟ್ಟ ಸಂಗೀತ ತಟ್ಟೆಗಳು
ನಾನಾ ವಿಧದ ಕಸೂತಿ ಸೀರೆಗಳು. ಅವುಗಳ ತುಂಬಾ
ಗಿರಿ–ನದಿ–ಹಣ್ಣು ಗಿಳಿಗಳ ಕಲರವ.
ಇಷ್ಟು ಸಾಕಲ್ಲವೇ ನನ್ನ ಬಳಗಕೆ?
ಬರೆದು ಬಿಡುವೆನು ಉಯಿಲು ಈಗಲೇ
ನೀಡುವೆನು ಪ್ರೀತಿಯನು ಧಾರೆಯೆರೆದವರೆಲ್ಲರಿಗೆ
ತುಂಬು ಗೌರವದಿಂದ ತಲೆಬಾಗಿ ಒಪ್ಪಿಸುವೆ
ರಾಜ್ಯಪ್ರಶಸ್ತಿ–ಮಠಮಾನ್ಯ–ಸನ್ಮಾನ ಸ್ಮರಣಿಕೆಗಳನು.
ನನ್ನೂರು ವಿಜಯಪುರ ಸಿಂಧಗಿಯ ಶ್ರೀಮಣ್ಣಿಗೆ
ತವರಿನ ಋಣದಲಿ ತಣಿದಿದೆ ಎದೆಭಾರ ತಣ್ಣಗೆ.

3

ಒಂದೇ ಮನವಿಯನು ಮಾತ್ರ ಉಳಿಸಿರುವೆನು
ದಯವಿರಲಿ ಬದುಕಿನ ವಿದಾಯದ ಹೊಸ್ತಿಲಲಿ;
ಎದೆಯ ಮೇಲೊಂದು ಪುಸ್ತಕವಿರಲಿ ನನ್ನ ಅಂತಿಮ ಯಾತ್ರೆಯಲಿ
ಚಂದನೆಯ ಕುಸುರೀ ಸೀರೆಯನ್ನುಡಿಸಿ
ಮಧುರ ಹಾಡುಗಳ ನುಡಿಸಿ, ಮೆಲ್ಲಗೆ
ಭಿತ್ತಿಚಿತ್ರಗಳ ಹಿಂದೆ ಸಾಗಲೆನ್ನ ಮೆರವಣಿಗೆ.
ಹೋಗಿಬರುವೆನು ಸ್ನೇಹಿತರೇ ನಗುವಿರಲಿ ತುಟಿಯಂಚಿಗೆ
ಸಾಗಿಸಿರಿ ಅಲ್ಲಿ ಕಾದಿರುವ ಕಿರಿಯ ವೈದ್ಯರಿಗೆ
ಸಲ್ಲಿಸಿರಿ ಘನತೆಯಲಿ ನನ್ನ ದೇಹವನು
'ದೇಹದಾನ'ದ ಮಾತು ಕೊಟ್ಟಿದ್ದೇನೆ ಮರೆಯದಿರಿ ಯಾರೂ...

4

ಬಿಡುಗಡೆಯ ಭಾಗ್ಯದಲಿ ಭೂಮಂಡಲದ ಮೇಲೆ
ತಿರುಗುತಿದೆ ನನ್ನಾತ್ಮ ಸತ್ತರೂ ಸ್ನೇಹಮಯಿ ನಾ.
ಅಂಡಲೆಯುವೆನು ಬ್ರಹ್ಮಂಡದಲಿ ಸತತ
ಓ! ಅಲ್ಲಿ ಇಲ್ಲಿಂದಾಚೆ ಮೋಡಗಳ ವೇದಿಕೆಯ ಮೇಲೆ
ಅರರೇ! ಸೂಫಿಗಳು–ಫಕೀರರು–ಶರಣರು–ದಾಸವರೇಣ್ಯರು
ತತ್ವಪದಕಾರರು, ಶರೀಫ –ಕಬೀರದಾಸರು
ಇಗೋ ಇಲ್ಲಿ, ಉಮರ ಗಾಲಿಬರೆಲ್ಲ ನೆರೆದಿರಲು
ತುಂಬಿ ತುಳುಕಿರೆ ಪರಿಸರದಲಿ ದಿವ್ಯ ಪರಿಮಳವು
ಅಲೌಕಿಕ ಬೆಳಕಿನ ಭಾವದೀಪ್ತಿಯಲಿ ಮೈಮರೆತು ಕುಳಿತಿಹರು
ಮಾನವನುನ್ನತಿಗಾಗಿ ಹಾಡುತಿರುವರು ಎಲ್ಲರೂ
ನಿಲ್ಲುವೆನು ನಾನೊಂದು ಮೂಲೆಯಲಿ ಕೈಮುಗಿದು
ಧನ್ಯಾತಾ ಭಾವದಲಿ
ಮರೆಯಲೆಂತು? ಇಹ–ಪರಗಳಲಿ ಸಗ್ಗ–ಸುಖ
ವನು ಪಡೆದೆನು ಇವರಿಂದಲೇ, ಇವರಿಂದಲೇ.

**ಕೃಪೆ:** ಕಾವ್ಯ ಬೋಧಿ, ಕವಿ ಪ್ರಕಾಶನ, ೨೦೧೫

# ನೀರು ನೆರಳು

- ಎನ್. ವಿ. ಭಾಗ್ಯಲಕ್ಷ್ಮೀ

ಧೂಳು ಬಿಸಿಲು ಮುಳ್ಳು ಮೈತುಂಬಿದ ದಾರಿಗುಂಟ ಸಾಗಿದೆ
ಬಲವಂತ
ಪಯಣ
ಹಸಿರು ಬುತ್ತಿಯಿಲ್ಲ ಗಂಟಲ ತಂಪಿಲ್ಲ
ನೆತ್ತಿ ಕಾದಿದೆ
ಧೂಳು ಬಿದ್ದದ್ದಕ್ಕೆ
ಕಣ್ಣಲ್ಲಿ ನೀರು ಜಿನುಗಿದರೆ
ಹೀರಿ ಆರಿಸುತ್ತೆ ಬಿಸಿಲ ದಗೆ ಬಾಯಾರಿ
ಅಂತರಾಳದಲ್ಲಿ ಕಾವೇರಿ
ನದಿಯನ್ನೇ, ಇಡಿಯಾಗಿ ಗುಟಕರಿಸಿ
ಕಡಲಲ್ಲಿ ಮುಳುಗುವ
ಬಯಕೆ ನನಗೆ
ಜೀವ ನಿಲ್ಲಿಸಲಿಲ್ಲ ತೊಟ್ಟು ನೀರು.

ಮರ ಬೇಕು ನನಗೆ
ನೆರಳನಪ್ಪಿ ಮಲಗಬೇಕು
ಕಲಕಲ ಪಕ್ಷಿ ನಾದಕ್ಕೆ ಎದೆಯ ತೆರೆದು
ಭಾರವಿಳಿಯಬೇಕು
ಇಲ್ಲಿರುವುದು ಬೋಳುಮರ
ಎಲೆಯಗಲ ಎಲೆಯೂ ಇಲ್ಲ
ಬರೀ ಶಬ್ದ
ಮುಳ್ಳುಗಿಡ ಹಲವು ಸೆರೆಗೆಳೆದು
ಚುಡಾಯಿಸುತ್ತವೆ
ಅಷ್ಟೇ
ಬಿಡಿಸಿ ಸಾಗಿದ್ದೇನೆ ಕಣ್ಣು ತುಂಬಿಲ್ಲ ಹಸಿರು.

ಪಾದ ಬಿಂದು
ಕಾಲುಳುಕಿ

ಎದೆನೊಂದು
ಕೈಸೋತು
ಕಣ್ಣು ಬಿಳಿಯಾಗಿ ಒರಗಿದರೆ ಇಲ್ಲೆ
ಬೋಳುಮರದ ಕೊಂಬೆಯಲಿ
ಕೇಳಬಹುದೇನು ಚಿಗುರೊಡೆವ ಸದ್ದು?

**ಕೃಪೆ:** ನಿಸರ್ಗ, ಅಭಿನವ ೧೯೯೨

# ನೆರೆ

- ಪ್ರಭಾವತಿ ಎಸ್. ವಿ.

ಆಹಾ ಎಂಥೆಂಥಾ ರೂಪಕಗಳು
ನೆರೆ ಇಳಿದ ಮೇಲೆ ಮಳೆ ನಿಂತ ಮೇಲೆ
ಬರೆದೇ ಬರೆದರು ಬಳಸಿಯೇ ಬಳಸಿದರು ತಮ್ಮ ಕಥೆ ಕವಿತೆಗಳಿಗೆ
ಇನ್ನಿಲ್ಲದ ಬಣ್ಣ ತುಂಬಿ ಕಥೆಗಾರರು ಕವಿಗಳು
ಸುಪ್ರಸಿದ್ಧರಾದರು ಪ್ರಶಸ್ತಿಗೆ ಭಾಜನರಾದರು
ಇದೀಗ ಮತ್ತೆ ನೆರೆ ಬಂದಿದೆ ಮತ್ತೆ ಮಳೆ ಹುಯ್ಯುತಿದೆ
ಬರೆದವರೆಲ್ಲಾ ಯಾವ ಎಸಿ ರೂಂ ನಲ್ಲಿ ಪಂಚತಾರಾ ಹೊಟೇಲಿನಲಿ
ರಮ್ಮು ಬೀರಿನ ಸಂಗದಲಿ ಸುಸಂಗತ ಸಂಶೋಧನೆಗಳಲಿ
ಮತ್ತಿನ್ನಷ್ಟು ಬರವಣಿಗೆಯಲಿ ಕಳೆದು ಹೋದರು, ಉಳಿದು ಹೋದರು

೨

ಮತ್ತೆ ಮಳೆ ಹುಯ್ಯುತಿದೆ ಎಲ್ಲ ನೆನಪಾಗುತಿದೆ
ತೊಂಭತ್ತು ವರ್ಷದ ಈ ತುಂಬು ಬದುಕಿನಲಿ
ಎಷ್ಟು ಸಲ ಬಂದಿಲ್ಲ ಮಳೆ, ಎಷ್ಟು ಸಲ ತುಂಬಿಲ್ಲ ಹೊಳೆ
ಜೀವದಾಯಿನಿ ಕೃಷ್ಣೆ ಹರಿದಳೆಷ್ಟು ಸುಲಲಿತ
ಊರೂರುಗಳ ಪೊರೆಯುತ,
ನಾ ಕಂಡಿಲ್ಲದ ಪ್ರವಾಹವೇ? ತಿಂಗಳುಗಟ್ಟಳೆ ಸುರಿದ ಮಳೆಗೆ
ಹಿಗ್ಗಿ ನಳನಳಿಸಿತಲ್ಲವೆ ಭೂಮಿ
ಸಸ್ಯ ಶ್ಯಾಮಲೆಯಾಗಿ ಜೀವ ತಿಂದಳೇ ಹೀಗೆ ರಕ್ಕಸಿಯಾಗಿ
ಯಾವ ಮಹಾಯುದ್ಧವೂ ನೋಡಿರದ ರಾಡಿ ಕೆಸರು ರಾಶಿರಾಶಿಯಾಗಿ

೩

ಆಗ ನದಿ ಹರಿಯುತಿರಲಿ ಎಂದು ಬಯಸಿದೆವು
ಈಗ ಹರಿವ ನದಿಯನೇ ಕಂಡು ಭಯಭೀತರಾದೆವು
'ಹರಿ' ಪದದ ಹಲವು ಅರ್ಥಗಳ ದುಡಿಸಿಕೊಳುವ ಈ ಕವಿತೆಗೆ
ಈ ಹರಿದು ಹಾಕುವಿಕೆಯೇಕೆ ಅರಿವಾಗಲಿಲ್ಲವೋ
ಹರಿದು ಬಿಸಾಡುವ ಇವಳು ಮನೆ ಮಠ ಹೊಲಗದ್ದೆ
ಜನ ಜಾನುವಾರು ಬದುಕು ಭರವಸೆ ಎಲ್ಲ ಎಲ್ಲವ
ಗುಡಿಸಿ ಗುಂಡಾಂತರ ಮಾಡಿ ಹರಿಯುತ್ತಾಳೆ. ಪೊರೆಯುವುದಿಲ್ಲ
ಪೊರೆಯುವ ಗುಣವೇ ಇಲ್ಲವಾದ ಧರೆಯ ಮಗಳಲ್ಲವೇ,

ವಸುಂಧರೆಯ ಒಡಹುಟ್ಟಲ್ಲವೇ, ಈ 'ನದಿ'ಗೆ ಹರಿದು
ಸಮುದ್ರ ಸೇರುವ ಕೆಲಸವೇ ಸಾಕಿತ್ತು ಸರಿಯಿತ್ತು
ಅದಕ್ಕಿಂತ ಹೆಚ್ಚು ದಂಡಿಸಿದೆವೇ ಮೆರೆಸಿದೆವೆ ಇವಳ ನಾವು ನಂಬಿ
ನಿಂತೇ ನರಕ ಕಟ್ಟಿದೆವು ನಾವು ಇತಿಹಾಸ ಬರೆದು ಹೆಸರಿಟ್ಟೆವೇ
ಅದೂ ಇದೂ ನಮ್ಮ ದೇವದೇವತೆಗಳ ಬಾಲಕಚ್ಚಿ
ಸರಿಯಾಗಿಯೇ ಕಚ್ಚಿದಳು ನಮ್ಮನಿವಳು
ಮಾನವನಿಗೆ ಗುಹೆಯೇ ಆಗುವುದು ಗತಿ?
ಹಳೆ ನಕ್ಷೆಗಳು ಅಳಿಸಿ ಭೂಮಂಡಲವನಾಳುವುದೆ ಹೊಸಗಾಳಿ?
ಆಗ ಇರುವ ಅದೂ ಇದೂ ಜಾಗವನೇ ಭೂಮಿಯೆಂದು
ನೀರನೇ ನದಿಯೆಂದು ಕರೆದು ಮಾನವ ಕಟ್ಟಬಲ್ಲನೇ
ಮತ್ತೊಂದು ಸಂಸ್ಕೃತಿಯ? ಹೆಸರನಿಡುವನೋ ಅದಕೆ?
ಕುತೂಹಲ ಸುಮ್ಮನೆ ಕುತೂಹಲ.
ಅಂದ ಹಾಗೆ ಮರೆತಿದ್ದೆ ವಿಜ್ಞಾನಿಗಳೂ ಹುಡುಕುತಿರುವರಂತೆ
ಮತ್ತೊಂದು ಧರೆಯ, ಕ್ಷಮಯಾ ಧರಿತ್ರಿಯ ಅಲ್ಲೆಲ್ಲೋ
ಸಾವಿರ ಜ್ಯೋತಿರ್ವರ್ಷಗಳ ದೂರದಲಿರಬಹುದಾದ
ಬಯಲ ಭ್ರಾಂತಿಯ!

(ಅಪ್ರಕಟಿತ)

❖

# ಕೆರೆಯ ಮುಚ್ಚುವರಂತೆ

- ಕನ್ನಿಕಾ ಹೆಗಡೆ

ಊರ ಕೆರೆಯ ತುಂಬ ಹೊಂಡ–ಹರಹು
ಅದನೆಲ್ಲ ಮರೆತು ಕೆರೆಯ ಮುಚ್ಚುವರಂತೆ
ಎಲೆ ಮನವೇ, ಹುಚ್ಚು ನಿನಗೆ
ಯಾವ ಬುದ್ಧಿವಂತ ಕೆರೆಯ ಮುಚ್ಚುತ್ತಾನೆ?
ನೀರಿನೊರತೆಯ ಭಾಗ್ಯದ ಬಾಗಿಲು ಮುಚ್ಚುತ್ತಾನೆ?
ಮತ್ತಾವ ದೇವ ಈ ಕೆಲಸ ಮೆಚ್ಚುತ್ತಾನೆ?

'ಕೆರೆಯಲೇನಿದೆ ಹೇಳು?
ಬರಿಯ ಹೂಳು, ಕೆಸರು–ಮಣ್ಣು
ಆಚೀಚೆ ಮೂಗು ಮುಚ್ಚಿ ನಡೆ. ಕೆರೆಯೆ ಕೊಳೆ
ತುಂಬಿ ಹರಿದರೂ ಒಂದೆ, ಬತ್ತಿ ಉಳಿದರೂ ಒಂದೆ'
ಎಂದೆಂದುಕೊಂಡರು ಅವರಿವರು ಅತಿ ಬುದ್ಧಿವಂತರು
ಮತ್ತಿಷ್ಟು ಜನ ತಥಾಸ್ತು ಎಂದರು–ಏನೂ ಅರಿಯದವರು.

ಕೆರೆಯ ಹೂಳೆತ್ತಲಾರೆವೆ?
ಕೊಳೆಯನೆತ್ತಿ ಎಸೆಯಲಾರೆವೆ?
ಪುಣ್ಯದ ಕೆಲಸಕ್ಕೆಲ್ಲಿ ಲಾಭದ ಲೆಕ್ಕಾಚಾರ?

ಕೆರೆಯ ಕಟ್ಟಿಸಿದವರು, ಕೆರೆಗೆ ಹಾರವಾದವರು ಪುಣ್ಯವಂತರು
ನಾಳೆಗಳ ಬಯಸಿದವರು, ನಾಳೆಗಳ ಹರಸಿದವರು.

ಕೆರೆಯ ಮುಚ್ಚುವ ಆತಂಕ ಟಿಸಿಲೊಡೆದು
ಅಂತರ್ಜಲ ಪುಕಾರು ಒಳಗಿಂದಲೇ ಕೂಗಿದ್ದು ಕೇಳಲಿಲ್ಲ
ಮತ್ತಾರೋ ಹೊರಗಿಂದ ಕೂಗಿದ್ದು ಅದೂ ಕೇಳಿಸಲಿಲ್ಲ
ಕೆರೆ ಕೂಗಾಡಿತು –ನಾ ಸತ್ತಿಲ್ಲ– ಸತ್ತಿಲ್ಲ. ಹೂಳಬೇಡಿರಣ್ಣಾ
ಕೇಳುವವರು ಯಾರಿಲ್ಲ ಯಾರಿಲ್ಲಿ?
ನಿಜ, ಕೆರೆಯ ಮುಚ್ಚುವರಂತೆ
ಊರ ಕೆರೆಯ ಮುಚ್ಚುವರಂತೆ
ಯಾವ ದೇವ ಇದ ಕಂಡು ಮೆಚ್ಚುವನಂತೆ?

(ಅಪ್ರಕಟಿತ)

# ನಾನೂ ಶಾಪವೂ

- ಕಮಲಾ ಹೆಮ್ಮಿಗೆ

ನಾನೂ ಅವಳಂತೆಯೇ ಹೆಣ್ಣು
ನೋವು ಕೀವು ತುಂಬಿದ ಹುಣ್ಣು

ತುಂಬ ನಂಬಿಕೆ ನನಗೆ ನನ್ನ ಬಗ್ಗೆ
ಪಕಳೆ ಕಿತ್ತೆಸೆದವರಿಗೆಲ್ಲ ಬಿಡದೆ
ಶಾಪವಿತ್ತೆ ನಮ್ಮೂರ ಅಮಲು ದೇವತೆ

ಅವಳು ಅಂದಿದ್ದು ಆಯಿತು ಸಾಕ್ಷಿಯಿವೆ
ತಲಕಾಡು ಮರುಳಾಗಿದೆ ಮಾಲಂಗಿ ಮಡುವಾಗಿದೆ
ಮೈಸೂರು ಅರಸರಿಗೆ ಸಂತತಿಯಿಲ್ಲ

ಆದರೆ ಅವನಿಗೆ ಹವಳ ಮುತ್ತಿನ ಮಕ್ಕಳು
ರುಚಿರುಚಿ ಬುತ್ತಿ ಕಸಟ್ಟುವ ಮಡದಿ ಇದ್ದಾಳೆ!
ಸನ್ಮಾನದ ಶಾಲು ಕಪಾಟು ತುಂಬಾ ಬಿದ್ದಿವೆ

ಇಲ್ಲಿ ನನ್ನ ಕನಸಿನಲ್ಲಿ ನದಿ ಬೆನ್ನು ಹತ್ತಿರುತ್ತದೆ
ಮನೆ ಕೀಲಿ ಕೈ ಹುಲ್ಲಲ್ಲಿ ಕಳೆದಿರುತ್ತದೆ
ಹುಡಹುಡುಕಿ ದಣಿದು ಪಕ್ಕನೆ ಎಚ್ಚರಾಗುತ್ತೇನೆ!

**(ಅಪ್ರಕಟಿತ)**

# ಮನೆ ಜಗಳ

- ವಿಜಯಾ ದಬ್ಬೆ

ಮನೆಯ ಜಗಳವೇ ಹೀಗೆ
ಬೀದಿಗೆಳೆಯ ಬಹುದೇನೆ
ಜಾಣೆ ಪಾರ್ವತಿಯೇ?
ಇಡಿಯ ಹಿಮಾಚಲಕ್ಕೇ
ನಿಮ್ಮ ಕಲಹ ಜಾಹೀರುಗೊಂಡಿತಲ್ಲೇ.

ಇಷ್ಟು ತಿಳಿಯಾಗಿ ಪಾರದರ್ಶಕವಾಗಿ
ಒಡಲಬಂಡೆಗಳ ಮಣ್ಣ ಕಾಣಿಸುತ್ತ
ಹರಿವ ನೀನೆಂಥಾ ಶಾಂತ ಪ್ರಶಾಂತೆ
ಎಂದು ಬೆರಗಾದ ಮರುಕ್ಷಣದಿ
ಅಲ್ಲಿ ತುದಿಯಲ್ಲಿ ಮನೆಯಲ್ಲಿ
ಶಿವನ ಸಿಟ್ಟು ನೆತ್ತಿಗೇರಿ ಬರ್ಫ ಕರಗಲು
ಹರಿವೆ ಬುಸಬುಸನೆ ಬರ್ಫ ನೀರಾಗಿ

ದೊಡ್ಡ ದನಿಯ ನನ್ನ ಉಪದೇಶಕ್ಕೆ
ನಸು ನಕ್ಕಳು ಪಾರ್ವತಿ.
ಅಂಥ ಸಿಟ್ಟಲ್ಲಿ ನನ್ನೊಳಗಿನ ರಾಡಿಯ
ಕಂಡವಳಲ್ಲವೆ ಅವಳು.

ಕ್ಷಣಕೆ ತಿಳಿ ನೀರು ಕ್ಷಣಕೆ ಬರ್ಫದ ನೀರು
ನಿರಂತರ ನಿರಂತರ ಈ ನಿತ್ಯಕಲಹ
ಸಿಟ್ಟ ಕಾಣಿಸಿಯೂ ದಕ್ಕಿಸಿಕೊಳ್ಳುವ ಶಕ್ತಿ ಅವಳು
ಸಿಟ್ಟ ನುಂಗುತ್ತ Personal is Political ಎನ್ನುವ
ಗಿಣಿ ನಾನು.

ಕೃಪೆ: ವಿಜಯದಬ್ಬೆ ಸಮಗ್ರ ಸಾಹಿತ್ಯ ಸಂಪುಟ–೧(೨೦೧೨). ಅಪರಂಜಿ ಪ್ರಕಾಶನ, ಮೈಸೂರು

# ಪುರುಸೊತ್ತು ಸಿಗದೆ

- ಸಂಧ್ಯಾ ರೆಡ್ಡಿ

ಇವು,
ನೀವು ಮೆಚ್ಚಿ ನೇವರಿಸುವ
ಮೆದು ಗುಲಾಬಿ ಸೋಮಾರಿ ಕೈಗಳಲ್ಲ
ಸೋಪು ಕ್ರೀಮು ಘಮಘಮಿಸುವ
ಬಣ್ಣ ಪಾಲಿಶ್ ಮೆರುಗಿನ ಅಲಂಕಾರಗಳಲ್ಲ

ತೊಳೆದು ತಿಕ್ಕಿ ಗುಡಿಸಿ ಸಾರಿಸಿ
ಕುಟ್ಟಿ ಬೀಸಿ ರುಬ್ಬಿ ಅರೆದು
ಉಜ್ಜಿ ಒಗೆದು ಬಾಚಿ ಬಳಿದು
ಸವೆದು ನವೆದು ಕೊಳೆ ಕೂತು
ಮಸಿ ಹಿಡಿದ ಅಂಗೈಯ ಬಿರುಕುಗಳು

ನೀರು ಸೇದಿದ ಬೆರಳು ಗಂಟು ಗಂಟು
ಹಾಲು ಕರೆದು ಮೊಸರು ಕಡೆದು
ರೊಟ್ಟಿ ತಟ್ಟಿ ಅನ್ನ ಬಸಿದು
ಕರಿದು ಹುರಿದು ಬೇಯಿಸಿ ಬಾಡಿಸಿ
ಕೆಂಡ ಹಿಡಿದು ಬೆಂದು ಬೇಯುತ್ತಾ
ತುತ್ತುಣಿಸಿ ಕಂಬನಿ ಒರೆಸಿ
ಜೀವ ಸಲಹಿದವು

ನೇಯ್ದವು ಹೆಣೆದವು ಹೊಲಿದವು
ಗಿಳಿನವಿಲು ಹೂವುತಾರೆ ಚಿತ್ತಾರ ಬಿಡಿಸಿದವು
ತಲೆಬಾಚಿ ಜಡೆ ಹೆಣೆದು
ಹೂ ಕಟ್ಟಿ ಮುಡಿಸಿದವು
ವೀಣೆ ನುಡಿಸಿದವು
ಜೀವ ಬೆಳಗಿದವು
ಕಲ್ಲು ಕೋಲು ಕತ್ತಿಢಾಲು
ಪಾಶ ಅಂಕುಶ ಬಿಲ್ಲು ಬಾಣ
ಭರ್ಚಿ ಕೊಡಲಿ ಶೂಲ ತ್ರಿಶೂಲ

ಬಾಂಬು ಬಂದೂಕು ಹಿಡಿಯುವುದಕ್ಕಾಗಲಿ
ಹೊಡೆದು ಬಡಿದು ಚುಚ್ಚಿ ತಿವಿದು
ಕೆಡವಿ ಗುದ್ದಿ ಹೊರಳಾಡಿಸಿ ಅಪ್ಪಳಿಸಿ
ಸೀಳಿ ಸಿಗಿದು
ಜೀವಗಳನ್ನು ಕೊಲ್ಲುವುದಕ್ಕಾಗಲೀ
ಪುರುಸೊತ್ತು ಸಿಗಲಿಲ್ಲ ಸಧ್ಯ
ಇವು ಕೈಲಾಗದವು ಎಂದು
ನೀವು ಹಂಗಿಸಿದರೂ ಪರವಾಗಿಲ್ಲ.

ಕೃಪೆ: ಮಲ್ಲಿಗೆಯ ಅವಸಾನ (ಸಮಗ್ರ ಕವಿತೆಗಳು– ೨೦೧೫) ಸಮಯ ಪ್ರಕಾಶನ, ಬೆಂಗಳೂರು.

❖

# ಖಾಪ್ ಪಂಚಾಯತಿ

- ಲತಾ ಗುತ್ತಿ

ಅದೇ ಧಗಿಸುವ ಸೂರ್ಯ
ಕಡುನೀಲ ಆಕಾಶ ಕೆಳಗೆ
ಕೈಕಟ್ಟಿ ಕತ್ತೊಡ್ಡಿ ನಿಂತಿವೆ
ಎಷ್ಟೊಂದು ಅಸಹಾಯಕ ನಿರ್ಲಿಪ್ತ ಮನಸುಗಳು
ಎತ್ತನೋಡಿದತ್ತೆಲ್ಲ ಕುಹಕಿಗಳ ನೋಟ ಮಾತು
ಮರ್ಯಾದಾಹತ್ಯೆ ದೇಗುಲಗಳ ನ್ಯಾಯಾಲಯದಲ್ಲಿ
ಜೀವ ಜೀವದ ಪ್ರೇಮಿಗಳು

ಖಾಪ್‌ಪೂಜಾರಿಗಳ ಮರ್ಯಾದಾ ಪಟ್ಟಿ
ದೇಗುಲಗಳ ಗೋಡೆಗೋಡೆಗಳಿಗೆ
'ಜಾತಿಯನು ಕಾಪಾಡಿಕೊಳ್ಳಲೆಂದೇ ಇರುವ ವ್ಯವಸ್ಥೆ'
ತಲೆಬರಹವಾಗಿ,
'ಮಾನವಂತರಿಗೆ ಮಾತ್ರ ಇಲ್ಲಿ ಪ್ರವೇಶ'
ಕೊನೆಯದಾಗಿ ಕಟ್ಟಾಜ್ಞೆ.

ಪ್ರೀತಿ ಪ್ರೇಮಗಳ ಸೆಳೆತಕ್ಕೆ ಸಿಕ್ಕು
ಪ್ರವಾಹ ವಿರುದ್ಧವಾದರೂ ಹೋರಾಡುವವೆಂದರೆ
ಖಾಪ್‌ಗಳೆದ್ದು ಕೂಗಾಡುತ್ತವೆ ರಾಕ್ಷಸರಂತೆ
ಇದು ಸಗೋತ್ರ, ಇವರು ಅಣ್ಣಾ ತಂಗಿಯರು
ಹಾಳಾದ ಅಂತರ್ಜಾತಿಗಳವು, ಕೊನೆಗೆ
ಹುಡುಗಿಯೇ ಸೂಳೆ ಅಪವಾದ ಹೊರಿಸಿ
ಬಹಿಷ್ಕರಿಸಿ ಒತ್ತಾಯದ ಬೇರ್ಪಡಿಸುವಿಕೆ

ತಿಳಿದೋ ತಿಳಿಯದೆಯೋ ನುಗ್ಗಿದ್ದಾದರೆ
ಘೋಷಣಾ ಪತ್ರಕ್ಕೆ ಸಹಿ ಹಾಕಬೇಕು
'ನಿಮ್ಮ ಹರಿತಕೊಡಲಿಗೆ ಜೀವತುಂಬಿಕೊಳ್ಳಿ' ಎಂದು.
ಪುಟ್ಟ ಪುಟ್ಟ ಕನಸುಗಳ ಹೊತ್ತ
ಹೊಳಪು ಕಣ್ಣುಗಳ ಜೋಡಿ
ನೋಡ ನೋಡುತ್ತಲೆ ಮಣ್ಣುಪಾಲು

ನಾಯಿ ನರಿಗಳ ಪಾಲು.
ಮರ್ಯಾದಾ ಮನುಜರೇ ಗಳಿಸಿದಿರೇನು?
ಮನೆಮಕ್ಕಳ ಹತಿಸಿ ಸಾಧಿಸಿದಿರೇನು?
ಅದೆಷ್ಟು ಪ್ರತಿಷ್ಠೆ ಗೌರವ ಮನ್ನಣೆಯ ಮಾತುಗಳು
ನಿಮ್ಮ ನಾಲಿಗೆಯ ಮೇಲೆ
ನಿಮ್ಮ ನೀವೇ ಪೂಜಾರಿಗಳೆಂದುಕೊಳ್ಳುವ
ಮರ್ಯಾದಾ ರಾಕ್ಷಸರೆ.

ದೇವರೇ, ಜಾತಿ ಮತಗಳ ದೇವರು
ನೀನಿಲ್ಲವೆಂದಾದರೆ, ಅಪಶಬ್ಧಗಳಿಗೆ
ಹೆಣ್ಣು ನೊಂದುಕೊಳ್ಳಬಾರದೆಂದಾದರೆ
ಕಣ್ಣು ತೆರೆ ಜೋಡಿಸು
ನಿನ್ನೆದೆಯಿಂದ ಅವರೆದೆಗೆ ಪ್ರೀತಿ
ಕಿತ್ತೆಸೆ ಅವುಗಳೆದೆಯ ಅಂಟುರೋಗ

(ಹರಿಯಾಣ, ಉತ್ತರ ಪ್ರದೇಶ, ಪಂಜಾಬ್‌ಗಳಲ್ಲಿಯೇ ವರ್ಷಕ್ಕೆ ೯೦೦ರಷ್ಟು ಮರ್ಯಾದಾ ಹತ್ಯೆಗಳು ನಡೆದರೆ, ಇತರ ಪ್ರದೇಶಗಳಲ್ಲಿ ೨೦೦ರಿಂದ ೩೦೦ ಹತ್ಯೆಗಳು ನಡೆಯುತ್ತವೆಂದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.)

**ಕೃಪೆ :** ಕಿಚ್ಚುಹಾಯುವ ಕಾಲ (ಸಂ) ಸಿವಿಜಿ ಪಬ್ಲಿಕೇಷನ್ಸ್ ೨೦೧೮

❖

# ನಿಜದ ಕನಸು

- ಹೇಮಾ ಪಟ್ಟಣಶೆಟ್ಟಿ

ಸ್ವಪ್ನಗಳು ಸುಪ್ತ ಮನ–
ಸುಮನಗಳು
ತೋಟದಲಿ ಕುಲು ಕುಲು
ನಕ್ಕು ಅರಳುವ ಆಶೆಗಳು
ಗಗನದಲಿ ಮಿನುಗುವ ಚಿಕ್ಕೆಗಳು
ಗಾಳಿಯಲಿ ಗೀತ ಹೆಣೆವ ಹಕ್ಕಿಗಳು
ಹೀಗೆಯೇ ಕಲಿತಿದ್ದೆ
ಅರಿತಿದ್ದೆ ಹೀಗೆಯೇ
ನಾ ಮನಃಶಾಸ್ತ್ರ
ಓದುವಾಗ.

ಬದುಕಿನಲಿ ಸ್ವಪ್ನಗಳು
ನಿಜದ ಬಣ್ಣ ಬಳಿದುಕೊಳ್ಳುವುದನ್ನು
ನೋಡಬೇಕೆಂದು ಹಂಬಲಿಸಿದೆ
ಸತ್ಯದ ಸಮಾಧಿಗಳು ಸುವಿಶಾಲ ಸಮೃದ್ಧ
ಕಟ್ಟಡಗಳಾಗುವುದನ್ನು ನೋಡಿದೆ.

ನೋಡಿದೆ ಈ ಗುಲ್ಲು ಗದ್ದಲದಲ್ಲಿ
ಸ್ವಪ್ನದ ಮೂಲ ಶಿಲೆ
ಎತ್ತ ಸರಿದವೋ, ಹೇಗೆ ಕಳೆದವೋ
ಅರಿಯದಾದೆ.

ಸ್ವಪ್ನದ ಬೆನ್ನು ಹತ್ತು
ವುದು ಹಾರುಗುದುರೆ ಸವಾರಿ
ಮಾಡಿದ ಹಾಗೆ,
ಹಾರಿ ಹಾರಿ ನಡೆದ ಹಾಗೆ.
ಸಹಜವಲ್ಲ
ಅನಿವಾರ್ಯ ನಡೆ, ನಡಿಗೆ
ಉಸಿರ ಸಂಚಾರ
ಒಮ್ಮೊಮ್ಮೆ
ಅದಕ್ಕೂ ಸಂಚಕಾರ.

ಹೀಗೆಲ್ಲ ಯೋಚಿಸುತ್ತ
ಸ್ವಪ್ನಗಳ ಬಗ್ಗೆ
ಸಪ್ನ ಸೌಧಗಳ ಬಗ್ಗೆ
ಸ್ವಪ್ನ ಸುಧಾ–ಬುಗ್ಗೆಗಳ ಬಗ್ಗೆ
ಹೇಳುತ್ತ
ಮಕ್ಕಳಿಗೆ ಕಲಿಸುತ್ತ
ಮರೆತುಬಿಟ್ಟೆ ಸ್ವಪ್ನಗಳನ್ನು
ಕಲಕಿಬಿಟ್ಟೆ ಕನಸುಗಳನ್ನು

ಕಾಲ ಪ್ರವಾಹದಲಿ ನೀರು ತುಂಬಾ
ಹರಿದಿದೆ.

ವೇಳೆ ಕಳೆದಿದೆ
ಸ್ವಪ್ನಗಳು ಒಡೆದಿವೆ
ಕನಸು ಕಳಚಿವೆ
ಸುಮನ ತಲ್ಲಣಿಸಿವೆ
ಹೂವಾಗಿ ಜೀವ ತಳೆದಿವೆ.

ಕಡಲ ಘರ್ಜನೆಯೂ
ನಡುಗಿ ಕೂಗಿದೆ
ನಮ್ಮ ಸ್ಫೋಟ ವಿಜ್ಞಾನದ ಮುಂದೆ
ಈಗ ಸಮುದ್ರವೂ ಶಾಂತ
ಜೀವೋನ್ಮುಖಿ.

ನನ್ನ ಸ್ವಪ್ನಗಳು
ಕನಸು ಸುಧಾ ಸುಮನಗಳು
ತಲ್ಲಣದ ಸಾಗರಗಳು
ನನ್ನ ಬಾಗಿಲದಲ್ಲೇ ನನ್ನ ಮನೆಯಲ್ಲೇ
ಮಕ್ಕಳಾಗಿವೆ ಹೂ
ಸಮುದ್ರದ ಉಲ್ಲಾಸ ನಗೆಯಾಗಿ
ಕೇಕೆ ಹಾಕುತ್ತಿವೆ
ನಿಜದ ಕನಸು.

ಕೃಪೆ: ಬಾಳೆ ಗರ್ಭದಲಿ(೨೦೧೧) ಅನನ್ಯ ಪ್ರಕಾಶನ, ಧಾರವಾಡ.

# ಕವಿತೆಗಳ ಹಿಂದೆ

- ಬಾ.ಹ. ರಮಾಕುಮಾರಿ

ಸಂಜೆ ಮೆಜೆಸ್ಟಿಕ್ಕಿನಲ್ಲಿ ನಿರಿಗೆಗಳ ಚಿಮ್ಮುತ್ತಾ
ನಡು ಬಳುಕಿಸಿ ವೈಯ್ಯಾರ ತುಳುಕಿಸ್ತಾ
ಗಂಡನ ತೋಳು ಬಳಸುವ ಚೆಲುವೆಯರು
ತಿಂಗಳ ಮೊದಲ ವಾರದ ಹುರುಪು ಉಬ್ಬಿದ
ಪರ್ಸಿನೊಡಲೊಳಗೆ ಹರ್ಷದ ಹೊನಲು
ಹಣದ ಹೊಳೆ ಹೊಳೆಸಿದರೆ ತಾಮುಂದು... ತಾಮುಂದು

೨

ಕಮರ್ಷಿಯಲ್ ಸ್ಟ್ರೀಟಿನಲಿ ಹುಡುಗಿಯರು ಕುಣಿಯುತ್ತಾರೆ
ಹೊಸ ವರ್ಷದ ಉತ್ಸಾಹದಲಿ ಆಯಸ್ಸಿನಲ್ಲೊಂದು
ವರ್ಷ ಉರುಳಿದುದನರಿಯದೆ,
ಅಪ್ಪ ಕೊಳ್ಳೆ ಹೊಡೆದ ಹಣದ ಮುಖಾಬಿಲೆಗಾಗಿ
ಕ್ಲಾಸ್‌ಮೇಟುಗಳ ಹೋಂಡಾ ಮೋಟಾರು ಸೈಕಲ್ಲುಗಳ
ಪೆಟ್ರೋಲ್ ಖಾಲಿ ಮಾಡುವುದಕ್ಕಾಗಿ
ಕನಸುಗಳ ಮಾರುತ್ತಾರೆ ಬಯಕೆಗಳ ಖರೀದಿಗಾಗಿ
ನಿರಂತರ ನಿಲ್ಲುತ್ತಾರೆ ತಮ್ಮ ಸರದಿಗಾಗಿ
ಸರದಿ ಬರುವ ಮೊದಲೇ ಮುಗಿಯುವುದು
ಕನಸುಗಳ ಸಂತೆ
ಬದುಕನೋಲೈಸುವ ಬಗೆಗೆ ದಿಕ್ಕಾಪಾಲಾಗುತ್ತವೆ ಭಾವಗಳು

೩

ಪುಸ್ತಕದಂಗಡಿ ಹೊಕ್ಕ ಕಳ್ಳನಂತೆ
ಚಿನ್ನದ ಪುಸ್ತಕವೊಂದಿಲ್ಲ– ಎಲ್ಲ ಬರೀ ಕಾಗದ
ಗೀಟು ದಾಟಿದ ಮೇಲೆ ಗಿಲೀಟು ಮಾತೆಲ್ಲಾ
ಮಫತ್ತು ಮಾತುಗಳ ಭರವಸೆ ಲೀಲೆ
ಖಾಲಿ ಕಾಗದದ ಮೇಲೂ ವ್ಯವಹಾರ ಲೀಲಾಜಾಲ
ದಿಕ್ಕಿರದ ಜನರ ನಡುವೆ ಅಲೆವ ಹುಡುಗ
ಕಳೆದಿದ್ದಾನೆ ಎಲ್ಲೋ ತನ್ನದೊಂದು ಹೊಸನೋಟು
ಕೆದಕಿ ಹುಡುಕಿದರೂ ಸಿಗುತ್ತಿಲ್ಲ, ತಿಪ್ಪೆ ರಾಶಿಯಲಿ
ಕಾಣಲು ಅದೇನು ಹೊಳೆಹೊಳೆವ ಬೆಳ್ಳಿ ರೂಪಾಯಲ್ಲ
ಗಾಳಿ ಬಂದರೆ ತೇಲಿ ಹೋಗಿರಬಹುದು
ಹೊಸ ರೆಕ್ಕೆ ಬಂದಂತೆ.

೪

ಕನಸುಗಳ ಚೆಲ್ಲುತ್ತಾರೆ ಬಯಕೆಗಳ ಹುಡುಕಾಟಕ್ಕಾಗಿ
ಮಾತಿರದ ಮೌನದಡಿ ಅವಿತು ಕುಳಿತಿದೆ ಕನಸು
ನಟ್ಟಿರುಳಲ್ಲಿ ಆಕಾಶದಂಗಳದ ಚುಕ್ಕೆಗಳ ನಾಡಿಗೆ
ಚಂದ್ರಮ ನುಗ್ಗುತ್ತಾನೆ ಕೇಕೆ ಹಾಕಿ
ಮರ್ಕ್ಯುರಿ ಲೈಟನ್ನು ಮಿಂಚಿಸುವ ನಗೆ ತುಳುಕಿಸುತ್ತಾ
ಕಣ್ಣಲ್ಲಿ ಸರ್ಚ್‌ಲೈಟು ಬಿಡುತ್ತ ಕಂಗೊಳಿಸುತ್ತಾರೆ
ದಾರಿಯುದ್ದಕ್ಕೂ ಮುಗಿಲಾಗಿ ಕಾಡಿಸುತ್ತಾರೆ ಎದೆಯೊಳಗೆ ನಿಂತು.

೫

ನಮ್ಮೂರ ರಸ್ತೆಗಳಲಿ ಬರ್ನ್ ಆದ ಲೈಟುಗಳಡಿಯಲ್ಲಿ
ಕನಸುಗಳು ತಡವರಿಸುತ್ತವೆ
ಕತ್ತಲಿನ ಸರ್ಕಲ್ಲುಗಳಲ್ಲಿ ಲೈಟಿಲ್ಲದ ಸೈಕಲ್ಲುಗಳು
ಹುಡುಗಿಯರ ಲೂನಾಗಳಿಗೆ ಡಿಕ್ಕಿ ಹೊಡೆಯುತ್ತವೆ
ಮನದೊಳಗೆ ತುಂಬಿರುವ ಕತ್ತಲಂತೆ
ಬದುಕಿನೊಳಗೂ ಗಾಂಧಾರಿ ಕುರುಡು
ಹೊಸವರ್ಷ ಬಂದರೂ ಅಷ್ಟೇ, ಹೊಸ ಶತಮಾನವಾದರೂ ಅಷ್ಟೇ
ಭರವಸೆಯ ಕಂಗಳಲಿ ಕತ್ತಲರಾಶಿ
ಆಸೆ ಒಂದಿನಿತಿಲ್ಲ ಕಗ್ಗಲ್ಲ ಮನದಲ್ಲಿ
ಅರಳಲಾರದ ನಗೆ ಅವಿತಿಹುದು ಎಲ್ಲೋ
ತುಟಿಯಂಚಿಗೆ ಬಾರದೇ ಮುಗ್ಗರಿಸುತ್ತ

೬

ನಿಂತ ನಿಲುವಲ್ಲೇ ಬದುಕ ತಬ್ಬುವ ಸಖಿಯರು
ಆ ನಿಲುವಲ್ಲೇ ಪ್ರತಿಷ್ಠಾನಗೊಳ್ಳುವ ಧನ್ಯ ಭಾವಗಳು
ಭವಿಷ್ಯಕ್ಕೆ ಬೆಂಕಿಯಾಗುತ್ತವೆ
ಬ್ಯಾಂಕ್ ಬ್ಯಾಲೆನ್ಸಿನಲ್ಲೇ ಧನ್ಯಗೊಳ್ಳುವ ಜೀವಿಗಳು
ಪ್ರಕಾಶಮಾನಕ್ಕೆ ಎರಗುವ ಚಿಟ್ಟೆಗಳಾಗಿ
ಧ್ರುವತಾರೆಗಳಾಗುತ್ತಾರೆ
ನಡುಗುವ ತುಟಿಗಳಿಗೆ ಮಾತಾಗಿ ನಿರಾಸೆಯ
ಎದೆಯೊಳಗೆ ಕಲ್ಲರಳಿ ಹೂವಾಗಿ ಕವಿತೆಯಾಗುತ್ತವೆ
ಕಣ್ಣೊಳಗೆ ಸೆಳೆಮಿಂಚ ಸೆಳೆಯಬಲ್ಲ ಹಾಡಾಗುತ್ತದೆ
ಹೃದಯದಾಳದಲಿ ನೆಟ್ಟ ನೋವಿಗೆ ಧ್ವನಿಯಾಗುತ್ತವೆ.

ಕೃಪೆ: ಅನಾಮಿಕ ಹಕ್ಕಿಯ ಸ್ವಗತ (ಸಂ) ಸ್ವಾಗತಸಮಿತಿ ಅಖಿಲಭಾರತ ೬೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬಾಗಲಕೋಟೆ ೨೦೦೦

# ಹೊಸ ಹುಟ್ಟಿನ ಹಾಡು

- ಸ. ಉಷಾ

ಕಸಿಗುಲಾಬಿಯ ರಾಜಶಿಶು
ನಾಟಿ ಗುಲಾಬಿಯ ಸ್ತನದಾಯಿನಿ ದಾದಿ

ಪುಷ್ಪಪಾಲಕನ ಕುಶಲಕಲೆ
ಹರಿತ ಶಸ್ತ್ರವ್ರಣಕೆ ಪ್ರೀತಿಲೇಪ

ನಾಟಿಗುಲಾಬಿಗೆ ಪುತ್ರಶೋಕ
ತನ್ನೊಡಲ ಚಿಗುರುಗಳ ಚಿವುಟಿ ಬಿಸುಡಿದೆ ಆ ಕೈ

ಕಸಿಗುಲಾಬಿಗೆ ತಾಯಿಲ್ಲದ ತಲ್ಲಣ
ತನ್ನ ತಲೆ ಕತ್ತರಿಸಿ ಯಾವುದೋ ಮುದಿಗಿಡಕೆ
ಅಂಟಿಸಿದೆ ಆ ಕೈ

ಶಪಿಸುತ್ತಿದೆ ನಾಟಿ ಗುಲಾಬಿ
ನಾ ನೆಲದೊಡಲಿಂದ ಮೊಗೆದ ರಸ
ನನ್ನ ಚಿಗುರಿಗೇ ಸಿಗದ ಹಾಗೆ
ಕುಡಿದು ಸೊಕ್ಕುವ ಸಾವೇ
ಒಣಗು
ಬುಡದಿಂದ ಚಿಗುರಿಸುತ್ತೇನೆ
ನನ್ನದೇ ಸಂತಾನ

ಸೆಟೆಯುತ್ತಿದೆ ಕಸಿಯ ಕೂಸು
ಉಪವಾಸ ಸಾಯುತ್ತೇನೆ ಮಲತಾಯಿಯೇ
ನಿನ್ನ ಹಾಲನೊಲ್ಲೆ
ನಾಟಿ ಗುಲಾಬಿಗೆ ಬೇರುಂಟು ಎಲೆಯಿಲ್ಲ
ಕಸಿಗುಲಾಬಿಗೆ ಎಲೆಯುಂಟು ಬೇರಿಲ್ಲ
ಮಣ್ಣು ಹಾಡಿತು ನೀರು ಹಾಡಿತು

ಗಾಳಿ ಹಾಡಿತು ಬಿಸಿಲು ಹಾಡಿತು
ಆಕಾಶ ಹಾಡಿತು
ಹುಟ್ಟು ಸಾವಿನ ಹಾಡು
ಕೆಳೆ ಹಗೆಯ ಹಾಡು
ಯಾಕೀ ಸಾವ ಕೊಲುವ ಕಲಹ
ಎಲೆ ಎಲೇ ಗಿಡವೇ
ಬೇರು ಬೇರೇ

ಸುಖವಿಲ್ಲ ನಾಟಿ ಗುಲಾಬೀ
ನಿನ್ನೊಡಲ ಚಿಗುರು ಚಿಗುರಿಸಿದಾಗಲೂ
ಚಿವುಟಿ ಬಿಸುಡುವುದು
ಆ ಕೈ

ಹಿತವಿಲ್ಲ ಕಸಿಯ ಕೂಸೇ
ಉಣ್ಣದೇ ಹಟ ಮಾಡಿ ಸತ್ತರೆ
ಕತ್ತರಿಸಿ ಮತ್ತೊಂದು ಕುಡಿ
ಮತ್ತೆ ಮತ್ತೆ ಕಸಿ ಕಟ್ಟುವುದು ಆ ಕೈ

ಊಡದೆ ಉಣ್ಣದೆ ಸತ್ತು ಕೊಲುವಿರಿ ನೀವು
ಬೆಲೆಯಿಲ್ಲ ಬೇರಿಗೂ
ಬೇರು ಮೊಗೆದ ನೀರಿಗೂ
ಎಲೆ ಎಲೆ ಕುಡಿದ ಬಿಸಿಲ ಹಾಲಿಗೂ
ಪುಷ್ಪಪಾಲಕನ ಕುಶಲ ಕಲೆಗೂ

ಹಾಡುತ್ತಲೇ ಇವೆ
ಮಣ್ಣು ನೀರು ಬಿಸಿಲು ಗಾಳಿ ಬಾನು
ಸಾಲ ಕೊಲುವ ಯುದ್ಧಕ್ಕೆ ಪ್ರತಿಹಾಡು
ಊಡಿ ಉಂಡು ಬಾಳಿಸುವ ಹಾಡು
ಲಾಲಿಸಿತು ನಾಟಿ ಗುಲಾಬಿ
ಲಾಲಿಸಿತು ಕಸಿಗುಲಾಬಿ

ಬೇರಿನಲಿ ನೀರಾಗಿ
ಎಲೆಯಲ್ಲಿ ಹಸಿರಾಗಿ
ಮೊಗ್ಗೆಯಲಿ ರಹಸ್ಯವಾಗಿ
ಹೂವಿನಲಿ ನಿಬ್ಬೆರಗು ರಂಗಾಗಿ ಅರಳಿದ ಗಳಿಗೆ

ನಾಟಿ ಗುಲಾಬಿಯ ಪುತ್ರ ಶೋಕವೂ
ಕಸಿಗುಲಾಬಿಯ ತಬ್ಬಲಿತನವೂ
ಹೊಸ ಹೊಸ ಹೂಗಳಾಗಿ
ಸಾವಿರ ಬಣ್ಣಗಳಲಿ ಅರಳಿದವು.

ಕೃಪೆ: ಪ್ರಜಾವಾಣಿ, ಬೆಂಗಳೂರು.

# ಗಜಲ್

- ಮುಕ್ತಾಯಕ್ಕ

ಜಗದ ಕಣ್ ತಪ್ಪಿಸಿ ನಾವು ಓಡಾಡಿದೆವು ಸ್ವಚ್ಛ ಹಗಲಿನಲ್ಲಿ
ಗೋಧಿ ತೆನೆಗಳ ಮರೆಯಲ್ಲಿ ಪ್ರೀತಿಸಿದೆವು ಸ್ವಚ್ಛ ಹಗಲಿನಲ್ಲಿ

ಜನ್ಮ ಜನ್ಮಾಂತರದಿಂದ ಹಂಬಲಿಸಿ ಕೂಡಿದಂಥಾ ಉತ್ಕಟತೆಯು
ಯಾರೊ ನೋಡುವರೆಂಬ ಶಂಕೆಯಲಿ ಆಡಿದೆವು ಸ್ವಚ್ಛ ಹಗಲಿನಲ್ಲಿ

ಮಧ್ಯಾಹ್ನ ಬೆಟ್ಟದ ನೆರಳಿನಲಿ ಮಿಡಿಯಿತು ಮಧುರ ಯಾತನೆಯ ಗೀತೆ
ಕಾಲವನು ಹಿಡಿದಿಡುವಂತೆ ಕೈಗಳ ಬೆಸೆದೆವು ಸ್ವಚ್ಛ ಹಗಲಿನಲ್ಲಿ

ಸಂಜೆಯ ಹೊಂಗಿರಣ ಅವನ ಮುಂಗುರುಳ ಶೃಂಗರಿಸಿ ಲಾಸ್ಯವಾಡಿತು
ವಿದಾಯ ಸನಿಹವಾದಂತೆ ಕಂಬನಿದುಂಬಿದೆವು ಸ್ವಚ್ಛ ಹಗಲಿನಲ್ಲಿ

ನಾವು ಪರಸ್ಪರ ಬೇರೆ ಬೇರೆ ಜಗತ್ತುಗಳಲಿ ಕಳೆದುಹೋದವರು
ಈ ಕ್ಷಣವನ್ನು ಹೇಗೋ ಹಿಡಿದುಕೊಂಡಿರುವೆವು ಸ್ವಚ್ಛ ಹಗಲಿನಲ್ಲಿ

ಅಗಲುವುದೇ ಈ ಬದುಕು ನಮಗೆ ಇತ್ತ ಕ್ರೂರ ಕಾಣಿಕೆಯೇನೋ
ವಲಸೆ ಬಂದ ಹಕ್ಕಿಗಳಂತೆ ನಾವು ಅಗಲಿದೆವು ಸ್ವಚ್ಛ ಹಗಲಿನಲ್ಲಿ

ಕೃಪೆ: ನಲವತ್ತು ಗಜಲುಗಳು, ಶಿಲ್ಪ ಪ್ರಕಾಶನ

# ಒದ್ದೆಕಣ್ಣಿನ ಬಾಗಿನ

- ಬಾನು ಮುಷ್ತಾಕ್

ಮೊರ ಅಂದರೆ ಗೊತ್ತಲ್ಲಾ?
ಕೇರುತ್ತೆ ಅದು, ಅಲ್ಲಿ
ಇಲ್ಲಿ ಮತ್ತು ಎಲ್ಲೆಲ್ಲೂ

ಆ ದಿನ...
ಸೇವಂತಿಗೆ ಹೂವು ಚಳ್ಳನೆ ನಗು
ಚಿಮುಕಿಸುತ್ತಿತ್ತು, ದಿನ ತುಂಬಿದ್ದ
ಮೋಡ ಎರಡೂ ಕೈಯಲಿ ಸೊಂಟ
ಹಿಡಿದು ಬೆವರಿನಿಂದ ತೊಯ್ದು
ಉಸ್ಸೆಂದಾಗ

ಆಕಾಶ ಭೂಮಿ ಮತ್ತು ಸಮಸ್ತವೂ ಗಲಗಲ
ಅಂತ ಚಿಮ್ಮುತ್ತಿದ್ದವು. ಅಸೂಯೆಯಿಂದ ಸೂರ್ಯ
ಕೆಂಪಾಗಿದ್ದ, ನನಗಿಲ್ಲದ ವಾತ್ಸಲ್ಯದಲ್ಲಿ ಇವಳು
ಹೇಗೆ ಮಿನುಗುತ್ತಾಳೆ ಅಂತ

ಅದೇನೂ ಎಂದಿನ ದಿನವಾಗಿರಲಿಲ್ಲ
ಸಂಭ್ರಮಕೇ ದೊಡ್ಡ ಮುಳ್ಳು ಚಿಕ್ಕ ಮುಳ್ಳು
ಅಂಟಿ ಜೂಟಾಟವಾಡುತ್ತಿದ್ದವಲ್ಲಾ

ಅಚ್ಚ ಕೃಷಿಕ ಬಸವರಾಜಣ್ಣನ ಎಡ
ಹೆಗಲಿನ ವಲ್ಲಿಯೊಡನೆ ಮಣ್ಣಿನ
ಗುಣ ಹೀರಿದ್ದ ನಾನು ಬಾನು
ವಿನಿಂದ ಜಯಾ ಆಗಿದ್ದು ಹೀಗೆ
ಯಾವುದೇ ಗೋಡೆಗಳಿರಲಿಲ್ಲ ಬಿಡಿ
ಪ್ರೀತಿಯ ಒಳ ಒರತೆಗಳು
ಜಿನುಗುವುದು ಹೀಗೆ ನೋಡಿ

ಸಾಬರ ಮಗಳು ಸಾಬರ ಸೊಸೆಗೆ
ಜೀವದುಂಬಿದ ಹಸಿ ಮಣ್ಣಿನ ಬಾಗಿನ
'ಜಯಾ.. ನಡಿಯವ್ವ ಹಬ್ಬಕೆ'
ಅರಿಶಿನದ ಎಲೆ ಕಡುಬು

ಗಂಡನ ಮನೆಯ ಕಸೂತಿ ನೆರಿಗೆಗಳ
ಸದಾ ಚಿಮ್ಮುತ್ತಿದ್ದರೂ ಎದೆಯಾಳದಲಿ
ಪಿಸುಗುಟ್ಟುದ್ದು ಆ ಎಲೆ ಹಸಿರು
ವಾತ್ಸಲ್ಯವ ನೆಯ್ದು ಸಾದಾ ಸೀರೆ

ಮಡಿಲಲಿ ತುಂಬಿಸಿ ಕವುಚಿದ ಮೊರವ
ಮರಳುವ ದಾರಿಯಲಿ ನಿಂತು
ಅರಳಿಮರವ ಕೇಳಿದ್ದೆ
ಹೇಗೆ ಕೊಂಡೊಯ್ಯಲಿ ಇದನು
ನನ್ನತ್ತೆ ಮನೆಗೆ ಅರಿಶಿನ ಕುಂಕುಮದೊಡನೆ

ಹೇಗೆ ಬಿಡಿಸಲಿ ಬಾಂಧವ್ಯದ ಎಳೆಗಳ
ರಂಗೋಲಿಯನು ಸಾಬರ ಮನೆ ಬಾಗಿಲಲಿ
ಕೊಡಲೇ ಯಾರಿಗಾದರೂ ದಾರಿಹೋಕರಿಗೆ?
ಕೊಡಬಹುದೇ ಅದನು ಯಾರಿಗಾದರೂ
ಆ ಒಲವನು ಬಲವನು
ಪಿತೃ ವಾತ್ಸಲ್ಯದ ಮಾತೃತ್ವವನು

ನೆನೆಸಿಕೊಂಡಾಗ ಈಗಲೂ
ಕಣ್ಣಂಚಿನಲಿ ತೇವ
ಮೊರದ ತುಂಬಾ ಬದುಕಿನ ಪಸೆಯ
ಹಸೆಯ ಬರೆದ ಬೇಸಿಗೆ ಹಕ್ಕಿಯ ವಿದಾಯ

ಬಸವರಾಜಣ್ಣ...
ನೀವು ಕೊಟ್ಟ ಮೊರಹೇಳುತ್ತೆ
ಮಿಡಿಯುತ್ತೆ ಸಹಸ್ರ ಆರೋಪಗಳೆದುರು
ಒಂಟಿಯಾಗಿ ನಿಲ್ಲುತ್ತೆ, ದ್ವೇಷದ ಎಲ್ಲಾ
ಭಾಷೆಗಳ ಕವುಚಿ ಹಾಕುತ್ತೆ ಮುಂಜಾವಿನ
ಹೊಂಬೆಳಕಿನೊಂದಿಗೆ ಪ್ರೀತಿಯ ನಿರ್ಮಲ
ಅಲೆಗಳು ಮೊರದ ತುಂಬಾ
ತೂರುತ್ತಿರುತ್ತವೆ.

ಕೃಪೆ: ಒದ್ದೆಗಣ್ಣಿನ ಬಾಗಿನ(೨೦೧೫) ಹಾಡ್ಲಹಳ್ಳಿ ಪ್ರಕಾಶನ, ಹಾಸನ.

# ಪರದೆ ಸರಿದಂತೆ

- ಡಿ. ಬಿ. ರಜಿಯಾ

ತಣ್ಣಗೆ ನಡೆದಿದೆ
ದೃಶ್ಯಗಳ ಅವಲೋಕನ
ಒಂದೊಂದೇ ಪರದೆ ಸರಿದಂತೆ
ಆಗೀಗ ಮೂಡುವ ಅಮ್ಮನ
ಮಬ್ಬು ಬೆಳಕಿನ ಚಿಂತನಾ ಪರಿ
ಪ್ರಸ್ತುತ ಸಹಜೀವನದ ಮಾದರಿ
ಆಕೆಯ ಜಗತ್ತೆ ನಿರಾಡಂಬರ
ನಿರಹಂಕಾರ ಆಳ ಕಣಿವೆಯ ಪ್ರಪಾತ
ಭೂತದ ಹಳಹಳಿಕೆಯಾಗಲಿ
ಸವಿ ಬುತ್ತಿಯ ಸಂವಹನವಾಗಲಿ
ಸಮಚಿತ್ತದಲ್ಲೆ ನಡೆಯುವಂಥ
ಕಥನ–
ಹದವರಿತ ಅಂತರಗಂಗೆ
ಯಾತನೆಯ ದಿಗಿಲು ಕಣಕಣದೊಳಗೆ
ಹೆಪ್ಪುಗಟ್ಟಿಕೊಂಡೆ ಮಿಸುಕಾಡದಂತ
ತಪ್ತ ನೆರಳು;
'ಹೊಕ್ಕುಳ ಬಳ್ಳಿ ಬಿಡಿಸಿಕೊಂಡಾಗ
ಜ್ವಾಲೆಗಳ ಯಮಯಾತನೆ'
ಮೌನದ ಆ ಕಣ್ಣುಗಳೊಳಗೆ
ಅಸ್ಮಿತ ನೋಟ
ಬೆಂದ ಬಸಿರಿನ ಗಾಯ
ತೆರೆಸರಿದ ಪ್ರದರ್ಶನದೊಳಗಿನ
ಬಯಲು ಬಯಲೆ

ಕೃಪೆ: ಪರದೆ ಸರಿದಂತೆ (ಸಂ) ಕೌದಿ ಪ್ರಕಾಶನ ೨೦೧೭

# ತಾವರೆಯ ಕೊಳದಂತಿಹುದೀ ಲೌಕಿಕದ ಬಾಳು

- ಡಾ. ಲತಾ ರಾಜಶೇಖರ್

ಆವರಿಸಿತ್ತು ಬೃಹತ್ ಜನ ಸಮೂಹವು
ಪ್ರಭುವನು, ಮುತ್ತುವಂತೆ ಹಕ್ಕಿಗಳು ಧಾನ್ಯರಾಶಿಗೆ.
ಆದೇಶಿಸಿದನಾ ಗುರುವಾಗ ತನ್ನ ಶಿಷ್ಯರಿಗೆ, ತೆರಳಲೆಂದು
ಸರೋವರದ ಆಚೆ ತೀರಕೆ.

ಆ ಸಮಯಕೆ, ಬಂದನೋರ್ವ
ಧರ್ಮಶಾಸ್ತ್ರಿಯು ಗುರುವ ಬಳಿಗೆ. ಮಣಿದವನಿಂತು
ಹೇಳಿದನು ಪ್ರಭುವಿಗೆ: 'ಗುರುವೆ ಹಿಂಬಾಲಿಸುವೆ ನಾ
ನಿಮ್ಮನು ನೀವೆಲ್ಲಿಗೆ ಹೋದರು!'

ನೈದಿಲೆಯ ನೋಟ ಬೀರಿ,
ಮಲ್ಲಿಗೆಯ ನಗೆಚೆಲ್ಲಿ ನುಡಿದನಾ ಯೇಸು ತಂಬೆಲರ
ನುಡಿಯಲಿ, 'ಬಂಧುವೆ, ನರಿಗಳಿಗೆ ಗುಹೆಯಿಹುದು
ಹಕ್ಕಿಗಳಿಗೆ ಗೂಡಿಹುದು. ಆದರೀ ನರಪುತ್ರನಿಗೆ, ಎಡೆ
ಇಲ್ಲ, ಅವನ ತಲೆಯಿಡಲು!'

ಅಪ್ಪರಲಿ ಪ್ರಾರ್ಥಿಸಿದನಿಂತು
ಅವನನು ಶಿಷ್ಯರಲಿ ಓರ್ವನು; 'ನೀಡಿರೆನಗೆ ಒಂದಿಷ್ಟು
ಸಮಯವನು ಗುರುವೆ, ಎನ್ನ ತಂದೆಯವರ ಉತ್ತರ
ಕ್ರಿಯೆಯನ್ನು ಮುಗಿಸಿ ಬರಲು.'

'ಪ್ರಿಯನೆ, ಮಾಡಿಕೊಳ್ಳಲಿ
ಸತ್ತವರೇ ತಮ್ಮ ಸತ್ತವರ ಸಮಾಧಿಗಳನು! ಚಿಂತಿಸದೆ
ಅದಕಾಗಿ ನೀನು, ಹಿಂಬಾಲಿಸೀಗಲೇ ಎನ್ನನು!'

ಮತ್ತೋರ್ವನಾಗ
ಬಂದು ಮುಂದಕೆ ವಂದಿಸುತ ಇಂತೆಂದ ಗುರುವಿಗೆ;
'ಹಿಂಬಾಲಿಸುವೆನು ನಾ ನಿಮ್ಮ ಪ್ರಭುವೆ. ಆದರೆನಗೆ
ಅಪ್ಪಣೆಯಾಗಬೇಕು ಬೀಳ್ಕೊಟ್ಟು ಬರಲೆನ್ನ ಮನೆಯ

ವರನು.'
ನಗೆ ಚಂದ್ರಕಾಂತಿಯು ಅರಳಿ
ಬೆಳಗಿರಲು ವದನದಲಿ, ಇಂತೆಂದನಾ ಗುರುವರನು;
'ಶಿಷ್ಯನೆ, ಉಳುಮೆಗೆಂದು ಕೈಹಾಕಿ ನೇಗಿಲಿಗೆ, ತಿರುಗಿ
ನೋಡುವವನಾದರೆ, ತಕ್ಕವನಲ್ಲ ಅವನು ಆ ದೇವ
ಸಾಮ್ರಾಜ್ಯಕೆ!'

ದೀಪ್ತ ಮೌನಸರಿತವದು
ಹರಿಯಿತಲ್ಲಿ ಕೆಲಗಳಿಗೆ ತಣ್ಣಗೆ! ನಂತರದಲಿ
ನುಡಿದನಾ ಅಂಬುಜಾಸ್ಯನು ಕುರಿತು ಅವರನು
ತನ್ನ ಹೊನ್ನಲರ ನುಡಿಗಳಲಿ!

'ಶಿಷ್ಯರೇ ಮನೆಯ ಹಂಗೇಕೆ
ಅದ ತೊರೆದು ಬರುವವಗೆ? ತೊರೆದು ಬರಬೇಕು
ಇದ್ದುದನು ಇದ್ದಂತೆಯೆ, ಬರಬಯಸಿದರೀ ವೈರಾಗ್ಯ
ಪಥಕೆ! ಚಂಚಲವಾಗಿರಲಾ ಮನವು ನೀರಿನಂತೆ,
ಆಧರಿಸಿ ಅದನು ನೀವು ತೆರೆಳದಿರಿ ಹಿಂದಕೆ! ಹೊಳೆವ
ತಾವರೆಯ ಕೊಳದಂತಿಹುದೀ ಲೌಕಿಕದ ಬಾಳು;
ಸೆಳಕೊಳ್ಳುವುದೆಮ್ಮನು ಒಡನೆ, ಒಳಗೆ ಕಾಲಿರಿಸೆ!
ಸುಲಭ ಸಾಧ್ಯವಲ್ಲ ಚಕ್ರವ್ಯೂಹದಂತಿಹ ಅದರಿಂದ
ಹೊರಬರಲು! ಅಂತೆ ಹುಡುಕುವುದು ಒಂದಲ್ಲ ಒಂದು
ನೆಪವನ್ನು ಮನವೆಂಬ ಮರ್ಕಟವು. ದೊರೆಯುವುವು
ಇಂಥ ಅವಕಾಶಗಳು ಬಾಳಿನಲಿ ಒಮ್ಮೊಮ್ಮೆ ಮಾತ್ರವೆ,
ಬಳಸಿಕೊಳ್ಳಬೇಕವನು ನಾವು, ಅವು ಬಂದಾಗಲೆ!'

ಮಾರ್ನುಡಿಯದೆ, ಮೌನನದಿ
ತಳದ ಹರಳುಗಳಂತಾಗಲಾ ಅನುಯಾಯಿಗಳು,
ಸಾಗಿಹನು ಏಸು ಮುಂದಕೆ, ದೇವವೃಷಭದಂತೆ!

ಕೃಪೆ: ಯೇಸು ಮಹದರ್ಶನ (ಮಹಾಕಾವ್ಯ) ಕಾವೇರಿ ಪ್ರಕಾಶನ ಮೈಸೂರು
೨೦೦೭

# ನಾವು ಕಚ ಕುಚಗಳ ಬಗ್ಗೆ ಬರೆಯಬಾರದು

- ಪ್ರತಿಭಾ ನಂದಕುಮಾರ್

ನಾವು ಕಚಕುಚಗಳ ಬಗ್ಗೆ ಬರೆಯಬಾರದು
ನೀವು ಅದನ್ನು ವಿರೂಪಗೊಳಿಸಬಹುದು!
ನಾವು ತೊಡೆ ಜಘನ ನಾಭಿ ಸ್ಥಳಗಳನ್ನು ಕಾಣಿಸಬಾರದು
ನೀವದನ್ನು ಅತಿಕ್ರಮಿಸಿ ಸ್ಥಾಪಿತರಾಗಬಹುದು!
ನಾವು ಯೋನಿಗೆ ಅಪಚಾರವಾಗದಂತೆ ಕಾಯ್ದಿರಿಸಿಕೊಳ್ಳಬೇಕು
ನೀವರದ ಅತ್ಯಾಚಾರಕ್ಕೆ ಸದಾ ಹಾತೊರೆಯಬಹುದು!
ನಮ್ಮ ಗರ್ಭದೊಳಗೆ ಹೆಂಗೂಸು ಹುಟ್ಟಬಾರದು
ನೀವು ಹುಟ್ಟುಕಂದಮ್ಮಗಳನ್ನು ಮುಟ್ಟುಹಾಕಿಕೊಳ್ಳಬಹುದು!
ನಾವು ಹೊಸಿಲು ದಾಟಿದರೂ ಅಡುಗೆ ಮನೆಯೊಳಗೆ ಬೆಂದರೂ
ಮೆಟ್ಟಿಲು ಹಜಾರ ಅಂಗಳ ಅಡುಗೆ ಮನೆಯೊಳಗೆ ಬೆಂದರೂ
ಕೂತರೂ ಮಲಗಿದರೂ ಮಂಡಿಮಡಚಿ ಗುಬುರಿಟ್ಟು ಗೋಗರೆದರೂ
ನೀವು ಭವಿಷ್ಯ ನುಡಿಯಬಹುದು
ಇಂಥಲ್ಲಿ ಇಷ್ಟು ಹೊತ್ತಿಗೆ ಹೀಗೆ ಇಂಥವರಿಂದ
ವಿನಾಕಾರಣ ಅತ್ಯಾಚಾರಕ್ಕೊಳಗಾಗುತ್ತೀರಿ!
ತಂದೆ ಅಣ್ಣ ತಮ್ಮ ಗಂಡ ಮೈದುನ ಭಾವ ಪಕ್ಕದ ಮನೆಯವಳ ಗಂಡ
ಒಂದು ಶಿಶ್ನವಷ್ಟೇ ಅಸ್ತಿತ್ವವುಳ್ಳ ಗಂಡುಪ್ರಾಣಿ ಯಾವುದಾದರೂ
ನಮ್ಮನ್ನು ಶೀಲದಿಂದ ಅಶ್ಲೀಲದೆಡೆಗೆ
ಮಾನದಿಂದ ಭಂಗದವರೆಗೆ
ಪಾವಿತ್ರ್ಯದಿಂದ ಮಾಲಿನ್ಯಕ್ಕೆ
ಪತಿವ್ರತೆಯಿಂದ ಕುಲಟೆಯಾಗಿಸಿ
ಸತಿಯಿಂದ ಸೂಳೆಯಾಗಿಸಿ
ಸ್ಥಾನ ಪಲ್ಲಟಗೊಳಿಸಬಹುದು
ನಾವು ಭಯಭೀತರಾಗಿ ಬೆಚ್ಚಿ
ಮುಚ್ಚಿಕೊಳ್ಳಬೇಕು ಮೈ ಮನಸ್ಸನ್ನು
ಕತ್ತರಿಸಿಕೊಳ್ಳಬೇಕು ಸ್ತನಗಳನ್ನು
ಹೊಲಿದುಕೊಳ್ಳಬೇಕು ಯೋನಿಗಳನ್ನು
ಜಾರಿಸಿಕೊಳ್ಳಬೇಕು ಬಸಿರುಗಳನ್ನು
ಒರೆಸಿಕೊಳ್ಳಬೇಕು ರಕ್ತಸಿಕ್ತ ತೊಡೆಗಳನ್ನು

ಬಿಗಿಹಿಡಿಯಬೇಕು ಜಜ್ಜಿದ ತುಟಿಗಳನ್ನು
ಎಂದು ಭ್ರಮಿಸಿ ನಿಮ್ಮ ಪುರುಷತ್ವದ ಅಹಮ್ಮಿನಲ್ಲಿ
ಹೀಗೆ ತೇಲಿದರೆ ಗಾಳಿ ತುಂಬಿದ ಬಲೂನಿನಲ್ಲಿ
ಬಹಳ ಬೇಗ ನೆಲಕ್ಕಿಳಿಯುವಿರಿ ಚುಚ್ಚು ನಿಜದ ಸೂಜಿ
ಸ್ರಾವ ನಿಂತರು ಹೆಣ್ಣು ಹೆಣ್ಣೇ
ನಾವೇನೋ ಹೇಗೋ ಸವೆಸುವೆವು ಕಾಲ ಆದರೆ...
ಅಪಕಾ ಕ್ಯಾ ಹೋಗಾ ಜನಾಬೇ ಆಲೀ...

**ಕೃಪೆ:** ಪ್ರೇತಗಳೆಂದು ಕರೆಯಲು ಮನಸ್ಸಾಗದು, ಅನೇಕ (ಪ್ರಕಾಶನ) ೨೦೧೫

❖

# ಮನೆಯೊಡೆಯರೆಲ್ಲ ರಾಜಾರೋಸು

- ಮಾಧವಿ ಭಂಡಾರಿ ಕೆರೆಕೋಣ

ಮನೆಯೊಳಗೂ ಹುಲ್ಲು ಹುಟ್ಟಿದೆ
ತೊಟ್ಟಿಲೊಳಗೆಲ್ಲ ರಜ ತುಂಬಿದೆ

ಮೂಲೆಯಲ್ಲಿ ಕುಳಿತ ಚಪ್ಪಲಿಗಳು
ಬಾಗಿಲಿಗೇ ಸಡ್ಡು ಹೊಡೆದಿವೆ
ರದ್ದಿ ಸೇರಬೇಕಾದ ಸುದ್ದಿ ಪತ್ರಿಕೆಗಳು
ಪುಟಪುಟಗಳಾಗಿ ಮನೆಯ ಸುತ್ತಿವೆ

ಅಡುಗೆ ಮನೆಗೆ ಕಾಲಿಟ್ಟರೆ
ಗವ್ವನೆ ಗಬ್ಬು ವಾಸನೆ
ಸೀದು ಹೋದ ಅನ್ನ, ಹಳಸಿದ ಸಾರು,
ಮುಗ್ಗಿದ ಮೂಲಂಗಿ, ಕೊಳೆತ ಮೊಟ್ಟೆ
ಇರುವೆ ಮುತ್ತಿದ ಚಹ
ಸ್ಟೌವ್ವಿನ ಕೆಳಗೆಲ್ಲ
ಬೇಸನ್ನಿನ ತುಂಬೆಲ್ಲ ಅನ್ನದಗುಳು
ಅರೆಬೆಂದ ತೊಗರಿ
ಒಗ್ಗರಣೆಯ ಕರಿಬೇವು ಹಸಿಮೆಣಸು

ಜಾಮಾಗಿ ನಿಂತ ನೀರಲ್ಲೇ
ತೇಲುತ್ತಿರುವ ಪಾತ್ರೆಗಳು
ಹೊಟ್ಟೆ ತೊಳಸಿ ವಾಕರಿಕೆ

ಬಚ್ಚಲು ಮನೆಯ ಟೈಲ್ಸೋ
ಕಾಲಿಟ್ಟರೆ ಪಸಕ್ಕು
ಹಾಯಾಗಿ ಮಲಗಿದ ಚಡ್ಡಿ
ಅಂಡರ್‌ವೇರ್, ಬನಿಯನ್, ಲುಂಗಿ.....
ಮಗ್ಗಿನಲ್ಲೊಂದಷ್ಟು ಸೋಪು ನೀರು
ಬುಡಮೇಲಾಗಿ ಬಿದ್ದ ರೇಜರ್, ಬ್ಲೇಡು......

ಅರೆತೆರೆದ ಫ್ರಿಜ್ಜು
ಹಾಲು ಎಗರಿಸಿ ಕೆನೆ ನೆಕ್ಕಿ ಹಾರಿ ಹೋದ
ಬೆಕ್ಕಿನ ಕಳ್ಳ ಹೆಜ್ಜೆಯ ಗುರುತು

ಟೀಪಾಯಿಯ ಮೇಲೆ
ಆಷ್‌ಟ್ರೇ ತುಂಬಿ ತುಳುಕಿದ
ಮೋಟು ಸಿಗರೇಟು
ಡಿಸ್ಟೈನಿನ ಗ್ಲಾಸು
ನೀರಾದ ಐಸ್ ಕ್ಯೂಬು

ಮಂಚದ ಮೇಲೆ
ಮುದ್ದೆಯಾದ ಬೆಡ್‌ಶೀಟ್
ತಿರುಗಿ ತಿಕ್ಕಲಾದ ತಲೆದಿಂಬು
ಕೆಳಗೆ ನದರು ತಪ್ಪಿ ಜಾರಿಬಿದ್ದ
ಬಕಲ್ ಹರಿದ
ತುಸುವೇ ಗಾತ್ರದ ಬ್ರಾ.....

ಮನೆಯೊಡೆಯರೆಲ್ಲ ರಾಜಾರೋಸು
ಮನೆಯೊಳಗೆ ಮನೆಯೊಡತಿ ಇಲ್ಲ.

**ಕೃಪೆ:** ಮೌನ ಗರ್ಭದ ಒಡಲು, ಬಂಡಾಯ ಪ್ರಕಾಶನ, ಕೆರೆಕೋಣ. ೨೦೧೪

# ನೀ ಹೀಗೆ ಮಾಡಬಾರದಿತ್ತು

- ಸುಕನ್ಯಾ ಮಾರುತಿ

ನೀ ಪಟ್ಟ ಬವಣೆ ಕಂಡ ಮೇಲೂ
ನೀ ಬಿಟ್ಟ ಸೀರೆ ಉಡಬಾರದಿತ್ತು ಸಖೀ
ಅಂಚು ಕಿತ್ತು ಒಡಲು ಸತ್ತರೂ
ಗತವೈಭವ ಬಿಡದ ಸೀರೆ,
ಬಣ್ಣಗೆಟ್ಟು 'ಸೆರಗು' ಹರಿದರೂ
ಕೊರಳೆತ್ತಿ ಸುತ್ತಿ ಬಿಗಿದ ಸೀರೆ,
ಜಾಳುತನ ಮೈಮುಚ್ಚದಿದ್ದರೂ
ಒಂದೊಂದು ನಿರಿಗೆಯೂ
ಗುದಮುರಿಗೆಯಾದ ಸೀರೆ.

ಹೇಳು ಗೆಳತಿ,
ಒಂದೊಂದೇ ನಿರಿಗೆ ಕಳಚುತ್ತ
ನಿರಾಳವಾಗಿ
ಈ ಸೆರೆಯಿಂದ ನೀ
ಪಾರಾದ ಕತೆಯ,
ಆಗಲಾದರೂ ನೀಗಬಹುದೋ
ಈ ವ್ಯಥೆಯ

ನಿನ್ನಂತೆ ನಾನೂ ದಿಗಂಬರ
ಉಡಬಯಸಿದ್ದೇನೆ
ಸಾವಿಲ್ಲದ ಕೇಡಿಲ್ಲದ
ರೂಹಿಲ್ಲದ ನೆರಿಗೆಯಿಲ್ಲದ ಸೀರೆ,
ಒಡಲಿಲ್ಲದ ಅಂಚಿಲ್ಲದ
'ಸೆರಗಿ'ಲ್ಲದ ಸೀರೆ.

ಹೇಳು ಕೆಳದಿ, ಈ
ಅಂಬರ ನೀನುಟ್ಟ ಬಗೆಯ.
ಹುಲ್ಲು ಮೊರಡಿ ಬಿಟ್ಟು

ಗಿರಿಯಲ್ಲಾಡುವ ಪರಿಯ,
ನೀಡು ತಾಯಿ
ಬೆಟ್ಟದ ಮೇಲೆ ಮನೆಯ ಮಾಡಿ
ಮೃಗಗಳಿಗಂಜದ ಎದೆಯ

ಬಂಜೆ ಬೇನೆಯುಣ್ಣುತ್ತಿದ್ದೇನೆ,
ಕರ್ಪೂರದ ಉರಿಯಾಗಿ
ಕದಳಿ ದಾರಿಯ ನೀ ತೋರಿದರೆ
ಬೇನೆ ಬೆಸಲಾಗಿ
ಬಯಲಾಗಬೇಕೆಂದಿದ್ದೇನೆ
ಸೀರೆಯ ಹಂಗು ಹರಿದು
ನಿರ್ವಯಲಾಗಬೇಕೆಂದಿದ್ದೇನೆ.

**ಕೃಪೆ:** ಬಿಂಬದೊಳಗಣ ಮಾತು(೨೦೦೪). ಸಿವಿಜಿ ಪ್ರಕಾಶನ, ಬೆಂಗಳೂರು.

❖

# ಸೀರೆ

- ವಿಜಯಶ್ರೀ ಸಬರದ

ತಾಯಂತೆ ಸೀರೆಯುಟ್ಟು
ನಿರಿಗೆ ಚಿಮ್ಮಿಸುತ್ತ
ಓಡಾಡುವಾಸೆ ಮಗಳಿಗೆ
ಮೈಮೇಲೆ ಚಿಟ್ಟೆ ಕುಣಿಸುತ್ತ
ಬಣ್ಣ–ಬಣ್ಣದ ಕನಸು
ಕಾಣುವಾಸೆ ಹಸುಳೆಗೆ

ಸೀರೆಯ ಭಾರ ಹೆಚ್ಚು
ನಿರಿಗೆಯೊಳಗೆ ಮಗಳು
ಕಳೆದು ಹೋದಾಳೆಂಬ ಆತಂಕ ತಾಯಿಗೆ

ಬಣ್ಣದಂಚಿಗೆ ಬೆರಗಾಗಿ
ಹೆಣಭಾರದ ಸೀರೆ ಹೊತ್ತು
ಮೇಲೇಳಾಲಾರದನುಭವ ಅವಳಿಗೆ

ಮಗಳು ಸೀರೆಯ ಕಂಡು ಕುಣಿದು ಕುಪ್ಪಳಿಸುತ್ತಾಳೆ
ತವರು ಬಣ್ಣವನುಟ್ಟು ಸಂಭ್ರಮಿಸುತ್ತಾಳೆ
ವಾಲಗದ ನಡುವೆ ವಿಜೃಂಭಿಸುತ್ತಾಳೆ

ತಾಯಿ ಉಡಿಸಿದ ಸೀರೆಯನುಟ್ಟು ನಿಂತಾಗ
ಸಿರಿದೇವಿಯೆಂದ, ಭೂದೇವಿಯೆಂದ
ನಕ್ಷತ್ರಗಳನು ಮುಡಿದ ಬೆಳದಿಂಗಳೆಂದ
ಅವನ ಪ್ರೀತಿಯ ಮಾತಿಗೆ
ಧುಮ್ಮಿಕ್ಕುವ ಜಲಪಾತವಾದಳು
ಆತ ಸೀರೆಯ ನಿರಿಗೆಯಲ್ಲಿ
ಮುಖವಿಟ್ಟಾಗ ಅರಳಿನಿಂತಳು
ಐದು ಮಳದ ಸೀರೆಯ ಬಿಟ್ಟು
ಎರಡು ಮಳದ ಬಟ್ಟೆಯೊಳಗಿಣುಕಿದಾಗ

ನಿರಿಗೆಯ ಸುಳಿಗೆ ಸಿಕ್ಕು ತತ್ತರಿಸಿದಳು
ತಾನು ತಾಯಿಯಾಗಿ
ತನ್ನ ಮಗಳು ಸೀರೆಬೇಕೆಂದು ಕೇಳಿದಾಗ
ತಾಯಿಯ ನೆನಪಾಯಿತು

ಹೀಗೆ ಮಗಳು–ತಾಯಿಯಾಗುತ್ತಾಳೆ
ತಾಯಿ–ಅಜ್ಜಿಯಾಗುತ್ತಾಳೆ
ಆದರೆ ಸೀರೆ ಮಾತ್ರ ಬೇತಾಳದಂತೆ ಬೆನ್ನು ಹತ್ತಿದೆ!

**ಕೃಪೆ:** ಮುಗಿಲಮಲ್ಲಿಗೆ (ಸಂಕಲನ) ಪಲ್ಲವಿ ಪ್ರಕಾಶನ ಕಲಬುರ್ಗಿ ೨೦೧೦

# ಸಿಕಾಡ ಮತ್ತು ಪ್ರೇಯಿಂಗ್ ಮ್ಯಾಂಟಿಸ್

- ಎಲ್. ಸಿ. ಸುಮಿತ್ರಾ

ತಲೆಯಿಲ್ಲದ ಜೀರುಂಡೆ ಮಿಡತೆಯ ಬಾಯಲ್ಲಿ
ನಿಲ್ಲದ ಸದ್ದು ಜೀರುಂಡೆಗೆ ಸಿಕಾಡ ಎಂದೇಕೆ ಹೇಳಬೇಕು?
ಕೈ ಮುಗಿದೇ ತಲೆ ತಿನ್ನುವ ಈ ಪರಿ
ಪುರಾತನವಾದರೂ ನಿತ್ಯ ನೂತನ ಕ್ರೌರ್ಯ.

ಜೀರುಂಡೆಯ ಜೀರ್ ಜಿರ್ರೋಂ ಕೇಳಿದಾಗೆಲ್ಲಾ
ಮುಸ್ಸಂಜೆಯ ಮುರುವಿನೊಲೆಯ ಧಗಧಗ ಜ್ವಾಲೆ
ಛಳಿ, ಕೊತಕೊತಿಸುವ ಹುರುಳಿಸಾರು
ಸೀತು, ಲಕ್ಷ್ಮೀ, ನಾಗು ಒಣಗಲಿಟ್ಟ ಗುಬುರುಗಳಂತೆ

ಜೀರುಂಡೆ ದನಿಯಲ್ಲಿ ಸೇರಿಹೋದ ನಾಗುವಿನ
ಕೀರಲುದನಿ, ಸಸಿನೆಟ್ಟಿಯ ಹಾಡಿನ ನಡುವೆ
'ಸಣ್ಣಮ್ಮನಿಗೆ ಒಳ್ಳೆಯ ಗಂಡ ಸಿಗಲಿ ಪಾಪಣ್ಣಾ
'ಮೇಲ್ ಶೆಟ್ರ್' ಆಯ್ಲಿ'

ಬೆಂದ ಹಲಸಿನ ಬಿತ್ತ ಕೆಂಡದಿಂದ ತೆಗೆವಾಗ
ಜೋರು ಜೀರುಂಡೆ ಸ್ವರಮೇಳ ಧೋಮಳೆಯಲ್ಲಿ ವಿಲೀನ
ಮುಸ್ಸಂಜೆ ರಾಜಕುಮಾರಿಯ ಕನಸು ಮಳೆಯಲ್ಲಿ ತೊಳೆದು
ಮಳೆಗಾಲ, ಒದ್ದೆ ನೆಲ, ಖಾಲಿಜೇಬು, ಒಂಟಿತನ
ಜೀರುಂಡೆ ದನಿ

ಜೀರುಂಡೆಗೆ ಸಿಕಾಡ ಎಂದೇಕೆ ಹೇಳುತ್ತಾರೆ?

ಕೊಂದು ತಿನ್ನುವುದಲ್ಲ ತಿಂದು ಬದುಕುವುದು ಕೀಟ ಪ್ರಪಂಚ
ಇವರೋ ಬದುಕನ್ನೇ ನುಂಗುವ ಧಾರ್ಮಿಕರು
ಶತಮಾನಗಳಿಂದ ಮುಗಿಯದ ಧರ್ಮರಕ್ಷಣೆ
ಅಡಕೆತೋಟ ಗದ್ದೆಯ ನುಂಗಿ ಕೀಟನಾಶಕ ರೈತನ ನುಂಗಿ
ಮೆಲಕು ಮೌನವಾಗುವ ಮೊದಲೇ ಮತ್ತದೋ ಜೀರುಂಡೆ
ದನಿ
ಅಂದ ಹಾಗೆ ಜೀರುಂಡೆ ಜಗತ್ತಿನಲ್ಲೂ ಹೆಣ್ಣಿಗೆ ದನಿಯಿಲ್ಲ

ಕೃಪೆ: ಬಕುಲದ ದಾರಿ (೨೦೦೪) ಅಕ್ಷರ ಪ್ರಕಾಶನ, ಹೆಗ್ಗೋಡು, ಶಿವಮೊಗ್ಗ ಜಿಲ್ಲೆ

# ತಲ್ಲಾಕಿನ ಕತ್ತಿಗಳು

- ಕೆ ಷರೀಫಾ

ಅದು ಕೋಟೆಯಂತೆ ಕಟ್ಟಿದ ಗೋಡೆ
ದಪ್ಪ ದಪ್ಪ ಕಪ್ಪು ಕಲ್ಲಿನ ಕೋಟೆ
ಗೋಡೆಯಾಚೆ ಸ್ವಚ್ಛಂದ ಪಾರಿವಾಳಗಳು
ಗೋಡೆಗಳ ಮಧ್ಯೆ ನಾನು ಸಮಾಧಿ

ಬದುಕು ಕಬ್ಬಿಣದ ಕಠಿಣ ಹಾದಿ
ಹಿಮಾಲಯದ ಹಿಮನೀರು ನಾನಾದರೆ
ಬಿಸಿನೀರ ಬುಗ್ಗೆಯಂತೆ ಕುದಿವ ನೀರವನು
ಕಿಲುಬುಗಟ್ಟಿದ ಸಂದುಗೊಂದುಗಳಲ್ಲಿ
ನನಗಿಲ್ಲ ರಕ್ಷಣೆಯ ಭದ್ರ ಬುನಾದಿ.

ಮೂರು ಮಡದಿಯರಿಟ್ಟು
ನಾಲ್ಕನೆಯವಳ ಮೇಲೆ ಕಣ್ಣು ನೆಟ್ಟು
ಆಕಳಿಸಿ ಕಿಟಕಿಯಲಿ ಇಣುಕಿದರೂ ಸಾಕು
ಭಯಗೊಂಡು ಚಿಟ್ಟನೆ ಕಿರುಚುತ್ತಾನೆ
'ಬೇಗಂ ನನ್ನ ಹುಕ್ಕಾ ಎಲ್ಲಿ?
ತಲೆ ಕೆಟ್ಟಿದೆಯಾ ಪರದೆಯ ಇಳಿಬಿಡು'
ಇಣುಕಿದೆಯಾ ಜೋಕೆ, ತಲ್ಲಾಕಿನ ಕತ್ತಿ
ತೂಗುತ್ತಿದೆ ನೆತ್ತಿ ಮೇಲೆ ಗೊತ್ತಿಲ್ಲವೆ?

ಚಂದ್ರನ ಹಾಲು ಬೆಳದಿಂಗಳಿಲ್ಲ
ವಸಂತನ ಆಗಮನದ ಸಂಭ್ರಮವಿಲ್ಲ
ನಿಷೇಧದ ಗೋಡೆಗಳ ಮಧ್ಯದಿಂದ
ನಿರಾಸೆಯ ಗೂಡಿನಲಿ ಬಂಧಿಸಿ ಒಮ್ಮೆ
ಕೊಡವಿ ಕೇಳಿದಳು 'ಹೆದರಿಸದಿರು ನನಗೆ
ತಲ್ಲಾಕಿನ ಕತ್ತಿಯನು ತಿವಿದು.'

ಪಹರೆಯ ಗೋಡೆಗಳ ಕಲ್ಲು ಶಿಥಿಲವಾಯ್ತು
ಸೋತ ಕೈಗಳಲ್ಲೀಗ ಶಕ್ತಿ ಸಂಚಾರವಾಯ್ತು
ಬಂಧನ ಕಳಚಿ ತಿರುಗಿ ನಿಂತು ಕೇಳಿತು,
'ನಿನಗೆ ಜನ್ಮ ಕೊಟ್ಟ ತಾಯಿ ನಾನು
ಎದರಿಸದಿರು ತಲ್ಲಾಕಿನ ಕತ್ತಿಯಿಂದ'

ನೀನವಳ ಮಡಿಲಕೂಸು ತಾನೇ.

**ಕೃಪೆ:** ಸಂತಳ ಜೋಳಿಗೆಯ ರೊಟ್ಟಿ(೨೦೧೩) ಸಿವಿಜಿ ಇಂಡಿಯಾ, ಬೆಂಗಳೂರು.

# ಅವರಂತಾಗದೆ

- ಮೀನಾ ಮೈಸೂರು

ಹಟ್ಟಿಯ ತಲೆಗಂಬವಾಗಿ
ಹೊಲಗದ್ದೆ ತೋಟಗಳಿಗಾಗಿ
ಜೀವ ತೇಯ್ದುಕೊಂಡ ಅಜ್ಜಿ
ಅಜ್ಜನೊಳಗೆ ತನ್ನ ಅಸ್ತಿತ್ವವನ್ನರಸುತ್ತಾ
ಊರ ಹೋರಿಯಂತಿದ್ದವನನ್ನೂ ಹರಸಿ
ಸದ್ದಿಲ್ಲದೆ ಹೊದ್ದುಕೊಂಡು
ಬೆಚ್ಚನೆಯ ಭಾವವನ್ನು ಸ್ಫುರಿಸುತ್ತಿದ್ದಳು.

ಅಪ್ಪನ ಅಹಂಗಳಿಗೆ ಕಾವಿತ್ತು, ತಾವಿತ್ತು
ಮೈ–ಮನಗಳು ನಲುಗಿದರು
ಮೌನದಲಿ ಮೂಗೆತ್ತಾದರೂ ಅಮ್ಮ
ಸಂಭ್ರಮದ ಹೊಳೆ ಹರಿಸಿ
ಹಣತೆಯ ಬೆಳಕಾಗಿ
ಜತನದಿ ಮನೆಯ ಕಾಪಿಟ್ಟಳು.

ಗಂಡನ ಅಟ್ಟಹಾಸ ಮೆಟ್ಟುತ್ತಲೇ
ಒಳಗೆ ಗಾಣದೆತ್ತು
ಹೊರಗೆ ಕರೆವ ಹಸುವಾದ ಅಕ್ಕ
ಕೆಚ್ಚಲಲಿ ರಕ್ತ ಬರುವವರೆಗೂ
ಹಿಂಡಿಕೊಂಡರೂ ಎಲ್ಲರನೂ ಸಲಹಿ ಸಾವರಿಸಿ
ಮನೆಯ ಮುನ್ನೆಡೆಸಿ ಧನ್ಯಳಾದಳು

ಅಜ್ಜಿ ಅಮ್ಮ ಅಕ್ಕ
ಅಂತೂ ಇಂತೂ ಸಂಸಾರ ಸಾಗರವ
ದಾಟಿ ದಾಟಿಸಿ 'ತ್ಯಾಗ'ಕ್ಕೆ ಪರ್ಯಾಯವಾದರು
'ಕ್ಷಮೆಯಾ ಧರಿತ್ರಿ' ಎನಿಸಿದರು.
ಅಜ್ಜಿ ಮನೆ– ಹೊಲ–ಗದ್ದೆ ಕೆಸರಲ್ಲಿ

ಬೆವರಿಳಿಸಿ ಕನಸ ಬಿತ್ತಿದಳು
ಅಜ್ಜಿ ಬಿತ್ತಿದ್ದ ಕನಸ
ಅಮ್ಮ ಗೋಡೆಯೊಳಗೆ ಚಿಗುರಿಸಿದಳು
ಅಕ್ಕ ಆ ಚಿಗುರಿಗೆ ಜಿಗಿತವಿತ್ತಳು.

ಆದರೆ ನಾನು?
ಅವರಂತಾಗದೆ, ವಿಶಾಲ ವಿಶ್ವಕ್ಕೆ
ತೆರೆದುಕೊಂಡೆ
ಎಡ–ಬಲ–ಮಧ್ಯಮ
ಪಂಥಗಳ ನಡುವೆ
ತಾಕಲಾಟ ದ್ವಂದ್ವದಾಟ
ಕೋಣ ನೀರಿಗೆ ಎತ್ತು ಏರಿಗೆ
ಹದವರಿಯದೆ ತಾಳ ತಪ್ಪಿ
ಸೆರಗ ಕೆಂಡದೊಳಗೆ ದಹಿಸುತ್ತಾ
ಅತ್ತ ಅವರಂತಾಗದೆ–ಇತ್ತ ಇವರಂತಾಗದೆ
ಸೂತ್ರ ಹರಿದ ಪಟವಾದೆ!

(ಅಪ್ರಕಟಿತ )

# ಹೆಸರಿಲ್ಲದವರು

- ಡಾ. ಮಲ್ಲಿಕಾ ಘಂಟಿ

ನನಗೆ ಹೆಸರಿಲ್ಲ ನನ್ನೆದೆನ್ನುವ ಮನೆಯಿಲ್ಲ
ಗುರುತು ಮರೆತದ್ದಕ್ಕೆ ದಾಖಲೆ
ಕೇಳುತ್ತಿರುವರು ಬೀದಿಯಲ್ಲಿ
ಹಾಡಹಗಲಲ್ಲಿ ಅತ್ಯಾಚಾರಕ್ಕೆ ಬಲಿಯಾಗಿದ್ದಕ್ಕೆ.

ಹುಟ್ಟಿದ್ದಕ್ಕೆ ಸಾಕ್ಷಿಯಾಗಿ ತವರು ಮನೆ
ಕೊಟ್ಟಿದ್ದಕ್ಕೆ ಗುರುತಾಗಿ ಗಂಡನ ಮನೆ
ಅಪ್ಪನ ಹೆಸರು ಗಂಡನ ಹೆಸರುಗಳ ಮಧ್ಯೆ
ಕಾಣೆಯಾಗಿದೆ ನನ್ನೊಳಗಿಂದ ನನ್ನ ಹೆಸರು.

ಗಂಡಾಗಿ ಹುಟ್ಟದ ತಪ್ಪಿಗೆ ತವರು ಮನೆಯಲ್ಲಿ
ತಂಗಳನ್ನದೂಟ ನೂಕಿದರು ನೀರಿಲ್ಲದ ಬಾವಿಗೆ ಉಡಿಯಲ್ಲಿಯ
ಬೆಂಕಿಯಂದು ಗಂಡನ ಮನೆಗೆ ಮದುವೆಯ ಹೆಸರಲ್ಲಿ
ಮೇವಿದ್ದಗ್ವಾದಲಿಗೆ ಹೊಗಿಸಿದರು ದನಗಳಂತೆ ದಕ್ಕಿದಷ್ಟು ತಿಂದಿರು ಎಂದು.

ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಆಗಾಗ
ಲಾಳಿ ಆಟ ನೆಯ್ದಿದ್ದಕ್ಕೆ ಗುರುತಿಲ್ಲ
ಬೆತ್ತಲೆಯ ಬದುಕಿಗೆ ಸಾಕ್ಷಿಯಾಗಿ ಅಕ್ಕ ನಿಂತಿರುವಳಲ್ಲ
ಕತ್ತಲೆಯಲ್ಲಿ ಮಲ್ಲಿಕಾರ್ಜುನನ ಹುಡುಕುತ್ತ ನಿಮಗೆ ಕಾಣದಂತೆ

ಗುರುತು ಕೇಳುತ್ತೀರಿ ನಿಮ್ಮೊಡನಿದ್ದೂ ನಿಮ್ಮಂತಾಗದಿರುವುದಕ್ಕೆ
ಸಾಕ್ಷಿ ಅಳುಕಿಸುತ್ತೀರಿ ಸಂತೆಯಲ್ಲಿ ಕಂತು ಕಂತಾಗಿ ಮಾರಿದ್ದಕ್ಕೆ
ಮರೆತ ಗುರುತ ತೋರಲೆಂದು ಹುಡುಕುತ್ತಿರುವೆ ಗಿಳಿ ಕೋಗಿಲೆಗಳ
ನಿಮ್ಮ ಕೈಯ್ಯಲ್ಲಿಯೆ ಇದ್ದೇವೆ ನೀವು ಕೊಲ್ಲುವುದ ಕಾಯುತ್ತಾ.

ಬೆಟ್ಟದ ಮೇಲಿನ ಮನೆಗೆ ಅಂಜಿದ ಅಕ್ಕ ಊರೊಳಗಿನ ಮನೆಗೆ
ಹಾಡಹಗಲೆ ಬಂದರು ಕೇಳುವಿರಲ್ಲ ಗುರುತಿನ ಚೀಟಿಯ
ಮರೆತಿರುವಿರಿ ನಿಮ್ಮನ್ನು ಭೂಮಿಗೆ ತಂದವಳ
ಅವಳೊಳಗಿನ ನಿಮ್ಮ ಗುರುತು ಅವಳಿಗಲ್ಲದೆ ನಿಮಗೆ ತಿಳಿಯದು.

ಕೃಪೆ: ಕಾಮನಬಿಲ್ಲು ಬೆಳಕಲ್ಲ, ಸಮಗ್ರ ಕಾವ್ಯ, ಕರ್ನಾಟಕಸಾಹಿತ್ಯ ಅಕಾಡೆಮಿ

# ಮುಖವಾಡಗಳ ಮಾರುವ ಊರಿನಲ್ಲೊಂದು ಸುತ್ತು

- ಎಂ. ಆರ್. ಕಮಲ

೧

ಹಬ್ಬಕ್ಕೆಂದೇ ಮುಖವಾಡಗಳ ಧರಿಸಬೇಕಿಲ್ಲ
ಇಲ್ಲಿದು ತೀರಾ ಚರ್ಮಕ್ಕೆ ಹತ್ತಿ ಕೂತಿದೆ
ಹಡಗಾಗಿ, ಸರಕಾಗಿ, ದೋಣಿಯ ಹಾಡಾಗಿ
ಕೊನೆಗೆ ನೀರೊಳಗೆ ಬಿದ್ದ ಸೂರ್ಯನಿಗೂ ಮೆತ್ತಿದೆ!

ಮುಷ್ಟಿಯಲಿ ಏನೋ ಮುಚ್ಚಿಟ್ಟಂತೆ, ತುಸು ಬಿಚ್ಚಿಟ್ಟಂತೆ ಕಾಣುವ
ನಕಾಶೆ ಹಿಡಿದು ಹೊರಟರೆ... ಎದುರಾಗುವವರು ಯಾರು?
'ಪರದೇಸಿ'ಗಳಾದ 'ದೇಸಿ'ಗಳೋ,
'ದೇಸಿ'ಗಳಾದ 'ಪರದೇಸಿ'ಗಳೋ
ನೆಲದ ದಾರಿಗೆ ನೀರು ದಡವೋ,
ನೀರ ದಾರಿಗೆ ನೆಲವು ದಡವೋ
ಮನೆಗಳೇ ಮಾರುಕಟ್ಟೆಗಳೋ, ಮಾರುಕಟ್ಟೆಗಳೇ ಮನೆಗಳೋ
ಬಡಕೊಂಡರೂ ಸುಳಿವು ಬಿಟ್ಟುಕೊಡದ 'ಸುಡುಕು'!

೨

ರಾತ್ರಿ ದೀಪ ಹೊತ್ತಿಕೊಂಡರೆ...
ನೀರು ನೆಲ ಬೆಸೆದ ಸಗ್ಗ ನಿಧಾನಕ್ಕೆ ಬಿಚ್ಚಿಕೊಳ್ಳುತ್ತದೆ
ಮನೆಮನೆಗಳಿಂದ ಹರಿದು ಬರುವ ಹುಗ್ಗಿಯ ಹೊಳೆ
'ಗೊಂಡುಲಾ'ಗಳ ಮುತ್ತಿಕ್ಕುವ ಬೆಳದಿಂಗಳ ಅಲೆ
ಇರುಳಿನಲ್ಲೂ ಸೂರ್ಯನ ಹಾಡು ಹಾಡುವ ದೋಣಿಕಾರ
O sole, O sole mio, stn`fronte a te!
(ಓ ಸೂರ್ಯ, ಓ ನನ್ನ ಸೂರ್ಯ, ನಿನ್ನ ಮುಖದ ಮೇಲೆ)
ಯಾರದೋ ಸೂರ್ಯ, ಯಾರ ಮೊಗದ ಮೇಲೋ!

೩

ಒಂದು ಪೌಂಡ್ ಮಾಂಸವನ್ನೇ ಕೊಡು ಎಂದು ಪಟ್ಟು
ಹಿಡಿದ 'ವೆನಿಸ್‌ನ ವರ್ತಕ' ಕಣ್ಮುಂದೆ ಸುಳಿದರೂ
ಅಲ್ಲೆ ಕೂತು ಕವಿತೆ ಬರೆದ ಗಯಟೆಯೂ ಜೊತೆಯಲ್ಲೇ
ಆ ದಡದಿಂದ ಈ ದಡ, ಈ ದಡದಿಂದ ಆ ದಡಕ್ಕೆ

ಕನಸ ದೋಣಿಯಲಿ ಕಳೆದು ಹೋಗುವಾ ಕಂದಮ್ಮಗಳು
ಎದೆಯೊಳಗೆ ಸುಡು ಸುಡು ಆತಂಕದ ಅಮ್ಮಂದಿರು!

ವೆನಿಸ್ ನಗರದಲ್ಲಿ ಯಾವ ಭಾಷೆಯಾದರೂ ನಡೆದೀತು
ಇಟಾಲಿಯನ್, ಫ್ರಂಚ್, ಜರ್ಮನ್ ಕೊನೆಗೆ ಕನ್ನಡ, ತಮಿಳು!
ಮಾರಿ–ಕೊಳ್ಳುವುದಕ್ಕೆ ಬೇಕೆ ತಾಯ್ತನ, ತಾಯಿ ಭಾಷೆ?
(ವೆನಿಸ್ ಮುಖವಾಡಗಳ ಮಾರುವ ನಗರ)

**ಕೃಪೆ:** ಮಾರಿಬಿಡಿ(೨೦೧೭) ಕಥನ ಪ್ರಕಾಶನ, ಬೆಂಗಳೂರು

❖

# ನುಗ್ಗೆ ಮರ

- ಡಾ. ಸಬೀಹಾ ಭೂಮಿಗೌಡ

ಮನೆಯಂಗಳದ ನುಗ್ಗೆ ಮರ
ತಂದಾಗ ಒಂದೇ ಮೊಳ
ಊರಿದ್ದ ನೆಲದಲೇ ಬಿಟ್ಟು ಬೇರು
ಬೆಳೆದಿತ್ತು ಮುಗಿಲಿಗೇ ಮೊಗಮಾಡಿ!

ಕಾಣುವಷ್ಟರಲಿ ವಸಂತವೆರಡು
ಮೈತುಂಬಾ ಹೂವು; ಸಾಲು ಸಾಲು ಹಕ್ಕಿ!
ಹೀಚು ಕಾಯಾಗಿ ತುಂಬು ಗರ್ಭಿಣಿ
ಗಾಳಿಗೆ ತೊನೆದಾಡಿ ಬೀಗಿದಾಗ

ಲೆಕ್ಕ ಹಾಕುತ್ತಿತ್ತು ಮನ
ಕಾಯಿಗೇನು ರೇಟು?

ಒಡಲು ಬರಿದಾದ ಗಳಿಗೆ
ಕತ್ತಿಗೆ ಶರಣಾಗಿ ಉರುಳಿತ್ತು ಧರೆಗೆ
ಕಡೆದಷ್ಟೂ ಚಿಗುರುತ್ತೆ ನುಗ್ಗೆ
ಲೋಕಾರೂಢಿಯೇ ಹೀಗೆ!

ಕಡಿದ ಕೈ ಸೋತರೂ ಜಗ್ಗಿಲ್ಲ ನುಗ್ಗೆ
ಕತ್ತಿಯ ಪೆಟ್ಟು ಮಾಸುವ ಮೊದಲೇ
ಕಚ್ಚಿನ ಮಗ್ಗುಲಲ್ಲೇ ನಗೆಚಿಗುರು
ಬಿದ್ದ ಏಟಿನ ದುಪ್ಪಟ್ಟು ಟಿಸಿಲು!
ಮಾತೇ ಇಲ್ಲದ ಮರ ಉಸುರಿತ್ತು
ಮಾತು ಮಾತಿನ ಎಳೆ ಹಿಡಿದು ಹಿಂಜಿ
ಹೊರಡಿಸಿ ಅರ್ಥ ಅನರ್ಥವ
ಕತ್ತಿ ಹಿಡಿವವರ ಕಂಡು
ಕನಿಕರವ!
ವಿಧಿ ಬರಹ ಕರ್ಮಫಲ ಜಪಿಸುವವರ

ಕೈಬೀಸಿ ಕರೆದು
ತನ್ನ ಕೆಚ್ಚು ಕಚ್ಚುಗಳ ತೋರಿಸಿ
ಪುಟಿದೇಳುವ ಪಾಠ!

ಏಟಿನ ಬದಲಿಗೆ ಅರಳುವುದು
ನೋವಿನ ಬದಲಿಗೆ ತಲೆಯೆತ್ತುವುದು

ಕೊಟ್ಟು ತಣಿಯುವುದು
ಎಲ್ಲ ಎಲ್ಲ ನುಗ್ಗೆಯ ನವನೀತ!

ಕೃಪೆ: ಕಾವ್ಯ ಬೋಧಿ, ಕವಿ ಪ್ರಕಾಶನ ಕವಲಕ್ಕಿ, ಹೊನ್ನಾವರ ತಾಲ್ಲೂಕು, ಉ ಕ,
೨೦೧೪

# ಸಂಸ್ಕೃತಿಗೆ ಸುತ್ತಿಗೆ

- ವಸಂತ ಕಲ್ಬಾಗಲ್

ಪ್ಯಾರಿಸಿನ ಲಿಡೋ ಶೋನಲ್ಲಿ
ಬೆಳಕಿಗೆ ಬಂದಿತು ನನ್ನ ಬಣ್ಣ
ಬಿಳಿಯಲ್ಲ ಕಂದು ಮೈ,
ಒಪ್ಪಲ್ಲ ಕಪ್ಪು, ಕಂದೆಲ್ಲಾ ತಪ್ಪು

ನಡುನಡುವೆ ಸೀಟೆಲ್ಲ ಖಾಲಿ
ಕೊಡಲಾರೆ ಮಾಡುವಿರೇನೆಂಬ ಗೇಲಿ
ತೆತ್ತರೆ ಯೂರೋ ನಲವತ್ತರ
ಮೇಲೆ ಇಪ್ಪತ್ತು, ನೋಡೋಣ
ಬಣ್ಣ ಬದಲಾಗುವುದೇ ಎಂದು
ಅರವತ್ತು ಯುರೋಗೂ ಕಪ್ಪು
ಬಿಳುಪಾಗಲಿಲ್ಲ

ಲಿಡೋ ಶೋದ ಆರಂಭ
ನೃತ್ಯವಾಡಲು ವೇಶ್ಯೆಯರು
ರಂಭ ಊರ್ವಶಿ ನಾಟ್ಯಕ್ಕೆ
ಬ್ಯಾಂಡು, ಬಾಜಾಗೆ ತುಂಬು ವಯ್ಯಾರ
ಭೂಬಾಣ, ಗೀಳು ಮಾರನೇರ
ರೆಕ್ಕೆ ಪುಕ್ಕ ರಂಗು ಕೆನ್ನೆ ತುಟಿ
ಗರಿ ಕಿರೀಟ ಕೋಲ್ಮಿಂಚು ನಗು
ಎಡಬಲಕೆ ಕುಲುಕು
ತುಂಟ ಹೊಕ್ಕುಳ ಗುಂಡಿ

ಇವರ ನಡುವೆ ನಾಟ್ಯ ಹೇರಂಭ
ಕಚ್ಚೆ ಪಂಚೆ ಆನೆ ಮುಖ
ಡೊಳ್ಳು ಹೊಟ್ಟೆ ತಕಥೈಯ್ಯ
ನೃತ್ಯ ರಾಣಿಯರ ಹಿಂದೆಯಷ್ಟೆ
ದೊಡ್ಡ ಡ್ಯಾನ್ಸಿಂಗ್ ಶಿವನ ಮೂರ್ತಿ ಕೀರ್ತಿ
ಡ್ರಮ್, ಗಿಟಾರ್ ಹೆವಿಮೆಟಲ್

ತೊನೆ ಕೆನೆದೊಗಲು ಜೊತೆ ಜೊತೆಗೆ
ಗಣೇಶನ ದಾಪುಗಾಲು
ಕಂದು ಕನ್ನಡಿಗನಿಗೆ ಕೇಳಿಸಿತು
ಭಾರತೀಯ ಮೌನದ ಅಂದುಗೆ
ಕಣ್ಣಾಯಿತು ತುಳುಕು ತಂಬಿಗೆ
ಗೇಲಿಗೆ ಗುರಿ
ಸಂಸ್ಕೃತಿಗೆ ಸುತ್ತಿಗೆ

ಕೃಪೆ: ಪ್ರಣವ(೨೦೦೫) ಸ್ವಾತಿ ಪ್ರಕಾಶನ, ಬೆಂಗಳೂರು.

# 'ತೊರೆಗಳೆಲ್ಲ ಬರಲಿ ಬಿಡು ಎದೆಯ ಕಡಲಿಗೆ...'

- ಸುಕನ್ಯಾ ಕಳಸ

ಅಪ್ಪ ಯಾರು ಗೊತ್ತೇ ಇರದ
ಹುಟ್ಟುವಾಗಲೇ ಕರುಣಾಮಯಿ ತಾಯ
ಕಳಕೊಂಡು ಬಟಾಬಯಲಿನಲಿ ಬಿದ್ದಿರುವ
ಕಣ್ಣು ಕಿವಿ ಬಾಯಿರದೆ ಸ್ವರವಿರದೆ ಚೀರುತಿರುವ
ಎಳೆಯ ಕಂದನ ತನ್ನಿ ನನ್ನ ಮಡಿಲಿಗೆ...

ತಾಯ ಎದೆಯ ಹಾಲಿಲ್ಲದೆ
ಬೀದಿ ಬೀದಿ ತೊಯ್ದು ತೊಪ್ಪೆಯಾಗಿರುವ
ರಣರಣ ಉರಿಬಿಸಿಲಲಿ
ಜೀವ ಮರೆತು ತೆವಳುತಿರುವ
ಪುಟ್ಟ ನಾಯಿ ಮರಿಯನಿಲ್ಲಿ
ಮಲಗಿಸಿರಿ ಈ ಮಡಿಲಿನಲ್ಲಿ...

ಒಲವೆ ಅಮೃತ ಧಾರೆಯೆರೆದು
ನೀಡುವೆನು ಜೀವದುಸಿರ
ಹಾಡುವೆನು ಹಾಸಿ ಹಸಿರ
ಜೀವ ಜೋಲಿ ಸ್ವರವ ಸೂಸಿ
ಮೆಲುನಗೆಯ ಹೂವ ಹಾಸಿ.

ಯಾರ ತೆವಲಿಗೋ ಮೈ ಕಳೆದುಕೊಂಡವಳ
ಮೂಳೆ ಚಕ್ಕಳ ಹಂದರವಾದವಳ
ತನ್ನಿ ನನ್ನ ಗುಡಿಸಿಲೊಳಗೆ
ನೀಡುವೆನು ತಂಗಾಳಿಯೆಲರ
ಅರಳಿಸುವೆನು ಜೀವಸ್ವರ
ಜನುಮವಿಡೀ ದುಡಿದು ದಣಿದು
ನೆಲತಾಯ ನಂಬಿ ನಡೆದು

ನೇಣಿಗೊಡ್ಡಿದ ಎಲುಬುಗೂಡ
ತನ್ನಿ ನನ್ನ ಹಸಿರಹಾಸಿಗೆ
ಕನಸುಗಳ ಕುಡಿಸಿ ಕೊನೆಗೆ
ನೀಡುವೆನು ನಿತ್ಯಸತ್ಯ ಬದುಕಿನೆಡೆಗೆ
ತೊರೆಗಳೆಲ್ಲ ಬರಲಿ ಬಿಡು ಈ
ಎದೆಯ ಕಡಲಿಗೆ......

(ಅಪ್ರಕಟಿತ)

# ಸಮಯವಿದೆಯೆ ಪಪ್ಪಾ?

- ಸವಿತಾ ನಾಗಭೂಷಣ

೧.

ಸಮಯವಿದೆಯೆ ಪಪ್ಪಾ?
ಆಚೆ ಗುಡ್ಡದಾಚೆ ಇದೆ ನದಿ
ಆಹಾ! ಎಷ್ಟು ಚೆಂದ ಅದರ ತುದಿ
ಅಬ್ಬಾ... ಎಷ್ಟು ದೊಡ್ಡ ಸುಳಿ
ಸರ್ರೆಂದು ಜಾರುವುದು ನುಣ್ಣನೆಯ ಹಾವು
ಎದೆಯತ್ತರಕ್ಕೂ ಹಾರುವುದು ಪುಟಾಣಿ ಮೀನು
ಬಾ ಪಪ್ಪಾ ತೋರಿಸುವೆನು.....

ಸಮಯವಿದೆಯೇ ಪಪ್ಪಾ?
ಬೆಟ್ಟವೇರೋಣ ಬಾ ನೀನು
ಅಲ್ಲಿಂದ ಮುಟ್ಟೋಣ
ಆಕಾಶ, ಚಂದ್ರರನ್ನು
ಮೆಟ್ಟಿಲುಗಳೇ ಬೇಡ
ಜಾರುಗುಪ್ಪೆಯಾಡುತ್ತ
ಉರುಳುರುಳಿ ಸೇರಬಹುದು ನೆಲವನ್ನು
ಬಾ ಪಪ್ಪಾ ತೋರಿಸುವೆನು.....

ಕರಿಬೇವಿನ ಮರದಲ್ಲಿ
ಕಟ್ಟಿದೆ ಗುಬ್ಬಿ ಗೂಡು
ಇಟ್ಟಿದೆ ಪುಟ್ಟ ಮೊಟ್ಟೆ
ನೀನು ಬಾ ನೋಡು
ನಿಂಬೆಯ ಎಲೆ ಮೆದ್ದು
ಗಡದ್ದು ನಿದ್ದೆಯಿಲ್ಲಿದೆ ಕಂಬಳಿ ಹುಳು
ಬಾ ಪಪ್ಪಾ ತೋರಿಸುವೆನು ....

೨.

ಬೆತ್ತ ಆಚೆ ಇಡು
ಎಲ್ಲ ಹೇಳುವೆನು

ನಿಜ ಶಾಲೆ ತಪ್ಪಿಸಿ
ಸಾಬಣ್ಣನ ಹೊಲಕ್ಕೆ ಹೋಗಿದ್ದೆನು
ದೆವ್ವವಲ್ಲ ...
ಬೆದರು ಗೊಂಬೆ
ಪರೀಕ್ಷೆ ಮಾಡಿದೆನು

ಬೆತ್ತ ಆಚೆ ಇಡು
ನಿಜವ ಹೇಳುವೆನು
ಪಾಠದ ಪುಸ್ತಕ ತೆರೆದರೆ
ಬರೀ ಗುಡ್ಡ ಬೆಟ್ಟ ನದಿಯೇ ಕಾಣುವುದು
ಮನ ಅದರ ಹಿಂದೆ–ಮುಂದೆ
ಸುಳಿದಾಡುವುದು

೩.

ತಂಗಿ ಶಾರಿ ಬಲು ಘಾಟಿ, ಚೋಟಿ
ಖಂಡಿತ ಆಫೀಸರ್ ಆಗಿ
ಹೆಸರು ಮಾಡುವಳು

ಅಣ್ಣ ಗನಿ, ಗಣಿತದಲ್ಲಿ ಜಾಣ
ಕಂಪ್ಯೂಟರ್ ಸಾಯನ್ಸ್
ಮುಗಿಸಿ ಖಂಡಿತ
ಅಮೇರಿಕಾಗೆ ಹೋಗುವನು
ನಾನು?!
ನೀನು ಒಪ್ಪಿದರೆ
ಅಜ್ಜ ನಿನಗಿತ್ತ
ತುಂಡು ಭೂಮಿಯನ್ನೇ
ಉತ್ತುವೆನು, ಬಿತ್ತುವೆನು
ಈ ಹಳೆಯ ಮನೆಯೇ ಸಾಕು
ಇಲ್ಲೇ ನಿನ್ನೊಂದಿಗೆ ಒಂದು
ತುತ್ತು ಉಣ್ಣುವೆನು

ಛೀ... ಕೂಳಿಗೆ ದಂಡ ಎಂದು
ದೂರದಿರು ಪಪ್ಪಾ
ಬೇಜಾರಾಗದಿರು...

ತೆಂಗು ಅಡಿಕೆ ಬಾಳೆಗೆ

ನೀರೂಡುವುದಿಲ್ಲವೆ ನೀನು?
ಹೇಳಪ್ಪ ನಾನು
ಆ ಗಿಡಕ್ಕಿಂತ ಕಡೆಯೇನು?

ನೋಡುತ್ತ ಇರು
ನಿನ್ನ ಮೇಲೆಯೇ ಒಂದು
ಕವಿತೆ ಕಟ್ಟುವೆನು
ಕವಿತೆಯ ಬಲದಿಂದಲೇ
ಕೊನೆ ತನಕ ಬಾಳುವೆನು.

ಕೃಪೆ: ಹಳ್ಳಿಯ ದಾರಿ (ಆಯ್ದಕವಿತೆಗಳ ಸಂಕಲನ–೨೦೧೧) ಗಾಂಧಿ ಗಿರಿ ಹೊತ್ತಿಗೆ ಶಿವಮೊಗ್ಗ

# ಎರಡು ಔತಣಕೂಟಗಳು

- ಪುಷ್ಪ ಎಚ್.ಎಲ್.

೧.

ಅಂತಿಮಯಾನವೆಂಬುದು ಅನಂತಕ್ಕೆ ಮೊದಲೇ,
ಅದೇನು ಹೊಲದ ಬದಿಯ ಬದುವೆ,
ಬದುಕು ಬಯಲಾಗಿ ಬಾನಡೆಗೆ ಬಾಗುವ
ಭವಸಾಗರದ ಮುಗಿಯದ ಆಟಪಾಟವೇ,
ಕೊನೆಮೊದಲಿಲ್ಲದ ಜೀವಯಾವದ ಜಾಲವೇ.

ಬುದ್ಧ ಬಯಲಾದ ಬಾಳಿನಾಟದಲಿ
ಎಷ್ಟೊಂದು ಕೊನೆ ಮೊದಲಿಲ್ಲದ ತೀರದ ತೀರಗಳು
ಬಾಗಿಲ ತೆರೆವ, ಮುಚ್ಚುವ ಬೆಳಕು ನೆರಳಾಟಗಳು
ಬಾಗಿ ಮಣಿದರೂ ಸೆಣಸಿದರೂ ಎಷ್ಟೆಲ್ಲಾ ಅಸುರರು
ಬಂಧಿಗಳಲ್ಲವೇ ಬುದ್ಧನ ಕಮಲ ಹಸ್ತದಲಿ.

ಎಷ್ಟೊಂದು ಸತ್ಕಾರ, ಔತಣಕೂಟ, ಬೀಳ್ಕೊಡುಗೆ
ಆಮ್ರವನವೇ, ಜೇತವನವೇ, ಕಾಡಬಯಲ ಬೆಳದಿಂಗಳೇ
ಸುರಿವ ಕಾರ್ಮೋಡವೇ, ತಣ್ಣಗಿನ ಸೋನೆಮಳೆಯೇ
ಎಲ್ಲಿ ಬಯಲೋ ಅಲ್ಲೇ ಹಾಸಿಗೆ
ಎಲ್ಲಿ ನೆರಳೋ ಅಲ್ಲೇ ಬುದ್ಧ ಬೆಳದಿಂಗಳು.

ಮುಟ್ಟಬಲ್ಲರು, ಮುಟ್ಟಲಾರದವರು
ರಾಕ್ಷಸರು, ಗಣಿಕೆಯರು ಎಲ್ಲರನ್ನೂ
ಮತ್ತೆ ಮತ್ತೆ ಬುದ್ಧ ಎದುರಾಗುತ್ತಿದ್ದ
ಊಟಕೂಟವೆಂಬ ಅವರೀವ ಬೆಳದಿಂಗಳಿನಲ್ಲಿ
ಅವರೆಲ್ಲ ಮೀಯುತ್ತಿದ್ದರು ಅಲ್ಲಿ
ಅವನ ಕಣ್ಣ ಕೊಳದ ಮಂದಸ್ಮಿತದಲ್ಲಿ.

ಊಟ ಕೂಟಗಳೇ ಕಾರಾಸ್ಥಾನಗಳಾಗಿ,
ಕುದಿವ ಕಡಲಾಗಿ ಮೊರೆವ ಕೊಳಲದನಿ ಹೂತುಹೋಗುತ್ತಿದೆ

ರಾಜಕೀಯವೋ, ಮೇಜವಾನಿಯೋ, ಸಂಬಂಧಸೇತುಗಳೋ
ವಿದಾಯವೋ ಒಂದೊಂದು ದೃಶ್ಯ ಕಣ್ಣಮುಂದೆ ಹಾಯುತ್ತವೆ.

ಕಮ್ಮಾರ ಚುಂದ ಅಲ್ಲಿ ಆಮ್ರವನದಲ್ಲಿ
ಬುದ್ಧನ ಅಂತಿಮಯಾತ್ರೆಯ ಚುಕ್ಕಾಣಿ ಹಿಡಿದಿದ್ದ
ಹದವಾಗಿ ಮೃದುವಾಗಿ ಮಧುರವಾಗಿ ಮಡಿಕೆಯಲಿ
ಬೇಯುತ್ತಿತ್ತು ಸೂಕರಮದ್ಧವ* ಜೇನಿನೊಂದಿಗೆ ಸಿಹಿಯಾಗಿ
ಭಕ್ತನಂತರಂಗದ ಪ್ರೀತಿ ಮೊರೆವಂತೆ.

ಎಂಬತ್ತರ ಬುದ್ಧ ಎಂದಿನ ಪ್ರೀತಿಯಿಂದಲೇ ಸವಿದುಂಡ
ಉಳಿದದ್ದನ್ನೆಲ್ಲ ನೆಲದಾಳದ ಗೋರಿಯೊಳಗೆ ಸುರಿದ
ಯಾವ ಪಶುಪಕ್ಷಿಯೂ, ಕ್ರಿಮಿಕೀಟವೂ
ತನ್ನಂತೆ ಬೇಯದಿರಲಿ ಬೇನೆಯಲಿ, ಅಂತಿಮಯಾನದ ಬಾಗಿಲಲಿ
ಚರಿತ್ರೆ ಉಸಿರದಿರಲಿ ಎಂದೂ ಚುಂದನ ಹೆಸರನು ಎನ್ನುತ್ತಲೇ
ಮೈಯೆಲ್ಲಾ ಬಾಯಾಗಿ, ಬಾಹುಗಳೆಲ್ಲ ಬಳ್ಳಿಗಳಾಗಿ, ಪಾದಪದುಮಗಳು
ತೋರಿದವು ಹಾದಿ ಪರಿನಿರ್ವಾಣದೆಡೆಗೆ.

೨

ಹಿಂದೊಂದು ದಿನ ಕ್ರಿಸ್ತನೂ ಎದುರಾಗಿದ್ದ ಹೀಗೆ ಔತಣಕೂಟದಲ್ಲಿ
ಹನ್ನೊಂದನೆಯ ಶಿಷ್ಯ ಯೂಧನ ಘಾತುಕತನದ ಅರಿವಿದ್ದೂ
ಗೋಧಿರೊಟ್ಟಿ ತಿನ್ನುತ್ತ, ದ್ರಾಕ್ಷಾರಸ ಕುಡಿಯುತ್ತ ನುಡಿದಿದ್ದ
'ನನ್ನಮೈಯ್ಯನ್ನೇ ರೊಟ್ಟಿಯೆಂದು ಭಾವಿಸಿಕೊಳ್ಳಿ
ನನ್ನ ಹರಿದ ನೆತ್ತರನ್ನೆ ಬುರುಗುಬುರುಗಾದ ದ್ರಾಕ್ಷಾರಸವೆನ್ನಿ
ಕುರುಬನಾದ ನಾನು ಕತ್ತರಿಸಲ್ಪಡುತ್ತೇನೆ
ಕುರಿಗಳೇ ನಿಮ್ಮ ನಿಮ್ಮ ನೆಲೆ ಕಂಡುಕೊಳ್ಳಿ
ನಾನು ಹಾರುತ್ತೇನೆ ಪಾರಿವಾಳವಾಗಿ
ಈ ಮಾಂಸ ಮಜ್ಜೆಯ ವಜ್ಜೆಯನ್ನು ದಾಟಿ
ಅಲ್ಲಿ ಮೇಲೆ ತಂದೆಯೆಡೆಗೆ
ನನ್ನ ಕಾವಳದ ಕಣ್ಣು ಸದಾ ನಿಮ್ಮೆಡೆಗೆ'

೩

ಚುಂದನಿತ್ತ ಮಾಂಸವೂ
ಯೂಧನಿತ್ತ ಗೋಧಿರೊಟ್ಟಿಯೂ
ಹೀಗೆ ಮತ್ತೆ ಮತ್ತೆ ಬೇಯಿಸಲ್ಪಡುತ್ತದೆ ಇಹದ ಒಲೆಯಲ್ಲಿ
ಅಲ್ಲಿ ದಿನನಿತ್ಯ ಆಗಮಿಸುತ್ತಾರೆ ಬುದ್ಧನಂತಹ ಬಂಧುವು
ಕ್ರಿಸ್ತನಂತಹ ಕರುಣಾಳುವು, ಗಾಂಧಿಯಂತಹ ತಂದೆಯು
ಹೀಗೆ ಚರಿತ್ರೆಯಲ್ಲಿನ ಔತಣಕೂಟಗಳು

ಮತ್ತೆ ಮತ್ತೆ ನಿಮಿತ್ತಗಳಾಗುತ್ತಲೇ ಇರುತ್ತವೆ
ಬೀಸುತ್ತಲೇ ಇರುತ್ತವೆ ಬಿಳಿಪಾರಿವಾಳಗಳ ರೆಕ್ಕೆ
ನಿಲ್ದಾಣವ ಹುಡುಕಿ ಅನಂತ ಆಗಸದೆಡೆಗೆ

(*ಜ್ವರದಿಂದ ನರಳುತ್ತಿದ್ದ ಬುದ್ಧ ಚುಂದನೆಂಬ ಶಿಷ್ಯನಿತ್ತ ಔತಣವನ್ನು ಸ್ವೀಕರಿಸುತ್ತಾ ನಂತರ ಇನ್ನಷ್ಟು ಅನಾರೋಗ್ಯದಿಂದ ನರಳಿ ಸಾವನ್ನಪ್ಪುತ್ತಾನೆ, ಬೈಬಲ್ಲಿನ ಲಾಸ್ಟ್ ಸಪ್ಪರ್ ಪ್ರಸಂಗದಲ್ಲಿ ಬರುವಂತೆ ಯೇಸುಕ್ರಿಸ್ತನ ಹನ್ನೊಂದನೆಯ ಶಿಷ್ಯ ಯೂಧ ಕೊನೆಯ ಔತಣ ಕೂಟದಲ್ಲಿ ಕ್ರಿಸ್ತನನ್ನು ಶತ್ರುಗಳಿಗೆ ಹಿಡಿದುಕೊಡುತ್ತಾನೆ. ಎರಡು ಔತಣ ಕೂಟಗಳು ಈ ಇಬ್ಬರು ಸಂತರ ಬದುಕಿನ ಅಂತಿಮ ಯಾತ್ರೆಯಲ್ಲಿ ವಿಶೇಷವಾದ ಘಟನೆಗಳಾಗಿವೆ)

**ಕೃಪೆ:** ಕಿರಂ ಕಾವ್ಯ ಸಂ. ಬೇಲೂರು ರಘುನಂದನ ಅವಿರತ ೨೦೧೭

❖

# ಪ್ರಳಯದ ಮೇಲೊಂದು ಪ್ರಣಯ

- ಸಂಧ್ಯಾ ದೇವಿ

ಎಲ್ಲ ಮರೆತು ಮಲಗಿದೆ
ಸರ್ವಸ್ವವನ್ನೂ ಚೆಲ್ಲಿ, ಚೆಲ್ಲುತ್ತಾ,
ಮಂಚ ಚಲಿಸಿತು, ಚಲಿಸಿತು ಜೋಕಾಲಿ
ಜೋರು ಜೋರು ದಾರ, ದೋಣಿ
ತೂಗು ಉಯ್ಯಾಲೆ ನಿಲ್ಲಲಿಲ್ಲ.

ನೀರು ಎಲ್ಲಿಂದ ನುಗ್ಗಿತು
ಕೋಣೆಗೆ, ಮನೆಗೆ, ಊರಿಗೆ, ನೆರೆ
ನೀರು ಯಾವಾಗ ತೊರೆಯಾಯಿತು,
ನದಿಯಾಯಿತು, ಕಡಾಲಾಯಿತು, ಕೊನೆಗೆ,
ನನಗೆ ನೀನು ಹೇಳಿದೆ.

ಇದು ಪ್ರಣಯದ ಆದಿಯೆಂದು ಮತ್ತು
ಪ್ರಳಯದ ಅಂತ್ಯವೆಂದು.
ಈಗ ಸರ್ವನಾಶವಾಗುತ್ತದೆ ಮತ್ತು ಹೊಸ
ಸೃಷ್ಟಿಯಾಗುತ್ತದೆ.
ಎರಡು ತುತ್ತ ತುದಿಯಲ್ಲಿದೆ.

ಮಧ್ಯೆ ಒಂದು ಬಿಂದು ನೀನು
ಮಲಗಿದ ಮಂಚ ಅಥವಾ ದೋಣಿ ಅಥವಾ
ಉಯ್ಯಾಲೆ ತೇಲಲಿ. ತೇಲುತ್ತ
ಮುಳುಗಲಿ. ಭಾರವಾದ ಕಣ್ಣ ರೆಪ್ಪೆ ನಾನು
ನೀನು ಒದ್ದೆ ಕಣ್ಣು ಮುಚ್ಚು

ಕೃಪೆ: ಮಾತು ಚಿಟ್ಟೆ ಬೆಂಕಿ ಬೆರೆಳು ಮತ್ತು ಮುರಿದಮುಳ್ಳಿನಂತೆ ಜ್ಞಾನ(೨೦೧೫) ಅಧ್ಯಯನ ಮಂಡಲ ಬೆಂಗಳೂರು.

# ಜೀವ ಸಂಪಿಗೆ

- ದು. ಸರಸ್ವತಿ

ಅಗೋಽಽಽಽಽ ಅಲ್ಲಿ
ಆಳ ಪಾತಾಳದಾಳದೊಳಗೊಂದು
ಜೀವ ಸಂಪಿಗೆ ಮರ

ಏಳು
ಏಳೇಳು
ಎಪ್ಪತ್ತೇಳು ಕೋಟಿ ಎತ್ತರಕೆ
ಬೆಳದ ಮರ ಕಾಣಲು
ಇಳಿದು
ಇಳಿದಿಳಿದು ಬಸವಳಿದು
ತಂಪನೆಯ ತೊರೆ ತುಳಿದು
ಮತ್ತೇರಿದರೆ
ಮರ ಇದಿರು
ಅದುರದುರುವ ಮೈ
ಬೆದರುವ ಮನ
ಹೊತ್ತು ನಿಂತು
ಕತ್ತೆತ್ತಿದರೆ ಎತ್ತರ ಕಾಣದು
ಕತ್ತಿಳಿಸಿದರೆ ಬೇರು ಕಾಣದು
ಕಣ್ಣೆದುರು
ದುಂಡು ದುಂಡನೆ
ದೊಡ್ಡ
ಪುಟ್ಟ
ಪುಟಾಣಿ ಬಂಡೆಗಳು
ಬಡಿವ ತಣ್ಣನೆ ಗಾಳಿ
ನಡುಕ ಹುಟ್ಟಿಸುವ ಮೌನ

ಆಕಾಶ ಸೀಳಿ ನುಗ್ಗಿದ ಮರ
ಪಾತಾಳದಾಳದ ಕೊರೆದಿಳಿದ ಬೇರು
ಮಗ್ಗುಲಲಿ ಬಿದ್ದಿದ್ದವೆರಡು ಕೊಂಬೆಗಳ ಬೃಹತ್ ಬಂಡೆ

ಬಿದ್ದ ಕೊಂಬೆಗಳಿಗೆಷ್ಟು ಯುಗವೊ
ನಿಂತ ಮರಕೆಷ್ಟು ಯುಗವೊ
ಇಳಿದ ಬೇರಿಗೆ
ಉದುರುದುರಿ ಚಿಗಿತ ಎಲೆಗಳಿಗೆಷ್ಟು ಯುಗವೊ
ಕೊರೆವ ನೀರಿನ ತಂಪಿಗೆಷ್ಟು ಯುಗ
ನಡುಕ ಹುಟ್ಟಿಸುವ ಮೌನಕ್ಕೆಷ್ಟು ಯುಗ
ಬೇರು ಇಳಿಸಿಕೊಂಡ ಮಣ್ಣಿಗೆ
ಹೂವಾಗಿ ಬನಕೆಲ್ಲ ಅಡರಿದ–
ಕಂಪಿಗೆ ಎಷ್ಟೆಷ್ಟು ಯುಗವೋ

ನಿನ್ನ
ಎಲೆ ಎಲೆಗೆ
ಬೇರು ಬೇರಿಗೆ
ಕಾಂಡ ಕೊಂಬೆ ರೆಂಬೆ
ರೆಂಬೆಯ ಸೀಳಿಗೆ
ಶರಣು ಶರಣೆನ್ನುವ
ಶಕ್ತಿ ಕೊಡೆಂದೆ

ಓ ಹೆಣ್ಣೆ
ನಿನ ಜನ್ಮವೊಂದು
ಎಳೆ ಚಿಗುರೆಲೆಯ ತುದಿ
ಚಿಗುರ ತುದಿಗೆ
ಯುಗದ ಲೆಕ್ಕಚಾರ ದಕ್ಕೀತೆ?
ಎಂದು ನಕ್ಕುವವರಾರು
ಒಡೆಯ ಜಡೆ ಮಾದಿಯೆ
ಒಡತಿ ಜಡೆ ಮಾದನೆ
ಅವಳೆ?
ಅವನೆ?
ಅವಳವನಲ್ಲದ ಮರವೆ?

ಸುಳಿ ಸುಳಿದು
ಎಳೆದೆಳೆದು
ಬಳಿದು ಸೀಳಿ
ಅವಳನು
ಗರಗರನೆ ಸುತ್ತುವ ಸುಳಿ
ವರವೆ? ಶಾಪವೆ?
ಹುಟ್ಟೆ? ಸಾವೆ? ಬದುಕೆ?

ಕಡಿದು ಬುಡಕೆ ಬಿದ್ದಳು
ಜಡೆ ಮಾದನೆ
ನಾ ಕಾದಾಡಲಾರೆ ನಿನ್ನೊಡನೆ

ನೀ
ಮಡಿಲಿಗೆಸೆದ ಹಿಡಿಬದುಕು ನಿನಗೆ ಮುಡಿಪು
ಹಿಡಿಯೊಳಗೆ
ಇಂಪುಂಟು
ತಂಪುಂಟು
ಕಂಪುಂಟು
ಕಾಪಿಡುವ ಕಾವುಂಟು
ಕಾದು ಸುಡುವ ಕಾರಿರುಳುಂಟು
ರಣಾಂಗಣವುಂಟು
ಮಸೆದ ಮಚ್ಚುಗಳುಂಟು

ನೀ
ಎಸೆದ ಬದುಕ
ಬೆನ್ನಿಗೆ ಭಾರವಾಗಿಸಿ ಬಗ್ಗುಬಡಿವೆಯೊ
ಹೆಗಲ ಮೇಲಿನ ನೆತ್ತಿಯಲಿರಿಸುವೆಯೊ
ನಿನಗೆ ಬಿಟ್ಟಿದ್ದು
ಏನಿಲ್ಲವೆಂದರು
ಮಡಿದು
ಮಣ್ಣಲಿ ಹೂತು
ಕೊಳೆತು, ಕಳಿತು
ಈ ಚಣ
ಹುಟ್ಟೊ ಬೇರಿಗೊ
ಎಲೆಯ ಮೊಳಕೆಗೊ
ಗೊಬ್ಬರವಾಗಿಸಿಕೊ
ನಾ
ಕಾದಾಡಲಾರೆ
ನನ ಗೆಳತಿ ಜಡೆಮಾದ

ಕೃಪೆ: ಜೀವ ಸಂಪಿಗೆ (೨೦೦೬) ಅಭಿನವ, ಬೆಂಗಳೂರು.

# ಮಳೆ

- ಡಾ. ಟಿ.ಸಿ. ಪೂರ್ಣಿಮಾ

ಹೀಗೆ ಸುರಿಯುವ ಮಳೆ ನೀನಾಗಬೇಕು
ಒಂದೊಂದೆ ಹನಿ ಮುತ್ತನುದರಿಸಿ
ಒಡಲ ಬೇಗೆಯನ್ನು ಇಷ್ಟಿಷ್ಟೇ ತಣಿಸಬೇಕು
ಬಾನ ತುಂಬೆಲ್ಲ ಹರಡಿಕೊಳ್ಳುವ
ಬೆಳ್ಳಿ ಬೆಳಕನು ಹಿಡಿದು
ಮಿಂಚುಗಣ್ಣಾಗಿ ಹೀಗೆ ಧರೆಗಿಳಿಯಬೇಕು
ಯಾವ ಅಬ್ಬರವಿರದೆ
ನಿಬ್ಬೆರಗಾಗುವಂತೆ ಒಂದೆ ಸಮನೆ
ಭುವಿಯನಾಕ್ರಮಿಸಬೇಕು.
ಎಂಥ ದಣಿವರಿಯದ ಹರಿವು ನಿನ್ನದು
ಎನುವಂತಿರಬೇಕು
ಬತ್ತದ ಚಿಲುಮೆಯಾಗಬೇಕು
ಬೆಂಗಾಡಿನ ತುಂಬೆಲ್ಲ
ನೀನೆರೆದ ಮುತ್ತಿನ ಹನಿ
ಹಸಿರಾಗಿ ಮೂಡಬೇಕು
ಒಡಲು ತುಂಬಿ ಬರಬೇಕು.
ಹೀಗೆ.... ಮಳೆ ಇಳಿಯಬೇಕು
ಇಳೆ ಮೊಳೆಯಬೇಕು

ಕೃಪೆ: ಉರಿ ಬದಲಾಗಿದೆಯೇ(೨೦೦೨) ಕಲೇಸಂ ಬೆಂಗಳೂರು

# ನೆರೆ ಕರೆ

- ಹಾ. ಮ . ಕನಕ ವಿಷ್ಣುನಾದ್

ನಮ್ಮ ಮನೆಯ ಕಿಟಕಿ ಬಾಗಿಲು ಎಲ್ಲಿ ಹೋಯಿತು?
ಕೊಚ್ಚುಪಳ್ಳಿ ಗೇಟಿನೆದೆಗೆ ಪದಕವಾಯಿತು
ಮರದ ತುದಿಗೆ ಮೋಡವಾದ ಮುಂಡು ಯಾರವು?
ಅನಿ ಅಪ್ಪಚ್ಚಿಯ ಬಟ್ಟೆ ಬರೆಯೇ ಕೊಚ್ಚಿಹೋದವು
ಮೇಜನೇರಿ ಅಡ್ಡವಾದ ಫ್ರಿಜ್ಜು ಮೊರೆಯಿತು
ಸಾಯುತ್ತಿರುವ ನನ್ನನ್ನೊಮ್ಮೆ ಉಳಿಸಿ ಎಂದಿತು
ನೂರು ಕಾಲ ಹಳೆಯದಾದ ಮರದ ಪತ್ತಾಸು
ಮಗುಚಿ ಬಿದ್ದು ಹೊಟ್ಟೆಯೊಡೆದು ಪ್ರಾಣಬಿಟ್ಟಿತು
ಓಮನಚೇಚಿ ರೆಕಾರ್ಡ್ಸೆಲ್ಲಾ ಕೊಚ್ಚಿಹೋಯಿತು
ಅಲಮಾರಿ ಅಲೆಯಲ್ಲಿ ತೇಲಿಹೋಯಿತು
ಮದುವೆಗೆಂದು ಸಾಲ ತಂದ ಲಕ್ಷ ರೂಪಾಯಿ
ಮಗಳಿಗೆಂದು ಜತನಗೈದ ಚಿನ್ನ ಜೊತೆಯಲಿ
ಹಾರುವಾಗ ದೋಣಿಗೆ ಜೀವ ಉಳಿಸಿಕೊಳಲು
ಅಂಬಿಳಿಯ ಕೈಲಿದ್ದ ಗಂಟು ನೀರುಪಾಲು
ಮಲಗಿದಲ್ಲೇ ಮಂಚದಲ್ಲೇ ತಂಗಪ್ಪಚೇಟನು
ನೀರು ನುಗ್ಗೊ ರಭಸಕೆ ಶಿವಾ ಎಂದನು

ಮನೆಯ ಮಾಡ ಕೋಡನೇರಿ
ಮುದುಕರು ಶಿಶುಗಳೂ,
ಬಾಣಂತಿ, ಬಸುರಿ, ಜೊತೆಗೆ ಇದ್ದ ರೋಗಗ್ರಸ್ತರೂ
ಕರೆಂಟಿಲ್ಲ, ಕರೆಯು ಇಲ್ಲ, ಇಲ್ಲ ಬರುವ ರಕ್ಷಕರೂ
ಬದುಕಿ ಉಳಿವ ಆಸೆಯಿಲ್ಲ ಭೀತಿಯಲ್ಲಿ ಎಲ್ಲರೂ
ಜೀವ ಕೈಲಿ ಹಿಡಿದುಕೊಂಡು ನೆನೆಯುತ್ತಾ ನಿಂತರು

ನಿರಾಹಾರ ಮೂರು ದಿನ ಮೂರು ರಾತ್ರಿ ನೀರಡಿ
ಬದುಕಿ ಬಂದವರಿಗೆ ಅದೇ ಸಿಕ್ಕ ದೊಡ್ಡ ಬಳುವಳಿ

ಊರ ಹುಡುಗರು ಮೊದಲು ಸಾವಿನಂಜಿಕೆ ತೊರೆದು
ಸುಳಿಯಲ್ಲು ರಕ್ಷಿಸಲು ಟೊಂಕಕಟ್ಟಿದರು

ಪುಟ್ಟ ದೋಣಿಗಳಲ್ಲಿ ಸಂದಿಗೊಂದಿಗೆ ನುಗ್ಗಿ
ಕೈಮೀರಿ ಬದುಕಿಸಲು ಶ್ರಮವ ವಹಿಸಿದರು
ಕತ್ತಲಕೂಪವಾದ ಆ ಮೂರು ರಾತ್ರಿ ಅಲ್ಲಿ
ಅದರ ಜೊತೆ ಜೋಡಿ ಹಗಲು ಗಲ್ಲಿ ಗಲ್ಲಿ
ಭರವಸೆಯೂ ಇಲ್ಲದೇ ಬೆಳಕೂ ಇಲ್ಲದೇ
ಮರಣ ಕಾಯುತ್ತಿದ್ದ ನನ್ನೂರ ಮಂದಿ
ಒಬ್ಬೊಬ್ಬರದು ಈಗ ಒಂದೊಂದು ಅನುಭವ
ಹೇಳುವರು ಕೆಲವರು ಮನಮುದುರಿ ನಂದಿ
ಬಾಕಿ ಉಳಿದವರೆಲ್ಲ ಮಂಕು ಮೌನದಲಿ
ಅರಿತರೆ ಅರಿಯಿರಿ ಕಣ್ಣ ನೋಟದಲಿ

**ಕೃಪೆ:** ಕನ್ನಡಪ್ರಭ ೨೦೧೮

# ಗಾರ್ಮೆಂಟ್ ಹುಡುಗಿ ಹೊಲೆದ ಚಂದದ ಪೋಷಾಕು

- ಸಬಿತಾ ಬನ್ನಾಡಿ

ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳ ಕತ್ತರಿಸುತ್ತದೆ
ಜೋಡಿಸಿ ಹೊಲೆವ ಕೈಗಳು
ಮತ್ತೊಂದು ಕನಸ ಹೊಲಿಯುತ್ತದೆ
*
ಮೇಲ್ವಿಚಾರಕನ ಸೂಜಿಗಣ್ಣು
ಅವಳು ಕತ್ತೆತ್ತದಂತೆ ಚುಚ್ಚುತ್ತದೆ
ಅರೆಹೊಟ್ಟೆಯ ನಿಶ್ಶಕ್ತಕಾಲು
ಸೆಟೆದುಕೊಳದಂತೆ
ವೇಗವಾಗಿ ತುಳಿಯುತ್ತದೆ
*
ಒತ್ತರಿಸಿ ಬರುವ ಬಾಯಾರಿಕೆಯೂ
ಜಿಪ್ ಏರಿಸಿದೆ
ಜಲಬಾಧೆ ತೀರಿಸಿಕೊಳಲೂ
ಬೇಕು ಒಪ್ಪಿಗೆಯ ಪತ್ರ
ನೀರೆಲ್ಲ ನಿರಿಗೆಯಾಗಿ
ಪೋಷಾಕು ಸಿಂಗಾರಗೊಳುತ್ತದೆ
*
ಎಳೆ ಹಸುಳೆಯ ತಾಯಂದಿರು
ಹಾಲುಣಿಸಲು ಹಂಬಲಿಸಿದರೆ
ನಾಳಿನ ಪಾಳಿಯ ಸೂರಿಲ್ಲ
ಸೋರಿ ಹೋಗುವ ಎದೆಹಾಲು
ಬೆಳ್ಳನೆ ಲೇಸ್‌ಗಳಾಗಿ
ಕತ್ತಸುತ್ತ ಚೆಲುವ ಬಲೆಯಾಗಿಸುತ್ತಾಳೆ
*
ದಿನದ ಟಾರ್ಗೆಟ್ ಮುಗಿಸಿ
ನಿಟ್ಟುಸಿರಿಡಲು ಕಾತರಿಸುತ್ತಾಳೆ
ಮೇಲ್ವಿಚಾರಕನ ಹದ್ದಿನ ಕಣ್ಣಿಗೆ

ತೋಳದ ದಾಹ
ನಿಮಿರಿದ ಮೈಮುಳ್ಳುಗಳ
ದುಂಡಗಾಗಿಸಿ ಬಟನ್‌ಗಳ ಪೋಣಿಸುತ್ತಾಳೆ
*
ಹೃದಯ ಮೋಂಬತ್ತಿಯಾಗಿ ಉರಿಯುತ್ತಿದೆ
ಕಪ್ಪು ಮಸಿಯ ಮೇಲೆ ರಕ್ತಗೆಂಪಿನ
ಚಿತ್ತಾರದ ಅಂಗಿ ರಫ್ತಿನ ಪಟ್ಟಿಯಲ್ಲಿ
ಬೆಚ್ಚಗೆ ಗಡಿದಾಟಿದೆ
*
ಮನೆಗೆ ತೆರಳುವ ಹಾದಿಯಲಿ ಅತ್ತು
ಕಪ್ಪಾದ ಆಗಸದ ಬಟ್ಟೆ
ಹರಿದು ಚುಕ್ಕಿಯಂತೆ ಚೂರಾಗಿದೆ
ನಾಳೆ ಅವುಗಳನ್ನೆಲ್ಲಾ ಹೊಲಿದು
ಒಗೆದು ನೀಲಿ ಹಾಕಿ ಒಣಹಾಕಲು
ಅವಳು ತಯಾರಿ ನಡೆಸುತ್ತಾಳೆ
*
ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳನ್ನು ಕತ್ತರಿಸುತ್ತವೆ
ಜೋಡಿಸಿ ಹೊಲಿವ ಕೈಗಳು
ಮತ್ತೊಂದು ಕನಸುಗಳನ್ನು ಹೊಲಿಯುತ್ತವೆ

ಕೃಪೆ: ನಿರಿಗೆ (ಸಂ) ಕವಿ ಪ್ರಕಾಶನ, ಕವಲಕ್ಕಿ –೨೦೧೭

# ನೆರಿಗೆಗಳು

- ಜ್ಯೋತಿ ಗುರುಪ್ರಸಾದ್

ಈಗಲೂ ನನಗೆ
ನೆರಿಗೆಗಳು ಚಿಮ್ಮುವಂತೆ
ನೀಟಾಗಿ ಸೀರೆ ಉಡಲು
ಬರುವುದಿಲ್ಲ

ಒಂದು ತುದಿಯನ್ನು
ಸೊಂಟಕ್ಕೆ ಸಿಕ್ಕಿಸಿ
ಸುತ್ತು ಬಳಸಿ ಆರು ಗಜದ ಸೀರೆಯನ್ನು
ಎದೆಯ ಮೇಲೆ ಸೆರಗು ಹೊದ್ದು
ಹಿಂದಕ್ಕೆ ಇಳಿಬಿಟ್ಟು
ಒಮ್ಮೆಲೇ ಐದೋ ತಪ್ಪಿದರೆ ಆರೋ
ನೆರಿಗೆಗಳ ಹಿಡಿದು ಹೊಕ್ಕಳ ಮೇಲೆ
ಭದ್ರವಾಗಿ ಸಿಕ್ಕಿಸಿಬಿಟ್ಟೆನೆಂದರೆ
ಎಲ್ಲಾ ಆರಾಮ
ಚಿಮ್ಮಿದರೆ ಚಿಮ್ಮಲಿ ನೆರಿಗೆ
ಇಲ್ಲದಿದ್ದರೆ ಬಿಡಲಿ
ನನಗೆ ಚಿಂತೆಯಿಲ್ಲ
ನನ್ನಿಂದ ಸೀರೆಗೊಂದು ಆಕಾರ ಸಿಕ್ಕಿದೆ
ಇದು ನನ್ನ ಉಡುಪು
ಪಿನ್ನು ಹಾಕಿ ಬಲವಂತವಾಗಿ
ನೆರಿಗೆಗಳನ್ನು ಒಟ್ಟುಗೂಡಿಸುವುದಿಲ್ಲ
ಲಂಗದ ಗಂಟು ಭದ್ರವಾಗಿದ್ದರೆ
ಕಾರಣವಿಲ್ಲದೆ ನೆರಿಗೆಗಳು
ಬಿಚ್ಚಿಕೊಳ್ಳುವುದಿಲ್ಲ.

ಹೀಗೆ ಉಡುವುದು
ಸರಾಗ ನಡೆಯುವುದು ನನ್ನತನ
ಅಕ್ಕ ಸೀರೆಯುಡದೆಯೂ

ಸರಾಗ ನಡೆದಳು
ಅವಳೊಲುಮೆಯ ಕದಳಿ ವನಕ್ಕೆ
ಇದು ಅವಳತನ
ನಿರಿಗೆ ಹಿಡಿದಿರುವ ನನ್ನ ನೋಡುತ್ತ
ಬೆಳ್ಳಿ ಮುಂಗುರುಳು ನಗುವ
ನನ್ನ ನಡುವಯಸ್ಸಿನ ಮೊಗವ
ಕನ್ನಡಿಯಲ್ಲಿ ನೋಡುತ್ತೇನೆ
ಹಣೆಯ ಮೇಲಿನ ನೆರಿಗೆಗಳು
ಸ್ಪಷ್ಟವಾಗಿ ಗೋಚರಿಸುತ್ತವೆ
ನನ್ನ ಸೀರೆಯ ನೆರಿಗೆಗಳಂತೆ
ಇವೂ ಕೂಡ ಚಿಮ್ಮುವುದಿಲ್ಲ
ಚರ್ಮದ ಮೇಲಿಂದ ಇದು ಸುಳ್ಳೆಂಬಂತೆ
ಅಳಿಸಿ ಹೋಗಲು ಬಯಸುವುದಿಲ್ಲ.

ಎಲ್ಲವೂ ಇದ್ದ ಹಾಗೇ ಇರಲಿ
ಹಣೆಯ ಮೇಲಿನ ಗೆರೆಗಳು
ಸೀರೆಯಲ್ಲಿ ಅಡಗಿರುವ ನೆರಿಗೆಗಳು
ಎಲ್ಲವೂ ಪ್ರಪಂಚಕ್ಕೆ ನನ್ನ ಗುಟ್ಟು
ರಟ್ಟು ಮಾಡಲಿ.
ಈಗಲೂ ನನಗೆ ನೀಟಾಗಿ
ಸೀರೆ ಉಡಲು ಬರುವುದಿಲ್ಲ
ಹಾಗೆಯೇ ನನಗೆ ನಿಜವಾಗದ
ನಲ್ಲನನ್ನು ಕೂಡಲು ಬರುವುದಿಲ್ಲ

**ಕೃಪೆ:** ಜಟಾಯು ಪಕ್ಷಿಗೆ ಶ್ರದ್ಧಾಂಜಲಿ(೨೦೧೭) ಸೃಷ್ಟಿ ಪ್ರಕಾಶನ, ಬೆಂಗಳೂರು.

# ಕಾಡುಜೇಡ ಹಾಗೂ ಬಾತುಕೋಳಿ ಹೂವು

- ಎಚ್. ಆರ್. ಸುಜಾತ

ಅಂಗೈ ಅಗಲಕ್ಕೂ ಮೈಚಾಚಿ
ಮೂರು ಮರಕೂ
ಸಾಮ್ರಾಜ್ಯ ವಿಸ್ತರಿಸಿ
ನೇತು ಬಿದ್ದಿದೆ
ಕಾಡುಜೇಡವೊಂದು
ಮರದಿಂದ ಮರಕ್ಕೆ
ಡೇರೆ ಕಟ್ಟಲು
ತನ್ನ ನಡುವಿಗೇ ... ಗೂಟ ಹುಯ್ದು

ಹಬ್ಬುತ್ತಲೇ ಇದೆ ಮೆಲ್ಲ ಮೇಲಕೆ
ನವಿರು ಬಳ್ಳಿಯೊಂದು,
ಹಬ್ಬುವ ಪರಿಯುಂಟೇ ...
ಜಗದಲ್ಲಿ!
ಜೋತುಬಿದ್ದ ಜೇಡನೆಳೆಯ ನಂಬಿ

ಬಾತುಕೋಳಿಯಂಥ ಹೂ
ಅರಳುವುದು
ಬಳ್ಳಿಯ ಕಣ್ಣ ಕೊಳದಲ್ಲಿ
ಕೀಟ ಹಿಡಿವ ಕಲೆಯಿದೆಯಂತೆ
ಚಿತ್ತಾಕರ್ಷ ಹೂ ಮೈಯಿಗೆ
ಅದಕಾಗಿ ಬಳ್ಳಿಯನು ಬಲೆಗೆ!
ಕಾದು ಕಾಣಬೇಕಿದೆ
ಹೂಬಿಡುವ ಕಾಲವದು...
ನಾಳೆಗೆ.

**ಕೃಪೆ:** ಕಾಡು ಜೇಡ ಹಾಗೂ ಬಾತುಕೋಳಿ ಹೂವು (೨೦೧೮) ಪಲ್ಲವ ಪ್ರಕಾಶನ, ಚನ್ನಪಟ್ಟಣ

# ಸೆಲ್ಫಿ

- ಎಚ್. ಎನ್. ಆರತಿ

ಇಕೋ, ಇಲ್ಲಿದ್ದೇನೆ ಇಲ್ಲಿಲ್ಲ
ಎನ್ನುವ ಘಳಿಗೆಯ ಓಟ.
ಕ್ಷಣಭಂಗುರ ಬದುಕು
ದಾಖಲಿಸಬೇಕು ಒಂದೊಂದು ಕ್ಷಣವನ್ನೂ
ಬದುಕುತ್ತಿರುವುದಕ್ಕಾಗಿ ನಮಗಾಗಿ,
ಅಲ್ಲ, ನಿಮಗಾಗಿ.

ಜಗತ್ತಿನಿಂದ ಕಳಚಿಕೊಂಡ ಕೊಂಡಿಗಳು
ಎಲ್ಲೆಲ್ಲೂ, ಸುತ್ತ ಬರೀ ಮುಖಗಳೇ
ಮುಖಕ್ಕೆ ಮುಖ ಕೊಟ್ಟು ಮಾತಾಡಲೂ
ಪುರುಸೊತ್ತಿಲ್ಲದ ಅಬ್ಬರದಲ್ಲಿ
ಕಣ್ಣ ವಿಷಾದಕ್ಕೇನು ಕೆಲಸ?
ಸದಾ ಹೊಳೆಯುತ್ತಿರಬೇಕು ಮುಖಾರವಿಂದ!

ಈ ದಿನ ನಿನ್ನದು, ಪ್ರತಿ ಘಳಿಗೆಯೂ.
ಅವರಿಗೆ ಅವರವರೇ ಚಿತ್ರತಾರೆಗಳು
ಆತ್ಮರತಿಯ ತಾರಾಮಂಡಲ ತುಂಬಿ
ತುಳುಕುವ ಈ ಸೆಲ್ಫಿ ಲೋಕದಲ್ಲಿ ...
ಸರಸ–ವಿರಸ, ಗುಂಪು–ಏಕಾಂತ
ಜಾತ್ರೆಯಲ್ಲಿ ಕಳೆದುಹೋಗುತ್ತದೆ ಮಗು.

ಜೀವ ಅವಸರದಲ್ಲಿ, ಉಸಿರು ಹಿಡಿದ
ಒಂದೊಂದು ಚಿತ್ರಕ್ಕೂ, ಒಂದೊಂದು ಚೌಕಟ್ಟು,
ಚೌಕಟ್ಟು ಮೀರುವ ಜೀವನ
ಕೈಗೆಟುಕಲಾರದ ಕನಸು.
ವರ ಕೊಡುವ ದೇವರು
ಎದುರು ಬಂದರೂ, ವರಕ್ಕಿಂತಾ
ಮೊದಲು ಇರಲಿ, ಅವನೊಂದಿಗೂ
ಒಂದು ಚಂದದ ಸೆಲ್ಫಿ!

ಎಲ್ಲೋ ಜೋಗಪ್ಪ ನಿನ್ನರಮನೆ...
ಪುಳಕ್ಕನೆ ಜಾರುವ ಮನಕ್ಕೆ
ಸಿಕ್ಕ ನವಿರು ಕಂಪನಕ್ಕೆ
ಕ್ಲಿಕ್ಕಿಸಿ ಹಿಡಿದಿಟ್ಟುಕೋ, ಬಿಡಬೇಡ
ಒಂದೊಂದು ಭಾವವೂ.
ಅವೆಲ್ಲ ಚಿತ್ರಪಟವಾಗಿ ತೂಗಲಿ
ಹೃದಯದ ಕಲ್ಲು ಗೋಡೆಯಲ್ಲಿ.

ಸ್ತಬ್ಧ ಕಣ್ಣುರೆಪ್ಪೆ
ಸ್ತಬ್ಧ ಮುಗುಳು
ಸ್ತಬ್ಧ ಚಡಪಡಿಕೆ
ಸ್ತಬ್ಧ ಉಸಿರ ವಿಷಹಬೆ

ಏನನ್ನೂ ಹೇಳದೇ
ಎಲ್ಲವನ್ನೂ ಹೇಳುವ
'ಬದುಕು' ಈಗ ಒಂದು
ಸೆಲ್ಫಿ– 'ಮಬ್ಬುಚಿತ್ರ...'

**ಕೃಪೆ: ಸ್ಮೋಕಿಂಗ್ ಝೋನ್ (೨೦೧೮) ಬಹುರೂಪಿ, ಬೆಂಗಳೂರು**

# ರಂಗೋಲಿ

- ಮಮತಾ ಸಾಗರ

ಬಣ್ಣ ಬಣ್ಣದ ಸೆರಗ ತುದಿ
ತುದಿ ಸೆರಗ ಜಗ್ಗಿ ಎಳೆವ
ಅರಿಸಿನದ ಒಡಲ ಹರಿದು
ಹರಿವ ಕುಂಕುಮದಂಚು.

ಸೆಳೆವ ಚಿತ್ತಾರ, ವೃತ್ತಾಕಾರ
ಪದ ಪದ್ಮ ಚಮತ್ಕಾರ.
ನುಣ್ಣನೆ ನೆಲದ ಮೇಲೆ
ಬೆಳ್ಳಿಗೆರೆಗಳ ಜಾರು... ಬಿಚ್ಚಿಕೊಳ್ಳುತ್ತಾ
ಸಮಸ್ಯೆಗಳ ಹೆಣೆದು ಜಟಿಲಗೊಳ್ಳುತ್ತಾ
ನಗುವ ತಂತ್ರ,

ಅಲ್ಲಲ್ಲಿ, ಆಸೆ ಚುಕ್ಕಿಗಳಲ್ಲಿ
ಹೆಣೆವ ಕನಸಿನ ಪದ್ಯ
ಬಿಗಿದು, ಬಿಡಿಸಲಾಗದನಂಟು.
ನಾಜೂಕು, ಎಳೆ ಎಳೆಯ ಸಮಸ್ಯೆ
ನನ್ನಂತೆ ನಿನ್ನಂತೆ ಮತ್ತಾರೋ ಕಂಡಂತೆ.

ಹುಟ್ಟಿ ತಿರುಗುತ್ತ ಸುತ್ತ ಮುತ್ತ
ಅತ್ತಿತ್ತ ಮತ್ತೆ ಹೊರಟತ್ತಲೇ ನಡೆವ ತಂತ್ರ,

ಎಲ್ಲಿ ಹೊರಟರು ಮೊದಲೆ
ಎಲ್ಲಿ ನಿಂತರು ಕೊನೆಯೆ
ಕರಕುಶಲ ಕೈವಾಡ ಥಳಕು ಬೇಕು

ಬೆಳ್ಳಿ ಹರದಾರಿಗಿಲ್ಲ ಕೈಮರ
ಗುರುತು
ಚುಕ್ಕಿ ಹಂದರದಲ್ಲಿ

ಮರೆತುಹೋಗಿದೆ ಬೆರೆತು
ಮೊದಲು ಚುಕ್ಕಿಗಳ ಹೆಕ್ಕುವುದನ್ನು
ಬೆಳ್ಳಿಗೆರೆಗಳ ಹೆಣೆದು
ರೂಪುಕಟ್ಟುವುದನ್ನು ಕಲಿಯಬೇಕು.
ತೀಡಿ, ತಿದ್ದಿ, ಮೇಲಿಂದ ಮೇಲೆ
ಚಕಮಕಿ ಚಳಕ ತಂದೀತು ಮತ್ತೆ
ಮರೆತ ಭಾಷೆಯ ತೊದಲು
ಆಸೆ ಚುಕ್ಕಿಗಳಲ್ಲಿ ಆಗ ಭಾಷೆಗೆ ಬಣ್ಣ.

ಬಣ್ಣ ಬಣ್ಣಕೆ ಬೆರೆತು
ಬಣ್ಣ ಬಣ್ಣವ ಅರಿತು
ಬಣ್ಣದಾಚೆಯ ಬಿಳುಪು ಸಿಕ್ಕಬೇಕು.

**ಕೃಪೆ:** ಮಮತಾ ಸಾಗರ ಆಯ್ದ ಕವಿತೆಗಳು(೨೦೧೪) ಕಡಲು ಪ್ರಕಾಶನ ಬೆಂಗಳೂರು

❖

# ಡುಂಡುಭ ವಿಲಾಪ

- ಡಾ. ಧರಣಿ ದೇವಿ ಮಾಲಗತ್ತಿ

ಹೆಂಡತಿಯನ್ನು ಕಚ್ಚಿದ ಹಾವುಗಳ ವಿರುದ್ಧ
ದಂಡ ಹಿಡಿದು ನಿಂತಿದ್ದ ರುರು
ಎತ್ತಿದ ದೊಣ್ಣೆ ಅಪ್ಪಳಿಸುವ ಮುನ್ನ
ತೇಲಿ ಬಂತು ಕ್ಷೀಣವಾಗಿ ಡುಂಡುಭನ ಗೋಳು

ನಾವು ಕಚ್ಚುವವರಲ್ಲ
ಕಚ್ಚಿದರೂ ವಿಷವಿಲ್ಲ
ಒಳ್ಳೆಗೆ ವಿಷವಿದ್ದರೇನು?
ಮಾತು ಕೇಳಿಯೇ ಇರುತ್ತೀ ನೀನು
ನೀರ ಅಲೆಯಲ್ಲಿ ಅಲೆಯಾಗಿ ಚರಿಸುವ
ಹಾವುಗಳು ನಾವು, ಬಿಲ ಉಂಟು
ಎಲ್ಲ ಹಾವುಗಳ ಕಷ್ಟವೂ

ಸತ್ತ ಹಾವನ್ನು ಹೊಡೆದವರ ಮಧ್ಯೆ
ಬಿಡುವುದುಂಟೆ ನಮ್ಮನ್ನು ಹಾಗೆಯೇ?
ನಮಗೆಲ್ಲಿ ನಿರ್ಭಯದ ನೆಲೆ? ನಂಬುವುದಿಲ್ಲ ನೀವು!

ಹನ್ನೆರಡು ವರ್ಷದ ಸೇಡು
ಸಾಕುವವನ ಕುಲಬಾಂಧವರಲ್ಲ ನಾವು
ನೋಡುವುದಕ್ಕೆ ಹಾಗಿದ್ದೇವೆ– ಅಷ್ಟೆ
ಬಣ್ಣ ಹಾಗಿದೆ–ಚರ್ಮವೂ ಹಾಗೆಯೇ
ನಾನೆಂದೂ ಹೆದರಿಸಿಲ್ಲ ಯಾರನ್ನೂ
ಕಂಡವರು ನನ್ನ ದಿರಿಸಿಗೆ ಹೆದರಿದರೆ
ನಾನೇನು ಮಾಡಲಿ ಹೇಳು?
ದಿರಿಸಿನ ಒಳಗಿನ ಹೃದಯ ಕಾಣಬಾರದೆ ನೀನು?

ನಿಧಿಕಾಯುವವರುಂಟಂತೆ
'ದಶ' ಎಂದು ಹೇಳಿ ಕಾರ್ಕೋಟಕ
ವಿಷ ಇಳಿಸುವವರೂ

ಭೂಪತಿಯ ಶಯನಕ್ಕೆ ಪಲ್ಲಂಗವಾದವರು
ಹಣ್ಣಿನಲ್ಲಿ ಸಣ್ಣ ಹುಳುವಿನಂತೆ ವೇಷ ಮರೆಸಿ
ನೀರಿನ ಕೋಟೆ ದಾಟಿ
ಆಹುತಿ ತೆಗೆದುಕೊಂಡವರೂ–ಎಲ್ಲವೂ ಪುರಾಣ
ಪಳಮೆಯಯ್ಯಾ
ಇಂಥ ವಿದ್ಯೆಯ ಬಲ್ಲವರಲ್ಲ ನಾವು
ನಂಬುವುದಿಲ್ಲ ನೀವು!
ನಮ್ಮನ್ನು ಅಟ್ಟಿಸುತ್ತೀರಿ
ಬಿಲದಿಂದ ಬಿಲಕ್ಕೆ ಓಡಿಸುತ್ತೀರಿ
ನಿಧಿ ಕಾಯುವವನನ್ನು ಕಾಯಲು ಹಚ್ಚುತ್ತೀರಿ
ಖಯಮ್ಮಾಗಿ ಪಟ್ಟಗಟ್ಟುತ್ತೀರಿ ಅದೇ ಹುದ್ದೆಯಲ್ಲಿ

ನನ್ನಂತಹವನ್ಯಾರೋ ನಿನ್ನಿನಿಯಳ ಕಚ್ಚಿದನೆಂದು
ದಂಡಿಸಲು ನಿಂತಿದ್ದೀಯಲ್ಲಾ
ಮಾನವ ಹಕ್ಕುಗಳ ದಂಡ ಹಿಡಿದು ನಿಂತ ಮಹಾರಾಯ
ಮಾನವಾಗಿ ಬದುಕುತ್ತಿದ್ದೇವೆ ನಾವು
ಯೋಚಿಸು ನಿಮ್ಮವರಲ್ಲಿ ಮೈತುಂಬ ವಿಷವಿರುವವರು ಎಷ್ಟು
ಜನ?
ನಾನೋ ಬರೀ ನೀರು ಹಾವು.

ಕೃಪೆ: ಕಾವ್ಯಬೋದಿ (೨೦೧೫)ಕವಿ ಪ್ರಕಾಶನ, ಕವಲಕ್ಕಿ, ಹೊನ್ನಾವರ ತಾಲ್ಲೂಕು, ಉಕ

# ಅಮ್ಮನಾಗುವುದೆಂದರೆ ...

- ರೂಪ ಹಾಸನ

ಒಲೆಯ ಮೇಲೆ
ಬೆಣ್ಣೆ ಕಾಯಿಸಲು ಪಾತ್ರೆ ಇಟ್ಟಾಗೆಲ್ಲಾ
ಅಮ್ಮನ ಮಾತಿನ ನೆನಪು
ಎಚ್ಚರಿಕೆಯ ಉಪದೇಶದ ಮೆಲುಕು,

'ಮಗಳೇ ಬೆಣ್ಣೆ ಮುದ್ದೆಯ ಮೂರರಷ್ಟು
ದೊಡ್ಡ ಪಾತ್ರೆಯಲಿ ಕಾಯಲಿಡಬೇಕು
ಬೆಂಕಿ ಕೊಟ್ಟರೆ ಬೆಣ್ಣೆ ಉಕ್ಕುತ್ತದೆ
ತನ್ಮಯತೆಯಲಿ ಕಾಯಬೇಕು,

ಬೆಣ್ಣೆ ಹದ ಬೆಂದರಷ್ಟೇ
ಪಕ್ವಗೊಂಡ ತುಪ್ಪ
ಹೆಚ್ಚು ಕಾದರೆ ಸೀಕಲು
ಕಡಿಮೆ ಬೆಂದರೆ ಹಸುಕು

ಬೆಣ್ಣೆ ಕಾದು ಪಕ್ವಗೊಳುವಾಗ
ಕ್ಷೀಣಿಸುವ 'ಮಟರ್ ಮಟರ್' ಸದ್ದು
ಜಿಡಿ ಮಳೆ ನಿಲ್ಲುತ್ತ ಬಂದಂತೆ
ಹದ ತುಪ್ಪದ ಘಮಲು ಎಲ್ಲಡೆಗೂ'

ಅದೆಷ್ಟು ಬಾರಿ ಒಬ್ಬಳೇ
ಬೆಣ್ಣೆ ಕಾಯಿಸಿದ್ದೋ ಲೆಕ್ಕವಿಲ್ಲ
ಆ ಪಿತ್ತ ಈ ಚಿತ್ತದ ಗಡಿಬಿಡಿಯಲ್ಲಿ
ಗಮನವೀಯದೆ ಉಕ್ಕಿಸಿದ್ದೇ ಹೆಚ್ಚು,

ಉಳಿದು ಕಾದದ್ದು ಒಮ್ಮೆ ತುಪ್ಪ ಸೀದು
ಮೂಗಿಗಮರುವ ಕಮಟು ವಾಸನೆ
ಇನ್ನೊಮ್ಮೆ ಹಸಿಹಸಿಯಲೇ ಇಳಿಸಿ
ನಾಲ್ಕೇ ದಿನಕ್ಕೆ ಕೆಟ್ಟ ನಾತ.

ಯಾವುದು ನಿಜದ ಹದ?
ಪಕ್ವತೆಯ ಗರಿಷ್ಠ ಬಿಂದು
ನಿರ್ಧಾರದ ಹೊಸ್ತಿಲಲ್ಲಿ ತಪತಪಿಸುವ ತಾಪ
ಕಳಿಯುವಿಕೆಯ ಹುಡುಕಾಟದ ತಪ.

ಸಿದ್ಧಿಸಿದಂತೆಲ್ಲ ಬೆಣ್ಣೆ ಉಕ್ಕುವುದಿಲ್ಲ
ಮಾಗುವ ಸದ್ದಿಗೆ ಧ್ಯಾನಿಸಿ
ಸ್ಥಿರಗೊಳ್ಳುತ್ತದೆ ಮನ, ಕರಟುವುದಿಲ್ಲ
ಹಸುಕಲಾಗುವುದಿಲ್ಲ, ಸದಾ ಹದತುಪ್ಪ.

ಅಮ್ಮನಾಗುವುದೆಂದರೆ.... ಹೀಗೆ.

**ಕೃಪೆ:** ಕಡಲಿಗೆಷ್ಟೊಂದು ಬಾಗಿಲು (೨೦೧೦ )ಲೋಹಿಯಾ ಪ್ರಕಾಶನ, ಬಳ್ಳಾರಿ.

❖

# ಒಂದೇ ಭೂಗೋಲ

- ಸುನಂದಾ ಪ್ರಕಾಶ ಕಡಮೆ

ಹಿಟ್ಟಿಗೆ ಹದವಾಗಿ ನೀರು ಬಿದ್ದರೆ
ನಮ್ಮ ಮನಸ್ಸಿಗೆ ಬಂದಂಥ
ಆಕಾರ ಕೊಡಬಹುದು

ಹಸ್ತದಲ್ಲಿ ತಿಕ್ಕಿ ಮೆತ್ತಗೆ ನಾದಿ
ಒತ್ತಿ ಗುಂಡು ಕಟ್ಟಿ
ಎರಡೂ ಬದಿ ಹಿಟ್ಟಿನಲದ್ದಿ
ತುಸು ಲಟ್ಟಿಸಿ
ಒಳ ಹೊರಗಿನ ಪದರಿಗೆಲ್ಲ
ಬೆಣ್ಣೆ ಸವರಿ ಮಡಿಚುತ್ತ

ತಳದಲ್ಲಿ ಮಣೆ
ಮೇಲೆ ಲಟ್ಟಣಿಗೆ
ಮಧ್ಯೆ ತ್ರಿಕೋನ
ಮಾಯೆಯಂತೆ ಗೋಲವಾಗುವುದು

ಇತ್ತ ಮಣೆಗೂ ಅಂಟದೇ
ಅತ್ತ ಲಟ್ಟಣಿಗೆಗೂ ಹಿಡಿಯದೇ
ಮೈದಾಳಿದ್ದು
ಯಾವ ಭೂ ಭಾಗದ್ದೂ ಆಗಬಹುದು

ಆದರೀಗ
ಲಟ್ಟಣಿಗೆ ಎತ್ತೆತ್ತಲೋ ಆಡಿ
ಮೇಲೇರಿದವನ ನೆತ್ತಿ ಒತ್ತುತ್ತ
ನೆಲ ಕಚ್ಚಿದವನ ಅಲ್ಲೇ ತುಳಿಯುತ್ತ
ಅಂತರ್ಮುಖಿಯಾದದ್ದಕ್ಕೆ

ಮೂಡಿಹುದು ಅಲ್ಲಲ್ಲೇ
ಗೆರೆ ಕೊರೆತ ತಗ್ಗು ದಿನ್ನೆ
ದೇಶ ಖಂಡಗಳು

ಈಗ ಪುನಃ ಹರಿದ ಗೋಲವ
ಮುಷ್ಠಿಯಲ್ಲೇ ಮುದ್ದೆ ಕಟ್ಟಬೇಕು
ಶ್ರದ್ಧೆಯ ಲಟ್ಟಣಿಗೆಯಿಂದ
ನಾಜೂಕಾಗಿ ಲಟ್ಟಿಸಬೇಕು

ನೋಡ ನೋಡ್ತ ಅಲ್ಲಿ ಅದೋ
ಚೂರು ಗೀರು ಒಟ್ಟು ಸೇರಿ
ಗೆರೆ ತೋರದಂತೆ ಅಳಿಸಿ ಹೋಗಿ
ಒಂದೇ ಭೂಗೋಲವಾಗಿದೆ

ಸೂರ್ಯ ಗೋಲದಲ್ಲಿ ಬೆಂದ
ಪದರು ಪದರು ರುಚಿಯಾಗಿದೆ

ಕೃಪೆ: ಸೀಳುದಾರಿ(೨೦೦೯). ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲು ಅಂಕೋಲ.

❖

# ಬೆಳ್ಳಕ್ಕಿ ಬೆಳ್ಳಕ್ಕಿ ಉಂಗ್ರಕೊಡೆ

- ಸುಧಾಶರ್ಮ ಚವತ್ತಿ

ಇಷ್ಟಿಷ್ಟೆ ಬೆರಳಂಚಿನ,
ಉಗುರೆಂಬ ಆಕಾರದಲ್ಲಿ.
ಅಂಕೆ ಕಲಿತಾಗಿಂದ
ಬೆಳ್ಳಕ್ಕಿ ಉಂಗುರವ ಎಣಿಸಿದ್ದೇ ಎಣಿಸಿದ್ದು.

ಆಟವಾಡುವಾಗ,
ಗುಬ್ಬಚ್ಚಿ ಗೂಡು ಕಟ್ಟುವಾಗ,
ಜತನದಿಂದ ಉಳಿಸಿಕೊಂಡರೂ,
ರಾತ್ರಿ ಕನಸಿನಲ್ಲಿ ಉಂಗುರ ಮಾಯವಾದಂತಾಗಿ ಹಾಸಿಗೆಯಲ್ಲೇ ಅತ್ತಿದ್ದು.
ಮಾಸಲಾದ ಉಂಗುರದ ಕೈಯ್ಯ
ಕೆನ್ನೆಗೆ ಹಚ್ಚಿ ಚಿಂತಿಸಿದ್ದು,
ಸಂಜೆಗೆ ಹಾರಿದ ಬೆಳ್ಳಕ್ಕಿ ಹಿಂಡಿನ ಹಿಂದೆ ಓಡಿ
ಎರಡೂ ಕೈ ಎತ್ತಿ ಕೂಗಿದ್ದು
'ಬೆಳ್ಳಕ್ಕಿ ಬೆಳ್ಳಕ್ಕಿ ಉಂಗ್ರ ಕೊಡೆ.'

ಉದ್ದ ಲಂಗದ ನಡಿಗೆ,
ಒಂದು ಕೈಯ್ಯಲ್ಲಿ ನಿರಿಗೆ,
ಗುಲಾಬಿ ದಳದ ಅಂಗೈತುಂಬ
ಮದರಂಗಿಯದೇ ಕನಸು.
ಕನ್ನಡಿಗೂ ರಂಗು ರಂಗಿನ ಬಣ್ಣ
ಹಾರುವ ಬೆಳ್ಳಕ್ಕಿ ಹಿಂಡಲ್ಲಿ
ಹುಡುಗನ ನಗೆ ಒತ್ತೊತ್ತಿ ಬರುತ್ತಿದೆ.
ಈಗ ಮರೆತು ಹೋಗಿದೆ
ಅಂದು ಕೂಗಿದ್ದು
'ಬೆಳ್ಳಕ್ಕಿ ಬೆಳ್ಳಕ್ಕಿ ಉಂಗ್ರ ಕೊಡೆ.'

ಎಲ್ಲಾ ಅದೇ ಅದೇ
ಸೀರೆ, ಮನೆ, ಮದುವೆ, ಮಕ್ಕಳು
ಸಂಸಾರ ಬಂಗಾರದ ಗೌಜೋ ಗೌಜು.
ಹವಳ ಹರಳಿನುಂಗುರದ ಹೊಳಪು ಕಣ್ಣಲ್ಲಿಲ್ಲ.

ಹಚ್ಚಿದ ನೇಲ್‌ಪಾಲೀಷ್ ಉಜ್ಜಿ,
ಉಗುರನ್ನು ಶೇಪ್ ಮಾಡುವಾಗ;
ಅರೆರೇ ಬೆಳ್ಳಕ್ಕಿ ಉಂಗುರ.
ಅಪರೂಪಕ್ಕೆ ಸಿಕ್ಕ ಗೆಳತಿ
ಡುಬ್ಬನೆ ಬೆನ್ನಿಗೆ ಗುದ್ದಿ
ಅಂಗೈಯಲ್ಲಿ ಕಣ್ಣು ಮುಚ್ಚಿದ ಸುಖ.
ಹಾಡೇ ಹಗಲಾದರೂ
ನಿಂತಲ್ಲೇ ಕೈಯೆತ್ತಿ ಕೂಗಬೇಕೆನ್ನಿಸಿದೆ.
'ಬೆಳ್ಳಕ್ಕಿ ಬೆಳ್ಳಕ್ಕಿ ನನ್ನ ಉಂಗ್ರ ತಗಂಡು ನಿನ್ನ ಉಂಗ್ರ ಕೊಡೆ.'

❖

# ಮಡಕೆಯ ಮಾಡುವಡೆ

- ಡಿ.ಸಿ. ಗೀತಾ

ತುಳಿತುಳಿದು
ಹದಗೊಂಡು
ತಿರುಗಣಿಯ ಮೇಲೆ
ಮುದ್ದೆಯಾಗಿ ಕುಳಿತ ಮಣ್ಣಿಗೆ
ತಿಳಿದಿರಲಿಲ್ಲ
ತಾನು ಪಡೆದುಕೊಳ್ಳುವ ರೂಪು.

ನಿಧಾನ ತಿರುತಿರುಗಿ
ಮೈದುಂಬಿ ಕೊರಳು ಕಂಠವರಳಿದ್ದು
ಬರೀ ಕೈಚಳಕದಿಂದಲ್ಲ.
ಅವ್ಯಕ್ತಕ್ಕೆ ರೂಪುಗೊಂಡ ಮಡಿಕೆ
ಒಳ ಹೊರಗೆಲ್ಲ ಪ್ರೀತಿ ಚಿತ್ತಾರ!

ಜತನದಿಂದ ತಟ್ಟಿ ತಟ್ಟಿ
ತಳಪಟ್ಟಿ ಕಟ್ಟಿ
ಬಿಸಿಲಲ್ಲಿ ಬೋರಲಿಟ್ಟು ಬೆಂಕಿಯಲ್ಲಿ ಸುಟ್ಟು
ಹದಗೊಳಿಸಿದರೆ ಸಿದ್ಧಿಸುವ ನವಪಾಕ.

ಇಲ್ಲ ಇಲ್ಲ ಇಷ್ಟಕ್ಕೆ ಪಳಗಲಾರದು ಮಡಿಕೆ

ಕೆನೆಕಟ್ಟಿದ ಹಾಲು ಮೊಸರಾಗಿ
ಕಡಗೋಲ ಹಿಡಿದು ಕಡೆಯಬೇಕು
ತೇಲಿಬಂದ ಬೆಣ್ಣೆ ತುಪ್ಪವಾಗಬೇಕು

ಕೊಳ್ಳಲಾರದ ಮಾರಲೂ ಆಗದ ಮಡಕೆ
ಪಳಗಿದರಷ್ಟೇ ಸಾಕೆ?
ಬೇಸರಿಸದೆ ಸಿಡುಕದೆ ಎಚ್ಚರದಲ್ಲಿ ಕಾಯಬೇಕು.

ಕಾಯಬೇಕು
ತುಂಬು ಪ್ರೀತಿಯಲ್ಲಿ ಒಡೆಯದ ಹಾಗೆ
ಮಡಕೆಯೊಳಗಿನ ಆತ್ಮವನ್ನು.

ಆಗಷ್ಟೇ ದಕ್ಕೀತು
ಹದಗೊಂಡು ರೂಪುಗೊಂಡ
ಮಣ್ಣಿನ ಹಣತೆಯೊಳಗೆ
ತಿಳಿದುಪ್ಪ ದೀಪವಾಗಿ
ಬೆಳಗುವ
ಆ ಮಹಾ ಬೆಡಗು!

ಅಪ್ರಕಟಿತ

❖

# ನಡೆ

- ವಿನಯಾ

೧.

ನೀನು ಅವ್ವನ ಹಾಗೆ
ತೂಪಿರಿದು ಛೀಃಕರಿಸಿ
ಬಿಡುಬೀಸು ನಡೆಯುತ್ತಿ ಹಿಂದೆ ನೋಡದೆ
ಅತ್ತು ಸಾಕಾಗಿ ಕುಸುಕುಸು ಮಾಡುತ್ತ
ಬೆನ್ನು ಹತ್ತುತ್ತೇನೆ ಮತ್ತೂ
ಹಾದಿ ಬದಲಿಸಲಾರೆ ನಾನು
ಬದಲಾಗಲಾರೆ ನೀನು

೨.

ಎದೆಗೂಡಾದ ಬಿಸಿ ಬೆಚ್ಚಗಿನ ರಾತ್ರಿ
ಚಪ್ಪರಿಸುವ ನಿದ್ರಾಸುಂದರಿಯ ಕಥೆ
ಇರಲಿ ಹೀಗೆ ಎಲ್ಲ ತಟಸ್ಥ ನೂರಾರು ವರ್ಷ
ಸಾಕು ಸಾಕೆಂಬುದಾದ ಮೇಲೆ
ಸಣ್ಣಗೆ ಕಣ್ಣುಜ್ಜಿ ನೋಡಿದರಾಯಿತು
ಹಗಲಿನ ಹತ್ತು ಎಳೆತ.

೩.

ಕಾಡಿನ ಕಾಲುಹಾದಿಯಲ್ಲಿ ಕಂಡಿದ್ದೆ
ಭರ್ತಿ ಹಬ್ಬಿದ ಬಳ್ಳಿ ತಬ್ಬಿದ ಮರವನ್ನೇ ಅವುಚಿದ್ದ
ಈಗೀಗ
ಹಳವಂಡದ ಕನಸಲ್ಲಿ ಆ ಬಳ್ಳಿ, ಆ ಮರ
ಸಾಥಿ, ಮರಕ್ಕೆ ನಿನ್ನದೇ ಮೂಗು ಕಣ್ಣು ಮುಖ ಚಹರೆ
ದಿಗಿಲುಗೊಂಡೆದ್ದು ಬಳ್ಳಿಯ ಬೇರುಗಳ
ಬಿಡಿಸಲು ಹೊರಳಾಡುತ್ತೇನೆ.

೪

ಏನೇನು ಮೆತ್ತಿದ್ದರೋ ಎಲ್ಲ ಹೊತ್ತೆ ಗೋಡೆಯಂತೆ
ರಕ್ತ ಕುದ್ದು ಕುದ್ದು ಕಪ್ಪಾಗಿ ಸೀದ ನಾತ
ಹೆಣದ ಬಟ್ಟೆಯೊಂದಿಗೆ ಕಪ್ಪು ಗುಲಾಬಿಯೊಂದಿರಲಿ
ಯಾಕೆಂಬ ಗುಟ್ಟು ನಮ್ಮಿಬ್ಬರಲ್ಲುಳಿಯಲಿ

೫

ಸುಮ್ಮನಿರು
ಅವನು ಹೇಳಿದ, ಮಕ್ಕಳು ಹೇಳಿದರು
ನಾನೂ ಹೇಳಿದೆ
ಹಾಳು ಮನಸ್ಸು ಮಾತ್ರ
ಗರಿ ಉದುರಿದ ರೆಕ್ಕೆಯಂತೆ
ತರತರ ಒರಲುವುದನ್ನು ಬಿಡಲಿಲ್ಲ.

೬.

ಈ ಮನೆ ನಿನ್ನ ಹಾಗೇ
ಬೇಡವೆಂದರೂ ಕೈ ತುಡುಕಿ ಕಾಡುತ್ತದೆ
ಮೂಲೆ ಮುಡುಕುಗಳ ತೋರಿ
ಕಣ್ಣ ಮಿಟುಕಿಸುತ್ತದೆ
ನೇವರಿಸುತ್ತ, ಸಂಭಾಳಿಸುತ್ತ
ನನ್ನ ಎಲುಬು ಒಳಗೇ ಸಡಿಲವಾದಂತೆ
ಅಡ್ಡರಾತ್ರಿಗಳಲಿ ಕನಸು.

೭

ಈ ಒಲೆ ಈ ಲೈಟರು
ಎರಡೂ ಸಮಾ ಬೆರೆತರೆ
ಬೆಂಕಿ, ಬೇಯುವ ಅನ್ನ
ಅರೆ ಅರೆ, ಅದೆಷ್ಟು ಕಾಲದಿಂದ
ಇದ್ಯಾವ ಪಾಠ ಹೇಳುತ್ತಿದೆ
ಕೆಲಸದ ಗಡಿಬಿಡಿಯಲ್ಲೂ
ಕೆನ್ನೆಗೆಂತದೋ ಕೆಂಪು.

೮

ಈ ನಸು ಬೆಳಗು
ಮೀಸೆಯ ಒಂದೇ ಒಂದು
ಬಿಳಿಕೂದಲ ಹುಡುಕುತ್ತ
ಹೇಳಿದನಿವ 'ವಯಸ್ಸಾಯಿತು'
ಬೆಳೆದ ಮಕ್ಕಳ ಮುಂದೆ
ಜಗಳವಾಡಲು ಮಾತಿಲ್ಲ,
ಹುಂಗುಡುತ್ತೇನೆ, ಮನಸ್ಸಿಗೆ
ಯಾವುದೋ ಅಮಲು.

ಕೃಪೆ: ಹಸಬಿ(ಸಂ) ಅಭಿನವ ೨೦೧೪

# ಬೋಳುಮರ

- ವೀಣಾ ಬನ್ನಂಜೆ

ಹರಿತ್ತು ಹೀರಿ ಫಲ ಬಿಟ್ಟು
ನೆರಳು ಕೊಡುವ ಕೆಲಸ ಮುಗಿಯಿತು
ನಾನೀಗ ಬಟಾಬಯಲಿನಲಿ
ಎಲೆ ಉದುರಿಸಿಕೊಂಡು ಖಾಲಿಯಾಗಿ ನಿಂತ ಬೋಳುಮರ
ನಿಮಗೆ ಹೇಗೆ ಬೇಕೋ ಹಾಗೆ ಬಳಸಿ
ಏಕೆಂದರೆ ನಾನು ಖಾಲಿಯಾದದ್ದೇ ನಿಮಗಾಗಿ
ಬೇಕಿದ್ದರೆ ಕತ್ತರಿಸಿಕೊಂಡು ಆಸನ ಮಾಡಿಸಿಕೊಳ್ಳಿ
ಅಥವಾ ನಿಮ್ಮ ನಡೆಗೊಂದು ಊರುಗೋಲು
ನಿಮ್ಮ ಕಟ್ಟಿದ ಮನೆಯ ಮೇಲೊಂದು ಮಾಡ
ನಡೆದಾಡುವ ಪಾದರಕ್ಷೆ
ನೀವು ಉಣ್ಣುವ ಅನ್ನ ಬೇಯಿಸುವ ಸೌದೆ
ಹೆಣ ಸುಡುವುದಕ್ಕೆ ಬೇಕಾದ ಉರುವಲು
ನೀರು ದಾಟಿಸಲು ದೋಣಿಯೂ ಆಗಬಹುದು
ಬೇಡವೆಂದರೆ ನೀರು ನೂಕಲು ಪುಟ್ಟ
ಹರಿಗೋಲು
ಬದುಕು ಸಾಗಿಸಲು ಒಂದು ಚಕ್ಕಡಿ
ಅಥವಾ ಯಾರನ್ನೋ ಹೊರುವ ಪಲ್ಲಕ್ಕಿ
ದೇವರ ಉತ್ಸವಕ್ಕೆ ದೇವರಥ
ಕಡೆಗೆ ಬೇಕಾದರೆ ನೀವು ಮೆಚ್ಚುವ
ದೇವಮೂರ್ತಿಗೂ ಬಳಸಬಹುದು
ಅದೀಗ ನಿಮಗೆ ಸೇರಿದ್ದು ನೀವು ಮಾಡಿದಂತೆ
ಅದರ ಆಕಾರ
ನಾನು ಎಲ್ಲಕ್ಕೂ ಸಿದ್ಧ
ಯಾಕೆಂದರೆ ನಾನು ಆಗಲೇ ಹೇಳಿದ್ದೇನೆ
ನಾನು ಖಾಲಿಯಾಗಿದ್ದೇ ನಿಮಗಾಗಿ

ಅಪ್ರಕಟಿತ

❖

# ಆ ದಾರಿಗಳು ಪಾದಗಳ ಕಂದನ ಹಾಗೇ ಕಾಪಾಡುತ್ತವೆ

- ಡಾ. ಪಿ ಚಂದ್ರಿಕಾ

ಟಾರು ರಸ್ತೆಯ ಮಧ್ಯಕ್ಕೆ ಎಳೆಯುತ್ತಿದ್ದಾರೆ ಗೆರೆಗಳ
ವಾಹನಗಳು ಅವುಗಳವುಗಳ ಪಥದಲ್ಲಿ ಚಲಿಸಬೇಕಲ್ಲವೇ?
ತಿರುಗುವ ಹುಚ್ಚಿಗೆ ಬಿದ್ದವಳಿಗೆ ಯಾವ ಪಥ
ಅಪಥಿಕಳ ಆತ್ಮಚರಿತ್ರೆ ಅಂತಾ ಬರೆದರೆ ಅದು ನನ್ನದೇ.

ಎಲ್ಲಿ ನಿಲ್ಲಿಸಲಿ? ಸಣ್ಣ ಜಾಗ ಸಿಕ್ಕರೆ ಕಾರು
ಅಲ್ಲೇ ಪಕ್ಕಕ್ಕೆ.
ನನಗೀಗ ಆ ಬೆಟ್ಟಕ್ಕೆ ಹೋಗುವುದು ಬೇಕು
ನೀಲಿ ಹೂಗಳ ಕಿತ್ತು ಜಡೆಗೆ ಸಿಕ್ಕಿಸಿದ ನಲ್ಲ ಅಲ್ಲೇ ಇರುವನೋ ಏನೋ
ಅವನು ಸ್ನಾನ ಮಾಡಿದಾಗ ಉಳಿದ ಸೋಪಿನ ಪರಿಮಳ
ಅಡಗಿದೆ ಎಲ್ಲೋ

ಫೋನ್ ಮಾಡಿದೆ ಇನ್ನು ನಾಲ್ಕಾರು ಗಂಟೆಗಳು ಸಿಗ್ನಲ್ ಸಿಗಲ್ಲ
ಕಳೆದು ಹೋಗುವವಳಿದ್ದೇನೆ ಕಾಡಿನ ಬಾಲ್ಯದಲ್ಲಿ

ಎಲ್ಲ ಗೊತ್ತಿದೆ ಪಾದಕ್ಕೆ
ಎಂಥಾ ಅಭ್ಯಾಸ!
ಆ ಕಲ್ಲು ಬಂಡೆ, ತಿರುವುಗಳಲ್ಲಿ ಉಳಿದ ಮರದ ಬೇರು
ಕಾಣದೆ ಎಡವಿದರೆ ಮಾತ್ರಾ ಸೀದಾ ಕಣಿವೆಗೆ
ಎರಡೂ ಕಾಲುಗಳು ಎಚ್ಚರಕ್ಕೆ ಕಣ್ಣೆ

ಎಲ್ಲೆಲ್ಲಿ ಅಲೆದಾಟ ಮಾಟ
ಹುಟ್ಟಾ ಚೆಲ್ಲುಬಡುಕಿ ನಾನು ಹತ್ತಿದ್ದು ಗಂಟುಗಳು ಮೈತುಂಬಿದ ಮರವ
ಹತ್ತುವಾಗಿನ ಉತ್ಸಾಹ ಇಳಿವಾಗ ಇರೊಲ್ಲ ಕಾಲಲ್ಲಿ ಸಣ್ಣ ನಡುಕ
ಅನುಭವಕ್ಕೆ ಯಾವುದಾದರೇನು ತರಚಿದ ಗಾಯಗಳು ವಾಸ್ತವ
ಬೇಕಿತ್ತು ಆ ಹೂವ ಪರಿಮಳದ ಬೀಜಗಳು
ಬೀರಿದಷ್ಟೂ ಉತ್ಸಾಹ ಮೈಮರೆಸುವ ಜೊತೆಗಾರ ಗಾಳಿ
ಚುಚ್ಚಿ ಮುರಿದ ಮುಳ್ಳು ಒಳಗೆ ಇಟ್ಟಾಡಿಸುತ್ತದೆ
ಸಭ್ಯಸ್ಥನ ಹಾಗೇ.

ನಡೆದೆ ನಡೆದೆ ಕಾಲು ನೊಂದು ಊತ ಬಂದರೂ ಬಿಡದೆ
ಗೊತ್ತಿದೆ ಖಚಿತ
ಈಗಲೂ ಇದೆ ಬೆಟ್ಟದ ತುದಿಯ ಆ ಮರ
ಹಾಗೆಂದುಕೊಂಡೆ ತಿದಿಯುಸಿರ ಅದುಮಿ ಹೆದೆಯೆತ್ತಿದ
ಆಯಾಸಕ್ಕೆ ಸಿಕ್ಕ ಅಮಲುಗಳ ದಾಟಿ
ಹೋದೆ ಆ ಮರದ ಹತ್ತಿರ
ತೂಗುತಿದ್ದವು ಹೂವಿನ ಜೊತೆ ಬೀಜಗಳು
ಕೈತುಂಬಾ ಹೂವು ಮೈತುಂಬಾ ಗಂಧ
ಎತ್ತಿಕೊಂಡೆ ಬಿದ್ದ ಎರಡೆ ಬೀಜಗಳ
ಅಚ್ಚರಿ, ಕಾಡು ನಕ್ಕಿತು
ಕಂದನಾಗುವ ಪಾದಗಳ ತಾಯಂತೆ ಹುಲ್ಲು ಮುಚ್ಚಿತು,
ಮುಳ್ಳುಗಳ ಪಕ್ಕಕ್ಕೆ ಸರಿಸಿ!
ಪಥವಿಲ್ಲದವಳ ಆತ್ಮಚರಿತ್ರೆಯ ಬಹುಮುಖ್ಯ ಪುಟವೊಂದು ಹೀಗೇ ತೆರೆಯಿತು

ಕೃಪೆ: ಎಲೆಯೆಂಬುದು ಗಾಳಿಯ ಅಧೀನ (ಸಂ) ಅಕ್ಷರ ಪ್ರಕಾಶನ ಹೆಗ್ಗೋಡು ೨೦೧೬

# ಬೆಂಕಿ ಬಿದ್ದಿದೆ

- ವಿದ್ಯಾ ಹೆಗಡೆ

ಬೆಂಕಿ ಬಿದ್ದಿದೆ
ಕಾಡಿಗೆ
ಅದು ಭುವಿಯಿಂದ ಎದ್ದಿತೋ
ಆಗಸದಿಂದ ಸಿಡಿಯಿತೋ
ಹೇಳುವರಾರು?

ಪಶು, ಪಕ್ಷಿ
ಬಳ್ಳಿ, ಮರ
ಸರ್ವವೂ ಕರಕಲಾಗುತ್ತಿದೆ.
ಬೆಂಕಿ ಬಿದ್ದಿದೆ
ನಾಡಿಗೆ
ಅದು ವಾಯುವ್ಯದಿಂದಲೋ
ಈಶಾನ್ಯದಿಂದಲೋ
ಕಾಣುವರಾರು?

ಗಂಡಸರು, ಹೆಂಗಸರು
ತಾರೆಗಳ ಕಣ್ ಪಡೆದ ಕೂಸುಗಳು
ಸರ್ವವೂ ಬೇಯುತ್ತಿವೆ.

ಬೆಂಕಿ ಬಿದ್ದಿದೆ
ಅವಳ ಹೂ ಒಡಲಿಗೆ
ಅದು ಇಹದಿಂದಲೋ
ಪರದಿಂದಲೋ
ತಿಳಿಸುವರಾರು?

ನೋಟ, ಕನಸು
ಭಾವ, ಮನಸು, ಕರುಳು
ಸರ್ವವೂ ಬಸವಳಿಯುತ್ತಿದೆ

ಇಷ್ಟಾದರೂ ಪುಣ್ಯನದಿಗಳು
ಮರಗಟ್ಟಿವೆ.

(ಅಪ್ರಕಟಿತ)

# ನರಕ

– ಡಾ. ತಮಿಳ್ ಸೆಲ್ವಿ

ಅವನಿಲ್ಲದ ನರಕ ನನಗೆ ಸ್ವರ್ಗ
ನಾನು ನರಕದಲ್ಲಿ ಸ್ವರ್ಗಸ್ಥಳಾಗುವೆ!
ಪ್ರತಿರಾತ್ರಿ
ಅವನಿಗೆ ಸ್ವರ್ಗ
ಪ್ರತಿರಾತ್ರಿ
ನನಗೆ ನರಕ
ದೆವ್ವವಾಗಿ ಬದಲಾಗುವ ಅವನ
ನಾ ಹೇಗೆ ಭರಿಸಲಿ?
ಸ್ವರ್ಗದ ರುಚಿಯನ್ನು ತಾ ಸವಿಯುತ್ತಾ
ಉಣಬಡಿಸುತ್ತಾನೆ ನರಕದ ರುಚಿಯ!
ಅವನಿಗೂ ನನಗೂ
ಸ್ವರ್ಗಕ್ಕೂ ನರಕಕ್ಕೂ ಇರುವಷ್ಟು ಅಂತರ
ಅವನು ನರಕಾಸುರ
ಸ್ವರ್ಗವನ್ನಾಳುತ್ತಾನೆ
ನಾನು ಸ್ವರ್ಗಿಣಿ
ಸ್ವರ್ಗದ ಮೇಲೆ ದಂಡಯಾತ್ರೆ ಮಾಡಿ
ಅಲ್ಲಿ ನರಕವನ್ನು ಸ್ಥಾಪಿಸುತ್ತಾನೆ.
ನಾಗರಹಾವಿನಂತೆ ಎರಗುತ್ತಾನೆ
ಹುಲಿಯಂತೆ ಹಾರುತ್ತಾನೆ
ಏಡಿಯಂತೆ ಹಿಡಿದುಕೊಳ್ಳುತ್ತಾನೆ
ಉಡದ ಹಿಡಿತದಿಂದ
ತಪ್ಪಿಸಿಕೊಳ್ಳುವ ಅವಕಾಶವೇ ಇಲ್ಲ
ಕಡೆಗೆ ಎಮ್ಮೆಯಂತೆ ಬುಸುಗುಡುವಾಗ
ಕರಟಕ–ದಮನಕರಂತೆ ಕಾಣುತ್ತಾನೆ!
ಅವನ ದೇಹ ಮುಳ್ಳುಕಂಟಿ
ಯಂತ್ರದಂತೆ ನಾನು ಭರಿಸಬೇಕು
ಮಂತ್ರದಂತೆ ಅವನು ರಿಂಗಣಿಸುತ್ತಾನೆ
ಅವನೋ ಹಿಂಸೆ

ನಾನೋ ಹಂಸ
ಸ್ವರ್ಗವನ್ನು ದೋಚಿಕೊಂಡು
ನರಕವನ್ನು ಧಾರೆಯೆರೆಯುತ್ತಾನೆ
ನಾನು ಸುಂದರ ಪ್ರಕೃತಿ
ಅಂದದ ದೇವತೆ
ನನ್ನ ದೇಹವನ್ನು ಯಂತ್ರವಾಗಿಸಿ
ಬದಲಾಯಿಸುವ ಮಾಂತ್ರಿಕ ಶಕ್ತಿ ಅವನದು
ಮಂದಹಾಸದ ಮುಗುಳ್ನಗೆಯಲ್ಲಿ
ತನ್ನೆಲ್ಲ ಕ್ರೂರತ್ವವನ್ನೂ ಬಚ್ಚಿಟ್ಟುಕೊಳ್ಳಬಲ್ಲ ಮಹಾನ್‌ನಟ
ರಾತ್ರಿ ನಾನೊಂದು ಒಣಕಾಷ್ಠ
ಒಂದು ಮರದ ಯಂತ್ರ
ಬೆಳಗ್ಗೆ ನವ ಪಲ್ಲವದಂತೆ ಹೊಸ ಚಿಗುರುಗಳ ಪಲ್ಲವಿಸಿ
ಹಣ್ಣುಕಾಯಿಗಳ ನೀಡುವ ಸಮೃದ್ಧ ಮರ
ಅವನು ಎಲ್ಲವನ್ನೂ ಮೆದ್ದು ಸವಿಯುತ್ತಾನೆ
ಹಗಲಿನಲ್ಲಿ
ನಾನೊಂದು ಮಿಕ್ಸಿ,
ನಾನೊಂದು ಗ್ರೈಂಡರ್, ವಾಷಿಂಗ್ ಮೆಷಿನ್,
ಗ್ಯಾಸ್ ಸ್ಟೌವ್.... ಸದಾ ಚಲಿಸುವ ಯಂತ್ರ...
ಮನೆಯನ್ನು ಬೆಳಗುವ ದೀಪ
ಅವನ ಬಯಕೆಗಳನ್ನು ಪೂರೈಸುವ
ದೇವತೆ ನಾನು
ನನ್ನ ಬಯಕೆಗಳನ್ನು ಪಾತಾಳದಲ್ಲಿ
ಬಚ್ಚಿಡುವ ರಾಕ್ಷಸ ಅವನು
ಅವನು ಸ್ವರ್ಗಕ್ಕೆ ಹೋಗುತ್ತಾನೆ
ನಾನು ಸತ್ತು ನರಕಕ್ಕೆ ಹೋಗುತ್ತೇನೆ
ಅವನಿಲ್ಲದ ನರಕ ನನಗೆ ಸ್ವರ್ಗ
ನಾನು ಸ್ವರ್ಗಸ್ಥಳಾಗುವೆ!

**ಅಪ್ರಕಟಿತ**

❖

# ಅನುಕೂಲಕ್ಕೊಂದು ಸಿದ್ಧಾಂತ!

- ಎಂ. ಆರ್. ಭಗವತಿ

ಮನೆಯೇ ಬೇಡವೆಂದಿದ್ದೆ ಮನೆಯನ್ನು ಕಟ್ಟಿದೆ
ಆಲಯವನ್ನು ನಿರ್ಮಿಸಿ ಗರ್ಭಗುಡಿಯಲ್ಲಿ ಇಷ್ಟದೇವರಾಗಿದ್ದಿ;
ಕಟ್ಟಿಕೋ ಬೇಡವೆಂದಲ್ಲ
ಬಯಲೆ ಆಲಯವೆಂದು
ಬದುಕು ಸರಳವಾಗಲೆಂದು ತಪಸ್ಸು ಕೂತು
ವೈಭೋಗವನ್ನು ತ್ಯಾಗ ಮಾಡಬೇಕೆಂದು
ಪಾಡುತ್ತಲೇ ಇದ್ದವನಿಗೆ
ಈಗೇನಾಯಿತು?

ಮನೆಯೇ ಬೇಡವೆಂದವನು ಬಂಗಲೆಯನ್ನು ಕಟ್ಟಿದೆ
ಮನೆಯ ಪೀಠೋಪಕರಣಗಳು
ಮಧ್ಯೆ ನೀನು ವಿರಾಜಮಾನನಾಗಿರುವೆ

ಉಪದೇಶಿಸಿದ ನಿನ್ನ ಮಾತುಗಳೀಗ
ಮನೆಯ ವೈಭೋಗದಲ್ಲಿ ತತ್ತರಿಸಿ ಕೂತಿವೆ

ಛೇ ಬಿಡು! ಒಂದು ಉದಾಹರಣೆಯನ್ನಷ್ಟೇ
ಹೇಳಬೇಕೆಂದಿರುವೆ.

ಕೃಪೆ: ಕಾವ್ಯ ಬೋಧಿ ಕವಿ ಪ್ರಕಾಶನ, ಕವಲಕ್ಕಿ, ಉ ಕ. ೨೦೧೫

# ಅಳಿ

- ಡಾ. ಅನುಪಮಾ ಎಚ್. ಎಸ್.

ಎಳೆಯ ಬಿಕ್ಕುವಿನ
ದಟ್ಟಿ ಹರಿದು ಹೋಯಿತು
ಬುದ್ಧಗುರುವನು ಮುಟ್ಟಿತು ತಲ್ಲಣ

'ಗುರುವೇ, ಹರಿದು ಹೋಯಿತು ದಟ್ಟಿ,
ಏನು ಮಾಡುವುದು?'

'ಹರಿದರೇನಾಯಿತು ಮಗೂ, ಹಾಸಿಮಲಗು'

ದಿನ ಉರುಳಿದವು
ಹಾಸಿ ಹಾಸಿ ಮಲಗಿ
ದಟ್ಟಿ ಇನ್ನಷ್ಟು ಜೀರ್ಣ

'ಗುರುವೇ, ಹಾಸಿ ಹಾಸಿ ದಟ್ಟಿ
ಮತ್ತೆಲ್ಲೆಲ್ಲೋ ಹಿಸಿಯಿತು...'

'ಹಿಸಿದರೇನು ಮಗೂ,
ನೆಲ ವರೆಸಲು ಬಳಸು...'

ದಿನ ಉರುಳಿದವು
ಕೊಳೆ ವರವರೆಸಿ
ದಟ್ಟಿ ಚಿಂದಿಚೂರು

ಕಳೆದುಕೊಳ್ಳುವುದ ಅರಿಯದ
ಎಳೆಸು ದನಿ
ಕ್ಷೀಣವಾಗಿ ಹೇಳಿತು,
ಗುರುವೇ, ವರೆಸಿದ ದಟ್ಟಿ
ನೂರು ತುಕುಡಾ ತುಂಡು...'

'ತುಂಡು ಬಟ್ಟೆಯಾದರೇನು ಮಗೂ,
ಕಾಲು ವರೆಸಲು ಹಾಕು...'

ದಿನ ಉರುಳಿದವು
ಹೋಗಿ ಬರುವವರ ಪಾದಧೂಳಿ
ನೆತ್ತಿ ಮೇಲೆ ಹೊತ್ತೊತ್ತು
ದಟ್ಟಿ ಬಣ್ಣ ಸಮೇತ ಕರಗಿತು
ಅಂಗಾಲು ಶುಭ್ರ
ಕಷಾಯಕ್ಕೆ ಮಣ್ಣ ಬಣ್ಣ

ತಾನುಟ್ಟ ಮೊದಲ ವಸ್ತ್ರವಿಂದು
ಮಾಸಿದ ಹಿಂಜು ನೂಲಿನ ಗುಪ್ಪೆ
ಎಳೆಯ ಜೀವದ ಮರುಕ
ಕಣ್ಣ ಪಸೆಯಾಗಿ ಇಂಗತೊಡಗಿತು

ಆ ಇರುಳು
ಕಗ್ಗತ್ತಲಿಗೆ ಬೆಚ್ಚುವ ಎಳೆಯ ಬಿಕ್ಕು,
'ದುಗುಡವೇಕೆ ಮಗೂ?
ಅಗತ್ಯವೆಂದು ನಂಬಿದ್ದು ಅನಿವಾರ್ಯವಲ್ಲ'

ಕೃಪೆ: ಸಹಗಮನ ರಾಘವೇಂದ್ರ ಪ್ರಕಾಶನ, ಅಂಬರಕೊಡ್ಲ ಅಂಕೋಲ. ಉಕ – ೨೦೧೫

# ಸೀರೆ ಕದ್ದವನು ನೀನೆ ...

- ಅನಸೂಯ ಕಾಂಬ್ಳೆ

೧

ನೋವು ಹೆತ್ತ ಕೂಸು
ಸೆರೆ ಬಿಡಿಸುವವನಿಗೆ ಸೆರೆಯಾದ
ಬಯಲ ಸಖಿ ರಾಧೆ
ನಿಂತು ಅಳುತ್ತಿದ್ದಾಳೆ ದಾರಿಗಡ್ಡ
ಅಂಗಾಲಿಗೆ ಚುಚ್ಚಿದ ಮುಳ್ಳು
ಎದೆಯೊಳು ಕೊತಕೊತ ಕುದಿವ ಕಣ್ಣೀರು
ಪ್ರೇಮವೀಗ ಕುದಿವ ನೀರುಗುಳ್ಳೆ
ಸುಡುವವರು ಯಾರೊ? ಸುಟ್ಟವರು ಯಾರೊ?
ಸಾಕ್ಷಿ ಇಲ್ಲದೆ ಖುಲಾಸೆಯಾಗಿದೆ ಕೇಸು!
ಗೊಲ್ಲನೂದುವ ಕೊಳಲ ಗಾನಕೆ
ನಿತ್ಯ ಬೆತ್ತಲೆ ಗಂಗೆ–ಗೌರಿ–ತುಂಗೆ,
ಕೃಷ್ಣೆ–ಕಾವೇರಿ; ಯಮುನೆ–ಸರಸ್ವತಿ

೨

ಮತ್ತೆ ಬಂದಿತು ಮಾರ್ಚ್ ಎಂಟು
ಮೊನ್ನೆ ಶೆಡ್‌ನಲ್ಲಿ ಕೊಲೆಯಾದ ಎಂಟರ ಬಾಲೆಯ
ರಕ್ತಸಿಕ್ತ ಅಂಗಿಯೇ ಇಂದಿನ ಬಾವುಟ!!
ಸಾಲಾಗಿ ಬೆಸ್ವರದಲ್ಲಿ ಕೂಗಬಹುದು ನಾವು
ಹೆಣಗಳ ಮೇಲೆ ಹೆಜ್ಜೆ ಹಾಕಿ ನಗಬಹುದು ಅವರು
ಹಾಯ್ದಷ್ಟು ಕೆಂಡ ಸುಟ್ಟವರು ನಾವೇ...
ಮೀಸೆ ಇಲ್ಲದ ಕೃಷ್ಣನಿಗೆ ಸದಾ ಮಂದಹಾಸ

೩

ಸೀರೆ ಕದ್ದರೇನು ದೇವರಾಟ
ರತಿಕ್ರೀಡೆ, ಜಲಕ್ರೀಡೆ ಶೃಂಗಾರ ರಸ
ಲೋಕೋದ್ಧಾರದ ಪರಂಪರೆ ಪ್ರಶ್ನಾತೀತ?
ಸಾಧ್ವಿಗೇನು ಗೊತ್ತು ಕಾವ್ಯಾರ್ಥ ಚಿಂತನ
ಪಾಯಸಕ್ಕೆ ಹುಟ್ಟಿದವರ ಪುತ್ರಕಾಮೇಷ್ಠಿ

೪

ಸೀರೆ ಕದ್ದವರಲ್ಲೇ ಸೀರೆ ಮಾತು
ಬಿಟ್ಟಕಣ್ಣು ಬಿಗಿದ ತುಟಿ
ಸ್ಫೋಟಕ್ಕೆ ಕಾದ ಮೌನಕಂಪನ

೫

ಕೃಷ್ಣಾ!...
ಹಡೆದ ತಾಯಿ ಪಡೆದ ತಾಯಿ
ಇಬ್ಬರಿದ್ದೂ ತಿದ್ದಲಾಗಲಿಲ್ಲ ನಿನ್ನ
ಗೋಪಿನೊಡನಿದ್ದೂ ಗೋಪಿನಂತಾಗಲಿಲ್ಲ
ಸೀರೆ ಕದ್ದವನು ನೀನೆ, ಸೀರೆ ಕೊಟ್ಟವನು ನೀನೆ!!
ಕೈ ಮುಗಿವೆ ಕೃಷ್ಣಾ...
ಬೇಡ ನಿನ್ನ ಬೋಧನೆ
ನನ್ನ ಮಗ ಗೋಪಿ ನಿನ್ನಂತಾಗದಿರಲಿ

❖

# ಅಮ್ಮ ಮತ್ತು ಸಮುದ್ರ

- ಕೆ. ಎನ್. ಲಾವಣ್ಯ ಪ್ರಭಾ

ಕುಸಿದು ಮುಳುಗಿ ತಳಕಚ್ಚಿದ ಹಡಗಿನ
ಒಡೆದು ನಿಶ್ಚಲವಾದ ತುಂಡುಚೂರುಗಳು
ಮೊಗೆಮೊಗೆದು ಹೆಕ್ಕಿ ತೆಗೆದಷ್ಟೂ
ಬೊಗಸೆ ತುಳುಕಿ ಮತ್ತೆ ತಳ ಸೇರುವ
ಮುತ್ತುರತ್ನ ಹವಳಗಳ ಉಲಿತ
ಖಾಲಿಯಾಗದ ನೀಲಿಯನಂತ ಒಡಲು.

ಕಡಲ ನರನಾಡಿಗಳ ತುಂಬೆಲ್ಲಾ ಸರಿದಾಡಿ
ಮಧುರ ಕಂಪನವಿಟ್ಟು ಮಡಿಲೊಳಗೆ
ಜೀವದೊಳಗೊಂದು ಜೀವ ಇರಿಸಿ
ಸಾರ್ಥಕ್ಯ ಮಿಡಿದ ಜೀವ ಜಲಾಚರಗಳ
ಸಮೃದ್ಧಿ ಸೃಷ್ಟಿಯ ಮೈದಡವಿ
ಪೊರೆವ ಸುವಿಶಾಲ ಗರ್ಭಕೊರಳು.

ಬೆಳಗಿನಲ್ಲಿ ಪ್ರಶಾಂತ ಮೀನನಗು
ನಡುಹೊತ್ತಿಗೆ ಸುಳಿವ ಸುಳಿರ್ಪಾತ
ಸಂಜೆ ಸುಮ್ಮನೆ ಅಂಗಾತಾಗಿ ತೇಲಿದ
ತಿಮಿಂಗಲ ಮೌನ,
ಇರುಳಲ್ಲಿ ನಾದವಿಲ್ಲದೆ ಭೋರ್ಗರೆದ
ಸುನಾಮಿ.

ಹುಣ್ಣಿಮೆಯ ಹಾಲು ಬೆಳದಿಂಗಳ
ಮಳೆಗೆ ಮಸುಕು ತೆರೆದಿಟ್ಟ
ನೀರಪಲ್ಲವಿಯ ಉಬ್ಬರವಿಳಿತದಲಿ
ಅಬ್ಬರದ ಅಲೆ ಹೊಯ್ದಾಡಿ
ಎದೆಯ ಸುಗ್ಗಿಯೊಳಗೆ
ನಂದಿಕೋಲು, ಕೀಲುಕುದುರೆ.
ಬಿರಿದು, ಮೊರೆದು ಉಕ್ಕಿ ಬಿಕ್ಕಿ

ಕೊನೆಗೊಮ್ಮೆ ನಗೆಯ ಹಾಯಿದೋಣಿ
ತೇಲಿಸಿ ನಿರಮ್ಮಳವಾಗಿ ನಿರಾಳವಾಗುವ
ಶಾಂತ, ಸುಂದರ, ರುದ್ರ, ಗಂಭೀರ,
ರಮಣೀಯ ವಿಕ್ಷಿಪ್ತ ವೈರುಧ್ಯಗಳನ್ನೆಲ್ಲಾ
ಹೊತ್ತು ನಿಂತ ಸಮುದ್ರ...
ಈ ಕ್ಷಣ ಸಾಕ್ಷಾತ್ ನನ್ನಮ್ಮ.

ಕೃಪೆ: ಗೋಡೆ ಗಿಡ (ಸಂ) ಅಮ್ಮ ಮತ್ತು ಸಮುದ್ರ, ಭೂಮಿಕಾ ಪ್ರಕಾಶನ ಮೈಸೂರು ೨೦೧೦

❖

# ಕಾಯುತ್ತ ನಿಂತವರು

- ತಾರಿಣಿ ಶುಭದಾಯಿನಿ

ಉದ್ದುದ್ದ ಸರದಿಯಲಿ
ನಿಂತವರು ಕಾಯುವವರು
ಆ ತುದಿಯ ದಿಟ್ಟಿಸಿ
ನಿಲ್ಲುವರು ಮೈಮರೆತು

ಸಿಹಿನೀರು ಬಾವಿಯಲಿ ಉಕ್ಕೀತು
ಬೆವರ ಕೊಳೆ ತೊಳೆದೀತು
–ಇದು ಒಂದು ನಿರೀಕ್ಷೆ

ಆ ತುದಿಯಲ್ಲಿ ನಿಂತ
ಗಳಿಗೆ ಹೀಗೆಲ್ಲ
ಅನ್ನಿಸುವುದು ಸಹಜ

ಅಂಗುಳ ತೂತು ಕೊರೆದು
ಬ್ರಹ್ಮರಂಧ್ರ ಭೇದಿಸಲು
ನಿಂತ ಹಠಯೋಗಿಯಂತೆ
ನಿಂತ ಕಾಲುಗಳನ್ನೆತ್ತಿ
ಆಕಡೆ ಈಕಡೆ ಬೀಸಿ
ಕಾಯುವರು
ಇವರು

ಮಾಡಲ್ಲದ ಮಾಡಿಗೆ
ಬೆಚ್ಚನೆಯ ಗೂಡಿಗೆ
ಕನಸುತ್ತ ಕಾಯುತ್ತ
ಧ್ಯಾನಕ್ಕೆ ಜಾರುವವರು
ನಿಂತು ನಿಜವಾದವರು

**ಕೃಪೆ:** ಚಿತ್ತಗ್ಲಾನಿಯ ಮಾತು. ಅಕ್ಷರ ದಾಹ, ಬೆಂಗಳೂರು ೨೦೦೮

# ಮಾಯಾ ಸರೋವರ

- ಡಾ. ಗೀತಾ ವಸಂತ

ನಿದ್ದೆ ಎಚ್ಚರವ ಮೀಟಿ ದಾಟಿ
ಗಾಢ ಸುಷುಪ್ತಿಯ ಕೊಳ್ಳ
ಇಳಿದಿಳಿದು ಹೋದಂತೆ ಆಳ
ಕರೆಯುತಿದೆ ಯಾವುದೋ ಕೊಳಲು
ಸುರತ ಸುಖಕೆಳೆಸುತಿದೆ
ಸಾವಿನಾಚೆಗೂ ಜಿಗಿದು
ಸಾವಿರ ಸಾವಿರ ಜೀವಗಳ
ಒಮ್ಮೆಲೇ ಗರ್ಭದಲಿ ಚಿಗುರಿಸುವ
ಅದಮ್ಯ ವಾಂಛೆ

ಕುದುರೆಗಳ ಖುರಪುಟ... ಹೇಶಾರವ
ವಿರಹದ ವೀಣಾಸ್ವನ... ಸುಖದ ಚೀತ್ಕಾರ
ಮಂತ್ರದಂಡ ಆಡಿಸಿದಂತೆ
ನಡೆಯುತಿರುವೆ ನಿನ್ನ ಹಿಂದೆಯೇ
ಕನಸಲ್ಲಿ ನಡೆಯುವಂತೆ.
ಏಯ್ ನಿಲ್ಲು....
ಬೆನ್ನು ಮಾತ್ರ ತೋರುತ್ತಿದೆ
ನಿನ್ನ ಮುಖ ಕಾಣಬೇಕಿದೆ ನಾನು

ಪರ್ವತ ಕಣಿವೆ ನದಿ ಕಾಡು
ಅನೂಹ್ಯ ತಿರುವುಗಳ ಜಾಡು
ಮೇಲೆ ನಕ್ಷತ್ರ ಹೊದಿಕೆ
ಒಳಗೆ ನಿಗೂಢ ಕತ್ತಲು
ಅಲ್ಲಲ್ಲಿ ಹಸಿರುಟ್ಟ ತೋಟ
ಮಾನಸ ಸರೋವರದಲ್ಲಿ
ತೇಲುವ ಧವಳ ಹಂಸ

ಕತ್ತಲಲ್ಲಿ ನೀನು
ಅಂಗಿ ಬಿಚ್ಚಿಸೆದ ಸದ್ದು
ಬೆತ್ತಲಾಗು ಬಾ ಎನುವ ಪಿಸುದನಿಗೆ

ಒಳಗೆಲ್ಲ ಹರಿದ ಝುಳುಝುಳು ನದಿ
ಎಲ್ಲಿ ಬಂದಿರುವೆ ನಾನು ಎಂದು ಹಲುಬುವ
ನನ್ನ ತುಟಿಯಲ್ಲಿ ನಿನ್ನ ನಗು
ನೀ ಹೇಳಿದ ಅಸಂಖ್ಯ ಕತೆಗಳ ಗುಂಗು

ಬಟ್ಟೆ ಬಿಚ್ಚಿದಂತೆ ಜನುಮಗಳ
ದುಃಖಸೇತುಗಳು ಲಟಲಟ ಮುರಿದು
ಯಾವುದೋ ರಾಗ ದಳಬಿಚ್ಚಿ
ಅರಳಿದ್ದೊಂದೇ ಗೊತ್ತು
ಮುಂದೆಲ್ಲ ನೀ ಹೇಳಿದಂತೆ
ನಾ ಮಾಡಿದೆನೊ
ನಾ ಹೇಳಿದಂತೆ ನೀ ಕೇಳಿದೆಯೋ
ಅಥವಾ......
ನೋಟ ಮಾಟಗಳಳಿದು
ಬರಿ ಹಂಸೆಯಾಗಿ ತೇಲಿದೆನೊ
ಎಚ್ಚರಾದಾಗ ನಿನ್ನ ಕಾಣೆ

ತಿಳಿಯಾದ ಸರೋವರದಲೀಗ ಅಲೆಗಳಿಲ್ಲ
ತಿರುಗಿ ಹೋಗಲು ತಿಳಿಯುತ್ತಿಲ್ಲ
ಬಂದದ್ದು ಹೆಜ್ಜೆ ಮೂಡದ ಹಾದಿ
ಮುಖವಿಲ್ಲದ ನಿನ್ನ ದನಿಗಳ ನಿನಾದಕ್ಕೆ
ಕಂಪಿಸುತ್ತಿದೆ ಒಡಲ ಒಂಟಿ ಹಂಸೆ
ನಿಂತಿರುವೆ ಇಲ್ಲೇ
ನಿನ್ನ ರೂಹು ಅರಸುತ್ತ
ತೀರದ ದಾಹಗಳ ಕನವರಿಕೆಯಲ್ಲೇ.

ಕನಸಾಗಿರಲಿಕ್ಕಿಲ್ಲ ನೀನು
ಎಂದು ಭ್ರಮೆಯಾಗುತಿದೆ
ಮಾಯಾ ಸರೋವರದಲಿ ಕ್ರೀಡಿಸಿ
ಬಿಚ್ಚೆಸೆದ ಅಂಗಿ ತೇಲುತಿದೆ ಇಲ್ಲಿಯೇ
ಸರಿದು ಹೋಗಿರಬಹುದು ಯಾವುದೋ
ನಿಗೂಢ ತಿರುವುಗಳಲಿ ನೀ ಬೆತ್ತಲಾಗಿ
ತೀರದಲೇ ನಿಂತಿರುವೆ ನಾ ಬಯಲಾಗಿ.

(ಅಪ್ರಕಟಿತ)

# ಎಂಟ್ರೋಪಿ *

- ಟೀನಾ ಶಶಿಕಾಂತ್

'ಸಾಧ್ಯತೆಗಳ ಸಾವು ಸೀದಾ ನಿರಾಕರಣೆ
ಗಳಿಗಿರುವ ನಿರ್ಮೋಹ, ಖಚಿತತೆ
ಇರುವುದೇ ಇಲ್ಲ ಅವ್ಯವಸ್ಥೆಗೆ...
ಎಂಥ ಆಭಾಸ!!' ಎಂದರೆ ನಗುತ್ತಾನೆ
ಗುಟ್ಟೊಂದನ್ನು ಬಚ್ಚಿಟ್ಟುಕೊಂಡವನಂತೆ...

ನಾನು ಕಾಪಿಟ್ಟ ಕಥೆಗಳನ್ನು
ಆಲಾಪಿಸತೊಡಗುತ್ತೇನೆ
ಮಳೆಯ ನಡುವೆ ಮಳ್ಳರ ಹಾಗಿಣುಕುವ
ಸುಡುಮಧ್ಯಾಹ್ನದ ತಾಳಗಳ
ಅಧೀರ ವೇಗಕ್ಕೆ ಹೊಂದುವ ಹಾಗೆ.

ಸಮ್ಮೋಹನದ ಸರಕುಗಳ ಮಾರುಕಟ್ಟೆಯಲಿ
ಅಪರಿಚಿತಳಾಗುಳಿವ ಸವಲತ್ತು
ದೊರಕಿಸಿಕೊಳುವದು ಸುಲಭವೆ?
ಹೊಸ ಕಸರತ್ತುಗಳ ಹಿತವಾದ
ನೋವುಗಳ ಹಾಗಲ್ಲವಿದು,
ಬಲವಾದ ಖಂಡಿಸುವಿಕೆಯ
ಉನ್ಮಾದವೇ ಬೇರೆ.

ಎಂಟ್ರೋಪಿ.
ಸಮಯ ಮತ್ತು ಉಷ್ಣಗಳ
ವಿಚಿತ್ರ ಸಮೀಕರಣ.
ಕಂಡದ್ದು ಮತ್ತು ಎಟುಕದ್ದು
ಸೇರುವದು ಇಲ್ಲೆ ಇರಬೇಕಲ್ಲ!!

ಕೆಲವರು ನಿರ್ವಾಣವೆನ್ನುವರು
ನಾನು ಅವಡುಗಚ್ಚುತ್ತ
ಕೆಂಪನೆ ಗಾಯಗಳಿಗೆ
ಮುಲಾಮು ಸವರುತ್ತ
ಲೀನಳಾಗುವೆ ಅವುಗಳೊಳಗೇ.

(*Entropy: ಉಂಟಾಗುವ ಸಾಧ್ಯತೆಯನ್ನು ಪ್ರತಿನಿಧಿಸುವ ಉಷ್ಣಬಲವಿಜ್ಞಾನದ ಪ್ರಮಾಣ Also: lack of order or predictability; gradual decline into disorder)

**ಅಪ್ರಕಟಿತ**

❖

# ದಾಹ ಮತ್ತು ಬಾವಿ

- ಕಾದಂಬಿನಿ ರಾವಿ

ಈಗೀಗ ಕಣ್ಣು ಮುಚ್ಚಿಕೊಂಡಾಗಲೂ
ದಾಹ ಮತ್ತು ಬಾವಿಗಳೆಂಬ
ಚೋದ್ಯವೊಂದು ಬೆನ್ನಟ್ಟಿ ಬಂದು
ನನ್ನನ್ನು ಅಡ್ಡಗಟ್ಟುತ್ತದೆ.
ಬಾವಿಯಿದ್ದಲ್ಲಿಗೆ ಬಾಯಾರಿದವ ಅರಸಿ ಹೋಗುವ
ವಿಚಾರವೀಗ ಹಳಸಲಾಗಿ
ಆ ಬಾವಿಗಳೆಲ್ಲ ಆಳ ತೊರೆದು
ಆದಷ್ಟು ಅಗಲ ತೆರೆದುಕೊಂಡು
ಬಾಯಾರಿದವರಿಗಾಗಿ
ಬಾಯಾರಬಹುದಾದ ಅವರಿಗಾಗಿ
ಬಾಯಾರಿರುವವರಲ್ಲಿಗೇ
ನೀರುಣಿಸಿ ದಾಹ ತಣಿಸಲು ಧಾವಿಸುತ್ತವೆ...
ಹೀಗೆ ಧಾವಿಸುತ್ತಾ ಧಾವಿಸುತ್ತಾ
ಚಿಕ್ಕ ಪುಟ್ಟ ಹೊಂಡ ಗುಂಡಿಗಳೇ ಎಡವಿ
ಮುಗ್ಗರಿಸಿ ಬಿದ್ದು
ಹಾಸ್ಯಾಸ್ಪದವಾದದ್ದಂತೂ...!

ಅಂಥಾ ಬಾವಿಗಳೀಗ
ಒಬ್ಬ ಚಾಲಾಕಿ ವ್ಯಾಪಾರಸ್ಥನಂತೆ
'ನನ್ನಲ್ಲಿ ಕುಡಿಯಿರಿ... ನನ್ನಲ್ಲಿ ಕುಡಿಯಿರಿ' ಎನ್ನುತ್ತ
ತಮ್ಮ ನೀರಿನ ಮಹತ್ವ, ಲಾಭ ನಷ್ಟಗಳ ಕುರಿತು
ಅತ್ಯಾಕರ್ಷಕ ಜಾಹಿರಾತುಗಳನ್ನು
'ನನ್ನಲ್ಲೇ ಕುಡಿವಂತೆ ಹೇಳಿರಿ'
ಎಂಬ ತಲೆಮರೆಯ
ಘನ ಮಾನ್ಯರ ಶಿಫಾರಸ್ಸುಗಳನ್ನು
ಯಾವ ನಾಚಿಕೆ ಮುಜುಗರಗಳಿಲ್ಲದೆ
ಎನ್ನುವುದಕ್ಕಿಂತ ಬಹಳ ಹೆಮ್ಮೆಯಿಂದ
ಕಣ್ಣಿಗೆ ರಾಚುವಂತೆ ದರ್ಶಿಸುತ್ತವೆ

ಅವೆಷ್ಟೋ ಬಾವಿಗಳು ಅಗಲ ಮತ್ತೂ ಅಗಲವಾಗಿ
ಹರಡಿಕೊಳುವ ಹಟದಲಿ
ಜೀವಜಲ ಬತ್ತಿ, ಜಲದಕಣ್ಣುಗಳು ಕುರುಡಾಗಿ
ಕೊಳೆತು ನಾರುವ ಈ ಕಾಲದ
ಕೆರೆಗಳಾಗಿಬಿಟ್ಟಿರುವುದೂ
ಬಾಯಾರಿದ ಹಾದಿಹೋಕರು
'ಇದು ಕುಡಿಯುವುದಕ್ಕಿರಲಿ ಶೌಚಕ್ಕೂ ಯೋಗ್ಯವಲ್ಲ'
ಎಂದು ಮೂಗು ಮುರಿಯುತ್ತ ಮೂಗು ಮುಚ್ಚಿಕೊಂಡೇ
ಆಚೆ ಧಾವಿಸಿ ದಾಟಿಕೊಳ್ಳುವುದೂ ಇದೆ.

ಭೂಗರ್ಭದ ದೈತ್ಯ ಬಂಡೆ ಕಲ್ಲುಗಳ
ನಡುವೆ ಸಣ್ಣಗೆ ಜಿನುಗುವ ನನಗೂ
ಆಗಾಗ ಈ ಬಾವಿಗಳ ಗದ್ದಲದೊಳಗಿಂದಲೇ
ಕೇಳಿಬರುವುದೊಂದು ಕೂಗು
'ಬಾ ಬಾ ಬಾವಿಯಾಗು
ಈ ಬಾವಿಗಳ ಹಾಗೆ ನೀನೂ ಕೊಂಚ ಬಾಗು
ಬಾಯಾರಿದವರಿಗೆ ಬಾಯಾಗು
ಬಾಯಾಸರು ನೀಗು
ಹೆಸರಾಗು... ಹೆಸರಾಗು!'

ನಾನೂ ನಕ್ಕು ಹೇಳಿದೆ
'ನನಗೆ ಪುರಸೊತ್ತಿಲ್ಲ ಮಾರಾಯರೆ
ನಾನು ಈಗಷ್ಟೇ ಕಾಣುತ್ತಿದ್ದೇನೆ
ಅವನ ಕಣ್ಣ ಜೋಡಿ ಬಾವಿಗಳನು
ಮತ್ತೆ ಆ ಕಣ್ಣಿನಾಳ ಪಾತಾಳ ತಳದಲಿ
ಮಡುಗಟ್ಟಿರುವ ನೋವನು

ನಾನೀಗ ತುರ್ತಾಗಿ ಹೋಗಬೇಕು
ಗುಪ್ತಗಾಮಿನಿಯಾಗಿ
ಅವುಗಳೊಳಗೆ ಅಂತರ್ಭಾವಗೊಳಬೇಕು'

ಕೃಪೆ: ಹಲಗೆ ಮತ್ತು ಮೆದು ಬೆರಳು, ಗೀತಾಂಜಲಿ ಪುಸ್ತಕ ಪ್ರಕಾಶನ ೨೦೧೭

# ಅವರೆ ಹೂ ಕ್ರೋಟಾನ್ ಗಿಡ

- ಸಂಧ್ಯಾ ರಾಣಿ

ಸಂಜೆಯಾದರೆ
ತಲೆಬಾಚಿ, ಇಷ್ಟಗಲ ಕುಂಕುಮ ತಿದ್ದಿ,
ಬಿಗಿಯಾಗಿ ಜಡೆ ಹೆಣೆದು, ಹಿಂದಲೆಯಿಂದ ಇಷ್ಟೇ ಇಷ್ಟು
ಕೂದಲೆಳೆದು ಘಂ ಎನ್ನುವ
ಮರುಗ ಮಲ್ಲಿಗೆ ಸಿಕ್ಕಿಸಿ ಹೊರಟರೆ
ಅವರೆಹೊಲ ಅಜ್ಜಿಯ ಕಾಲುಂಗುರದ ಸದ್ದಿಗೆ ಎದ್ದು ಕೂರಬೇಕು!
ಸಾಲಾಗಿ ಅವರೆ ಗಿಡ
ನಡುನಡುವೆ ಸಾಸುವೆ ಒಗ್ಗರಣೆಗೆ
ಸುತ್ತಲೂ ರಾಗಿ ತೆನೆ ವರ್ಷದ ತಣಿಗೆಗೆ
ಬಿಳಿಬಿಳಿ ಹೂ, ಹಸಿರು ಮುತ್ತಿನ ಕಾಯಿ
ಸ್ವಲ್ಪ ಎಳೆಯದು, ಮಿಕ್ಕಿದ್ದು ಬಲಿತದ್ದು
ಕಾಯಿ ಬಿಡಿಸುವ ನಯವೆಂದರೆ, ತಲೆ ನೇವರಿಸಿದಂತೆ
ಗಿಡ ಕಣ್ಮುಚ್ಚಿ ತೂಗಬೇಕು
ರಾತ್ರಿ ಅಜ್ಜಿಯ ಸೆರಗ ಹೊದ್ದು ಕಥೆ ಕೇಳುತ್ತಿದ್ದರೆ
ಅರಮನೆ ತುಂಬ ಅವರೆ ಘಮಲು
ಅಮ್ಮ ಮದುವೆಯಾಗಿ ಊರು ಬಿಟ್ಟಾಗ
ಮನೆಯ ಮುಂದೆ ಇಷ್ಟೇ ಅಂಗಳ
ಮನೆಕೆಲಸದವರು ನೀರೆರೆಯುವುದ
ಮರೆತರೂ ಮರೆಯದೆ ಕಣ್ಣಿಡುವ ಅಮ್ಮ
ನಾಲ್ಕು ಸಾಲು ತರಕಾರಿ, ಸೊಪ್ಪು
ಅಲ್ಲಲ್ಲಿ ಡೇರಾ, ಸೂರ್ಯಕಾಂತಿ, ಒಂದೇ ಒಂದು
ನಂದಿ ಬಟ್ಟಲು, ಗಿಡದ ಮೇಲಿದ್ದರೂ
ಅಮ್ಮನ ಮುಡಿಯಲ್ಲಿದ್ದರೂ ಕಣ್ಣು ತಂಪು ತಂಪು
ಜೊಂಪೆ ತರಕಾರಿ ತೂಗಿ ನಗುವಾಗ
ಅಮ್ಮನ ಕಣ್ತುಂಬಾ ತವರಿನ ಹೊಲ
ಊರಿಂದ ಊರಿಗೆ ಸಾಮಾನು ಕಟ್ಟುವಾಗ
ಯಾವ ಮಾಯದಲ್ಲೋ ತೋಟ ಸಹ ನಮ್ಮೊಂದಿಗೆ
ಅಜ್ಜಿಗೆ ಹೊಲವೆಂದರೆ ಬದುಕು

ಗಂಡ ಮಕ್ಕಳು, ಮೊಮ್ಮಕ್ಕಳ ನೆತ್ತಿ ಹೊಟ್ಟೆಗೆ ತಂಪು
ಅಮ್ಮನಿಗೆ ಅಡುಗೆಗೆ ತರಕಾರಿ
ಮುಡಿಗೆ ಹೂವು
ನನಗೆ ಹಸಿರೆಂದರೆ ಕನಸ ತುಣುಕು
ಕಾಂಕ್ರೀಟಿನ ಮೂಲೆಯಲ್ಲಿ ಅಂಗೈ ಅಗಲದ ಕುಡಿಕೆಯ ಚಿಗುರು
ಅವಸರಕ್ಕೆ ಚುಮುಕಿಸುವ ನೀರು
ಒತ್ತಾಯಕ್ಕೆ ಉಸಿರಾಡುವ ಕ್ರೋಟಾನ್ ಗಿಡ
ಹೂಬಿಡುವುದಿಲ್ಲ ಗಿಡ ಬಾಡುವುದಿಲ್ಲ
ಬೇರು ನೆಲಕ್ಕಿಳಿಯುವುದಿಲ್ಲ
ಮಣ್ಣಿನ ಪಸೆಯಿಲ್ಲದ ಊರಿನಲ್ಲಿ
ಹಸಿ ಮಣ್ಣಿನ ತೇವಕ್ಕೆ ಕಾಯುವ ಮೊಮ್ಮಗಳು ನಾನು.

ಕೃಪೆ: ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ (೨೦೧೯) ಅಲಂಪು ಪ್ರಕಾಶನ, ಬೆಂಗಳೂರು

# ಗುಂಗು ಬಿಡಿಸುವ ಮಂತ್ರ

- ಕವಿತಾ ರೈ

ಇಲ್ಲಿತನಕ ಹೇಳಿದ್ದಕ್ಕೆ
ಕೇಳಬಯಸಿದ್ದಕ್ಕೆ ಮಾಯಲಾರದೆ
ಮತಿತಪ್ಪಿ ಮಲಗಿದಾಗಲೇ
ಒಳಗಿನ ಮೊಸಳೆಯೊಂದು ಪ್ರಕ್ಷುಬ್ಧಗೊಂಡು
ದಾಂದಲೆ ಎಬ್ಬಿಸುತ್ತಿತ್ತು

ನೆನೆಪಿದೆ ಚಿತ್ರಗಳ ಕಣ್ಣಾಳವಿನಲ್ಲಿರಿಸಿ
ಗಬಗಬನೆ ನುಂಗುತ್ತಿತ್ತು
ನನ್ನನ್ನು ಕಾಡಾಗಿ ಕಂಡ ನೀನು
ಯಾವ ಬಟ್ಟೆ ತೊಟ್ಟಿದ್ದೆ
ನೆನಪಿರಲಿ ಕಾಡಿನ ನಿಯಮ
ಮೊಸಳೆ ಮೊಸಳೆಯನು
ಹುಲಿ ಹುಲಿಯನು ಕೊಲ್ಲಲಾರದು

ನನ್ನನ್ನು ಕಾಡಾಗಿ ಕಂಡ
ನಿನ್ನ ಮಾತೇ ಗುಂಗು ಬಿಡಿಸುವ
ಮಂತ್ರ ಒಳ ನುಸುಳುವ ತಂತ್ರ
ಹುಲಿ ಚಿರತೆ ಸಿಂಹ ಸೀಳು
ಬೆಕ್ಕಿನ ತಳಿಗಳೆಲ್ಲ ಮಂಗಗಳಾಗಿ
ಆಕಾಶಕ್ಕೆ ನೆಗೆಯುತ್ತಿದ್ದವು
ಭಾಷೆಯ ದುಷ್ಟತೆಯೇ ಹಾಗೆ
ನೋಡು ದೇವರೆ
ಕಾರ್ತ್ಯ ವೀರ್ರ‍್ಯಾರ್ಜುನನ ರೂಪ ಅದಕೆ

ಹಿಂಗಬಾರದೆ ನಾಲಿಗೆ ಮೇಲಿನ
ಮಾತಿನ ಪಸೆ ಒಡೆದು
ಒಡೆದು ಒಳಗಿರುವ ದೈವವೇ ಕೆಟ್ಟು
ನೋಡುವ ಆಳುವ ಭರಕ್ಕೆ
ಕಸಾಯಿಖಾನೆಯ ಅಲುಗಿನ
ಹೊಳಪು ಕಣ್ಣೊಳಗೆ

ಮನಸೆಂದರೆ ಮೂರುಕಲ್ಲಿನ ಒಲೆ
ಅಟ್ಟುವುದು ದಣಿವರಿಯದೆ ಉಣುವುದು
ಬದುಕುವ ಬದುಕಿಗೆ ಹಸಿವೊಂದೆ ತಾವು
ಗಂಡಿಗೆ ಗೊತ್ತಿಲ್ಲದ ವಿದ್ಯೆಯೆ ತೋಳಬೇಟೆ
ಕುರಿಮಂದೆಯ ಹೇಗೆ ಬೇಕಾದರೆ ಹಾಗೆ
ಅಟ್ಟಾಡಿಸಿ ಎತ್ತರದಿಂದ ಬೀಳಿಸಿ
ಎಳೆದುತಂದು ಚಳಿಗಾಲಕ್ಕೆಂದೇ ಜತನದಿ
ಕಾಪಿಡುವ ಹಸಿಮಾಂಸದ ಕಾವು
ನಿನಗೆ ಗೊತ್ತಿದೆ ಹೆಣ್ಣನ್ನು ಪಳಗಿಸುವುದೆಂದರೆ
ಕೊಲ್ಲುವುದಕ್ಕೆ ಸಮ ಮತ್ತದೇ ನಾಡಿನ ನಿಯಮ.

ಕೃಪೆ: ನೀರು ಮಾಡು(೨೦೧೩) ಗುಂಗು ಬಿಡಿಸುವ ಮಂತ್ರ ಪಲ್ಲವ ಪ್ರಕಾಶನ, ಚನ್ನಪಟ್ಟಣ

# ಬಹಳಷ್ಟು ಸಲ ಹೀಗಾಗುತ್ತದೆ

- ರೇಣುಕಾ ರಮಾನಂದ

ಎದೆಯ ರೋಮಾಂಚನ ಬಣ್ಣಿಸುವ
ಶಬ್ದಗಳು ಬಜಾರುಗಳಲ್ಲಿ ಮಾರಾಟಕ್ಕಿಲ್ಲ

ತಮ್ಮ ಪಾಡಿಗೆ ಅವು ಅವನೊಳಗೆ ಇದ್ದು
ನನ್ನ ಸತಾಯಿಸುತ್ತವೆ
ಕಾಡ ಕಾಲುಹಾದಿಯ ಮುಂದೆಲ್ಲೋ
ಜುಳುಜುಳು ಎದುರಾಗುವ ಕಿರುತೊರೆಯ
ಬೆಳ್ಳಿ ಮೀನುಗಳಂತೆ ಹೊರಳಿ ಜಾರುತ್ತವೆ
ಹಿಡಿವ ಬಯಕೆಯ ಕುಪ್ಪಳಿಸಿ ಕರೆದು
ಒದ್ದೆ ಮೈಯ ಇಣುಕಿಣುಕಿ ನೋಡುತ್ತವೆ
ಹೊಕ್ಕುಳ ಕುಳಿಯಲ್ಲಿ ಹೊಕ್ಕು ಹೊರಬಿದ್ದು
ಕಚಗುಳಿ ಇಡುತ್ತವೆ
ಮತ್ತೆ
'ನಿನ್ನ ಇಷ್ಟು ಹಚ್ಚಿಕೊಂಡಿದ್ದೇನೆ ನೋಡು' ಎಂದೆಲ್ಲ ಹೇಳಿ
ಎದೆಬಿಚ್ಚಿ ತೋರಿಸಿ ಪೇಚಿಗೆ ಸಿಲುಕಿಸುತ್ತವೆ

ಎಲ್ಲೋ ಇದೆ ಗಮ್ಯ
ತುಸು ತಡವಾಗಿದೆ ಹೊರಟಿದ್ದು
ಇನ್ಯಾರೂ ಬರಬಾರದ ಕಾಡಹಾದಿಯನ್ನೇ
ಆಯ್ಕೆಯಾಗಿಸಿ
ಮುದುಕನಾಗಲು ಬರೇ ಐದಾರು ದಿನ ಬಾಕಿ
ಇರುವ ಆತ ದಟ್ಟ ಮರಗಳ ಮರೆಯಿಂದ
'ಮುದ್ದು' ಎಂದು ಕರೆವ ಅಮಲಿಗೆ
ಕಿವಿಯಾಗಿಸಿಕೊಂಡು
ಕಣ್ಣಿಗೆ ಕಾಣದ ಅವನು ಯಕ್ಷಪ್ರಶ್ನೆಯಲ್ಲ ಎಂದೂ

ಬಹಳಷ್ಟು ಸಲ ಹೀಗಾಗುತ್ತದೆ
ಎದೆಯೊಳಗಿದ್ದವರು ಎದುರಾಗದಿದ್ದರೂ
ನೆತ್ತಿಗೆ ಖಾಯಂ ಒತ್ತಿ ನಿಂತಿರುತ್ತಾರೆ
ಸಣ್ಣಗೆ ಜ್ವರ ತರಿಸುತ್ತಾರೆ

ಇಂಥ ಬಿರುಬೇಸಿಗೆಯಲ್ಲೂ ಹೊದ್ದು
ಮಲಗುವ ಚಳಿ ಹೊಕ್ಕುಳಿಗೆ
ತಂದೊಡ್ಡುತ್ತಾರೆ

'ನಿನ್ನ ಕಣ್ಣಿಗೆ ನಿಲುಕದ ನಿನ್ನದೇ ಬೆನ್ನು
ನನ್ನ ಎದೆಗಂಟಿ
ಆವರಿಸಿ ಬೇರುಬಿಟ್ಟಿದೆ ನೋಡು'–
ನೆಟ್ವರ್ಕ್ ಸಿಗದ ಊರಲ್ಲಿ
ಗುಡ್ಡವೇರಿದರೆ ಮಾತ್ರ ಬರುವ
'ಟಿವ್' ಎನ್ನುವಒಂದೇಒಂದು ನೋಟಿಫಿಕೇಷನ್–
ತುಸು ಹೆಚ್ಚೇ ನಾಚಿಕೊಳ್ಳುತ್ತೇನೆ ನಾನು
ಪ್ರೇಮಿಸುವವರಾದರೆ ಕಲ್ಪಿಸಿಕೊಳ್ಳಿ
ಎಂಥ ಸುಖವಿದೆ ಇದರಲ್ಲಿ
ಪ್ರಾಕ್ಟಿಕಲ್ ಅಲ್ಲದ ಮೈ ಜುಂ ಎನ್ನಿಸುವ
ತಾಜಾ ಹಸೀ ಸುಳ್ಳಿನಂತಹುದರಲ್ಲಿ

ವಿಪರೀತ ವಿರಾಮವಿರುವ ಇಲ್ಲಿಗೂ
ಚೂರೂ ಪುರುಸೊತ್ತಿಲ್ಲದ ಅಲ್ಲಿಗೂ
ಹೊಂದಾಣಿಕೆ ಹೇಗೆ...!?
ಬಿಸಿಬಿಸಿ ಚರ್ಚೆ ಊರ ಅಶ್ವತ್ಥ ಕಟ್ಟೆಯಲ್ಲಿ
ಸೆರಗು ಗಾಳಿಗೆ ಬಿಟ್ಟುಕೊಂಡು ನಾನು
ಹಾಯ್ದು ಹೋಗುವಾಗಲಷ್ಟೇ ಸುಮ್ಮನಿರುತ್ತಾರೆ ಅವರು
ತರುವಾಯ ಮುಂದುವರಿಸುತ್ತಾರೆ
ಬುರುಗು ಬುರುಗು
ಕಂಪಿಸುವ ಕ್ರಿಯೆಯನ್ನು

ಹೇಳುತ್ತೇನೆ ಕೇಳೀಗ
ನಿನ್ನ ನೆನಪಿನೂರಲ್ಲಿ ಈಗ
'ಹೊಕ್ಕುಳಲ್ಲಿ ಹೂವಿಲ್ಲ'
ರಾತ್ರಿ ಮೂರನೇ ಜಾವಕ್ಕೆ ಮುದ್ದಿಟ್ಟು ಹೋದ
ದುಂಬಿಯ ಹೇಳಿ ಮಾಡಿಸಿದ ಹೆಜ್ಜೆ ಗುರುತಿದೆ
ಮತ್ತದರ ಮೇಲೆಲ್ಲ ನನ್ನ ಸಂಬಾಳಿಸುವ
ನಿನ್ನದೇ ಹಸಿಹಸಿಯ
ಹೆಸರಿದೆ
ಬಿಸಿ ಉಸಿರಿದೆ

**ಕೃಪೆ:** ಮೀನುಪಾಟೆಯ ತಿರುವು(೨೦೧೭) ಪಲ್ಲವ ಪ್ರಕಾಶನ, ಚನ್ನಪಟ್ಟಣ.

# ಆಕಾಶ ಓ ಆಕಾಶ

- ಮಿತಾ ದೇವನೂರು

(ಅ)

ಆಕಾಶ ಓ ಆಕಾಶ ನನ್ನ ಹತ್ತಿರ
ಬಾ ಎಂದು ಹುಡುಗಿ ಆಟವಾಡುತ್ತಿದ್ದಳು
ಆಕಾಶದಿಂದ ಏನೋ ತಪ್ಪನೆ ಬಿತ್ತು
ಆ ಹುಡುಗಿ ಹೆದರಿಸಿಕೊಂಡು ಮನೆಯೊಳಗೆ
ಹೋದರೂ ಏನೆಂದು ಆ ಹುಡುಗಿಗೆ
ಗೊತ್ತಾಗಲಿಲ್ಲ. ಹೇಳುವಿರೆ? ಅದು ಏನೆಂದರೆ
ಒಂದು ಚಿಟ್ಟೆ, ಅದಕ್ಕೆ ಆ ಹುಡುಗಿ.
ಹೆದರಿದಳು ಹ್ಹ ಹ್ಹ ಹ್ಹ ಹ್ಹಾ

(ಆ)

ಓಹ್ಹೋಹ್ಹೋ ಎಂದು
ಒಂದು ಹುಡುಗಿ ಆಟವಾಡುತ್ತಿದ್ದಳು
ಥಟ್ಟನೆ ಹಾವು ಬಂದಿತು
ಬೆಚ್ಚಿಬಿದ್ದಳು.

(ಇ)

ಒಂದು ಹುಡುಗಿ ಒಂದು ಮನೆ
ಕಟ್ಟಿದಳು. ಅದರ ಒಳಗೆ ಒಂದು
ಜೇಡ ಇತ್ತು, ಇದರಿಂದ ಆ ಹುಡುಗಿಗೆ
ಭಯವಾಯ್ತು. ಒಂದು ದಿನ ಮನೆ
ಬಿಟ್ಟು ಹೊರಟು ಹೋದಳು

ಕೃಪೆ: ಮೋಡದಲ್ಲಿ ಒಂದು ಕಣ. ಸ್ವಂತ ಪ್ರಕಾಶನ, ಮೈಸೂರು.೧೯೯೦

❖

## ದಾರಿ...!!

- ರಂಗಮ್ಮ ಹೊದೇಕಲ್

ಯಾರದೋ ಜಮೀನಿಗೆ
ಬೆವರು ಸುರಿದ ಅಪ್ಪ
ಕಣ್ಣೀರಷ್ಟೇ ಕುಡಿದ!

ಎಷ್ಟೊಂದು ಮನೆಗಳಿಗೆ
ಗಂಜಲ ಸುಣ್ಣ ಬಳಿದ ಅವ್ವ
ತನ್ನ ಮನೆಯ ಗೋಡೆಯ
ಬಿರುಕಿಗೆ ಸೆಗಣಿ ಮೆತ್ತುತ್ತಿದ್ದಳು!

ಯಾರ್ಯಾರದೋ ಅಲ್ಲಂಡೆಗಳಿಗೆ ಸಲ್ಲುತ್ತ
ತನ್ನವರಿಗೇ ಅಲ್ಲವಾಗುತ್ತ
ಹೋದ ಅಪ್ಪ
ಊರಿಗೆ ಕೇಡಾಗಲೇ ಇಲ್ಲ!

ಕಂಡವರ ಮನೆಗಳಲ್ಲಿ
ಒಲೆ ಹಾಕಿ ಕೊಡುತ್ತಿದ್ದ ಅವ್ವನಿಗೆ
ತನ್ನ ಮನೆಯಲ್ಲಿ ಒಪ್ಪೊತ್ತಾದರೂ
ಒಲೆ ಉರಿಯಲೆಂಬ ಆಸೆ!

ರಂಗದ ಮೇಲೆ ನಟಿಸಿ
ಹರಿಕಥೆಯನ್ನು, ಲಾವಣಿಗಳನ್ನೂ
ನಮ್ಮೆದೆಗಿಳಿಸಿದ ಅಪ್ಪ ತನ್ನವರ
ದ್ರೋಹಗಳಿಗೂ ತೆರೆದ, ಬಯಲಾಗಿಬಿಟ್ಟ!

ಹಗಲಿರುಳೆನ್ನದೆ ಅವರಿವರ ಮನೆಯಲ್ಲಿ
ರಾಗಿ ಬೀಸಿ, ಭತ್ತ ಕುಟ್ಟಿ
ತನ್ನ ಮಕ್ಕಳ ತುತ್ತಿನಲ್ಲೇ ಬೀದಿಯ ಮಕ್ಕಳ
ಹಸಿವ ತಣಿಸಿದ ಅವ್ವ ಬಯಲಲ್ಲಿ ಬಯಲಾದಳು!

ಅಪ್ಪನ ಸೋಮನ ಕುಣಿತ
ಅವ್ವ ಬದುಕಿದ
ಅಸಂಖ್ಯ ಕವಿತೆಗಳು
ಈಗಲೂ ಜೀವಂತ!

ಅಪ್ಪ ಮಲಗಿದ್ದಾನೆ
ತಾನು ಕನಸಿದ ತನ್ನ ಮಕ್ಕಳು ದುಡಿದ
ತೋಟದಲ್ಲಿ...!
ಅವ್ವ ಕಥೆ ಹೇಳುತ್ತಾಳೆ
ದಾರಿ ಕತ್ತರಿಸಿದವರದು!
ಕರುಳಿಗಂಟಿದ ಕಾರುಣ್ಯದ್ದು..!!

**ಅಪ್ರಕಟಿತ**

# ಕ್ಯಾಪ್ಟನ್ ಕವಿತೆ

- ಜ. ನಾ. ತೇಜಶ್ರೀ

ಹತ್ತುತ್ತಲೇ ಹೋದೆ ನಾನು ಮೆಟ್ಟಿಲುಗಳ,
ಉದ್ವೇಗ, ಆತಂಕ, ದಿಗ್ಭ್ರಮೆ
ಸಂಬಂಧ, ಮಾತು ಎಲ್ಲದರಿಂದ ದೂರ
ಓಡುತ್ತೋಡುತ್ತ ಹತ್ತಿದೆ.

ಹತಾಶೆ, ಒಳಹೊರಗೆಲ್ಲ ಹತಾಶೆ,
ಹತ್ತಬೇಕು, ಹತ್ತುತ್ತಲೇ ಇರಬೇಕು ಎಂಬ ಹಠಕ್ಕೆ ಕಟ್ಟುಬಿದ್ದು
ಪೊದೆ, ಕುರುಚಲು, ಮುಳ್ಳುಕಂಟಿಗಳ ಹಾದು
ಓಡುತ್ತಲೇ ಹತ್ತಿದೆ.

ಎಲ್ಲಿಗೆ ಹೋಗಬೇಕಿತ್ತು
ಏನು ನೋಡಬೇಕಿತ್ತು
ಇನ್ನೇನು ಬೇಕಿತ್ತು ಜೀವಕ್ಕೆ?

ನನ್ನುಸಿರನ್ನು ಹಿಗ್ಗಿಸುತ್ತಿದ್ದ
ಮೈಯಿರದ ನಿನ್ನ ಎತ್ತರವ ಅರಿಯಲು
ಓಡುತ್ತೋಡುತ್ತ ಹತ್ತಿದೆ
ಕೊನೆಯೇ ಕಾಣದ ಆ ಮೆಟ್ಟಿಲುಗಳ ಬೆಟ್ಟವ.

ಕೃಪೆ: ಕ್ಯಾಪ್ಟನ್ ಕವಿತೆಗಳು, ಪಲ್ಲವ ಪ್ರಕಾಶನ, ಚೆನ್ನಪಟ್ಟಣ. ೨೦೧೯

# ತೂರಿ ಬರುತ್ತಿದೆ ಬೆಳಕು

- ವಿಭಾ ತಿರಕಪಡಿ

ನಾನೂ ಬದುಕುತ್ತಿದ್ದೇನೆ
ಶತಮಾನಗಳಿಂದ,
ಇದೇ ಅಡುಗೆ ಮನೆಯಲ್ಲಿ
ಇದೇ ಒಲೆಯ ಸಂದಿಯಲ್ಲಿ

ಹೊರಗೆ ನಿತ್ಯ ಸೂರ್ಯ ಹುಟ್ಟುತ್ತಾನಂತೆ!
ನಾನು ನೋಡಿಯೇ ಇಲ್ಲ,
ನನಗೆಲ್ಲಿ ಅವನ ದೃಷ್ಟಿ ತಾಕೀತೆಂದು,
ನನ್ನಜ್ಜಿ ಹೊರಬಿಟ್ಟೇ ಇಲ್ಲ.

ಹೊರಗೆ ತುಂಬಾ ಬೆಳಕಿದೆಯಂತೆ!
ನಾನು ಕಂಡದ್ದೇ ಇಲ್ಲ.
ನನ್ನ ಬಣ್ಣವೆಲ್ಲಿ ಕಂದೀತೆಂದು
ನನ್ನವ್ವ ಹೊರಬಿಟ್ಟೇ ಇಲ್ಲ.

ಹೊರಗೆ ಸುಂದರ ಹಸುರಿದೆಯಂತೆ!
ನಾನು ಅನುಭವಿಸಿಯೇ ಇಲ್ಲ
ನಾನೆಲ್ಲಿ ಅದರೊಳಗೆ
ಕಳೆದು ಹೋದೇನೆಂದು
ನನ್ನಪ್ಪ ಹೊರಬಿಟ್ಟೇ ಇಲ್ಲ.

ಆದರಿಗೀಗ,
ಸೂರ್ಯ ಕಿಂಡಿಯಿಂದೊಳಬಂದು
ದಿಟ್ಟಿಸುತ್ತಿದ್ದಾನೆ ನನ್ನ,
ಬೆಳಕು ಎಲ್ಲಿಂದಲೋ ತೂರಿ
ಬಂದು ಬದಲಾಯಿಸುತ್ತಿದೆ
ನನ್ನ ಬಣ್ಣ.

ಹಸಿರು ಕೈಚಾಚಿ ಕರೆಯುತಿದೆ
ಕಿಟಕಿಯಾಚೆಯಿಂದ ನನ್ನ

ಕೃಪೆ: ಜೀವ ಮಿಡಿತದ ಸದ್ದು (೨೦೧೩) ಲಡಾಯಿ ಪ್ರಕಾಶನ, ಗದಗ.

# ಬಾಗಿಲದ್ದೇ ಗೊಂದಲ

- ಮಮತಾ ಅರಸೀಕೆರೆ

೧

ಅಲ್ಲಿ ಕಂಡಿದ್ದು
ಎರಡು ಬಾಗಿಲುಗಳು
ಒಂದು ತೆರೆದದ್ದು
ಮತ್ತೊಂದು ಮುಚ್ಚಿದ್ದು
ಆಯ್ಕೆ ಗೊಂದಲದ್ದು
ತೆರೆದ ಬಾಗಿಲು ವಿಶಾಲವಿದೆ
ಆದರೂ ನಂಬುವುದು ಹೇಗೆ?
ಮುಚ್ಚಿದ್ದು ಕ್ಷೇಮವೇ
ಮುಗಿಯದ ಬೇಗೆ
ತೆರೆದ ಬಾಗಿಲಿಗೆ
ಮುಚ್ಚುವುದೇ ಗೊತ್ತಿಲ್ಲ
ಹಾದಿ ಸುಗಮ ತೋರುವುದು
ಭ್ರಮೆಯಿರಬಹುದಲ್ಲ!
ಮುಚ್ಚಿದ್ದಕ್ಕೆ ಸದಾ
ಬೆಚ್ಚುವ ಭಯವೇ
ಬಿಚ್ಚಿದರೆ ಚುಚ್ಚುವ
ಸಂಕಟ
ಹಾದಿ ದುರ್ಗಮವೇ?
ಹಾಗಾದರೆ ತೆರೆದದ್ದು ಸೂಕ್ತವೆ?
ಬಾಗಿಲ ಹಿಂದಿರುವುದಾದರೂ
ಏನು? ಅಪಾಯವೇ?

೨

ಏನು ಮಾಡಲಿ ಪ್ರಭು
ತೆರೆದದ್ದು ಮುಚ್ಚುವ
ಮುಚ್ಚಿದ್ದು ಬಿಚ್ಚುವ
ಮೇಲಾಟಗಳೇ ಎಲ್ಲಾ
ಇಲ್ಲಿಂದ ಅಲ್ಲಿಗೆ

ಅಲ್ಲಿಂದ ಅಲ್ಲಿಗೆ
ಅಲ್ಲಿಂದ ಮತ್ತೆಲ್ಲಿಗೋ
ಚರ್ಚೆಯೇ ಎಲ್ಲಾ
ಮುಚ್ಚಿದ್ದ ಬಿಚ್ಚಿ,
ಬಿಚ್ಚಿದ್ದ ಮುಚ್ಚುವ
ಸಂಚುಗಳೇಕೇ?
ಕಂಡ ದಾರಿಯೇ
ಸವೆದರಾಯಿತು
ಸುಂಕವಿಲ್ಲ.

ಕೃಪೆ: ಸಂತೆ ಸರಕು(೨೦೧೬), ನಾಕುತಂತಿ ಪ್ರಕಾಶನ, ಬೆಂಗಳೂರು.

❖

# ಬಾಲ್ಯ ಮತ್ತು ಒಂದೆರಡು ಚಿತ್ರಗಳು

- ಛಾಯಾ ಭಗವತಿ

### ಕುಳ್ಳು

ಒತ್ತದ ಬಣವೆಯಂತೆ ದಣಪೆ ಕೂದಲ ರಾಶಿಗೆ
ತಲೆ ಕುಕ್ಕಿಸಿಕೊಂಡೇ ಪಡಗ ನೀರು
ಹುಯ್ಯಿಸಿಕೊಂಡು,
ತೊಟ್ಟಿಕ್ಕುವ ತುದಿಗೆ ಕೆಂಪುರಿಬ್ಬನು ಸುತ್ತಿಕೊಂಡು
ತಂಗಳನ್ನ ಸಾರಿನ ಗಂಗಾಳದ ಮುಂದೆ
ಕೈ ಬಾಯಿ ಏಕ್ ಮಾಡಿಕೊಂಡು,
ಹಳೇ ಊರಿನ ಓಣಿಗಳ ಸೆಗಣಿ ಹೊತ್ತಲ ಆರಿಸಿ ತಂದು,
ರತ್ನಕ್ಕನ ಮುರಿದು ಬಿದ್ದಿದ್ದ ಮನೆ ಗೋಡೆಗೆ
ಬಡಿದು ಬಂದಿದ್ದು ಸಾವಿರ ಕುಳ್ಳು
ಸುಟ್ಟಿದ್ದು ಒಂದು ಸುಂದರ ಬಾಲ್ಯ!

### ಇಡ್ಲಿ

'ಇಡ್ಲೀ ವಲೀ ಮ್ಯಾಲೆ ಬೆಂದನ್ನ ಬಲು ಹದ'
ಅನ್ನುತ್ತ ಅವರು ಕೊಡುತ್ತಿದ್ದ ಗೋಣೀ ಚೀಲವನ್ನು
ಅಟ್ಲಾಸ್ ಗೋಲ್ಡ್‌ಲೈನ್ ಸೂಪರಿಗೆ ಸಿಕ್ಕಿಸಿಕೊಂಡು,
ಮುಂದೆಂಟಾಣೀದು ಹಿಂದೆಂಟಾಣೀದು
ಗಾಳಿ ಹೊಡಿಸಿಕೊಂಡು
ಹಳೇ ಊರ ಹಗರಿಯ ಬ್ರಿಡ್ಜಿನ ಮೇಲೆದಿರಾಗುವ
ಗೌರ್ಮೆಂಟ್ ಬಸ್ಸಿಗೆ ಸೈಡಾಗಲೇ ಕೂಡದೆಂದುಕೊಂಡು,
ಹಾಲು ಮಾರುತ್ತಲೇ ಇಡ್ಲಿ ಕೂಡಿಡುತ್ತಿದ್ದ
ಹಂಪಮ್ಮನ ಮನೆಯ ಕಂಬಕ್ಕಾತು
ಕಳ್ಳು ಕಷ್ಟ–ಸುಖ ಮಾತಾಡಿಕೊಳ್ಳುತ್ತ,
ಗೋಣೀಚೀಲಕ್ಕೆ ಇಡ್ಡಿಲು ತುಂಬಿಕೊಂಡು,
ಮೈ–ಕೈಯೆಲ್ಲ ಕಪ್ಪಾಗಿ ಮನೆಗೆ ಬಂದ ಸಂಜೆ
ಕಂಡಿದ್ದು ನಿಗಿನಿಗಿ ಕೆಂಡವಿದ್ದ ಇಡ್ಡಿಲೊಲೆ

ಬೂದಿಯಾಗಿದ್ದು ಬಾಲ ಸಂಗಮಕ್ಕೆ ಹೋಗುವ
ಪುಟ್ಟ ಕನಸು.

**ಕೃಪೆ:** ಸಂಚಯ ಕಾವ್ಯ ಸಂಭ್ರಮ (ಸಂ), ಸಂಚಯ (ಪ್ರಕಾಶನ) ೨೦೦೭

# ಬಿಸಿ ಚಹಾ

- ಶ್ರೀದೇವಿ ಕೆರೆಮನೆ

ಚಹಾ ಮಾಡುವುದೆಂದರೆ ಅದು ಸುಲಭದ ಮಾತಲ್ಲ
ಲೋಟದಲ್ಲಿ ಲೆಕ್ಕ ಮಾಡಿ ನೀರನ್ನು
ಪಾತ್ರೆಯ ಒಳಗೆ ಬಂಧಿಸಿಡಬೇಕು
ಒಲೆಯ ಮೇಲಿಟ್ಟ ನೀರು ನಿಧಾನಕ್ಕೆ
ಶಾಖ ಹೆಚ್ಚಿಸಿಕೊಂಡು
ಕುದಿಬಿಂದು ತುತ್ತತುದಿಗೇರಿ
ಮೈ ತುಂಬಾ ಬೊಬ್ಬೆಯೇಳಬೇಕು

ಚಹಾ ಮಾಡುವುದೆಂದರೆ ಹುಬ್ಬು ಹಾರಿಸಿದಂತಲ್ಲ
ಇಷ್ಟ ಕಷ್ಟದ ಬಗ್ಗೆ ತುಟಿ ಪಿಟಕ್ಕೆನ್ನದೇ
ಕುದಿವ ಒಡಲಲ್ಲಿ ಪುಡಿಯ ಜೊತೆ
ಬೇಧವಿಲ್ಲದೇ ಬೆರೆತು ಒಂದಾಗಬೇಕು
ಪುಡಿಯ ಸಾರವನ್ನೆಲ್ಲ ತನ್ನ ಬಸಿರೊಳಗೆ ಧರಿಸಿ
ಕೆಂಪು ಕಂದಾಗಿ ತಿರುಗಿ
ಮೂಲತತ್ವವನ್ನೇ ಮರೆತು ಬಿಡಬೇಕು

ಚಹಾ ಮಾಡುವುದೆಂದರೆ ತುಟಿ ಪಿಸಿದು ನಕ್ಕಂತಲ್ಲ
ತಿರಸ್ಕರಿಸುವ ಮಾತು ತುಟಿಯಂಚಲ್ಲಿ
ಮೂಡುವ ಮುನ್ನವೇ ನುಂಗಿಕೊಳ್ಳಬೇಕು
ಸಕ್ಕರೆಯನ್ನು ಒಡಲೊಳಗೆ ಕರಗಿಸಿಕೊಂಡು
ಒಳಗಿನ ಒಗರು ಹೊರಲೋಕದ ಕಣ್ಣಿಗೆ
ಒಂದಿನಿತೂ ತೋರದಂತೆ
ಬರಿಯ ಸಿಹಿ ಲೇಪನವಾಗಬೇಕು

ಚಹಾ ಮಾಡುವುದೆಂದರೆ ಎದೆ ಸವರಿ ಉದ್ರೇಕಗೊಂಡಂತಲ್ಲ
ಒಳಗಿನ ಸ್ವಾದ ಆಸ್ವಾದಿಸಲಾಗದ ಮುಖಹೇಡಿಗಳು
ಕಂದು ಬಣ್ಣವ ಕೀಳೆಂದು ಹೀಯಾಳಿಸಿ ನಗುವಾಗ
ಪಟ್ಟಭದ್ರರ ಕಣ್ಣಿಗೆ ಹಿತವಾಗುವಂತೆ
ಬಿಳಿಯ ನೊರೆ ಹಾಲಿನೊಂದಿಗೆ ಬೆರೆತು
ಸಮಾಜ ಬಯಸುವ ಗೌರವರ್ಣ ಖುದ್ದಾಗಿ ಪಡೆಯಬೇಕು

ಚಹಾ ಮಾಡುವುದೆಂದರೆ ಮಿಲನದ ತುತ್ತತುದಿಗೇರಿ
ಪಕ್ಕಕ್ಕೆ ಹೊರಳಿ ಕ್ಷಣ ಮಾತ್ರದಲ್ಲಿ ಗೊರಕೆ ಹೊಡೆದಂತಲ್ಲ
ತನ್ನೊಳಗಿನ ಸುಳಿಯಲ್ಲಿ ಬುಗಿಲೇಳುವ ಸ್ವಾದವ
ತಾನು ಬಯಸದೆಯೂ ತುಂಬಿಕೊಳ್ಳಬೇಕು
ಹೊಕ್ಕಳ ಸುಳಿಯ ಘಮಗುಡುವ ಹಬೆಯೊಳಗೆ
ಅಲೆಅಲೆಯಾಗಿ ಮತ್ತೇರಿಸಿ
ಸೆಳೆಯುವ ಹುನ್ನಾರಗಳ ಪ್ರತಿಕ್ಷಣವೂ ಯೋಚಿಸಬೇಕು

ಚಹಾ ಮಾಡುವುದೆಂದರೆ ಅದು ಎಲ್ಲವನ್ನೂ ಬಿಟ್ಟು
ಬರೀ ಮೀಸೆ ತಿರುವುತ್ತ ಗಂಡಸಾದಂತಲ್ಲ
ಕುದಿಯಬೇಕು; ಕುದ್ದು ಬಸವಳಿಯಬೇಕು
ಉರಿವ ಒಡಲಲ್ಲಿ ಬೆಂದದ್ದೂ ಗೊತ್ತಾಗದಂತೆ
ಅರೆ ಬಿರಿದ ತುಟಿಗೆ ರಂಗು ಲೇಪಿಸಿಕೊಂಡಂತೆ
ನಸುನಗುವನ್ನು ಅಂಟಿಸಿಕೊಂಡೆ ಇರಬೇಕು
ನಶೆಯೇರಿಸುವ ಮಾತನಾಡುತ್ತ
ಒಳಗೊಳಗೇ ನವೆಯುವ ಸ್ವತಃ ಹೆಣ್ಣಾಗಬೇಕು

**ಕೃಪೆ:** ಬೈಟೂ– ಚಹಾ ಕವನಗಳು, ಬಹುರೂಪಿ ೨೦೧

# ಚಿಯರ್ಸ್ ಗರ್ಲ್ಸ್

- ದೀಪಾ ಹಿರೇಗುತ್ತಿ

ರಪ್ಪೆಂದು ಬ್ಯಾಟಿಗೆ ಬಡಿದ ಬಾಲು
ಬೌಂಡರಿಯನ್ನು ದಾಟಿ ಹೋಗುವ
ಹೊತ್ತು...
ಇದೀಗ ಅರೆಕ್ಷಣ ಎಲ್ಲರ ಚಿತ್ತ
ಕಾಣದೆ ಮಾಯವಾದ ಚೆಂಡಿನತ್ತ...

ಉಳಿದರ್ಧ ಕ್ಷಣವೂ ವ್ಯರ್ಥವಾಗದು
ಮತ್ತೆ ಮಹನೀಯರ ಲಕ್ಷ ಲಕ್ಷ
ಜತೆ ಕಣ್ಣುಗಳು ಮರಳುವವು
ನಮ್ಮ ಹೊಕ್ಕಳ ತಿರುವಿಗೆ
ಹೊಟ್ಟೆಯ ಮುದ್ದು ಮಡಿಕೆಗೆ!

ಅಸಂಖ್ಯ ಹೃದಯಗಳು ವೇಗವಾಗಿ
ಹೊಡೆದುಕೊಳ್ಳುವವು
ಎದೆಯ ಲಯಬದ್ಧ
ತೊನೆದಾಟಕ್ಕೆ!
ರಕ್ತ ವೇಗವಾಗಿ ಪ್ರವಹಿಸುವುದು
ಅಣೆಕಟ್ಟು ಒಡೆದಂತೆ
ನಯ ನೀಳ ಬೆತ್ತಲೆಯ ಕಾಲು
ಜಿಗಿತಕ್ಕೆ!

ಮೈ ಮರವಾಗಬೇಕಿನಿಸುವುದು
ನಮ್ಮ ಬಳ್ಳಿ ತೋಳುಗಳ ಕೋಮಲತೆಗೆ!
ಹೊಟ್ಟೆತುಂಬಿದ ಕಣ್ಣೂ
ಬೆತ್ತಲೆ ಬೆನ್ನನು ನೆಕ್ಕುವುದು!
ಕರಾರುವಕ್ಕಾಗಿ ಲೆಕ್ಕ ಹಾಕುವುದು
ಮನಸ್ಸು ಸೊಂಟದಳತೆಯನು!

ಲಿಪ್‌ಸ್ಟಿಕ್ ಜೊತೆ ಹಂಚಿಕೊಂಡ
ಮೋಹಕ ನಗುವಿಗೀಗ
ಅಸಂಖ್ಯ ಶಿಕಾರಿ!!

ಓಹ್! ನಿಮ್ಮ ಕಲ್ಪನೆಯೆಲ್ಲ
ನಿಜವಾಗುವುದಾಗಿದ್ದರೆ!?
ನಿಮ್ಮಾಣೆ ನೀವೆಲ್ಲ
ಈ ಕ್ಷಣದ ನರಭಕ್ಷಕರು!!
ಮುಳುಗಿ ಹೋಗೀತು ಈ
ಮೈದಾನ,
ಸಮೂಹ ಸ್ಖಲನದ
ಸನ್ನಿಗೆ!!

ಸಂಭಾವಿತರ, ಕೇಡಿಗಳ, ಮೂರ್ಖರ,
ಪತ್ನೀವ್ರತರ ಎಲ್ಲರ ಕಣ್ಣುಗಳಿಂದ
ಹೊರಬಿದ್ದ ಸರ್ಪಗಳ
ಕೂಟದ ತಾವು ನಮ್ಮ ಮೈಯಂಗಳ!!

ಹುಂ, ಕೋಣೆ ಸೇರಿ ಮೇಕಪ್ ಕಳಚಿ
ಹಾಸಿಗೆಗೊರೆರಗಿದರೆ
ಸುದೀರ್ಘ ಕೇಳಿಯ ಸುಸ್ತು
ಮೈತುಂಬ ಉರಿವ ಗಾಯ
ಮನಸು ಗುಣವಾಗದ ವ್ರಣ!

ಕೃಪೆ: ಕಾವ್ಯಬೋಧಿ ಕವಿ ಪ್ರಕಾಶನ, ಹೊನ್ನಾವರ ಉ ಕ. ೨೦೧೫

❖

# ಥೇ..

- ದೀಪ್ತಿ ಭದ್ರಾವತಿ

ಪಕ್ಕದ ಕೋಣೆಯಲ್ಲಿಯೇ ಇದ್ದ ಬಾಡಿಗೆದಾರನೊಬ್ಬ
ಹೇಳದೆ ಕೇಳದೆ ರಾತ್ರಿ
ಹೊರಟು ಹೋಗಿದ್ದಾನೆ
ನಾಪತ್ತೆಯಾಗಿದ್ದಾನೆ ನನ್ನ ಪುಟ್ಟ ಮಗಳ
ಜೀನ್ಸ್ ಪ್ಯಾಂಟನ್ನು
ಹರವುವಾಗಲೆಲ್ಲ ಕೆಂಪು ಕಣ್ಣಿನಲಿ
ನೋಡಿ 'ಸರಿಯಿಲ್ಲ ಸರಿಯಿಲ್ಲ' ಎನ್ನುತ್ತ
ದಢಾರನೆ ಬಾಗಿಲು ಹಾಕಿ ಶತಪಥ
ತಿರುಗುತ್ತಿದ್ದವ

ಹಗಲಿರುಳೂ ನಮ್ಮ ಮನೆಯ ಕಡೆಯೇ ದಿಟ್ಟಿಸುತ್ತ
ಬಾಗಿಲಲ್ಲಿ ಕೂತು
ಅವನ ಸಂಕಟ ನೋಡಲಾಗದೆ
"ನಿನಗ್ಯಾಕೊ ನಮ್ಮಗಳ ಉಸಾಬರಿ"
ಎಂದಿದ್ದೆ
ದನಿ ಜೋರಾಯಿತೋ ಏನೋ..
ಎದೆಯೊಳಗೆ ಅದೆಷ್ಟು ಮಾತುಗಳಿದ್ದವೊ
ಒಂದನ್ನು ಹೇಳಿಕೊಳ್ಳದೆ ಮನೆಯ
ಗೋಡೆಯ ತುಂಬೆಲ್ಲ ಮಸಿಯಲ್ಲಿ
ಗೀಚಿ ಹೋಗಿದ್ದಾನೆ

ಅದೆಷ್ಟು ಕೋಪವ ಎದೆಯಲ್ಲಿ ಪುಪ್ಪಸದಲ್ಲಿ
ಅಡಗಿಸಿಕೊಂಡಿದ್ದನೊ
ಮನೆಯ ಹೆಂಚು ಕಿಟಿಕಿ ಬಾಗಲು
ಎಲ್ಲವನ್ನು ಮುರಿದು ಹಾಕಿದ್ದಾನೆ
ಒತ್ತಿ ಹೋಗಿದ್ದಾನೆ
ಸಾಕಷ್ಟು ಕುರುಹುಗಳ ಸುತ್ತಲು
ಯಾರು ಬಂದರು ತಳ ಊರದೆಂದೆ

ಛೀ...
ಒಂದಿಷ್ಟು ಕಸ ತೆಗೆಸಿ ಚೊಕ್ಕಗೊಳಿಸಿ
ಸುಣ್ಣ ಬಣ್ಣ ಬಳಿಸಿದರೆ ಯಾರಾದರು ಬಂದು
ಉಳಿದುಕೊಂಡಾರು
ಎಲ್ಲಿಯೂ ಮನೆ ಸಿಕ್ಕದಿದ್ದರೆ
ಪಾಪ ಅವನು..?

(ಅಪ್ರಕಟಿತ)

❖

## ಅವನ ಹುಟ್ಟಿಗೆ ಹದಿನಾಲ್ಕು ವರ್ಷ!

- ಚೇತನಾ ತೀರ್ಥಹಳ್ಳಿ

ಸ್ಕರ್ಟ್ ಹಾಕ್ಕೊಬೇಡ ಹೊರಬರುವಾಗ,
ಟಾಪ್ ಚೂರು ಉದ್ದವಿರಲಿ...
ಎಷ್ಟು ಮಾತು ಫೋನಲ್ಲಿ!
ಚಾಟ್‌ನ ತುದಿಯಲ್ಯಾರು?
– ಅವನು ಗಂಡಸಾಗುತ್ತಿದ್ದಾನೆ;
ನನಗೆ ಅಚ್ಚರಿ ಮತ್ತು ಆತಂಕ.

ಹೆಚ್ಚೂಕಡಿಮೆ ಒಟ್ಟಿಗೇ
ಹುಟ್ಟಿಕೊಂಡವರು ನಾವು.
ಎರಡು ದಶಕದಂತರವಷ್ಟೆ;
ಅವನೆಷ್ಟು ಬೆಳದಿದ್ದಾನೆ!
ನನಗಿಂತ ಎತ್ತರ, ಮಾತಿನಲ್ಲೂ..
ಅವನ ಪುಟ್ಟ ಪಾದವೀಗ
ನನ್ನೆದೆ ಮೀರುವಷ್ಟುದ್ದ,
ಒದೆಯಬಹುದೇ ಎಂದಾದರೂ
ಪುಂಡ ಮಕ್ಕಳಂತೆ?
ಅವನ ತೊದಲು ನುಡಿಯೀಗ
ನಾಲಗೆ ಮೀರುವಷ್ಟುದ್ದ,
ಹಾಯಬಹುದೇ ನನ್ನ ಮೇಲೆ
ಸಾಕಿದ್ದು ಸರಿಯಿಲ್ಲವೆಂದು?
ಏನೆಲ್ಲ ಮಳ್ಳು ಚಿಂತೆ!
ಎಷ್ಟು ಬೆಳೆದರೂ ಅವನು,
ನನ್ನ ಹೊಕ್ಕುಳ ಹಣ್ಣು.

'ಗರ್ಲ್ಸ್...' ಅನ್ನುವಾಗ ಮಿಂಚುತ್ತವನಕಣ್ಣು..
ಕನ್ನಡಿಯೆದುರು ಪದೇಪದೇ
ಮೀಸೆ ಮೂಡಿಲ್ಲ ಇನ್ನೂ, ಗಂಟಲೊಡೆದಿಲ್ಲ–
ಅವನ ಚಿಂತೆ ಅವನಿಗೆ.

ಏನೋದಿಯಾನು, ಏನಾದಾನು,
ನೊಗ ಹೊರುವ ಕಾಲ ಬಂದೇಬಿಡುವುದು
ಎಷ್ಟು ದಿನ ಗೂಡಲ್ಲಿರಬಹುದು ಹಕ್ಕಿಮರಿ?
– ನನ್ನ ಚಿಂತೆ ನನಗೆ.

ಅವನು,
ನನ್ನ ಹುಚ್ಚಾಟಗಳಿಗೆ ಚೌಕಟ್ಟು
ಬಡಾಯಿಗೆ ಬೇಲಿ
ರೆಕ್ಕೆಗೆ ಕಲ್ಲು
ಕಾಲಿಗೆ ಚಕ್ರ
ಬದುಕಿಗೊಂದು ಚೆಂದದ ನೆವ;
ಅವನು,
ಬಾಣಲೆಗೆ ಬೀಳದಂತೆ ನನ್ನ
ತಡೆದಿರುವ ಜಾಲರಿ ಕೂಡಾ.
ಅವನ್ಹುಟ್ಟಿಗೀಗ ವನವಾಸದಷ್ಟು ವರ್ಷ!
ಲೆಕ್ಕ ಹಾಕುವಾಗ ಬಯಕೆ,
ಕೇಡು ಕಳೆಯಬಹುದು
ರಾಜ್ಯ ಕೊಡಿಸಬಹುದು;
ರಣಚೋರಳಾಗದೆ ಇನ್ನೂ
ಕಾದಾಡಬೇಕು ನಾನು.

(ಮಗನಿಗೆ ಹದಿಮೂರುತುಂಬಿದಾಗ ಬರೆದಿದ್ದು)
ಕೃಪೆ: ಶಬರಿಯ ಅವಸರ, ಅಂಕಿತ ಪುಸ್ತಕ (ಪ್ರಕಾಶನ) ೨೦೧೪

# ಬಾಲ ಸರಸ್ವತಿ

- ಅಕ್ಷತಾ ಹುಂಚದಕಟ್ಟೆ

ಕೆಂಪುಕೋಟೆಯ ಸಜ್ಜಾದ ವೇದಿಕೆಯ
ನಟ್ಟ ನಡು ಮಧ್ಯದಲಿ
ಅಭಿನಯ ಸರಸ್ವತಿ ಬಾಲ ಸರಸ್ವತಿ
ಎದುರಿಗೋ ಕಾತುರ ಚಿತ್ತ ಪ್ರೇಕ್ಷಕಗಣ

ನೆಟ್ಟ ದಿಟ್ಟಿ, ಬಿಗಿಹಿಡಿದ ಉಸಿರು
ಪ್ರಧಾನಿ ಇಂದಿರೆಯೂ ಸೇರಿ ಗಣ್ಯ ಗರೀಬರು
ತಮ್ಮ ಸ್ಥಾನಮಾನ ಪೋಷಾಕು
ಧಿಮಾಕುಗಳ ತೊರೆದು ಏಕತ್ರವಾಗಿ
ಬಾಲ ಸರಸ್ವತಿ
ಎಂಬ ಕೇಂದ್ರದೆದುರಿಗೆ
ಪುಟ್ಟ ಪುಟ್ಟ ಬಿಂದುಗಳಂತೆ ಸಂಧಿಸಿಹರು

ತಲ್ಲೀನತೆಯ ಶೃಂಗದಲಿ
ಸುರುವಾಯ್ತು ತಕಧಿಮಿತ
ದೇವದಾಸಿ ಸರಸ್ವತಿಗೆ
ತನ್ನ ಇಷ್ಟದೈವದ ಹೊರತು
ಜಗದ ಖಬರೇತರದು?
ನೃತ್ಯವೇ ಭಕ್ತಿ
ನೃತ್ಯವೇ ರತಿ

ಅವಳಂಗಾಂಗದಲಿ, ಭಾವದಲಿ
ರಸ ಪ್ರವಾಹ
ನರ್ತನವೋ ಮೈಥುನವೋ ಗೆರೆ ಅಳಿಸಿ
ಪರಾಕಾಷ್ಠೆಯಲಿ ಎಲ್ಲ ಆವಿರ್ಭವಿಸಿ
ಮಹಾ ಖಾಸಗೀ ಕ್ಷಣವೊಂದು ಅಭಿನಯ
ಸ್ವರೂಪದಲಿ ಒಡಮೂಡುತಿರುವಾಗ

ಅದೆಲ್ಲಿದ್ದನೋ ಮುಟ್ಠಾಳ ಫೋಟೋಗ್ರಾಫರ
ನಡುವೆ ಬಂದು ಫ್ಲಾಶ್ ಇಟ್ಟು ಅವಳ ಕ್ಲಿಕ್ಕಿಸಿಯೇ ಬಿಟ್ಟ
ಬಾಣ ತಾಕಿ ಸಂಭ್ರಮದ ಉತ್ತುಂಗದಲ್ಲಿದ್ದ
ಮಿಥುನ ನಿರತ ಹಕ್ಕಿ ಉರುಳಿಬಿದ್ದಂತೆ

ಬೆಳಕಿನ ಕಿರಣ ತನ್ನ ಮೇಲೆ ಬಿದ್ದಿದ್ದೇ
ಕ್ಷಣಾರ್ಧದಲಿ ಮುಖದ ರಕ್ತವೆಲ್ಲ ಇಳಿದುಹೋಗಿ
ನಿಸ್ತೇಜಗೊಂಡಳು ಹೆಣ್ಣು
ಬೆಚ್ಚಿದಳಯ್ಯ ಜೀವಂತ ಹಾವೊಂದನ್ನು ಯಾರೋ ಎಸೆದಂತೆ

ಅಲ್ಲಲ್ಲ ನಾಚಿ ಕಂಗಾಲಾಗಿ ಮುಖ ಮುಚ್ಚಿದಳು
ತನ್ನ ಖಾಸಗೀಲೋಕಕ್ಕೆ ಯಾರೊ ಕನ್ನ ಕೊರೆದಂತೆ
ರತಿಸುಖದ ಗಳಿಗೆಯಲಿ ಮೂರನೆಯವರ
ಕಣ್ಣಹೆಜ್ಜೆಗಳು ಅಲ್ಲೇ ಎಲ್ಲೋ ಕದಲಿದಂತೆ

ಮುಖಮುಚ್ಚಿ ಓಡಿದಳು ತೆರೆಯತ್ತ
ಮತ್ಯಾರು ಎಷ್ಟು ಒತ್ತಾಯಿಸಿದರೂ ಬಗ್ಗಿ ಬರಲಿಲ್ಲ
ಆ ದಿನ ಆಕೆ ರಂಗಕ್ಕೆ
ಸೂರೆ ಹೋದಂತೆ ಸಕಲವು
ಮುಖ ಮುಚ್ಚಿ ಕಣ್ಣೀರುಗರೆಯುತ್ತಿದ್ದ ಆಕೆಯೆದುರು...
ನರ ಲೋಕ ತಬ್ಬಿಬ್ಬಾಗಿ ಮಂಡಿಯೂರಿತ್ತು

ದೇವದಾಸಿಯ ತಲ್ಲಣಿಸಿದೆದೆಗೆ ಸಾಂತ್ವನ
ಎರೆಯುವ ಶಕ್ತಿಯಿಲ್ಲದ ದಾಷ್ಟ್ಯರು
ಕುಸಿದು ಕೂತಿದ್ದರಯ್ಯ ಅಲ್ಲಿ ಕಂಗಾಲಾಗಿ...

ಕೃಪೆ: ನೀರ ಮೇಲಿನ ಚಿತ್ರ (೨೦೧೫), ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.

❖

# ತೊರೆದು ಜೀವಿಸಬಹುದೆ

- ವಿದ್ಯಾರಶ್ಮೀ ಪೆಲತಡ್ಕ

ಪುಟ್ಟ ಕೂಸನು ಡೇಕೇರ್‌ನಲಿ
ಬಿಟ್ಟು ಹೊರಡುವಾಗ,
ಮನಸು ಗಟ್ಟಿಯೇ...
ಮಗದೊಮ್ಮೆ ಆಫೀಸಿನಲ್ಲಿ
ನೆನೆದಾಗ ತೊಯ್ಯುತ್ತದೆ
ಬಾರಿಬಾರಿಗೂ ಪುಟಾಣಿ ಕೂಸಿನ
ಕ್ಷಮೆ ಕೋರುತ್ತದೆ,
ಎಲ್ಲೋ ನಿಮಿಷದ ಮುಳ್ಳು
ಮುಂದೋಡಿದರೂ
ಮನೆಯತ್ತ ಸಾಗುವ ಗಾಡಿಯ ವೇಗ
ಹೆಚ್ಚುತ್ತದೆ.
ಕಚೇರಿ ಮುಗಿದು
ಕೂಸಮ್ಮನ ಕೈಗೆತ್ತಿಕೊಂಡಾಗ,
ಈ ದಿನವೇ ಗೆದ್ದೆ ಎಂದು ಬೀಗುತ್ತದೆ.
ಮನೆಗೆಲಸ ಮುಗಿದು
ಹಾಸಿಗೆಗೆ ತಲೆಯಿಟ್ಟಾಗ,
ಮೆಡಲ್ಲೇ ಮಡಿಲಿಗೆ ಬಂದ ಹಾಗೆ....

ತೊರೆದು ಜೀವಿಸಬಹುದು ಎಂದರಲ್ಲ
ದಾಸರು,
ಸುಳ್ಳೇ ಇರಬೇಕದು
ಇಲ್ಲ, ಪುರುಷರಿಗಷ್ಟೇ ಸೀಮಿತವಿರಬೇಕು.
ಎಲ್ಲ ಬಿಟ್ಟರೆಲ್ಲಿದೆ ನೆಮ್ಮದಿ
ಬರಿದೇ ಬೇಗುದಿ,
ಅದೆ ಮಗು–ಮನೆ–ಒದ್ದಾಟದಲ್ಲಿದೆ
ನಮ್ಮನದ ನಿತ್ಯಶಾಂತಿ.
ಕಲ್ಯಾಣದ ಶರಣದ ಕಂಡವರು ನಾವಲ್ಲ
ಶ್ರೀಶೈಲದ ಹಾದಿ ಹುಡುಕಿಲ್ಲ,
ನಮ್ಮನೆ ಇಲ್ಲಿದೆ
ಅದರ ನೆನೆಯೆವು ಸುಮ್ಮನೆ.

ಕೃಪೆ: ಗೌರಿ ದುಃಖ (೨೦೧೬), ಅಭಿನವ, ಬೆಂಗಳೂರು.

# ದೇವರ ದನ

– ರೋಸಿ ಡಿಸೋಜಾ

ಛಿದ್ರ ವಿಛಿದ್ರ ಹಪಹಪಿಗಳು
ಕಪ್ಪು ಕೊಡೆಯ ಮೇಲೆ
ಕೆಂಪು ಮಖಮಲ್ ಮೈಯ ದೇವರ ದನ
ಕಂಡೂ ಕಾಣದಂತೆ ಚಲಿಸುತ್ತದೆ
ಕಣ್ಣೀರು ಗುಪ್ಪೆಯಾಗಿ ಮಖಮಲ್ ಮೈಯಾಗುತ್ತದೆ
ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ
ಹತ್ತು ಹನ್ನೆರಡರ ವಯಸ್ಸು
ಯೌವ್ವನದಂಚಿನ ಕತ್ತಲೆಯಲ್ಲಿ
ಮೊಂಬತ್ತಿ ಹಚ್ಚಿ ಬೆತ್ತಲಾಗಿ ನಿನ್ನೆದುರು
ಧ್ಯಾನಸ್ಥವಾದ ಹೊತ್ತು
ನಿನ್ನ ದೇಹದ ಗಮಲು
ನನ್ನ ಬೆಳಗಿಗೆ ಪಾರಿಜಾತವಾಗುತ್ತದೆ
ಮೊದಲ ಮಳೆಗೆ ಮೈಯೊಡ್ಡಿ ಮೇಲೆದ್ದು ಬಂದ
ಕೆಂಪು ಮಖಮಲ್ ಮೈಯ ದೇವರ ದನ
ಸ್ಪರ್ಷಕ್ಕೆ ಗುಪ್ಪೆಯಾಗಿ, ಕೆಂಪು ಹನಿಯಾಗಿ
ನನ್ನ ಅಂಗೈಯಿಂದ ಜಾರುತ್ತದೆ
ಏರಿಳಿಯುವ ಕಾಡುಗುಡ್ಡಗಳಲ್ಲಿ
ಸುರಿವ ಮಳೆ ಸಹಸ್ರಸಹಸ್ರ ಪಾತ್ರಗಳಲ್ಲಿ ಹರಿಯುತ್ತದೆ
ಈ ತಡಿಯಲ್ಲಿ ಆವಾಹಿಸಿಕೊಳ್ಳುತ್ತೇನೆ
ದಟ್ಟೈಸಿದ ಮೋಡ, ಭೋರ್ಗರೆವ ಸಾಗರ
ನಿನ್ನ ಹಸಿರು ಕೆಸರಿನ ಕೆಂಪು ಮಣ್ಣಿನ ದೇಹದಲ್ಲಿ
ಪ್ರತಿಗೀರಿಗೂ ಒಂದು ಪ್ರವಾಹ
ನನ್ನ ಆ ಗಟ್ಟಿಕಲ್ಲಿನ ಕೆಂಪು ಮಣ್ಣಿನ ಬಿರುಕುಗಳಲ್ಲಿ ಹರಿಸುತ್ತದೆ ಸೆಲೆ
ಆ ಅನಾಹುತ ಮಳೆ

ನಾನಿಲ್ಲಿ ಬಾಚಿಕೊಳ್ಳುತ್ತೇನೆ,
ನಿನ್ನ ಏರು ಹರುಹುಗಳಲ್ಲಿ
ನನ್ನ ಬದುಕಿನ ಮಣ್ಣು ವಾಸನೆ

ಮತ್ತೆ ಇಲ್ಲವಾಗುತ್ತೇನೆ
ಈ ಮಣ್ಣಲ್ಲೇ ಗಮ್ಯ ಹುಡುಕುವಂತೆ
ಕಾಣದಾಗುತ್ತದೆ ಕೆಂಪು ಮಖಮಲ್ ಮೈಯ ದೇವರ ದನ

(ದೇವರ ದನ ಎಂದು ಆಡುಮಾತಿನಲ್ಲಿ ಕರೆಸಿಕೊಳ್ಳುವ ಒಂದು ಅಪರೂಪದ ಪುಟ್ಟ ಜೀವಿ.

ಮಲೆನಾಡು ಕರಾವಳಿಯ ಕೆಲವು ಪ್ರದೇಶಗಳಲ್ಲಿ ಮೊದಲ ಮಳೆಯ ಹೊತ್ತಿಗೆ ಭೂಮಿಯಿಂದಮೇಲೆದ್ದು ಬರುತ್ತದೆ.)

**ಕೃಪೆ:** ಸಂಚಯ ಕಾವ್ಯಸಂಭ್ರಮ, ಸಂಪಾದನೆ ಡಿ.ವಿ. ಪ್ರಹ್ಲಾದ್, ಸಂಚಯ ೨೦೦೭

❖

# ಅಜ್ಜಿ, ಮೊಮ್ಮಗಳು ಮತ್ತು ವಾಷಿಂಗ್ ಮಶೀನು

- ಶ್ರೀದೇವಿ ಕಳಸದ

ಹೀಗೆ ತಿಕ್ಕಿ ಹಿಂಡಿ,
ಝಾಡಿಸಿ, ಹರಡಬೇಕು
ಹಗ್ಗದ ಮೇಲೆ;
ಬಟ್ಟೆ ಒಗೆಯುವ ಪಾಠ
ಅಜ್ಜಿಯಿಂದ ಮೊಮ್ಮಗಳಿಗೆ

ಮರೆಯಬಾರದು
ಒಣ ಹಾಕುವ ಮೊದಲು,
ಹಗ್ಗ ಗಟ್ಟಿಯಾಗಿದೆಯೆ?
ಹಾಗೆ ಕ್ಲಿಪ್ಪು ಸಿಕ್ಕಿಸುವುದನ್ನೂ;
ಪ್ರತಿಪಾಠ ಮೊಮ್ಮಗಳಿಂದ.

ಇಷ್ಟಿಷ್ಟೇ ನೀರು ಚಿಮುಕಿಸಿ
ಅಲ್ಲಲ್ಲಿ ಹಚ್ಚಿ ಸೋಪು
ಉಜ್ಜಬೇಕು, ಕುಕ್ಕಲೂಬೇಕು
ಚೂರ್‌ಚೂರೇ ನೀರು ಹನಿಸಿ
ಕೊನೆಗೆ ಒಗೆಯಬೇಕು ಬೀಸುಬಿಡದೆ.
ಅರ್ಥವಾಯಿತೇ ಮೊಮ್ಮಗಳೇ?

ಉಜ್ಜುವುದೂ ಸರಿ, ಕುಕ್ಕುವುದೂ.
ಯಾವ ತರಹದ ಬಟ್ಟೆಯದು?
ಕೊಳೆಯೆಷ್ಟು ಕಲೆಯೆಲ್ಲಿ
ಹುಡುಕುತ್ತ ತಿರುವುತ್ತ
ಬೀಸುಬಿಡದೆ ಒಗೆಯೋಣವಾಗಲಿ
ಆದರೆ ಬಟ್ಟೆ ಕಲ್ಲು ದಾಟದಿರಲಷ್ಟೇ
ಅಲ್ಲವೇ ಅಜ್ಜಿ?
ಸಂಜೆಯಾಗುತ್ತಿದ್ದಂತೆ

ಹೆಗಲಿಗೆ, ಕೈಗಾಸರೆಗೆ
ಅವೆಲ್ಲವನ್ನಿಳಿಸಿ ಹಗ್ಗದಿಂದ,
ಕೋಣೆಯೊಳಗೆ ಹರವಿಡದೆ
ಮಡಚಿ ಕಪಾಟಿನೊಳಗಿಡಬೇಕು
ಕುಡಿಯೇ...

ಬಟ್ಟೆ ತೆಗೆಯುವ
ಮಡಚಿಡುವ ಮೊದಲೊಮ್ಮೆ
ನೋಡಬೇಕಲ್ಲವೇ ಪೂರ್ತಿ
ಒಣಗಿವೆಯೇ ಎಂದು
ತೆಗೆಯಬೇಕೆ ಸಂಜೆಗೇ ಬಟ್ಟೆ?
ತುಸು ಒದ್ದೆಯಿದ್ದು, ಮಡಿಚಿಟ್ಟರೆ ಹಾಗೇ
ಕಾಡುವುವು ಕಪ್ಪಾನುಕಪ್ಪು
ಚುಕ್ಕಿಗಳವು
ಅಲ್ಲವೇನೇ ಮುದ್ದು ಅಜ್ಜಿ?

ತೆರೆಯಿತು ಹಿತ್ತಲ ಬಾಗಿಲು...
'ನಾಳೆ ದೀಪಾವಳಿ...
ಏನು ಹೇಳಿ ಈ ಸಲದ ಕೊಡುಗೆ?'
ವಾಷಿಂಗ್ ಮಶೀನು!

ಅಜ್ಜಿಯ ಮಗಳ,
ಆಲಿಯಾಸ್
ಮೊಮ್ಮಗಳ ಅಮ್ಮನ
ಸಂಭ್ರಮ ಇಣುಕಿತು...

ಅಲ್ಲಿಗೆ ಮುಗಿಯಿತು ಒಗೆಯೋಣ ಪಾಠ

ಕೃಪೆ: ಹಾಡಾಗದ ಸಾಲುಗಳು, ಅಂಕಿತ ಪುಸ್ತಕ (ಪ್ರಕಾಶನ) ೨೦೧೦

# ಗೋಡೆಗಂಟಿದ ಕಿಟಕಿ

- ಕೆ.ಎಂ. ವಸುಂಧರಾ

ನಾನೊಂದು ಕಿಟಕಿ ಮುಚ್ಚಿಯೇ ಇದ್ದೇನೆ
ಶತಮಾನಗಳಿಂದ ಗತಕಾಲದ ಗಾಳಿ ಒಳಗೆ
ಸುಳಿದಾಡುತ್ತಾ ಕತ್ತಲ ಘಮಲಿನ ಅಮಲಿನಲಿ
ಉರುಳಾಡುತ್ತಾ ಎದ್ದೆದ್ದು ಕುಣಿಯುವ ಆತ್ಮಗಳು
ಅಸ್ಥಿಪಂಜರಗಳು ನನ್ನೊಳಗಿವೆ.

ವಿಶಾಲ ಬಿಳಲಿನ ಆಲದ ಮರವೊಂದು
ಟಿಸಿಲೊಡೆದು ತೊಗಟೆ ಕಳಚಿಕೊಳ್ಳದೆ ಬೇರೂರಿ
ಮುಚ್ಚಿದ ಕಿಟ್ಟಕಿಯಾಚೆ ಸ್ವಚ್ಛಗಾಳಿಗೆ ಚಿಗುರಚಿಗಿಸಿ
ಹಕ್ಕಿಗೂಡಿಗೆ ಟೊಂಗೆ ಚಾಚಿದೆ.
ಒಂದೊಂದು ಟೊಂಗೆಗೂ ಗೂಡು ಗೂಡೊಳಗೆ ಕಾವು
ಕೂತ ಬಾಣಂತಿ ಹಕ್ಕಿ ಕಿಟಕಿ ಕುಟುಕಿದ ಸದ್ದು;
ಚಾಚಿದ ಟೊಂಗೆಯೋ ಚೈತನ್ಯದ ಹಕ್ಕಿಯೋ ತಿಳಿಯದು.
ಪ್ರತಿ ಶಬ್ದ ಮಾಡುವ ಹಕ್ಕಿಗೂ ಅದೇನು ರಾಗವೋ
ಸುಮ್ಮಗೆ ಬೀಸುವ ಗಾಳಿಗೆ ತಲೆದೂಗುವ ಟೊಂಗೆಗಳಿಗೂ
ಅದೇನು ಹೊಸ ರಂಗೋ

ಶತಮಾನಗಳಿಂದ ಮುಚ್ಚಿದ ಕಿಟಕಿ ನನ್ನಾಚೆ
ನನಗೆ ಅರಿವಾಗದೆ ಒಳಗಿನ ಗವ್ವುಗತ್ತಲೆ
ಕಮಟು ವಾಸನೆ ಕತ್ತು ಹಿಸುಕಿ ಕುತ್ತು ತರುತ್ತಿದೆ
ಕಾಲದ ಅಲೆ ಉರುಳಿ ತನ್ನೊಡನೆ ತಂದಿಟ್ಟ ಮರಳುತನಕೆ
ಈಗ ಕಿವುಡೋ ಕುರುಡೋ ಸಾಥ್ ಕೊಡುತ್ತಾ ಕೂಡುತ್ತಿದೆ
ಜತನ ಮಾಡುತ್ತಾ ಗತವನ್ನು.
ನನ್ನ ಚೌಕಟ್ಟಿನಾಚೆ ನಿಂತ ಗಟ್ಟಿಗೋಡೆ ಆಗಾಗ್ಗೆ ಅಪಾರ
ವೇದನೆಯಲಿ ಮುಖ ಕಿವುಚಿ ನರಳಿ ನುಡಿಯುತ್ತಿದೆ
ಯಾರೋ ಈಗಷ್ಟೇ ಕೆತ್ತಿ ಹೋದರೆಂದು ಮೊಳೆ ಜಡಿದು

ಭಾರವನು ತೂಗುಹಾಕಿ ಭಾವನೆಗಳನು ಹೇರಿದರೆಂದು
ಆಕ್ರಮಿಸಿಕೊಂಡ ಆಕ್ರಂದನದ ದನಿಯಲಿ
ನೆಟ್ಟಗೆ ನಿಂತ ಪಾಪದ ಗಟ್ಟಿ ಗೋಡೆ ಹೊಸಬಣ್ಣ ಬಳೆದರೂ
ಬದಲಾಗದ ಹಳೆಯ ಹಣೆಬರಹ, ನವೀನತೆಗೆ ಒಡೆಯಬೇಕು
ಕುಟ್ಟಿ ಪುಡಿಕಟ್ಟಬೇಕು ಅಸ್ತಿತ್ವದ ನಿರಾಕರಣೆ ಆಗಲೇ ಬೇಕು.

ನನಗಾದರೋ ಬಾಗಿಲುಗಳಿವೆ ತೆರೆಯಬಹುದು
ಒಮ್ಮೆ ಜಗ್ಗನೆ ಹೊಳೆವ ಮಿಂಚು ಪಕ್ಕನೆ ಹಾರುವ
ಹಕ್ಕಿ ಸಾಲನು ನಾನಾದರೂ ಕಾಣಬಹುದು
ನಿಧಾನದ ಆಲಾಪಕ್ಕೆ ತೆರೆದು ತಲೆದೂಗಬಹುದು
ಯಾರಾದರೂ ಒಮ್ಮೆ ನನ್ನೊಳಗೆ ಹಣುಕಿ ಈ ಓಲಾಡುವ
ಆತ್ಮಗಳನು ಕಿಲುಬುಗಟ್ಟಿದ ಅಸ್ಥಿಪಂಜರಗಳನೂ
ಒಮ್ಮೆ ಜಾಡಿಸಿ ಓಡಿಸಿಬಿಡಬಹುದು
ಗೋಡೆ ಕೆಡವಲು ವಿಳಾಸ ಹುಡುಕಿ ಬರುವವರು
ಬಣ್ಣ ಮಾಸಿ ಸಡಿಲಾದ ನನ್ನ ಬಾಗಿಲುಗಳನು ದೂಡಲಿ
ಪರದೆ ಹರಿದು ಹೊಸಜೇಡ ಮತ್ತೆ ಬಲೆ ಹೆಣೆಯದಂತೆ
ಮೂಡಲಿ ಎಳೆಬಿಸಿಲು ಹೊಸಗಾಳಿ ತುಂಬಿ ಬರಲಿ

ನಾನು ತೆರೆದುಕೊಳ್ಳುವ ಕಿಟಕಿ

**(ಅಪ್ರಕಟಿತ)**

❖

# ಮೀರುವವನು ಮುಳುಗುವವಳು

- ಭಾರತೀ ದೇವಿ

ಭವಬಟ್ಟಲ ಅಗುಳುಗಳನ್ನು
ಚಂಚಗಲಿಸಿದ ಹಕ್ಕಿಗಳ ಅಂಗಳಕ್ಕೆ
ಇಕ್ಕುವ ಕಾಯಕವೇ ಹಗಲಿರುಳೂ
ಇಕ್ಕುವ ಕೈಯ್ಯ ಬಾಯಿಗಳು
ಕೊಕ್ಕನಗಲಿಸಲು ಮರೆತಿವೆ
ನಿರಂತರ ಮುಳುಗೇಳುವ ದಂದುಗದಲ್ಲಿ
ನಾಲಗೆ ಒಣಗಿದೆ...

ಅವನು ದಾಟುತ್ತಲೇ ಇದ್ದಾನೆ
ಮನೆ ಕೇರಿ, ಊರುಗಳ ದಾಟಿ
ದೇಶಾಂತರ, ಖಂಡಾಂತರ
ವಿಶ್ವ ಅವನ ತೆಕ್ಕೆ
ಇಕ್ಕುವ, ನೀಡುವ, ಬೇಯುವ, ಮುಳುಗುವ
'ಕ್ಷುದ್ರ' ದಂದುಗ ಅಂಟಿದ ನಂಟಿನವ
ಅವನಿಗೆ ನಗು ಹುಸಿ, ಅಳು ಹುಸಿ
ಮಾತೆಲ್ಲ ನಿರ್ಲೇಪ
ದಾಟು, ಹಾರು, ಜಿಗಿ, ಮೀರು
ಸಂಗವಿಲ್ಲದ ಲಂಘನ
ಬದುಕ ಬಟ್ಟೆಯಲ್ಲಿ ಉಬ್ಬುತಗ್ಗು

ಉಲ್ಲಂಘನ
ಆಕೆಗೆ ನಿತ್ಯ ಕನಸು...
ಭುವಿಗಿಳಿಯುವ ಗುಂಡು
ಭವದ ಸೆರಗ ನೆರಳಲ್ಲಿ,
ಅವಳ ಬಿಗಿದ ಹಸ್ತ
ಅವನ ಬೆಚ್ಚಗಿನ ಕೈಯಲ್ಲಿ,
ಆಳಕ್ಕಿಳಿ, ಮುಳುಗು...

ಭುವಿಯ ಸೆಳೆತ
ನಿರ್ವಾತದ ನಿರ್ಭಾರ
ಅಂಟಿಸಿಕೊಳ್ಳದ ಬೇಹಾರ...

ಹೀಗೆ...
ಮುಳುಗುವ ಮೀರುವ ಜೊತೆಯಾಟದಲ್ಲಿ
ದಿನರಾತ್ರಿ ನಿರಂತರ ಅಲೆತ
ದಡಮಟ್ಟ ತಣ್ಣಗೆ ಮೊರೆಯುತ್ತಿದ್ದೂ
ಕ್ಷಣಕಾಲ ಚಂದ್ರನ ಮುಟ್ಟುವ
ವೀಚಿಗಳ ಉತ್‌ಗಮನ
ಅಲೆಗಳ ಒಲೆತ
ಅಲೆಗಳ ಮೇಲೆ ಅಲೆ... ಅಲೆ... ಅಲೆ...
ಉಬ್ಬರವಿಳಿತ ...

ಕೃಪೆ: 'ಹೊಸತು' ಪತ್ರಿಕೆ, ಬೆಂಗಳೂರು.

# ಎರವಲು ರೇಷಿಮೆ ಸೀರೆ

- ದೀಪಾ ಗಿರೀಶ್

ನೆರೆಯವಳ ಎರವಲು ರೇಷಿಮೆ ಸೀರೆ
ಇಸ್ತ್ರಿ ಮಾಡಿ
ತೊತಿಗೆ ಹೆದಹೆದರಿ ಪಿನ್ನುಚುಚ್ಚಿ
ಮಜ್ಜಿಗೆ ಹುಳಿ ಖೀರು ಹಪ್ಪಳದ ಜಿಡ್ಡಿನ ಕಲೆಗೆ
ಜೀವ ಹಿಡಿಯಾಗಿಸಿ
ಕುರ್ಚಿಗೆ ತಾಗಿ ಹರಿಯದಂತೆ ಮುದುರಿ
ಕಂದಮ್ಮಗಳ ಉಚ್ಚೆಗೆ ಬೆದರಿ
ಎಲ್ಲರೊಂದಿಗೆ ಅಂಟಿಯೂ ಅಂಟದಂತೆ
ಛತ್ರದಲಿ ಇದ್ದೂ ಇಲ್ಲದಂತೆ
ಉಸಿರುಕಟ್ಟಿ ಇವಳು
ಮದುವೆ ಮುಗಿಸಿರಲು

ಮರಳಿ ಉಸಿರುಬಿಟ್ಟಿದ್ದು ಡ್ರೈಕ್ಲೀನು ಅಂಗಡಿಯಲಿ
ಸೀರೆಯೊಂದರ ಒಗೆತಕ್ಕೆ ಎಪ್ಪತ್ತೆಂದವನಿಗೆ
ಮುಖತಿರುವಿ, ಹುಂಬ ಸಾಹಸವಿಟ್ಟು
ತಾನೇ ಜಾಲಿಸಿ, ಒಣಗಿಸಿ

ಇಸ್ತ್ರಿಪೆಟ್ಟಿಗೆ ಕಾಯಲಿಟ್ಟು
ರೇಷಿಮೆಯ ಇನ್ನೊಮ್ಮೆ ಮೈಗೊತ್ತಿ ಆನಂದಿಸುತಾ
ಅರೆರೇ..
ಅಂಚಿನ ಬಣ್ಣ ಒಡಲಿಗೂ
ಒಡಲಿನ ಬಣ್ಣ ಅಂಚಿಗೂ
ಮೆತ್ತಿದ್ದ ಕಂಡು ಬೆಚ್ಚಿ ಹೌಹಾರಿ
ಸಂಭ್ರಮವೆಲ್ಲಾ ಸೋರಿ ಹೋಗಿ
'ಡ್ರೈಕ್ಲೀನಿಗೆ ಕೊಟ್ಟಿದ್ದೀನಿ ಉಮಾ.. ನಾಳೆ ಕೊಡ್ತಾನೆ..
ಎಷ್ಟು ಚೆಂದ ಇದೆ' ಎಂದು ಅವಳ ನಗಿಸಿ,
ತಾನೂ ಹಲ್ಕಿರಿದು ಕೇಳಿದಳು
'ಎಲ್ಲಿಕೊಂಡದ್ದು, ಬೆಲೆ ಎಷ್ಟು...?'

ಬಂದ ಉತ್ತರಕ್ಕೆ ತಲೆ ತಿರುಗಿ,
ಮುಖ ಕಪ್ಪಿಟ್ಟು
ಸಂಕಷ್ಟಹರನಿಗೆ ಹರಕೆಕಟ್ಟಿ
ತಲೆಮರೆಸಿ ತೌರ ಸೇರಿದಳು

ವಾರ ಕಳೆವುದರೊಳಗೆ
ತಮ್ಮಯ್ಯನಿಗೆ ದಮ್ಮಯ್ಯಗುಡ್ಡೆ ಹಾಕಿ
ಮುದಿ ತಾಯಿಯ ಆರೈಕೆಗೆ ಪಗಾರ ಮಾತನಾಡಿ
ಮುಂಗಡ ತಂದು ಸೀರೆಯೊಡತಿಯ ಕೈಗಿತ್ತು ಯಾಚಿಸಿದಳು
'ಊರೆಲ್ಲಾ ಹುಡುಕಿದೆ, ಸಿಗಲಿಲ್ಲವಮ್ಮಾ ಅಂತ ಬಣ್ಣದ್ದು,
ಇಕೋ.. ಈ ದುಡ್ಡು,
ಹಾಗೇ ಈ ಬಣ್ಣಮೆತ್ತಿದ ಸೀರೆ'
ಸಿಡುಕಿನಿಂದಲೇ ಕಸಿದ ಆಕೆ
ದಿನ ಮೂರಾಗುವುದರೊಳಗೆ
ಹೊಸ ಸೀರೆಗೆ ರವಿಕೆಯನೂ ಹೊಲೆಸಿ,
ಹಳೆಸೀರೆಗೆ ಹೊಸಬಣ್ಣವನೂ ಹಾಕಿಸಿ
ಉಟ್ಟು ಮೆರೆದಳು ಊರತುಂಬಾ..

ಇವಳು ಹೆತ್ತವ್ವನ ಪಾಯಿಖಾಯಿ ಬಾಚುತ್ತಾ
ತನ್ನ ಪಾಲಿನ ಪುಣ್ಯ ಎರವಲು ಕೊಟ್ಟಳು..

**ಕೃಪೆ:** ಅಸ್ಮಿತಾ (ಸಂಕಲನ), ಅನಿಕೇತನ ಪ್ರಕಾಶನ, ೨೦೧೮.

# ಟ್ರಯಲ್ ರೂಂನ ಅಪ್ಸರೆಯರು

- ಭುವನ ಹಿರೇಮಠ

ಅಷ್ಟಷ್ಟೇ ಇಕ್ಕಟ್ಟಿನಲ್ಲಿ
ಮೂರೂ ದಿಕ್ಕಿನಿಂದ ಕೈಮಾಡಿ ಕರೆಯುವ ಕನ್ನಡಿಗಳ ಆತ್ಮಕ್ಕೆ
ಮಾತವಿಲ್ಲ,

ಆಸೆಗಣ್ಣಿನಿಂದ ಬಯಸಿ ತೊಟ್ಟ
ಸ್ಲಿವ್ ಲೆಸ್ ಟಾಪಿನ ಟುಲಿಪ್ ಮೊಗ್ಗು,
ದುಬಾರಿ ಪ್ರಿನ್ಸ್ ಕಟ್ ಬ್ಲೌಜಿನ ಜರ್‍ರಿ ಬಾರ್ಡರು,
ಟ್ರಯಲ್ ರೂಮಿನ ಹ್ಯಾಂಗರುಗಳಲ್ಲಿ
ಹಾಗೆಯೇ ನೇತುಬಿದ್ದಿವೆ,
ನೀಳ ಬೆರಳಿನ ಸೇಲ್ಸ್ ಗರ್ಲ್ ಮುಟ್ಟಿ ಮುಟ್ಟಿ ಮಡಿಕೆ ಮಾಡಿ
ನಾಳೆಯ ಮನಸುಗಳ ಕದ ತಟ್ಟುವ ತನಕ.

ಕೂಲಿಂಗ್ ಗ್ಲಾಸಿನ ಕಾರ್ಪೊರೇಟ್ ಹುಡುಗಿಯ
ಬೆಳ್ಳನೆಯ ಮೈಯ್ಯ ಮೇಲೆ
ಬಿಸಿಲು ಮುತ್ತಿರಿಸಿದ ದಿನ
ಟುಲಿಪ್ ಮೊಗ್ಗು ಬಿರಿಯುವ ತನಕ,

ಮನೆಯ ಕನ್ನಡಿಯಲ್ಲಿ
ಎಂದೂ ಅನಾವರಣಗೊಳ್ಳದ
ಸುಂದರತೆ,
ಕಣ್ಣು ಮೂಗು ಗಲ್ಲದ ಮೇಲೊಂದು ನೇವರಿಕೆ
ಸ್ಪರ್ಶದಲ್ಲಿ ಕನ್ನಡಿಯ ಪರಕೀಯತೆ,
ಮೊಣಕಾಲು ಬಿಟ್ಟು ಮೇಲೇರುವ ಸ್ಕರ್ಟುಗಳು
ವ್ಯಾಕ್ಸ್ ಮಾಡದ ಮೀನಖಂಡ ತೊಡೆಗಳು
ಯಾವ ಮಾಡೆಲ್ಲಿಗೂ ಕಡಿಮೆಯಿಲ್ಲ ನಾವು...
ಟ್ರಯಲ್ ರೂಮಿನ ರಾರಾಜಿತ ಸತ್ಯ
ಸೀಮೆಯೊಳಗೇ,
ಮನಸು ಕನ್ನಡಿ ಟುಲಿಪ್ ಮೊಗ್ಗು ಯಾವುದೂ
ನಮ್ಮ ಬೆನ್ನ ಹಿಂದೆ ಬರಲಾರವು

ನಾವೆಲ್ಲ ಟ್ರಯಲ್ ರೂಮಿನ ಅಪ್ಸರೆಯರು
ವಯಸ್ಸು ಹೋದ ಹರೆಯವ
ಬಡಿದೆಬ್ಬಿಸುವ
ಸ್ಟ್ರೀಟ್ ಬಾಯ್
"ಲುಕಿಂಗ್ ಸ್ಮಾರ್ಟ್,..."
ಎನ್ನುತ್ತ ಗಾಳಿಯ ಹೆಗಲ ಮೇಲೆ ಕೈಹಾಕಿ
ಚೂರು ಚೂರು ಸುಗಂಧವ ಬಿತ್ತುತ್ತಾ ನಡೆದಿದ್ದಾನೆ

ಕಾರ್ಪೋರೇಟ್ ಕಾಡು ಹೊಕ್ಕ
ಅಜ್ಞಾತ ಜಿಂಕೆಮರಿಗಳು ನಾವು

ಕೃಪೆ: ಟ್ರಯಲ್ ರೂಂನ ಅಪ್ಸರೆಯರು (ಸಂಕಲನ) ಪಲ್ಲವ ಪ್ರಕಾಶನ, ೨೦೧೮

# ಲ್ಯಾಬ್ ಎಕ್ಸಾಮ್

- ಕಾವ್ಯಾ ಕಡಮೆ ನಾಗರಕಟ್ಟೆ

ಪುರವಣಿಯೊಂದು ಹಾರಿದೆ
ಜಗದ ಮಾನವ ಒಳಬಿಟ್ಟುಕೊಳ್ಳುವ
ಬಾಗಿಲ ಬಳಿ

ಮುಂಗುರುಳ ಸುರುಳಿಯೊಂದು
ಸುತ್ತಿಕೊಂಡಿವೆ ಕಿವಿಯೋಲೆಗೆ
ಆ ಕ್ಷಣ ಸೀಟ್ ನಂಬರ್ ಕೂಡಾ ಮರೆತಿದೆ

ಓದಿಕೊಂಡು ಬಂದ ಹದಿನೈದನ್ನೂ ಬಿಟ್ಟು
ಹದಿನಾರನೇ ಪ್ರೊಗ್ರಾಂ ಕೇಳಿಬಿಟ್ಟಿದ್ದಾರೆ

ಉಗುರೂ ಕೂದಲೂ ಬೆಳೆಯುತ್ತಿವೆ
ಕೈಗೆ ಕಟ್ಟಿದ ದಾರದ ಕಪ್ಪು ಮಾಸುತ್ತಿದೆ

ಕಿಟಕಿಯ ಎಲ್ಲ ಪರದೆಗಳ
ಮುಚ್ಚಲಾಗಿದೆ

ಇತ್ತ ಜಾವಾದಲ್ಲಿ ಬರೆದ ಕೋಡ್
ಎಕ್ಸಿಕ್ಯೂಟ್ ಆಗದೆ ಎಲ್ಲರೂ ಬೆವರುತ್ತಿದ್ದಾರೆ
ಅಲ್ಲೆಲ್ಲೋ ಬಂಜರಿನಲ್ಲಿ ಬೀಜ
ಟಿಸಿಲೊಡೆದಿದೆ

ಲೋಕದ ಮರಗಳೆಲ್ಲ ಕೆಂಪಾಗಿ ನೀಲಿಯಾಗಿ
ಹಳದಿಯಾಗಿ ಕಂಗೊಳಿಸುತ್ತಿದ್ದರೆ ನಾವು
ಎಲ್ಲ ಬಣ್ಣಗಳೂ ಹಸಿರೆಂಬ ಭ್ರಮೆಯಲ್ಲಿದ್ದೇವೆ

ಕ್ಯಾಂಪಸ್ಸಿನ ಗಾರ್ಡನ್ನಿನಲ್ಲೂ ತರಕಾರಿ ಬೆಳೆಯುತ್ತಾರೆ
ನಾವಂತೂ ಲ್ಯಾಬ್ ಎಕ್ಸಾಮ್ ಮುಗಿಸಿದ ಹುರುಪಿನಲ್ಲಿದ್ದೇವೆ

ಕೃಪೆ: ಧ್ಯಾನಕೆ ತಾರೀಖಿನ ಹಂಗಿಲ್ಲ (೨೦೧೩), ಅಹರ್ನಿಶಿ ಪ್ರಕಾಶನ, ಶಿವಮೊಗ್ಗ

❖

# ಹರಿವ ನದಿ

- ರೂಪಶ್ರೀ ಕಲ್ಲಿಗನೂರು

ಒಂದೊಮ್ಮೆ ಎಳ್ಳಷ್ಟೂ
ಸದ್ದು ಮಾಡದಂತೆ
ಹರಿವ ಬಾಳ ನದಿಯ
ಹರಿವಿನಿಂದ ಬೇರ್ಪಟ್ಟು
ತಬ್ಬಿದೆದೆಯನು ನಿಂತ–ನಿಂತಲ್ಲೆ ಬಿಟ್ಟುಕೊಟ್ಟು
ಉಟ್ಟಬಟ್ಟೆಯನು ಅಲ್ಲೇ ಒಕ್ಕೊಟ್ಟು
ವಿಲವಿಲನೆ ಮೀನಿನಂತೆ ಒದ್ದಾಡುತ್ತಾ,
ಬೇಡದ ಕಡೆಗೆ ತೆವಳುತ್ತಾ
ಈ ಇಳೆಗೆ
ಎದೆಯ ತೋಯಿಸುವ ಮಳೆಗೆ
ಕಾಪಿಟ್ಟ ಕಣ್ಣಿಗೆ
ಅನ್ನವಿಟ್ಟ ಮಣ್ಣಿಗೆ
ಕನಸ ಸುಟ್ಟ ಸೂರ್ಯರಿಗೆ
ಕಗ್ಗತ್ತಲಲಿ ಬೆಳಕ ನೆಟ್ಟ ಚಂದ್ರರಿಗೆ
ಹಣ್ಣಾದವಂಗೆ ಹೂವಾದವಂಗೆ
ಎಲ್ಲದೆಲ್ಲಕ್ಕೂ
ವಿದಾಯವನರ್ಪಿಸಿ ನಡೆದುಬಿಡಬೇಕೆಂದು
ಅದೆಷ್ಟು ಬಾರಿ ಅಂದುಕೊಳ್ಳುತ್ತಾಳವಳು
ಹಾಗೆಂದುಕೊಂಡಾಗಲೆಲ್ಲ ಮುಂದಕ್ಕೆ ರಸ್ತೆ
ಕಾಣಿಸುವುದೇ ಇಲ್ಲ
ಎದೆಯಲ್ಲಿನ್ನೂ ಉಳಿದ
ಮುಡಿದ ಹೂವ ಕಂಪು
ಅವಳ ಸುತ್ತಮುತ್ತೆಲ್ಲ ಹರಡಿ
ಕಣ್ಣು ಮಂಜಾಗಿಬಿಡುತ್ತವೆ
ಸಾಕಿನ್ನು? ಸಾಕಿನ್ನು ಸಹಿಸಿದ್ದೆಂದು
ಅವನು ಬಿಟ್ಟುಹೋದ ಪ್ಯಾಕೆಟ್ಟಿನಿಂದ
ಸಿಗರೇಟೊಂದನ್ನು ಎಳೆದು ತುಟಿಗಿಡುತ್ತಲೆ
ಜೋರು ಮಳೆ?

ಸಿಗರೇಟಿನೊಟ್ಟಿಗೆ ಅವಳೆದೆಯೊಳಗಿನ
ಬೆಂಕಿಯೂ ತಣ್ಣಗಾಗಿಬಿಡುತ್ತದೆ
ಎಂದೋ ಹೆಣೆದು ಮರೆತಿದ್ದ ಜಡೆಯ ತುಂಬೆಲ್ಲ
ತಮ್ಮ ಕೈಯ್ಯ ಪರಾಗಸ್ಪರ್ಶ ಉಳಿಸಿದಂತೆ
ಅತೀ ಮೆಲ್ಲಗೆ
ಸಂಪಿಗೆಯ ಹೂಗಳನ್ನು ಸಿಕ್ಕಿಸಿದ್ದಾರೆ.

ಹಿಂದೆಲ್ಲ ಎಂಥೆಂಥಾ ಬಾಚಣಿಕೆಗಳ
ದಾಳಿಗೂ ಬಗ್ಗಿರದ ಈ ಸಿಕ್ಕುಗಳೆಲ್ಲ
ಹೂವ ಕಂಪಿಗೆ ಮೆತ್ತಗಾದವೆ?
ಯಾರೋ ಎಲ್ಲೋ ಕುಳಿತು
ಇವಳ ತಲೆಗೂದಲಲ್ಲಿ ಮೆದುವಾಗಿ
ಬೆರಳಾಡಿಸುತ್ತಿರಬೇಕು,
ಮತ್ತೆ ನಿದ್ದೆಗೆ ಶರಣಾಗುತ್ತಿದ್ದಾಳೆ,
ದೀರ್ಘಕಾಲದ ಬಳಲಿಕೆಯ ನಂತರ.

**ಕೃಪೆ:** ಕಿರಂ ಕವಿತೆ, ಸಂ ಬೇಲೂರು ರಾಘುನಂದನ್, ಅವಿರತ ೨೦೧೮

# ಗುಟುಕು –೫

- ನಜ್ಮಾ ನಜೀರ್

ಕಪ್ಪು ಪಂಜರದ
ನಿಸ್ತೇಜದೊಳು ನಾನಿರಲಾರೆ ಓ ಖುದಾ,
ಜಗದ ಬೆಳಕೋ ಬೆಳಗಿದಷ್ಟೇ ನನ್ನ ದಾರಿ.
ಕ್ಷಮಿಸಿಬಿಡು ಯಾ ರಬ್,
ಸ್ವರ್ಗದ ಬಾಗಿಲು ಎಂದೋ ಕರಗಿದೆ

ಅಗೋ ನೋಡು ಬಂದೇ ಬಿಟ್ಟರು,
ಸ್ವರ್ಗದಾಸೆಯ ಗುತ್ತಿಗೆದಾರರು
ಸ್ವರ್ಗ ಸೇರದ ಪಾಪಿಗೆ ನರಕ ತೋರಿಸಲು.
ಮುಖಾಮುಖಿಯಾಗಲು ಬಿಡು ಒಮ್ಮೆ ಯಾ ರಬ್,
ಕೇಳಿಯೇ ತೀರುತ್ತೇನೆ
ನೀನ್ಯಾಕೆ ಗುತ್ತಿಗೆ ಕೊಟ್ಟಿಯೆಂದು...!
ಮುಟ್ಟಿನಿಂದ ಹುಟ್ಟಿದ ಕೂಸುಗಳು
ನಿನ್ನ ನಾಮದಲ್ಲಿ ನಮ್ಮನ್ನೇ ತುಳಿಯುವುದೇಕೆಂದು...!

ಹೆಣ್ಣು ಕಲಿತರೆ,
ಮನೆಯಿಂದ ಹೊರಗೆ ಕಾಲ್ಕಿತ್ತರೆ
ನಿಸ್ತೇಜತೆಯ ತೊರೆದರೆ
ನಾಲ್ವರೊಟ್ಟಿಗೆ ಬೆರೆತರೆ,
ಕುಂತರೆ, ನಿಂತರೆ,
ನಕ್ಕರೆ, ಅತ್ತರೆ,
ಬರೆದರೆ, ಹಾಡಿದರೆ
ಎಲ್ಲದಕ್ಕೂ ಪ್ರಶ್ನೆ ...
ನಾವು ಬಂಡೆದ್ದು ಬಿಟ್ಟೇವೆಂಬ ಭಯ
ನಿನಗೂ ಇದೆಯೇನು?

ಓ ಗುತ್ತಿಗೆದಾರರೇ,
ನನಗೆ ನಿಮ್ಮ ಸ್ವರ್ಗ ಬೇಕಾಗಿಲ್ಲ

ಶಾಲೆಗೋಗುವ ತಂಗಿಯ,
ಕಾಲೇಜಿಗೆ ಹೊರಟ ಗೆಳತಿಯ,
ಬೆಳಕಿಗೆ ತೆರಕೊಂಡ ಅಕ್ಕನ
ಹಾಡುವ ಕುಣಿವ, ಬರೆಯುವ,
ಬೆರೆಯುವ ಹೆಣ್ಣಿಗೆ
ಸ್ವರ್ಗದ ಹಾದಿ ತೋರಿ ಕಮರಿಸಬೇಡಿ
ಸಾಧನೆಯಲ್ಲೇ ಲೋಕವ ಸ್ವರ್ಗ ಮಾಡಲು ಅವರನ್ನು ಅವರಷ್ಟಕ್ಕೇ
ಬಿಟ್ಟು ಬಿಡಿ.

**ಕೃಪೆ:** ಪಿವೋಟ್ ಪದ್ಯಗಳು(೨೦೧೯)ಯುಗಧರ್ಮ ಪ್ರಕಾಶನ.

❖

# ಮಹಿಳಾ ಸಾಹಿತಿ

- ಡಾ. ನೀಲಗಂಗಾ ಚರಂತಿಮಠ

ಶರಣ ಸಂತ ದಾರ್ಶನಿಕರು
ಸಮಾನತೆಯ
ರತ್ನಗಂಬಳಿ ಹಾಸಿದರು

ಅದೇ ಬಂಡವಾಳದಿ
ಭಾಷಣ ಬಿಗಿಯುವವರಿಂದಿಗೂ

ಬೆಂಕಿ ಇಲ್ಲದೆ ಸುಟ್ಟು
ನೀರಿಲ್ಲದೆ ಮುಳುಗಿಸಿ
ಕೊಡಲಿ ಇಲ್ಲದೆ ಕಡಿದು
ಮಣ್ಣಿಲ್ಲದೆ ಹೂತು

ನಿಶೆಯಲಿ
ನಿರಾಳನಿದ್ರೆ ಕಸಿದು ಹಿಂಸಿಸಿ
ಅಸಮಾನತೆ ಅಸೂಯೆ ಅಪಮಾನ ಅಸಡ್ಡೆ
ಪದರಲೆನ್ನ ಸುತ್ತಿ
ಹಸಿ ನೆತ್ತರದ ಹೆಜ್ಜೆ ಗುರುತು ಕಂಡು
ಗಹ ಗಹಿಸಿ ನಗುವ ಗಧಾಪ್ರಹಾರಿಗರಿಗೆನ್ನ ಸವಾಲು
ನಾ!
ಚಂದನ
ಕಡಿ ಕಡಿದು ಕೊರೆದಂತೆ
ಸಿರಿಗಂಧ ಸುಗಂಧ
ಶಬ್ದ ಭಾವ ಸಾಹಿತ್ಯ
ಸರಕೆಲ್ಲ ನನ್ನದಿನ್ನೇನು

ನಾ!
ಪ್ರತಿಭೆ ಪ್ರಕಾಶ ಬೆಳ್ಳಂಬೆಳಗು
ಮುಳುಗಿಸಿ ಹೊಳಬಲ್ಲಿರಾ?
ಕಡಿದು ಸುಡಬಲ್ಲಿರಾ?
ದೀಪ ಕೊಡಲ್ಹೋರಟವಳು
ಹಿಂದಿರುಗುವುದೇ ಇಲ್ಲ

# ಜಂಕ್ಷನ್

- ಗಿರಿಜಾ ಶಾಸ್ತ್ರಿ

ಯಾವುದೋ ಜಂಕ್ಷನ್ನಿನಲ್ಲಿ ನೀನು
ಕಂಡು ಕ್ಷಣ ಕಣ್ಮರೆಯಾದ
ಲೈಟುಕಂಬ ನಾನು

ಮುನಿಸಿಕೊಳ್ಳಲು ನನಗಾವ ಹಕ್ಕಿದೆ
ಸವಾಲೆಸೆಯಲು
ಗೋತ ಹೊಡೆದ ಗಾಳಿಪಟಕ್ಕೆ
ದಾರದ ಹಂಗೆಲ್ಲಿದೆ

ನಿಂತಲ್ಲೆ ನಿಂತಿರುವೆ ತುಕ್ಕುಹಿಡಿದು
ರೈಲುಗಳೆಷ್ಟೋ ಹರಿದು ಹೋಗಿವೆ
ನನ್ನಣಕಿಸುತ್ತಾ ಸೀಟಿ ಹೊಡೆದು

ಹಳದಿ ಹಸಿರು ಕೆಂಪು
ಕಣ್ ಮಿಳಕಿಸುತ್ತಾ
ಹಳಿಗಳ ಬೆಂಗಾವಲಿಗೆ
ಕಾಯುತ್ತಾ ಇದ್ದೇನೆ ಕೊನೆಯ ಗಾಡಿಗೆ

# ಒಂದು ನೋವು

- ಡಾ. ಜಿ.ಪಿ. ಕುಸುಮ

ಎದೆಯೊಳಗೆ ನುಗ್ಗುವುದರಲ್ಲಿತ್ತು
ಒಂದು ನೋವು
ಕುದಿಯುತ್ತಿತ್ತು
ಆರಲೆಂದು ಬದಿಗಿಟ್ಟೆ

ಬೆಳಕಿನಲ್ಲಿ ಕಣ್ಣು ಕೋರೈಸುವ
ನೆರಳಿನಂತಹ ಸಂಬಂಧಗಳು
ಕವಿದಾಗ ಕತ್ತಲು
ಸೂಜಿಯಾಗಿಳಿಯುತ್ತವೆ
ಎದೆಯೊಳಗೆ

ಕಣ್ಣೊಳಗೆ ಸಿದ್ಧವಾಗಿದೆ
ಅಣೆಕಟ್ಟು ಒಡೆದು ಬರಲು
ಶಿಥಿಲವಾಗಿದೆ ಗೋಡೆ
ರಭಸ ಮೇಲ್ಮುಖವಾದಾಗ
ಕಣ್ಣ ಬಾಗಿಲ ಇಕ್ಕಿ ತಡೆದೆ

ಒಂದು ಚಮಚ ಬೆಳಕು
ತೂರಿದವರು
ನಿತ್ಯ ಕುಡಿ ಚಿವುಟಿ ನೀರುಣಿಸಿ
ನಾಲ್ಕು ಚಮಚ ಕತ್ತಲೆಯನ್ನು
ಬೆನ್ನಿಗಿಟ್ಟರು

ಭಾರವೆನಿಸಲಿಲ್ಲ
ಎದೆತಟ್ಟೆಗೆ ಬಡಿಸಿಕೊಂಡಾಗ
ಎಷ್ಟು ಕಣ್ಣುಗಳೋ ಅಷ್ಟು ಬಣ್ಣಗಳು
ನಿಂತ ನೆಲದವರು ನಿಂತಲ್ಲೇ
ಗುರುತಿಸುವಂತಾಗಲಿ

ಪೈಪೋಟಿ, ಹಸಿವು
ಬೇರಿನಾಳಕ್ಕಿಳಿದು ಕೆಮ್ಮುತ್ತವೆ
ಹೆಸರು ಮತ್ತೆ ಮತ್ತೆ ಮರಿಹಾಕಲೆಂದು
ಸತ್ತಮೇಲೂ
ಗಟ್ಟಿಯಾಗಿರಲೆಂದು.

# ಸಿಕ್ಕರೆ ನಗುವ ತಂದುಕೊಡುವೆಯಾ, ಗೆಳತಿ!

- ಡಾ. ಕೆ. ರಾಜೇಶ್ವರಿ ಗೌಡ

ನೀನೇಕೆ ಇತ್ತಿತ್ತಲಾಗಿ
ಮುಖ ಬಿಗಿದುಕೊಂಡಿರುತ್ತಿ?
ಎಂದಿತು ಕನ್ನಡಿ
ಹುಬ್ಬು ಗಂಟಿಕ್ಕಿತು– ಹೇಳಿದೆ
ನನಗಾರಿದ್ದಾರೆ ನಿನ್ನ ಬಿಟ್ಟು ಗೆಳತಿ!?
ಹಕ್ಕಿಗಳಂತೆ ಹಾರುತ್ತೇವೆ ಯಾಂತ್ರಿಕವಾಗಿ
ವಾಹನಗಳು ಬಿಟ್ಟ ಹೊಗೆಯನ್ನು
ಉಸಿರಾಡುತ್ತೇವೆ,
ಡಬ್ಬಿಯೊಳಗಣ ತಿಂಡಿ ಹೊಟ್ಟೆಗೆ
ತುರುಕುತ್ತೇವೆ,
ಮುದ್ದಿಸಬೇಕಾದ ನಿದ್ದೆಗಂಗಳ
ಕಂದಮ್ಮಗಳನ್ನು ಬೇರೊಬ್ಬರ ಮಡಿಲಿಗೆ
ದಬ್ಬುತ್ತೇವೆ ಕರುಳ ಬಂಧನಗಳು
ಬಾಡುವಂತೆ ಕಿವುಚುತ್ತೇವೆ

ಪ್ರೀತಿಯನ್ನು ಅಟ್ಟಿಬಿಟ್ಟು
ಗುಮ್ಮನನ್ನು ಇಟ್ಟಿದ್ದೇವೆ
ಹಸಿರು ಬಯಸುವ ಕಣ್ಣಿಗೆ
ರಾಚುತ್ತಿದೆ ಬಿರುಬಿಸಿಲು
ಕಾಲಿಟ್ಟರೆ ಹೂತುಹೋಗುವ ಕೆಸರು
ಒಳಗಿನ ಆಳ ಹಂಚಿಕೊಳ್ಳಲೂ
ಪುರುಸೊತ್ತಿಲ್ಲ!

ಒಂದೇ ಸೂರಿನಡಿಯಿದ್ದೂ
ಕಲೆಯಲಾಗದ ಸಮಯಾಭಾವ!

ಹಣದ ಹಿಂದೆ ಓಡಿಓಡಿ ಹೈರಣಾಗಿ
ನಗು ಕಳೆದು ಮುಖ ಬಿಗಿದಿದೆ
ಗೆಳತಿ, ಸಿಕ್ಕಿದರೆ ನಗುವ ತಂದುಕೊಡುವೆಯಾ?

ಕೃಪೆ : ಭಾವ ಬುತ್ತಿ, ಶ್ರೀಸಾಯಿ ಪಬ್ಲಿಕೇಷನ್ಸ್, ೨೦೧೪

# ಬೇಡಲಿಲ್ಲ ಬೆಳದಿಂಗಳು

- ಶಾರದಾ ಮುಳ್ಳೂರು

ಜೀವನದ ತುಂಬ ಬೆಳದಿಂಗಳು ನಾ ಬೇಡಲಿಲ್ಲ
ಅದೊಂದು ರಾತ್ರಿಯುದ್ದಕ್ಕೂ ನೀ ಬೆಳದಿಂಗಳಾಗಿದ್ದೆ ಅಷ್ಟೆ ಸಾಕು

ಅನಾಥಳಂತೆ ನಿತ್ಯ ಅಲೆವಾಗಲೂ ನಾ ಬೇಡಲಿಲ್ಲ
ಅದೊಂದು ದಿನ ನೀಳ ತೋಳಲಿ ರಕ್ಷಣೆಯ ನೀಡಿದ್ದೆಯಲ್ಲಾ ಅಷ್ಟೆ ಸಾಕು

ಸದಾ ಸನಿಹ ಇರಬೇಕೆಂದು ನಾ ಬೇಡಲಿಲ್ಲ
ಅದೊಂದು ಅದೃಷ್ಟದ ಕದ ತೆರೆದ ಸಮಯ ಸನಿಹ ನೀನಿದ್ದೆ ಅಷ್ಟೆ ಸಾಕು

ವಿಶ್ವವ್ಯಾಪಿ  ನೀ ನನ್ನವನಾಗೆಂದು ನಾಬೇಡಲಿಲ್ಲ
ಅದೊಂದು ಉದ್ದ ಸಾಲಿನಲಿ ನನ್ನ ಹೆಸರಿಗೂ ಜಾಗ ನೀಡಿದ್ದೆ ಅಷ್ಟೆ ಸಾಕು

ಮನಸ್ಸು ಬಿಚ್ಚಿ ಮಾತಾಡಲು ನಾ ಹೇಳಲಿಲ್ಲ
ಬಿರುಗಾಳಿ ಲೆಕ್ಕಿಸದೆ ಬಡವಿಗೆ ಮನಸ್ಸು ನೀಡಿದ್ದೆ ಅಷ್ಟೆ ಸಾಕು

ಸವಿ–ಸವಿಯಲು ಜೊತೆ ಬೇಕೆಂದು ನಾ ಬೇಡಲಿಲ್ಲ
ಏಳು ಜನ್ಮಕೂ ಮಿಕ್ಕುವಂತೆ ನೆನೆಪುಗಳನೀಡಿದ್ದೆ ಅಷ್ಟೆ ಸಾಕು

ಪ್ರೇಮಗೀತೆಯ ಹಾಡೆಂದು ನಾ ಬೇಡಲಿಲ್ಲ
ಪ್ರತಿ ಪಲ್ಲವಿಗೂ ನಮ್ಮದೇ ಅನುರಣನ ನೀಡಿದ್ದೆ ಅಷ್ಟೆ ಸಾಕು

**ಕೃಪೆ :** ಆರದ ದೀಪದ ಆಸರೆ ಹಿಡಿದು

# ಕತ್ತಲೆಯಲ್ಲಿ ಬೆಳಕಿನ ಬಿತ್ತನೆ

- ಡಾ. ಕವಿತಾ ಶಿ. ಕುಸುಗಲ್ಲ

ರಾತ್ರಿ ಮಲಗಿದ ಮೇಲೆ
ನಮ್ಮ
ಹಗಲುಗಳೇಳುತ್ತವೆ

ಗಂಡನ ಗೊರಕೆಯ ತಾಳಕ್ಕೆ
ಕಂದನ ಸಿಹಿ ಕನಸಿನ ಮೇಳಕ್ಕೆ
ಸುತ್ತಲ ಶಾಂತಿಗೆ ಗತಿ ಸಿಕ್ಕು
ಮನದ ಅರಮನೆಗಿಷ್ಟು ಇಣುಕಿ

ಬೆನ್ನ ಹುರಿ ಎತ್ತಲೋ ಜಗ್ಗಿ
ತೋಳ ಬಲವಿಷ್ಟು ಕುಗ್ಗಿ
ದಿನದ ಜಂಜಟಕಿಷ್ಟು ಹೊಚ್ಚಿ
ಮನದ ಮಾತಿಗೆ ಕಿವಿ ಕೊಡಲು

ರಾಶಿ ರಾಶಿ ಯೋಚನೆ
ಯೋಜನೆ ದೂರಕೂ ವಿಚಾರ
ಓದುವ ಪುಸ್ತಕ ಸಾಲು ಸಾಲು
ಬರೆಯಲು ಮಾತು ಸಾಗರ

ಲೇಖನಿ ಹಿಡಿದರೆ ಮುಗಿಯದ ಕಥೆಯು
ಕತ್ತಲೆಯಲ್ಲಿ ಬೆಳಕಿನ ಬಿತ್ತನೆ
ಕನಸಿಗೂ ನನಸಿಗೂ ಚಂದ್ರನೆ ಜೊತೆಗಾರ

ಬೀದಿ ನಾಯಿ ಬೊಗಳಲು
ಅಳುವ ಕಂದನ ತುಟಿಗೆ
ಹಕ್ಕಿಗಳ ದಿಂಡು ಮೂಡಣದೆಡೆಗೆ.

# ಕಳೆದುಹೋದ ಮಗನ ಆಸೆ

- ಲಲಿತಾ ಕೆ. ಹೊಸಪ್ಯಾಟಿ

ನನ್ನದೊಂದು ಆಸೆ ಮಗನೆ
ನನ್ನ ಪಕ್ಕ ಒಮ್ಮೆ ಕೂಡು
ನನ್ನ ಸೋತ ಕೈಯ್ಯ ಮೇಲೆ
ಮುತ್ತನೊಂದು ಕೊಟ್ಟು ಹೋಗು...

ನನ್ನದೊಂದು ಆಸೆ ಮಗನೆ
ತುತ್ತು ಎಣಿಸಿ ಒಮ್ಮೆ ಉಣ್ಣು
ಗೆಲುವು ತಂದ ಕಥೆಯ ಕೇಳಿ
ಗೋಣು ಹಾಕಿ ಉಂಡು ಹೋಗು...

ನನ್ನದೊಂದು ಆಸೆ ಮಗನೆ
ಹಾಲುಕುಡಿದ ಎದೆಯ ಮೇಲೆ
ತಲೆಯನಿಟ್ಟು ತಾಳ ಕೇಳಿ
ಲಾಲಿ ಹಾಡ ಕೇಳಿ ಹೋಗು...

ನನ್ನದೊಂದು ಆಸೆ ಮಗನೆ
ಬಿರಿದ ಮೊಗ್ಗು ಅರಳಿದಂತೆ
ಬಿಗಿದ ತುಟಿಯ ಅರಳಿಸಿ
ಮುದ್ದು ಮಾತು ಆಡಿಹೋಗು ...

ನನ್ನದೊಂದು ಆಸೆ ಮಗನೆ
ಕಣ್ಣ ರೆಪ್ಪೆ ಮುಚ್ಚೋ ಮುನ್ನ
ಕಣ್ಣ ಬಿಂಬ ತುಂಬಿ ನಿಂತು
ನಗುವ ಮುಖವ ತೋರಿ ಹೋಗು ...

ನನ್ನದೊಂದು ಆಸೆ ಮಗನೆ
ಚಿನ್ನ ರನ್ನ ಜೀವ ನೀನೆಲೆ
ಜೀವ ತೊರೆದ ದೇಹಕೆ
ಕೊಳ್ಳಿಯಿಟ್ಟು ಉರಿವವರೆಗೂ ನಿಲ್ಲಲೇ...

**ಕೃಪೆ :** ಯಶೋಧರಾ ಎಂಬ ಸತ್ಯ ಮತ್ತು ತ್ಯಾಗ

# ಬುದ್ಧ

- ರಜಿಯಾ ಬಳಬಟ್ಟಿ

ಜಗತ್ತು ತೂಗಡಿಸುತ್ತಿದ್ದಾಗ,
ಇವ ನಿದ್ದೆಯಿಲ್ಲದೆ
ಚಡಪಡಿಸುತ್ತಿದ್ದ.

ಹಸುಳೆಯ ಮುಗ್ಧರೂಪ,
ಚಲುವೆಯ ಪ್ರೀತಿ
ವೈಭವೋಪೇತ ಅರಮನೆ
ಆಳು– ಕಾಳು,
ವಿಶ್ವಾಸ–ಪ್ರೀತಿ
–ಗಳೆಲ್ಲ ತೊಡಕಾಗದೇ
ಹುಣ್ಣಿಮೆಯ ರಾತ್ರಿಯಲಿ
ಚಂದ್ರ ಸಾಕ್ಷಿಯಾಗಿ
ಊರುಬಿಟ್ಟು,
ನಿಶ್ಚಲ ಆಕಾಶದಡಿ
ರೋಗ –ಮುಪ್ಪಿಗೆ
ಸಾವು–ನೋವಿಗೆ
ಉತ್ತರ ಹುಡುಕುತ್ತ
'ಆಶೆ'ಯ ಬಿಡು ಎನ್ನುತ್ತಲೇ
ಸಿದ್ಧ ಬುದ್ಧನಾಗಿದ್ದು ಚರಿತ್ರೆ,
ಸತಿಗೆ ವಂಚಿಸಿ
ಮಗುವ ತಬ್ಬಲಿಗೊಳಿಸಿ
ರಾಜತ್ವದಿ ವಿಮುಖನಾಗಿ
ಪಲಾಯನವಾದಿಯಾಗುತ್ತಲೇ
ಸರ್ವವ್ಯಾಪಿಯಾದ ಸಿದ್ಧ
ಗೌತಮ ಬುದ್ಧ
ನಾದ ಚಂದ್ರನ ಸಾಕ್ಷಿಯಾಗಿ.

ಕೃಪೆ : ಮೆಹಂದಿ

❖

## ಮುಖವಾಡಗಳು ಮಾರಾಟಕ್ಕಿವೆ......

- ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ

ಮನುಷ್ಯನಂತೆ ನಟಿಸಲೇ ಬೇಕಾಗಿದೆ ಅದಕಾಗಿ
ಮುಖವಾಡಗಳು ಮಾರಾಟಕ್ಕಿವೆ
ನಂಬಿಕೆಯ ಬೀದಿಯಲಿ.....

ಸ್ನೇಹದ ಮುಖಹೊತ್ತವು ಲಭ್ಯವಿವೆ
ಕೃತಕ ನಗುವಿನಂತೆ
ತಾಸಿಗೊಂದರಂತೆ ಬದಲಿಸಬಹುದು ಸಲಿಸಾಗಿ.....

ಪ್ರೀತಿಯ ಸಂಚು ರೂಪಿಸಬಲ್ಲ
ನಯ ನಾಜೂಕಿನ
ಮುಗುಳ್ನಗು ಹೊತ್ತವು ಇವೆ....
ಬೇಡವೆಂದಾಗ ನಾಟಕಕ್ಕೆ ಕೈಗಡ ಕೊಡಲು ತಯಾರಾಗಿಯೇ ನಿಂತಿವೆ....

ದ್ವೇಷ ಅಸೂಯೆ ಸ್ವಾರ್ಥದ ಮುಖ ಮರೆಮಾಚಿ ತೋರಿಕೆಯ ಮಮತೆ
ಕಾಳಜಿಹೊತ್ತ ರಂಗು ರಂಗಿನವುಗಳು
ಗುಂಗಿನಲಿ ಬಣ್ಣ ಬಳಿದುಕೊಂಡು ನಿಂತಿವೆ.....

ಸತ್ಯದ ಮುಖಕ್ಕೆ ಮಸಿ ಬಳಿವ
ಕಲಾತ್ಮಕ ಬಲೆ ಹೂಡುವ
ಸಂಬಂಧಗಳ ಸಮಾಧಿಗೆ
ಬೀರಿದ ಮೊಗ್ಗಿನ ಶ್ರದ್ಧಾಂಜಲಿ ನೀಡಲು ತುದಿಗಾಲಲ್ಲಿ ನಿಂತಿವೆ....

ಮುಖವಾಡಗಳಿಗೆ ಇನ್ನಿಲ್ಲದ ಬೆಲೆ... ಅಹಂನ ತಕ್ಕಡಿಗೆ ಸರಿದೂಗುವ
ಮಾಟಗಳಿವೆ.
ನ್ಯಾಯದ ದೇವತೆಗೂ ಕಣ್ಣು ಕಟ್ಟಿದೆ
ಮುಖವಾಡಗಳಿಗೂ ಅಂಜಿಕೆಯಿಲ್ಲ...

ಬೇಕಾಬಿಟ್ಟಿ ಹಾಡುಹಗಲೇ ಕೊಳ್ಳೆ ಹೊಡೆದು
ನ್ಯಾಯದ ತಪರಾಕಿಗೆ
ದಿಕ್ಕು ತಪ್ಪಿಸಬಲ್ಲ

ಚಾಲಾಕಿ ಮುಖವಾಡಗಳು
ನಿತ್ಯವು ಭರ್ಜರಿ ಬಿಕರಿಯಾಗುತ್ತಲೆ ಇವೆ....

ಮನುಷ್ಯನನ್ನೆ ಹಿಂದಿಕ್ಕಿ
ಮೃಗೀಯತೆಯನ್ನು ಮೆರೆಸುತ್ತಿವೆ
ಆತ್ಮಸಾಕ್ಷಿಯನ್ನು ನೇಣು ಗಂಬಕ್ಕೆರಿಸಿ
ಹಿಲಾಲು ಹಿಡಿದು ಕುಣಿಯುತ್ತಿವೆ
ಕಾಳ ಸಂತೆಯ ನಡುಬಿದಿಯಲಿ...

# ಹೆಣ್ಣಿಗೆ....

- ಭಾರತೀ ಪಾಟೀಲ

ಹೆಣ್ಣಿಗೆ....
ಕುಂಕುಮ ಬಳೆ ಸೀರೆ ಸಂಸ್ಕೃತಿ
ಹೇಳಿಕೊಟ್ಟವರು
ಕತ್ತಲೆಯ ಬುರ್ಖಾ ಕಬಟ್ಟಳೆಕಟ್ಟಿಬಿಟ್ಟವರು

ತಗ್ಗಿ ಬಗ್ಗಿ ಮುಳ್ಳು ಮೊನೆಯಲ್ಲೂ ನಡೆಯಲು
ಕಲಿಸಿದರು
ಕಣ್ಣಿದ್ದರೂ ಕುರುಡು ಗಾಂಧಾರಿ!

ಅವನ ಕೈಯಲ್ಲಿ ಈ ಸೂತ್ರದ ಬೊಂಬೆಕೊಟ್ಟು
ಅವನಿಗೆ ಮಾತ್ರ ಬೇರೆ ಬೇರೆ ಗೆರೆ ಎಳೆಯದೆ ನಿತ್ತ
ಹೋದರು
ಕುಂಕುಮ ಅಳಿಸಿ ಬಳೆ ಒಡೆದು
ತಾಳಿಕಿತ್ತು ಹಾಕುವ ರಾಕ್ಷಸ ಸಂತತಿಯ
ಬೀಜಗಳ ಚೆಲ್ಲಿ ವಿಕೃತಿ ಮೆರೆದವರು
ಅವಳೆಂದರೆ ತಲೆಯಿಂದ ಕಾಲಬೆರಳವರೆಗೂ
..ಪುರದ ಕ್ರೂರ ಆಟಕ್ಕೆ ಬೇಟೆ
ಹಾರುವ ಹಕ್ಕಿಗಳ ಕತ್ತರಿಸುವ ಕಿಟುಕರ ತೀರದ ತೀಟೆ

ಅವಳೆಂದರೆ... ಹೂ...
ಹೊಸಕಿ ಹಾಕುವ ಕೈಗಳಿಗೆ ನಿಲುಕುವಂತೆ
ಬಂದಿಸಿಟ್ಟ ದೇವತೆ
ಅವನ ಬೇಡಿಕೆ ಈಡೇರಿಸುವುದಕ್ಕೆ
ನಿಟ್ಟುಸಿರ ಸೆರಗಿನು ಕಟ್ಟಿದ
ಬಟ್ಟಬಯಲು ಚೆಡಿದ ಜಂಗು ಮೊಳೆಯಲಿ
ನೇತಾಡುವ ಮಾಯಾ ಚಿತ್ರ
ಮನುಜ ಮುಖ.... ಪ್ರಾಣಿ ಶರೀರ!

ಗರ್ಭದಲ್ಲಿ ಅಂಕುರಿಸುವ ಭ್ರೂಣ ಅವನೆಂದು
ತಿಳಿದೂ ಹೊಟ್ಟೆಯ ಮೇಲೆ ಕೈಯಾಡಿಸುತ್ತಾಳೆ
ಅವಳು!!! ಹೊಟ್ಟೆಯೊಳಗೆ ಒದ್ದುಗುದ್ದಿ
ಅಂಕುರಿಸುವ ಅವನು!!!
ನಿತ್ತಾವರ ನೆರಳು.

# ಒಂಟಿ ಪಯಣಿಗರು

- ಹೇಮಾ ವಸ್ತ್ರದ

ನನ್ನ ಜೀವನದ ಪಯಣ ಬಲು ದೀರ್ಘವಿದೆ
ಮಗೂ, ನಿನ್ನ ಬದುಕಿನ ದಾರಿಯೇ ನನ್ನದೂ
ಎಂದು ಮನಸ್ಸು ಮಗುವನ್ನು ನೆನೆಯುವಾಗ
ರಿಂಗಣಿಸಿತು ಫೋನು

"ಅಮ್ಮಾ, ಧೈರ್ಯ ತೊಗೊಬೇಕು ನೀವು"
ನೂರಾರು ಮೈಲಿಗಳ ದೂರದ
ಮಗನ ಶಾಲೆಯ ವಾರ್ಡನ್ನರ ಧ್ವನಿ
ಆಳದ ನೀರಿನಲ್ಲಿ ಮುಳುಮುಳುಗಿದಂತೆ
ಚಡಪಡಿಸಿದೆ ಉಸಿರಿಗಾಗಿ
ಬಿದ್ದ ಡೆಸ್ಕಿಗಂಟಿದೆ ಕಾಲ ಹೆಬ್ಬೆರಳ ತೊಗಲು
ಕಿತ್ತು ಹೋಗಿದೆ ಉಗುರು
ಛಿದ್ರವಾಗಿದೆ ಬೆರುಳು, ಬೆಳ್ಳುಳ್ಳಿ ಜಜ್ಜಿದಂತೆ
ಸಿಡಿದ ಪಟಾಕಿಯಂತೆ ಆಕಾರ ಕಳೆದುಕೊಂಡಿದೆ

ನೂರಾರು ಸಾವಿರಾರು ನೋವುಗಳು
ಹೊಕ್ಕಂತೆ ಒಮ್ಮೆಲೆ ಕಿಬ್ಬೊಟ್ಟೆಯಲ್ಲಿ
ಹಾಕುವ ಹೊಲಿಗೆಯ ಸೂಜಿ ಗಾಯದಾಳಕ್ಕಿಳಿದಾಗ
ನೋವಿನಲ್ಲಿ ಅಮ್ಮಾ ಎಂದಾಗ
ಕಂದಾ, ಹರಿಯಿತು ನನ್ನ ರಕ್ತ
ನಿನ್ನ ಗಾಯದಲ್ಲಿ

ನನ್ನ ಕಂಬನಿಗಳು ನಿನ್ನ ತೊಯ್ದ ಕಂಗಳಲ್ಲಿ
ಆದರೂ ಪಡೆಯಲಾರೆ ನಿನ್ನ ನೋವಿನಲ್ಲಿ ಪಾಲು
ಇಲ್ಲಿ ನಾನೆಷ್ಟು ನಿಸ್ಸಹಾಯೆ, ನಿರ್ಬಲೆ
ನೀನು ನನ್ನಂಶವೇ ಆದರೂ ಇಂದು
ನನ್ನ ತಾಯ್ತನದ ಗರ್ಭದಲ್ಲಿಲ್ಲ ನಿನಗೀಗ ತಾವು
ಮುಟ್ಟಿದಂತೆ ಭಾಸವಾಗುತ್ತಿದ್ದರೂ ಮುಟ್ಟಲಾಗದ
ದಿಗಂತದಂತೆ

ಸಂಕೋಲೆಯೊಂದೆಯಾದರೂ ಕೊಂಡಿಗಳು
ಬೇರೆಯಿರುವಂತೆ
ತಾಳು ಕಂದ, ತಾಳು.. ತಾಳು..
ಸಹಿಸಿ ನೀಗಬೇಕು ದುಃಖ
ನಿನ್ನದನ್ನು ನೀನು, ನನ್ನದನ್ನು ನಾನು
ಇಲ್ಲಿ ನಾವೆಲ್ಲ ಒಂಟಿ ಪಯಣಿಗರು

❖

# ಹರಿವಲ್ತ ಹರಿದಾರಿ ಮನಸ

- ಆಶಾ ಕಡಪಟ್ಟಿ

ಹರಿವಲ್ತ ಹರಿದಾರಿ ಮನಸ
ಮನಸ

ಹರಿವಲ್ತ ಹರಿದಾರಿ ಮನಸ

ಅತ್ತ ಇತ್ತ ಎತ್ತ ಬೇಕ
ಹೊರಳತೈತಿ ಚಿತ್ತನೋಡ
ಚಿತ್ತ ಒಳಗೆ ಇಲ್ಲ ಚಿತ್ತ
ಚಿತ್ತ ಪತ್ತ ಆಡತೈತಿ
ಹರಿವಲ್ತ ಹರಿದಾರಿ ಮನಸ

ಬಣ್ಣದ ಬಗರಿಯಂಗ
ಗಿರಿಗಿರಿ ತಿರಗತೈತಿ
ಕಾಮನ ಬಿಲ್ಲಿನ್ಹಂಗ
ಮೈಮನ ಮಣಸತೈತಿ
ಹರಿವಲ್ತ ಹರಿದಾರಿ ಮನಸ

ಹಗಲಾಗ ಚಿಕ್ಕಿ ಬೇಡಿ
ಚಂದ್ರನ ಹುಡಕತೈತಿ
ಮುಗಿಲಾಗ ಮೋತಿ ಇಟ್ಟು
ಚಂದ್ರಮುಖಿ ಅಂತೈತಿ
ಹರಿವಲ್ತ ಹರಿದಾರಿ ಮನಸ

ಹೊತ್ತು ಗೊತ್ತು ಒಂದು ಇಲ್ಲ
ಕಾಲ ಬಿಟ್ಟ ತಿರಗತೈತಿ
ಕಾಲಕೊಂದು ಗೆಜ್ಜಿ ಕಟ್ಟಿ
ಥಕ ಥೈ ಕುಣಿಯತೈತಿ
ಹರಿವಲ್ತ ಹರಿದಾರಿ ಮನಸ

# ಉರಿದುಹೋದ ಕನಸುಗಳು

- ವೈ. ಕೆ. ಸಂಧ್ಯಾಶರ್ಮ

ಹೆಣ್ಣೆದೆಯ ಅಗ್ನಿಕುಂಡದಲಿ
ಧಗಧಗನುರಿದು
ಹುರುಪಳಿಸಿಹೋದ
ರಮ್ಯಭಾವನೆಗಳ ಕಾವಿನಲಿ
ಬೆಚ್ಚನೆ ಮೈ
ಕಾಯಿಸಿಕೊಳ್ಳುವವರು
ಅದೆಷ್ಟೋ ಮಂದಿ

ಮನಸ ಪಕಳೆ
ಪಕಳೆಗಳ ಕೊಯ್ದು
ಉಪ್ಪು ತುಂಬಿ
ಬಾಳಕ ಮಾಡಿ ಕರಿದರೂ
ತೃಪ್ತಿಗಾಣದ ತೆವಲುಗಳು

ಹೆಚ್ಚೇನು ಮೃದು ಮೈಗೆ
ಸೀಮೆಎಣ್ಣೆಯ ಧಾರಾಕಾರ
ಅಭಿಷೇಕ
ದೀಪ ಧೂಪದ
ಮಂಗಳಾರತಿ
ಕಣ್ಮಿಂಚು ಕಣ್ಮಾಯದಲಿ
ಸುಂದರ ಆಕಾರ
ಬೂದಿಗುಡ್ಡೆಯಾಗಿಸುವ
ಪವಾಡ!

ವಿಭೂತಿ ಅನುಭೂತಿ...
ಮೈತುಂಬ ಪಟ್ಟಾಪಟ್ಟೆ ಬಳಿದು
ಕೇಕೆ ಹಾಕುವ
ಭಸ್ಮಾಸುರರದೆಷ್ಟೋ ಮಂದಿ

ಕನಸುಗಳ ಗೋರಿ ಕಟ್ಟಿ
ಎಲುಬು ಚರ್ಮಗಳ ಗೂಡಾಗಿ
ಪ್ರಯಾಸದಿ ದಿನ ಪೋಣಿಸುವ
ಸೋತ ಅಬಲೆಯರ ಬಾಳು
ಉರಿದುರಿದು ಹಣತೆಯಾದ
ಕಡೆಯುಸಿರ ಸೊಡರು

ಏಕೆ...ಏಕಿಷ್ಟು ಹತಾಶೆ?
ಬೆಂಕಿಯೊಡಲಿಗೆ ನುಗ್ಗುವ
ನಕಾಶೆ
ತಾಳಿಕೊಳಮ್ಮ...ತಾಳು
ತನ್ನೊಡಲಲೇ ಬೆಂಕಿ
ಕಟ್ಟಿಕೊಂಡವಳಿಗೆ
ಜಗವ ಸುಡುವುದ
ಹೇಳಿಕೊಡಬೇಕೇ?

❖

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ

**ನಾಡೋಜ ಡಾ. ಮನು ಬಳಿಗಾರ್**, ಅಧ್ಯಕ್ಷರು
**ಡಾ. ರಾಜಶೇಖರ ಹತಗುಂದಿ**, ಗೌರವ ಕಾರ್ಯದರ್ಶಿ
**ಶ್ರೀ ಕೆ. ರಾಜಕುಮಾರ**, ಗೌರವ ಕಾರ್ಯದರ್ಶಿ
**ಶ್ರೀ ಪಿ. ಮಲ್ಲಿಕಾರ್ಜುನಪ್ಪ**, ಗೌರವ ಕೋಶಾಧ್ಯಕ್ಷರು

**ಶ್ರೀ ಮಾಯಣ್ಣ**, ಬೆಂಗಳೂರು ನಗರ
**ಶ್ರೀ ಚಿ.ಮಾ.ಸುಧಾಕರ**, ಬೆಂ. ಗ್ರಾಮಾಂತರ
**ಶ್ರೀ ಸಿಂ.ಲಿಂ. ನಾಗರಾಜ್**, ರಾಮನಗರ
**ಶ್ರೀ ನಾಗಾನಂದ ಕೆಂಪರಾಜ್**, ಕೋಲಾರ
**ಡಾ. ಕೈವಾರ ಎನ್. ಶ್ರೀನಿವಾಸ**, ಚಿಕ್ಕಬಳ್ಳಾಪುರ
**ಶ್ರೀಮತಿ ಬಾ.ಹ. ರಮಾಕುಮಾರಿ**, ತುಮಕೂರು
**ಡಾ. ದೊಡ್ಡಮಲ್ಲಯ್ಯ**, ಚಿತ್ರದುರ್ಗ
**ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ**, ದಾವಣಗೆರೆ
**ಶ್ರೀ ಡಿ.ಬಿ. ಶಂಕರಪ್ಪ**, ಶಿವಮೊಗ್ಗ
**ಡಾ. ವೈ.ಡಿ. ರಾಜಣ್ಣ**, ಮೈಸೂರು
**ಶ್ರೀ ಬಿ.ಎಸ್. ವಿನಯ್**, ಚಾಮರಾಜನಗರ
**ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ**, ಮಂಡ್ಯ
**ಶ್ರೀ ನಾಯಕರಹಳ್ಳಿ ಮಂಜೇಗೌಡ**, ಹಾಸನ
**ಶ್ರೀ ಬಿ.ಎಸ್. ಲೋಕೇಶ ಸಾಗರ್**, ಕೊಡಗು
**ಶ್ರೀ ಕುಂದೂರು ಅಶೋಕ**, ಚಿಕ್ಕಮಗಳೂರು
**ಶ್ರೀ ನೀಲಾವರ ಸುರೇಂದ್ರ ಅಡಿಗ**, ಉಡುಪಿ
**ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ**, ದಕ್ಷಿಣ ಕನ್ನಡ
**ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ**, ಬೆಳಗಾವಿ
**ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ**, ವಿಜಯಪುರ
**ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ**, ಬಾಗಲಕೋಟೆ
**ಡಾ. ಲಿಂಗರಾಜ ರು. ಅಂಗಡಿ**, ಧಾರವಾಡ
**ಶ್ರೀ ಲಿಂಗಯ್ಯ ಬಿ. ಹಿರೇಮಠ**, ಹಾವೇರಿ
**ಡಾ. ಶರಣು ಗೋಗೇರಿ**, ಗದಗ
**ಶ್ರೀ ಅರವಿಂದ ಕರ್ಕಿಕೋಡಿ**, ಉತ್ತರ ಕನ್ನಡ
**ಶ್ರೀ ವೀರಭದ್ರ ಸಿಂಪಿ**, ಗುಲ್ಬರ್ಗ
**ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ**, ಯಾದಗಿರಿ
**ಶ್ರೀ ಸುರೇಶ ಚನಶೆಟ್ಟಿ**, ಬೀದರ್
**ಡಾ.ಬಸವಪ್ರಭು ಪಾಟೀಲ ಬೆಟ್ಟದೂರು**, ರಾಯಚೂರು
**ಶ್ರೀ ರಾಜಶೇಖರ ಗು. ಅಂಗಡಿ**, ಕೊಪ್ಪಳ
**ಶ್ರೀ ಸಿದ್ಧರಾಮ ಕಲ್ಮಠ**, ಬಳ್ಳಾರಿ
**ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ**, ಮಹಾರಾಷ್ಟ್ರ
**ಪ್ರೊ. ಎಚ್.ಬಿ. ಶಿವಕುಮಾರ್**, ಆಂಧ್ರ ಪ್ರದೇಶ
**ಡಾ. ತಮಿಳ್ ಸೆಲ್ವಿ**, ತಮಿಳುನಾಡು
**ಶ್ರೀ ಸುಬ್ರಹ್ಮಣ್ಯ ವಿ.ಭಟ್**, ಕೇರಳ
**ಶ್ರೀ ಮಲ್ಲಿಕಾರ್ಜುನ ಬದಾಮಿ**, ಗೋವಾ

೮೫ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
**ಡಾ. ಎಚ್.ಎಸ್. ವೆಂಕಟೇಶಮೂರ್ತಿ**

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
**ಡಾ. ಗೀತಾ ವಸಂತ**

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
**ಡಾ. ರಮೇಶ ಲಂಡನಕರ**

ಸರ್ಕಾರದ ಪ್ರತಿನಿಧಿ :
**ನಿರ್ದೇಶಕರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
**ಡಾ. ವಸುಂಧರಾ ಭೂಪತಿ ಮತ್ತು**
**ಡಾ. ಎಸ್.ಪಿ. ಉಮಾದೇವಿ**

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
**ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು**
**ಡಾ. ಸುಬ್ರಾವ ಎಂಟೆತ್ತಿನವರ**

ಪರಿಶಿಷ್ಟ ಪಂಗಡ ಪ್ರತಿನಿಧಿ :
**ಡಾ. ನೀಲಗಿರಿ ತಳವಾರ**

ಸಂಘಸಂಸ್ಥೆಗಳ ಪ್ರತಿನಿಧಿ :
**ಪ್ರೊ. ಸಿದ್ರಾಮಪ್ಪ ಮಾಸಿಮಾಡೆ**



ಕನ್ನಡದ ಲೇಖಕಿಯರ ಅನುಭವ ಲೋಕ, ಆಲೋಚನೆ, ಆಳದ ತಲ್ಲಣ ಮತ್ತು ಪ್ರತಿಭಟನೆಗಳು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಈ ಮಹಿಳಾ ಸಂಪುಟಗಳು ಹಿಡಿದು ಇಟ್ಟಿವೆ. ಇದೇ ಮೊದಲ ಬಾರಿ ಅವರ ಬಹುಮುಖ ಅಭಿವ್ಯಕ್ತಿಯನ್ನು ಒಟ್ಟಂದದಲ್ಲಿ ಗ್ರಹಿಸಲು ಅನುವಾಗುವಂತೆ ಈ ಸಂಪುಟಗಳನ್ನು ರೂಪಿಸಲಾಗಿದೆ. ಹೆಣ್ಣು ಮತ್ತು ಗಂಡಿನ ಸಂವೇದನೆಗಳ ನಡುವಿನ ಭಿನ್ನತೆಗಳನ್ನು ಮತ್ತು ಸಾಮ್ಯತೆಗಳನ್ನು ಗುರುತಿಸಲು ಈ ಸಂಪುಟಗಳು ನೆರವಾಗುತ್ತವೆ ಎಂಬ ನಂಬಿಕೆ ನನ್ನದು. ಮಹಿಳಾ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳಾಗುತ್ತವೆ ಹಾಗೂ ಆ ಅಧ್ಯಯನವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲು ಅವು ನೆರವಾಗುತ್ತವೆ ಎಂದೂ ನಾನು ಭಾವಿಸಿದ್ದೇನೆ. ಇಂಥ ಅನನ್ಯ ಕೆಲಸವನ್ನು ನನ್ನ ಅವಧಿಯಲ್ಲಿ ಮಾಡಿ ಪೂರೈಸಿದ ಹೆಮ್ಮೆ ನನ್ನದು.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ ೨೫೦/-

**ಕನ್ನಡ ಸಾಹಿತ್ಯ ಪರಿಷತ್ತು**
ಬೆಂಗಳೂರು - ೫೬೦ ೦೧೮.